ಶ್ರೀ ಎ.ಬಿ.ರಮೇಶಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ನನ್ನ ಪ್ರಶ್ನೆಗೆ ಉತ್ತರವೇ ಬಂದಿಲ್ಲ ಸರ್.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ನಾಳೆ ಬೆಳಿಗ್ಗೆ ಬರುತ್ತದೆ. Held over Question ನಲ್ಲಿ ಬರುತ್ತದೆ, ಇವತ್ತಿಲ್ಲ. ಇವತ್ತಿನ ಪ್ರಶ್ನೋತ್ತರದಲ್ಲಿ ನಿಮ್ಮ ಪ್ರಶ್ನೆಯಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ಅವರು ಕೇಳುತ್ತಿರುವುದು ಇಷ್ಟೆ, ಮೊನ್ನೆ ಲೋಕೋಪಯೋಗಿ ಇಲಾಖೆ ಸಚಿವರು ನಾಳೆ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅಧಿಕಾರಿಗಳಿಂದ ಉತ್ತರವನ್ನು ತರಿಸಿ ಕೆ-ಶಿಪ್-2 ನಲ್ಲಿ ಮೊದಲನೇ ಹಂತದಲ್ಲಿ 585 ಕಿ.ಮೀ. ರಸ್ತೆಯಾಗಿತ್ತು. ಅದರಲ್ಲಿ ಕೆಲವು ಬದಲಾವಣೆ ಮಾಡಿದ್ದಾರೆ ಎಂದು ನಾನು ಮೊನ್ನೆ ರೈಸ್ ಮಾಡಿದ್ದೆ. ಅದಕ್ಕೆ ನಾಡಿದ್ದು ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದರು. ಅದನ್ನು Held over questionನಲ್ಲಿ ಮಾಡಿರುವಿರಾ?

ಅಧ್ಯಕ್ಷರು: ಹೌದು, ನಾಳೆ ಬೆಳಿಗ್ಗೆ ಉತ್ತರ ಕೊಡಿಸುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ: ಆಯಿತು.

ಅಧ್ಯಕ್ಷರು: ಈಗ ಸಿದ್ದರಾಮಯ್ಯನವರು 2008-09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿಯನ್ನು ಒಪ್ಪಿಸುವುದು.

2.ವರದಿಯನ್ನೊಪ್ಪಿಸುವುದು

ಶ್ರೀ ಸಿದ್ದರಾಮಯ್ಯ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಅರಣ್ಯ, ಪರಿಸರ, ಜೀವಿಶಾಸ್ತ್ರ ಇಲಾಖೆಗೆ ಸಂಬಂಧಿಸಿದ ಮೊದಲನೆ ಹಾಗೂ ಎರಡನೇ ವರದಿಗಳನ್ನು ಸದನದಲ್ಲಿ ನಿಮ್ಮ ಅನುಮತಿಯೊಡನೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ವಿತ್ತೀಯ ಕಾರ್ಯಕಲಾಪಗಳು

2009-10ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಅಧ್ಯಕ್ಷರು: ಈಗ ಸಿದ್ಧರಾಮಯ್ಯನವರು ಬಜೆಟ್ ಮೇಲೆ ಮಾತನಾಡಲಿಕ್ಕೆ ಪ್ರಾರಂಭ ಮಾಡಬಹುದು.

ಶ್ರೀ ಸಿದ್ದರಾಮಯ್ಯ: ಆಗಬಹುದು. ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಣಕಾಸಿನ ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ. ಇದು ಬಜೆಟ್ ಸೆಷನ್.

ಅಧ್ಯಕ್ಷರು: ಮುಖ್ಯಮಂತ್ರಿಗಳು ಬಂದರು ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ನೀವು ಮಾತನಾಡುವುದನ್ನು ಕೇಳಲಿಕ್ಕೆ ನಾನು ಬಂದಿದ್ದೇನೆ. ನೀವು ಮಾತನಾಡುವಾಗ

ನಾನು ಬರದೆ ಇನ್ಯಾವಾಗ ಬರಬೇಕು. ನಿಮ್ಮ ಅನುಭವ ಹಾಗೂ ಸಲಹೆಗಳನ್ನು ಕೇಳುವುದಕ್ಕೋಸ್ಕರ ನಾನು ಬಂದಿದ್ದೇನೆ.

ಶ್ರೀ ಸಿದ್ಧರಾಮಯ್ಯ(ವರುಣ): ಸಂತೋಷ. ನೀವು ಬಂದಿರುವುದರಿಂದ ನನಗೆ ಹುರುಪು ಸ್ವಲ್ಪ ಜಾಸ್ತಿಯಾಗುತ್ತದೆ. ಹಣಕಾಸಿನ ಸಚಿವರು ಇದ್ದರೆ ನಮಗೆ ಹೆಚ್ಚು ಉತ್ಸಾಹ ಬರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಬಹಳ ಉತ್ಸಾಹದಲ್ಲಿರುವುದರಿಂದ ಹೊಸ ಹೊಸ ಸಲಹೆಗಳು ಬರುತ್ತವೇನೋ ಎಂದು ನಾನಂದುಕೊಂಡಿದ್ದೇನೆ.

ಶ್ರೀ ಸಿದ್ಧರಾಮಯ್ಯ (ವರುಣ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಾಗು ಹಣಕಾಸಿನ ಸಚಿವರಾದಂಥ ಮಾನ್ಯ ಎಡಿಯೂರಪ್ಪನವರು 2009-10 ನೇ ಸಾಲಿನ ಮುಂಗಡ ಪತ್ರವನ್ನು ಈ ತಿಂಗಳೂ 20ನೇ ತಾರೀಖು ಸದನದ ಮುಂದೆ ಮಂಡಿಸಿದ್ದಾರೆ. ಈಗಾಗಲೇ ಈ ಮುಂಗಡ ಪತ್ರದ ಮೇಲೆ ಸಾರ್ವಜನಿಕವಾಗಿ ಚರ್ಚೆ ಕೂಡ ಪ್ರಾರಂಭವಾಗಿ, ಸಾರ್ವಜನಿಕ ಅಭಿಪ್ರಾಯಗಳು ಕೂಡ ಬಂದಿವೆ. ಪತ್ರಿಕೆಯವರು ಮತ್ತು ಟಿ.ವಿ. ಮಾಧ್ಯಮದವರು ತಮ್ಮ ಅಭಿಪ್ರಾಯಗಳನ್ನು ಈ ಮುಂಗಡ ಪತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಾರ್ವಜನಿಕವಾಗಿ ಬಂದಿರುವಂಥ ಟೀಕೆ ಟಿಪ್ಪಣಿಗಳು, ಅಭಿಪ್ರಾಯಗಳನ್ನು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಸಂಪಾದಕೀಯಗಳನ್ನು, ಸಂಪಾದಕೀಯದಲ್ಲಿ ಪತ್ರಿಕಾ ಸಂಪಾದಕರುಗಳು ಅವರು ವ್ಯಕ್ತಪಡಿಸಿರುವಂಥ ಅಭಿಪ್ರಾಯಗಳನ್ನು ಇಲ್ಲಿ ಸದನದ ಗಮನಕ್ಕೆ ತಂದಿದ್ದಾರೆ. ಹಾಗಾಗಿ ಮತ್ತೆ ಅದನ್ನೆಲ್ಲಾ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ, ಸಮಯ ವ್ಯರ್ಥವಾಗುತ್ತದೆ, ಆ ಕಾರಣಕೋಸ್ಕರವಾಗಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿರುವಂಥ ಅಭಿಪ್ರಾಯಗಳು ಮತ್ತು ಸಂಪಾದಕೀಯಗಳನ್ನು ಅಲ್ಲಿ ಬಹಳ ಸ್ಪಷ್ಟವಾಗಿ ಎಲ್ಲರೂ ಹೇಳಿದ್ದಾರೆ. ಮುಂದಿನ ವರ್ಷಕ್ಕೆ ಮಂಡಿಸಿರುವಂಥ ಈ ಆಯವ್ಯಯ,ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂದಿನ ಚುನಾವಣೆಯಲ್ಲಿ ಗೆಲ್ಲಬೇಕೆಂಬ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಮಂಡಿಸಿರುವ ಆಯವ್ಯಯವೇ ಹೊರತು ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದಲೀ ಅಥವಾ ದೂರದೃಷ್ಟಿಯಿಂದ ಕೂಡಿರುವಂಥ ಆಯವ್ಯಯವಾಗಲೀ ಅಲ್ಲ. ಇವತ್ತು ಆರ್ಥಿಕ ಬಿಕ್ಕಟ್ಟು ಜಗತ್ತು, ರಾಷ್ಟ್ರ ಮತ್ತು ರಾಜ್ಯದಲ್ಲಿ ಆಗಿದೆ ಎಂದು ಅವರೇ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಆರ್ಥಿಕ ಬಿಕ್ಕಟ್ಟಿಗೆ ಪರಿಹಾರಗಳನ್ನು ಪಡೆಯುವಂಥದ್ದಾಗಲೀ, ಈ ಬಜೆಟ್ ರಾಜ್ಯದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವಂಥದ್ದಾಗಲೀ, ಯಾವುದೂ ಇದರಲ್ಲಿ ಇಲ್ಲ. ಈ ಬಜೆಟ್ಟಿನಲ್ಲಿ ಒಂದು ಗುರಿಯೇ ಇಲ್ಲ.

ಮಾನ್ಯ ಯಡಿಯೂರಪ್ಪನವರು ಈಗ 4ನೇ ಆಯವ್ಯಯ ಮಂಡಿಸುತ್ತಿದ್ದಾರೆ. ಬಹುಶಃ ಅವರು ಈ ಆಯವ್ಯಯದಲ್ಲಿ ಇವತ್ತಿನ ಆರ್ಥಿಕ ಬಿಕ್ಕಟ್ಟಿನ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಾರೆ ಎನ್ನತಕ್ಕಂಥ ಅಂದಾಜು ಇತ್ತು ಹಾಗೂ ಜನರಲ್ಲಿ ಆ ಬಗ್ಗೆ

ನಿರೀಕ್ಷೆ ಕೂಡ ಇತ್ತು. ಆ ನಿರೀಕ್ಷೆ ಸಂಪೂರ್ಣವಾಗಿ ಹುಸಿಯಾಗಿದೆ. ಕೇಂದ್ರ ಸರ್ಕಾರದ ಆಯವ್ಯಯ ಮಂಡನೆಯಾದಾಗ ಮಾನ್ಯ ಯಡಿಯೂರಪ್ಪನವರು ಈ ಮಧ್ಯಂತರ ಆಯವ್ಯಯದಲ್ಲಿ ಯಾವುದೇ ಗೊತ್ತು-ಗುರಿ ಇಲ್ಲ, ಇದು ಒಂದು ಟೊಳ್ಳು ಬಜೆಟ್ ಮತ್ತು ಆರ್ಥಿಕ ಬಿಕ್ಕಟಿಗೆ ಯಾವುದೇ ಪರಿಹಾರಗಳನ್ನು ಮಾನ್ಯ ಪ್ರಣಬ್ ಮುಖರ್ಜಿಯವರು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಕೇಂದ್ರ ಸರ್ಕಾರದ ಆಯವ್ಯಯ ದೇಶದ ದೃಷ್ಟಿಯಿಂದ ಒಳ್ಳೆಯ ಆಯವ್ಯಯ ಅಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಬಹುಶ: ಕೇಂದ್ರದವರು ಮಂಡಿಸಿದ ಮೇಲೆ ಇವರು ಮಂಡಿಸಿರತಕ್ಕಂಥ ಆಯವ್ಯಯ ಇದು. ಕೇಂದ್ರ ಸರ್ಕಾರದ ಆಯವ್ಯಯ ಮಂಡನೆ ಆದಮೇಲೆ ಇವರು ಮಂಡಿಸಿರತಕ್ಕಂಥಾದ್ದು. ಬಹುಶಃ ಅವರು ಹೇಳೀರತಕ್ಕಂಥ ಅಭಿಪ್ರಾಯಗಳನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರಸರ್ಕಾರದ ಆಯವ್ಯಯದಲ್ಲಿ ಏನೇನು ಅಭಿಪ್ರಾಯಗಳನ್ನು ಅವರು ವ್ಯಕ್ತಮಾಡಿದ್ದಾರೆ, ಅವನ್ನೆಲ್ಲಾ ಇವರ ಆಯವ್ಯಯದಲ್ಲಿ ಆ ತರಹದ ಟೀಕೆಗಳಿಗೆ ಅವಕಾಶ ಇಲ್ಲದೇ ಇರುವಂತೆ ಇವರು ಮುಂಗಡ ಪತ್ರವನ್ನು ಮಂಡಿಸುತ್ತಾರೆ ಎಂದು ನನಗೂ ನಿರೀಕ್ಷೆ ಇತ್ತು. ಆದರೆ, ಆ ನಿರೀಕ್ಷೆ ಹುಸಿಯಾಗಿದೆ, ಆ ತರಹ ಈ ಆಯವ್ಯಯದಲ್ಲಿ ಎಲ್ಲಿ ನೋಡಿದರೂ ಕೂಡ ಇದು ಕಾಣಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು 2008-09 ರ ಆಯವ್ಯಯದಲ್ಲಿ ಅವರು ನಿರೀಕ್ಷೆ ಮಾಡಿದಂತಹ ತೆರಿಗೆ ಸ್ವೀಕೃತಿಗಳು ಮತ್ತು ಅವರು ಏನು ಖರ್ಚು ಮಾಡುತ್ತಾರೆ ಎಂದು forecast ಮಾಡಿದ್ದಾರೆ, 2008-09ರ ಆಯವ್ಯಯದಲ್ಲಿ ನೀವು ಅದನ್ನು ನೋಡಿದರೆ revenue receipt 4,423 ಕೋಟಿ ರೂಪಾಯಿಗಳ budget estimates ಇದೆ, ಇವತ್ತು revised estimates ಇದೆ. 4,423 ಕೋಟಿ ಕಡಿಮೆಯಾಗುತ್ತದೆ ಎಂದು ಹೇಳೀ ಅವರು ಮಂದಿನ ವರ್ಷದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ರೆವಿನ್ಯೂ ವಿಷಯದ ಸೈಡ್‌ನಲ್ಲಿ ಹೇಳಿದ್ದಾರೆ. ಹಾಗೆ capital receipts ನಲ್ಲಿ, miscellaneous capital receipts ನಲ್ಲಿ, ಲೆಕ್ಕ ಇಟ್ಟುಕೊಂಡು ಲೆಕ್ಕ ತೋರಿಸಿದ್ದಾರೆ. ಆ miscellaneous receipts ಹಾಗೂ capital receipts ಎಂದು ಏನು ಇದೆ, ಅದರಲ್ಲಿ ಜಮೀನು ಮಾರಿ ರಾಮಸ್ವಾಮಿಯವರ ಸಮಿತಿಯವರು ಪತ್ತೆ ಹಚ್ಚಿದಂಥ ಜಮೀನುಗಳನ್ನು ಮಾರಿದರೆ, ನಮಗೆ ಈ ವರ್ಷ ಮೂರು ಸಾವಿರ ಕೋಟಿ ರೂಪಾಯಿಗಳು ಬರುತ್ತದೆ ಎಂದು ಅಂದಾಜು ಮಾಡಿಕೊಂಡಿದ್ದರು. ಆದರೆ, ಇಲ್ಲಿಯವರೆಗೆ ಅವರು half yearly report ಅನ್ನು ಬೆಳಗಾಂನಲ್ಲಿ ಏನು ಮಂಡಿಸಿದ್ದಾರೆ, ಅದರ ಪ್ರಕಾರ ಬರೀ 138 ಕೋಟಿ ರೂಪಾಯಿಗಳು ಮಾತ್ರ ಸಂದಾಯವಾಗಿದೆ. ಬರೀ 138 ಕೋಟಿ ರೂಪಾಯಿಗಳು, ಅಂದರೆ, revenue receipts ನಲ್ಲಿ 4,423 ಕೋಟಿ ಇಲ್ಲ. ಅದು ಅಂದಾಜು. ನನ್ನ ಪ್ರಕಾರ ಅದಕ್ಕಿಂತಲೂ ಕಡಿಮೆಯಾಗಬಹುದು. ನನ್ನ ಪ್ರಕಾರ 4,423 ಕೋಟಿ ನಮಗೆ revenue receipts ನಲ್ಲಿ ತೆರಿಗೆ ಬರುವುದಿಲ್ಲ ಎಂದು ಏನು

ಹೇಳಿದ್ದಾರೆ. ಅದಕ್ಕಿಂತಲೂ ಜಾಸ್ತಿ ಆಗಬಹುದು. It may be five thousand crores. ಏಕೆಂದರೆ, ಇನ್ನೂ ಮೂರು ತಿಂಗಳಿಗೆ ಇವರಿಗೆ ಲೆಕ್ಕವಿಲ್ಲ. ಜನವರಿ, ಫೆಬ್ರವರಿ, ಮಾರ್ಚ್‌ನಲ್ಲಿ ಎಷ್ಟು ಬರುತ್ತದೆ ಎಂದು ಅಂದಾಜಿನ ಮೇಲೆ ಹೇಳಿದ್ದಾರೆ. ಪ್ರತಿ ತಿಂಗಳು ಬರತಕ್ಕಂಥ ತೆರಿಗೆ ಪ್ರಮಾಣ ನೋಡಿದರೆ, it will be around five thousand crores, ಅದು 4,423 ಕೋಟಿ ರೂಪಾಯಿಗಳು ಅಷ್ಟೇ ಅಲ್ಲ. ಇದು 4,423 ಕೋಟಿ ಮತ್ತು capital receipts ನಲ್ಲಿ ಸುಮಾರು 8,862 ಕೋಟಿ ಇಷ್ಟು ಹಣ. ಸುಮಾರು 7,200 ಕೋಟಿ ಅಷ್ಟು ಹಣ ಇವರಿಗೆ ಈ ವರ್ಷದ ಆಯವ್ಯಯದಲ್ಲಿ ಬಂದಿಲ್ಲ. ಹಣ ವಸೂಲು ಮಾಡುವುದರಲ್ಲಿ ಬಹಳ ಹಿಂದೆ ಬಿದ್ದಿದ್ದಾರೆ. ಆದರೆ, 7,004 ಕೋಟಿ ರೂಪಾಯಿಗಳ ಕೊರತೆ ಆಗಿದೆ. ಆ revenue receipts ನಲ್ಲಿ capital receipts ಮತ್ತು ನಲ್ಲಿ ಸುಮಾರು more than 10% ಇವತ್ತು receipts ಕಡಿಮೆಯಾಗುತ್ತಿದೆ. ಇದರ ಪರಿಣಾಮ ಏನಾಗುತ್ತದೆ ಎಂದರೆ, ಇಲ್ಲಿ social services ಗಳಿಗೆ, ಮತ್ತು ಆರ್ಥಿಕ ಸೇವೆಗಳಿಗೆ ಹಣ ಖರ್ಚು ಮಾಡುವಂಥಾದ್ದು ಬಹಳ ಗಣನೀಯವಾಗಿ ಕಡಿಮೆಯಾಗುತ್ತದೆ. ಹಾಗಾಗಿ, ಇವರು social sector ಗಳಲ್ಲಿ ಮತ್ತು economic sector ಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕಡಿತವನ್ನು ಮಾಡಿದ್ದಾರೆ. ಅದಕ್ಕೆ 2008–09 ರಲ್ಲಿ GDP growth 5.5. ಆಗಬಹುದು ಅದು ಇನ್ನೂ ಕಡಿಮೆಯಾಗಬಹುದು. ಬೆಳವಣಿಗೆಯಲ್ಲಿ ಆಗುತ್ತದೆ, ಆಸ್ತಿ ನಿರ್ಮಾಣವಾಗಬೇಕು, ಆಹಾರದ ಉತ್ಪಾದನೆ ಜಾಸ್ತಿಯಾಗಬೇಕು, ಕೈಗಾರಿಕೆ ಉತ್ಪನ್ನಗಳು ಜಾಸ್ತಿಯಾಗಬೇಕು, ಸೇವಾ ವಲಯ ಕ್ಷೇತ್ರದಲ್ಲಿ ಬೆಳವಣಿಗೆಯಾಗಬೇಕು, ಇವು ಏನು ಆಗದೇ ರಾಜ್ಯದ ಆಸ್ತಿ ಹೇಗೆ ಬೆಳವಣಿಗೆಯಾಗುತ್ತದೆ? ಕಳೆದ ವರ್ಷ 11% ಬೆಳವಣಿಗೆಯಾಗಿದೆ ಎಂದು ಹೇಳಿದರು. 2007–08ರಲ್ಲಿ 11% ಬೆಳವಣಿಗೆಯಾಗಿದೆ ಎಂದು ಹೇಳಿದರು. 2008–09ರಲ್ಲಿ ಅವರು 5.5.%ಗೆ ಬಂದಿದ್ದಾರೆ. ಇವರು ಏನು ಕೇಂದ್ರ ಸರ್ಕಾರದ ಆಯವ್ಯಯವನ್ನು ಟೀಕೆ ಮಾಡಿದರು, ಅಲ್ಲಿ ಇಷ್ಟೇಲ್ಲಾ ಆರ್ಥಿಕ recession ಇದೆ, ಬಿಕ್ಕಟ್ಟು ಇದೆ ಎಂದರೂ ಕೂಡ 7.1% ಆರ್ಥಿಕ ಬೆಳವಣಿಗೆಯಾಗಬಹುದು ಎಂದು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ, ಎಷ್ಟು ಇತ್ತು. 2007–08ರಲ್ಲಿ 9.1% ಇತ್ತು. because of the Financial crisis ಅದು 7.1% ಎಂದು ಅವರು ಕೂಡ ಅಂದಾಜು ಮಾಡಿದ್ದಾರೆ. ಇವರು 5.5 ಎಂದು ಹೇಳಿದ್ದಾರೆ. ನೀವು 7,200 ಕೋಟಿ ರೂಪಾಯಿ ಖರ್ಚು ಮಾಡದೇ, ವ್ಯವಸಾಯಕ್ಕೆ ಹಣ ಖರ್ಚು ಮಾಡಿ, ನೀರಾವರಿಗೆ ಹಣ ಖರ್ಚು ಮಾಡಿ, ವಿದ್ಯುಚ್ಛಕ್ತಿಗೆ ಹಣ ಖರ್ಚು ಮಾಡಿ, Rural Development ಗೆ ಹಣ ಖರ್ಚು ಮಾಡಿ, ಶಿಕ್ಷಣಕ್ಕೆ, ಆರೋಗ್ಯಕ್ಕೆ, social welfare Department Health ಗೆ ಇಷ್ಟೆಲ್ಲಾ ಹಣವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಖರ್ಚು

ಮಾಡಿದ್ದೀರಿ. ಇವರು ಬಜೆಟ್‌ನ್ನು ಮಾತ್ರ ಬಹಳ ದೊಡ್ಡದಾಗಿ ಜನರ ಮುಂದೆ ಇಟ್ಟಿದ್ದಾರೆ. 2006-07ರಲ್ಲಿ, ಬಜೆಟ್ plan size 16,166 ಕೋಟಿ ಇತ್ತು. 2007-08ಕ್ಕೆ 17,782 ಕೋಟಿ ಆಯಿತು. ಅದು ಸ್ವಲ್ಪ ವಾಸ್ತವಿಕ ನೆಲಗಟ್ಟಿನಲ್ಲಿ ಇರತಕ್ಕಂಥ ಬಜೆಟ್ ಆಗಿತ್ತು. 16,166 ಕೋಟಿಯಿಂದ, 2007-08 ಕ್ಕೆ 17,782 ಕೋಟಿಗೆ ಹೆಚ್ಚಿಸಿ, ಸುಮಾರು 1,000 ಕೋಟಿ ಹೆಚ್ಚು ಮಾಡಿದರು, ಹಾಗಾಗಿ, ಅದು realistic ಆಗಿ ಇತ್ತು ಎಂದು ಹೇಳಬಹುದು. 2007-08 ನೇ ಸಾಲಿನಲ್ಲಿ, 17,782 ಕೋಟಿ ರೂಪಾಯಿಗಳಲ್ಲಿ 17,200 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅದರಲ್ಲೂ 500 ಕೋಟಿ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಲು ಸಾಧ್ಯವಾಗಲಿಲ್ಲ. 2008-09 ರ plan size 45-50% ಬೆಳೆದಿದೆ ಎಂದು ಹೇಳಿ, 17,782 ಕೋಟಿಯಿಂದ 25,952 ಕೋಟಿ ರೂಪಾಯಿಗೆ ನಿಗದಿ ಮಾಡಿದರು ಅಂದರೆ, ಸುಮಾರು 26 ಸಾವಿರ ಕೋಟಿ ರೂಪಾಯಿಗಳನ್ನು plan size ದೊಡ್ಡದಾಯಿತು. ರಾಜ್ಯದ ಬೆಳವಣಿಗೆಗೋಸ್ಕರ ಎಷ್ಟೊಂದು ಹಣವನ್ನು ತೊಡಗಿಸುತ್ತಿದ್ದಾರೆ, ಅದರಿಂದ ರಾಜ್ಯ ಬೆಳವಣಿಗೆಯಾಗುತ್ತದೆ ಎಂದು ಜನರು ನಿರೀಕ್ಷೆ ಮಾಡಬೇಕು. 2008-09 ರಲ್ಲಿ ಬಹಳ unprecedent ಆಗಿ ರಾಜ್ಯದ ಬೆಳವಣಿಗೆಯಾಗುತ್ತದೆ. ಕಾರಣ ಸುಮಾರು 8 ಸಾವಿರ ಕೋಟಿಗೂ ಹೆಚ್ಚಾಗಿ ನಾವು plan size ನಲ್ಲಿ ಹಣ ಖರ್ಚು ಮಾಡುತ್ತಿದ್ದೇವೆ, ಸುಮಾರು 8 ಸಾವಿರ ಕೋಟಿ ಒಂದೇ ವರ್ಷದಲ್ಲಿ ಖರ್ಚು ಮಾಡುವುದರಿಂದ ರಾಜ್ಯದ ಬೆಳವಣಿಗೆ ಬಹಳ ವೇಗವಾಗಿ ಹೋಗುತ್ತದೆ ಎಂದು ಇವರು ಭ್ರಮ ಲೋಕದಲ್ಲಿ ಈ ತರಹ ಸೃಷ್ಟಿ ಮಾಡಿಕೊಂಡರು. ರಾಜ್ಯದ ಜನತೆಗೂ ಆಶಾ ಗೋಪುರವನ್ನು ಕಟ್ಟಿದರು. ಆದರೆ, ಇವರು 25,952 ಕೋಟಿಗೆ ಸುಮಾರು 22 ಸಾವಿರ ಕೋಟಿ ಖರ್ಚಾಗಬಹುದೆಂದು ಅವರು ನಿರೀಕ್ಷೆ ಮಾಡಿದ್ದರು. ಆದರೆ, ಮೊನ್ನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಡಿಸಂಬರ್‌ವರೆಗೆ 9,500 ಕೋಟಿ ರೂಪಾಯಿ ಖರ್ಚು ಮಾಡದೇ ಇರುವವರು ಇನ್ನು ಮೂರು ತಿಂಗಳಿನಲ್ಲಿ 13 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಯೇ ಎಂದು ಪ್ರಸ್ತಾಪ ಮಾಡಿದರು. ಖರ್ಚು ಮಾಡಲು ಯಾವ machineries ಇಟ್ಟುಕೊಂಡಿದ್ದೀರಿ? ಅದೇ machineries ಅಲ್ಲವೇ. ಖರ್ಚು ಮಾಡಲು ಹಣವೆಲ್ಲಿದೆ? ಬಳ್ಳಾರಿಯಿಂದ ಹಣ ತಂದರೂ ಆಗುವುದಿಲ್ಲ. ಗುಲ್ಬರ್ಗಾದಿಂದ ಹಣ ತಂದರೂ ಆಗುವುದಿಲ್ಲ. 7,200 ಕೋಟಿ ರೂಪಾಯಿ ಕಣ್ಣಿಗೆ ಕಾಣುವ ಹಾಗೆಯೇ 10% ಖೋತಾ ಆಗುತ್ತಿದೆ. 47,215 ಕೋಟಿ ರೂಪಾಯಿ ವಿಶೇಷವಾಗಿ ತೆರಿಗೆ ವಸೂಲು ಮಾಡುವುದರಿಂದ ಬರುತ್ತದೆ ಎಂದು ಲೆಕ್ಕ ಹಾಕಿದ್ದರು. ಅದನ್ನು ಈಗ revised estimate ನಲಿ cut-down ಮಾಡಿದ್ದೀರಿ. 25 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತದೆ? ಹಣವನ್ನು ಪ್ರಿಂಟ್ ಮಾಡಲು ಸಾಧ್ಯವೇ? ಹೀಗೆ ಹೇಳಿದರೆ ಮಾನ್ಯ

ಮುಖ್ಯಮಂತ್ರಿಗಳು ಒಪ್ಪುವುದಿಲ್ಲ. ನಾವು ಎಲ್ಲಿಂದಲೋ ಹಣವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳುತ್ತಾರೆ. ಎಲ್ಲಿಂದ ಹಣ ತರುತ್ತಾರೆ? CAG ಅವರು 2002–03 ರಿಂದ 2007–08ರ ಮಾರ್ಚ್ 31 ಕ್ಕೆ ಕೊನೆಗೊಂಡಂತೆ ಬಜೆಟ್ ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಒಂದು ಕಡೆ ಅವರು ಗಮನಿಸಿರುವ ಅಂಶವನ್ನು ಬಹಳ ಮುಖ್ಯವಾಗಿ ನಿಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುತ್ತಿದ್ದೇನೆ. ಇವರು 2007–08 ನೇ ಸಾಲಿಗೆ 57,439 ಕೋಟಿ ಖರ್ಚುಮಾಡುತ್ತೇವೆಂದು forecast ಮಾಡಿದ್ದರು. ಹಣಕಾಸು ಇಲಾಖೆ ಕೊಟ್ಟದ್ದರು ಲೆಕ್ಕದ ಪ್ರಕಾರ ಆ ವರ್ಷ 57,439 ಕೋಟಿ ಖರ್ಚು ಮಾಡಬೇಕಾಗಿತ್ತು.

(ಈ ಹಂತದಲ್ಲಿ ಮಾನ್ಯ ಎನ್. ಯೋಗಿಶ್ ಭಟ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

But whereas Finance Department has released in the year 2007-08, Rs. 48,487 crores only. ಅಂದರೆ, ಇನ್ನೂ 8,942 ಕೋಟಿ ರೂಪಾಯಿಗಳು ಬಿಡುಗಡೆಯೇ ಆಗಿಲ್ಲ. CAG report ಪ್ರಕಾರ, ಸುಮಾರು 15 ಇಲಾಖೆಗಳಲ್ಲಿ 100 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣ ಖರ್ಚಾಗದೇ ಉಳಿದಿದೆ. ಅಂದರೆ ಇವರು ಸಂಪನ್ಮೂಲವನ್ನು ಕ್ರೋಢೀಕರಣ ಮಾಡಿಲ್ಲ. ಅಷ್ಟರ ಮಟ್ಟಿಗೆ ಹಣ ಉಳಿದು ಹೋಯಿತು. ಈಗಲೂ ಕೂಡು 2008–09 ಕ್ಕೆ 25,952 ಕೋಟಿ plan size ಅಂದರೆ, ನನ್ನ ಪ್ರಕಾರ ಡಿಸೆಂಬರ್‌ವರೆಗೆ ಒಂಭತ್ತೂವರೆ ಸಾವಿರ ಕೋಟಿ ಮಾತ್ರ ಖರ್ಚಾಗಿದೆ. ಮೂರು ಸಾವಿರ ಕೋಟಿ ಪ್ರತಿ ತಿಂಗಳು ಖರ್ಚು ಮಾಡುತ್ತಾರೆ ಎಂದರೂ ಸುಮಾರು ಒಂಭತ್ತು ಸಾವಿರ ಕೋಟಿ ಖರ್ಚು ಮಾಡಬಹುದು. It will not cross more than Rs. 18,000/- crores. ಪ್ರಸ್ತುತ ವರ್ಷದ 26 ಸಾವಿರ ಕೋಟಿ plan ನಲ್ಲಿ ಸುಮಾರು 8 ರಿಂದ 10 ಸಾವಿರ ಕೋಟಿ ರೂಪಾಯಿ ಖೋತ ಆಗುತ್ತದೆ. ರಾಜ್ಯದ ಬೆಳವಣಿಗೆ, ಅಭಿವೃದ್ಧಿ ಆ ಪ್ರಮಾಣದಲ್ಲಿ ಕುಂಠಿತವಾಗುತ್ತದೆ. ಎಷ್ಟು ತೆರಿಗೆಗಳು ಕಡಿಮೆಯಾಗುತ್ತವೆ ಎಂದು ಹೇಳಿದರೂ ಕೂಡ, revised estimate ಮಾಡಿ ಇಟ್ಟಿದ್ದರೂ ಕೂಡ ಇವರು non- plan expenditure non-development expenditure ಅನ್ನು cut down ಮಾಡಲು ಏನಾದರೂ ಕ್ರಮವನ್ನೂ ತೆಗೆದುಕೊಂಡಿದ್ದಾರೆಯೇ? There are reports submitted to the Government. ರಾಮಸ್ವಾಮಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ವೀರಪ್ಪ ಮೊಯಿಲಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ನಾನು ಸಹ ಹಣಕಾಸಿನ ಮಂತ್ರಿಯಾಗಿದ್ದಾಗ ಹಣಕಾಸು ಇಲಾಖೆಗೆ ಒಂದು ರಿಪೋರ್ಟ್ ಕೊಟ್ಟಿದ್ದೇನೆ. ಎಲ್ಲೆಲ್ಲಿ non-development expenditure cut down ಮಾಡುಲು ಸಾಧ್ಯವಿದೆ, non-plan expenditure cut down ಮಾಡಲು ಸಾಧ್ಯವಾಗುತ್ತದೆ ಎನ್ನುವುದು ಆ report ನಲ್ಲಿ ಇರುತ್ತದೆ. ಇಂತಹ ಆರ್ಥಿಕ ಬಿಕ್ಕಟ್ಟಿನ

ಸನ್ನಿವೇಶದಲ್ಲೂ, ಆರ್ಥಿಕ ಬಿಕ್ಕಟ್ಟು ಇದೆ ಅದಕ್ಕೋಸ್ಕರ ನಮಗೆ ತೆರಿಗೆ ಕಡಿಮೆಯಾಯಿತು ಎಂದು ಕಾರಣಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. On the other hand, ಹಣಕಾಸು ಇಲಾಖೆಯಿಂದ ಏನು ಮಾಡಿದ್ದಾರೆ? non-development expenditure cut down ಮಾಡಲು ಏನು ಮಾಡಿದ್ದೇವೆ? ನೀವು ನೋಡಿ, general services ಖರ್ಚಾಗಿರುವುದರಲ್ಲಿ ಒಂದೂ ರೂಪಾಯಿಯು ಕಡಿಮೆಯಾಗಿಲ್ಲ. General service ನಲ್ಲಿ ಎಷ್ಟು forecast ಮಾಡಿತ್ತು ಅದಕ್ಕಿಂತ ಹೆಚ್ಚಾಗಿದೆ. ಸಂಬಳ, ಪಿಂಚಣಿ, ಬಡ್ಡಿ ಪಾವತಿ ಇವೆಲ್ಲವೂ non-plan expenditure ನಲ್ಲಿ ಬರುತ್ತದೆ. ಇವೆಲ್ಲವೂ ಕೂಡ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿದೆಯೇ ಹೊರತು ಕಡಿಮೆ ಆಗಿಲ್ಲ. ಅದರ ಅರ್ಥ ಸಂಬಳ, ಪಿಂಚಣಿ, ಬಡ್ಡಿ ಕೊಡುವುದು, ಇವು ಯಾವುದರಲ್ಲೂ ಕೂಡ ಒಂದು ರೂಪಾಯಿ ಕಡಿಮೆ ಮಾಡಲು ಪ್ರಯತ್ನ ಮಾಡಿಲ್ಲ.

ಒಂದೇ ಒಂದು ರೂಪಾಯಿಯನ್ನೂ ಮಾಡಿಲ್ಲ. ಮತ್ತೆ ಹೇಗೆ ರಾಜ್ಯದ ಆರ್ಥಿಕ ಬೆಳವಣಿಗೆಯಾಗುತ್ತದೆ? ನಾವು ಅಭಿವೃದ್ಧಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆ, ಬಹಳ ವೇಗವಾಗಿ ನಮ್ಮ ಬೆಳವಣಿಗೆ ಆಗುತ್ತಿದೆ. ನಮ್ಮ ಬೆಳವಣಿಗೆಯ ತಲಾ ಆದಾಯ ಮತ್ತು ರಾಜ್ಯದ ಬೆಳವಣಿಗೆ all India level ನಲ್ಲಿ 15 ಪ್ರಮುಖ ರಾಜ್ಯಗಳಿವೆ, ಅವು 7ನೇ ಸ್ಥಾನದಲ್ಲಿ ಯಡಿಯೂರಪ್ಪನವರು ಬರುವುದಕ್ಕೆ ಮುಂಚೆಯೂ ಇತ್ತು, ಈಗಳು ಅಲ್ಲಯೇ ಇದೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವ ಮುಂಚಿತವಾಗಿಯೂ ಮತ್ತು ಹಣಕಾಸು ಮಂತ್ರಿಯಾಗುವ ಮುಂಚಿವಾಗಿಯೂ ಅಲ್ಲಿಯೇ ಇತ್ತು. ಈಗಲೂ ಅಲ್ಲಿಯೇ ಇದೆ. ಅಂದರೆ, ಬೆಳವಣಿಗೆ ಎಲ್ಲಿದೆ? ಬೇರೆಲ್ಲಾ sources ನಿಂದ ಬೇರೆ ಹಣಕಾಸು ಮಂತ್ರಿಗಳಿಗಿಂತಲೂ ನಾವು ಬೆಳವಣಿಗೆ ಹೆಚ್ಚು ಮಾಡಿದ್ದೇವೆಂದರೆ, where is the evidence? ಏನೂ ಇಲ್ಲ. ಕಡಿಮೆಯಾಗಿದೆ. It is a matter of fact. ಅಭಿವೃದ್ಧಿ ಕುಂಠಿತವಾಗಿದೆ.

ಅನಂತರ, ತೆರಿಗೆಗಳು, ಕೂಡ ಕಡಮೆಯಾಗುತ್ತಾ ಬಂದಿದೆ ಮತ್ತು ಸಾಲ ಕೂಡ ನೀವು ಬಜೆಟ್ ಪುಸ್ತಕದ ಕೊನೆಯಲ್ಲಿ ಕೆಲವು ಮಾಹಿತಿಗಳನ್ನು ಕೋಟ್ಟಿದ್ದೀರಿ. ರಾಜ್ಯಕ್ಕೆ ಬರುವ receipts ಇದೆಯಲ್ಲ, ಒಂದು ರೂಪಾಯಿಯಲ್ಲಿ ಯಾವ್ಯಾವ್ಯಾಗ ಬಾಬುಗಳಿಂದ ಬಂದವು ಎಂಬುದನ್ನು ಕೊಡುತ್ತಾರೆ. 2006-07ನೇ ಸಾಲಿನಿಂದಲೂ ಬಜೆಟ್ ಅನ್ನು ಇವರೇ ಮಂಡಿಸಿದ್ದಾರೆ. ಅಲ್ಲಿಂದ ಒಟ್ಟು ನಾಲ್ಕು ಬಜೆಟ್‌ಗಳನ್ನು ಮಂಡಿಸಿದ್ದಾರೆ. ನಮಗೆ 2006-07 ರಲ್ಲಿ ಒಟ್ಟು resources ನಲ್ಲಿ ಸಾಲದಿಂದ ಬಂದಿದ್ದು 6 ಪೈಸೆ, 2007-08 ರಲ್ಲಿ ಸಾಲದಿಂದ ಬಂದಿದ್ದು 9 ಪೈಸೆ, 6 ರಿಂದ 9 ಪೈಸೆಯಾಯಿತು. ಅಂದರೆ, 3 ಪೈಸೆ ಜಾಸ್ತಿಯಾಯಿತು, 2008-09ಕ್ಕೆ 9 ರಿಂದ 15 ಪೈಸೆಯಷ್ಟಾಯಿತು. ಅಂದರೆ, ಒಂದು ರೂಪಾಯಿಯಲ್ಲಿ 2006-07 ರಲ್ಲಿ 6 ಪೈಸೆ,

2007–08 ರಲ್ಲಿ 6 ರಿಂದ 9 ಪೈಸೆ ಹೆಚ್ಚಾಯಿತು. ಮತ್ತೆ 2008–09 ಕ್ಕೆ 9 ರಿಂದ 15 ಪೈಸೆಯಾಯಿತು. ಮುಂದಿನ ಬಜೆಟ್‌ನಲ್ಲಿ ಅಂದರೆ, ಈಗ ಮಂಡಿಸಿರುವ ಬಜೆಟ್‌ನಲ್ಲಿ 15 ರಿಂದ 17 ಪೈಸೆಯಷ್ಟು ಜಾಸ್ತಿಯಾಗಬೇಕು. ಏಕೆಂದರೆ, ಈ ವರ್ಷ ಜಾಸ್ತಿ ಸಾಲ ಮಾಡಿದ್ದಾರೆ. 3,500 ಕೋಟಿ ರೂ.ಗಳಷ್ಟು open market ನಿಂದ ಸಾಲ ತೆಗೆದುಕೊಳ್ಳುತ್ತಾರೆ. ಈ ಸಾಲ. 7,800 ಕೋಟಿ ರೂ.ಗಳಷ್ಟು ಮಾಡಿದ್ದಾರೆ. Growth borrowing from open market about more than 28%. ಅಂದರೆ, ಈ ಅಂಕಿ–ಅಂಶಗಳನ್ನು ನೋಡಿದರೆ, ಇವತ್ತು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಕಡೆ ಹೋಗುತ್ತಿದೆ ಎನ್ನುವುದನ್ನು ಯಾರು ಬೇಕಾದರೂ ಕೂಡ ಸುಲಭವಾಗಿ ನೋಡುವುದಕ್ಕೆ ಸಾಧ್ಯವಾಗುತ್ತದೆ.

ಸಾಲ ನೋಡಿ. ಈ ವರ್ಷ, 2008–09 ಕ್ಕೆ debt stock 60,142 ಕೋಟಿ ರೂ.ಗಳಷ್ಟಿದೆ. ಒಟ್ಟು ನಮ್ಮ ಎಲ್ಲಾ ಸಾಲಗಳು, consolidated debt stock, ಹೊರಗಡೆಯ ಸಾಲ ಬಿಟ್ಟು ಅಂದರೆ, ಬಜೆಟ್‌ನಿಂದಾಚೆ ಹೊರಗಡೆಯಿಂದ ನಾವು ಸಾಲ ತೆಗೆದುಕೊಳ್ಳುತ್ತೇವೆ, ನಿಗಮಗಳ ಮೂಲಕ ಸಾಲ ತೆಗೆದುಕೊಳ್ಳುತ್ತೇವೆ. ಅದರ ಮೇಲೆ ತೆಗೆದುಕೊಂಡಿರುವ ಸಾಲಗೂ 4,700 ಕೋಟಿ ರೂ.ಗಳಷ್ಟಿದೆ. ಅದನ್ನು ಸೇರಿಸಿದರೆ 2008–09ಕ್ಕೆ 65,000 ಕೋಟಿ ರೂ.ಗಳಷ್ಟು ಸಾಲ ಆಗುತ್ತದೆ. ನಾವು ಈಗ 6 ಕೋಟಿಯಷ್ಟು ಜನರಿದ್ದೇವೆ. 65 ಕೋಟಿಯಷ್ಟು ಸಾಲ, ನಾನು ಸಾಲ ತೆಗೆದುಕೊಳ್ಳಬಾರದೆಂದು ಹೇಳುವುದಿಲ್ಲ. ಆದರೆ, ನಮ್ಮ ಸಾಲ ಹೇಗಿರಬೇಕೆಂದರೆ, it should be on the basis of affordability, not on the basis of availability. That is the agreed principle under the student management of the finances. Affordability ಸಾಲ ಸಿಗುತ್ತದೆಂದು ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Available ಸಾಲ ನನಗೆ ಸಿಗುತ್ತದೆ, ನನಗೆ ಸಾಮರ್ಥ್ಯ ಇದೆ, ಅದಕ್ಕೋಸ್ಕರ ಸಾಲವನ್ನು ಎಷ್ಟು ಬೇಕಾದರೂ ತೆಗೆದುಕೊಳ್ಳೋಣವೆಂದು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದರೆ, ನಮ್ಮ ಸಾಮರ್ಥ್ಯ ಎಷ್ಟಿದೆಯೋ, ಎಷ್ಟು ಕೊಡುವುದಕ್ಕಾಗುತ್ತದೆಯೋ, ನಮ್ಮ ಅಭಿವೃದ್ಧಿಗಳನ್ನು ನೋಡಿಕೊಂಡು, ಅಭಿವೃದ್ಧಿ ಕೆಲಗಳಿಗೆ ಇಷ್ಟು ಮತ್ತು ತೆಗೆದುಕೊಂಡ ಸಾಲಗಳೆಲ್ಲವನ್ನೂ ನಾವು ಬೇರಾವುದೋ ಬಾಬುಗಳಿಗೆ ಖರ್ಚು ಮಾಡಬಾರದು. ಅದನ್ನು asset creation ಗೆ ಮಾತ್ರ ಮಾಡಬೇಕು

ಛೇರ್ಮನ್: ಸಿದ್ಧರಾಮಯ್ಯನವರೆ, ಒಂದು ವಿಷಯವನ್ನು academic interest ನಿಂದ ಕೇಳುತ್ತಿದ್ದೇನೆ. 1 ಲಕ್ಷ 32 ಸಾವಿರ ಕೋಟಿ ರೂ.ಗಳ ಆಂತರಿಕ ಉತ್ಪನ್ನವಿರುವ ಸಂದರ್ಭದಲ್ಲಿ asset formation ಗೆ 50% ತನಕ ಸಾಲ ಪಡೆದುಕೊಳ್ಳಬಹುದೆಂದು ತಜ್ಞರು ಹೇಳುವ ಮಾತು. ಅದರ ಬಗ್ಗೆ ತಮ್ಮ ಸಲಹೆ ಏನು?

ಶ್ರೀ ಸಿದ್ದರಾಮಯ್ಯ: ನಾನು ಸಾಲ ತೆಗೆದುಕೊಳ್ಳಬಾರದೆಂದು ಹೇಳಿಲ್ಲ. ಸಾಲ ನಮ್ಮ ಶಕ್ತಿಗನುಗುಣವಾಗಿ ಇರಬೇಕೇ ಹೊರತು ಈಗ ಆಂಧ್ರಪ್ರದೇಶ ಸರ್ಕಾರದ ಬಜೆಟ್ ನೋಡಿಲ್ಲ. ಅವರು ಎಲ್ಲಾ ಸರ್ಕಾರಿ ಜಮೀನನ್ನು ಮಾರಿಕೊಂಡಿದ್ದಾರೆಂತೆ, ನಾನು ಹೈದರಾಬಾದ್‌ಗೆ ಹೋಗಿ ಕೇಳಿದಾಗ ಆಂಧ್ರಪ್ರದೇಶದಲ್ಲಿರುವ ಎಲ್ಲಾ ಜಮೀನನ್ನು ಮಾರಿ ದುಡ್ಡು ಕಲೆಕ್ಟ್ ಮಾಡಿದ್ದಾರಂತೆ, ಹಾಗಾಗಿ, ಆ ದುಡ್ಡನ್ನೂ ಸೇರಿಸಿಕೋಂಡಿರಬಹುದೆಂದು ಕಾಣುತ್ತದೆ. ಜಮೀನು ಮಾರಾಟ ಮಾಡಿದರೆ 3,000 ಕೋಟಿ ಬರುತ್ತದೆ, ಆದುದರಿಂದ ಜಮೀನು ಮಾರಾಟ ಮಾಡಬೇಕಾಗುತ್ತದೆಂದು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಈವರ್ಷ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಮುಂದಿನ ವರ್ಷಕ್ಕೂ 1,900 ಕೋಟಿ ರೂ.ಗಳು ಬರುತ್ತದೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ವರ್ಷ 138 ಕೋಟಿ ರೂ.ಗಳು ಬಂದಿದೆ. ಇದರ ಅನುಭವವಿದ್ದರೂ ಮುಂದಿನ ವರ್ಷಕ್ಕೆ 1,900 ಕೋಟಿ ರೂ.ಗಳು ಬರುತ್ತದೆಂದರೆ, ಮುಂದಿನ ವರ್ಷಕ್ಕೆ ಎಲ್ಲಿಂದ ಬರುತ್ತದೆ? What is your experience this year? What is your experience last year? Though there is a very bad experience in these 2 years. ಮತ್ತೆ 1,900 ಕೋಟಿ ರೂ.ಗಳಷ್ಟು ಲೆಕ್ಕ ಹಾಕಿಕೊಂಡರೆ ನಂಬಬೇಕೆ? ಜನರು ಇದನ್ನು ನಂಬಬೇಕೆ? ಸುಮ್ಮನೆ ಈ ತರಹ ಗಾಳಗೋಪುರ ಕಟ್ಟುವುದಕ್ಕಾಗುವುದಿಲ್ಲ. ನಾವು ಅದಕ್ಕೋಸ್ಕರವೇ fiscal responsibility ಹಾಕಿದ್ದು.

1988–99 ರಿಂದ 2001–02 ರವರೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿ ಕುಲಗೆಟ್ಟು ಹೋಗಿತ್ತು. Fiscal deficit 5.2% ಗೆ ಹೋಗಿತ್ತು 2001–02 ರಲ್ಲಿ. ಮತ್ತೆ ರೆವಿನ್ಯೂ ಕೊರತೆ ಸುಮಾರು 4,000 ಕೋಟಿ ರೂ.ಗಳಿಗಿಂತಲೂ ಜಾಸ್ತಿಯಾಗಿತ್ತು. ಸಾಲ ತೆಗೆದುಕೊಂಡು ಬಂದು revenue expenditure ಮಾಡುವ ಸಂಬಳ ಕೊಡುವ ಪರಿಸ್ಥಿತಿಗೆ ಹೊರಟು ಹೋಗಿದ್ದೆವು. ಆ ಕಾರಣದಿಂದ 11th and 12th Finance Commission ಎಲ್ಲವೂ ರಾಷ್ಟ್ರಮಟ್ಟದಲ್ಲಿ ಆಗಿ ಇದರ ಬಗ್ಗೆ ಗಂಭೀರವಾಗಿ ಯೋಚಿಸಿ, ಬರಿ ಕರ್ನಾಟಕ ಒಂದೇ ಅಲ್ಲ, ದೇಶದ ಎಲ್ಲಾ ರಾಜ್ಯಗಳಲ್ಲೂ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಅದನ್ನು ಸರಿಪಡಿಸಬೇಕೆಂದು 2002ರಲ್ಲಿ Fiscal Rsponsibility ಪಾಸ್ ಆಯಿತು. ಅದಾದ ನಂತರ, ನಾವು ಕೆಲವು ಗೊತ್ತು–ಗುರಿಗಳನ್ನು ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ ಪ್ರತಿ ವರ್ಷವೂ ಬಜೆಟ್ ಮಂಡಿಸಿದಾಗ Medium Term Fiscal plan ಮಂಡಿಸಬೇಕು,

ಇವತ್ತಿನಿಂದ ಮುಂದಿನ ನಾಲ್ಕು ವರ್ಷಗಳವರೆಗೆ ಅಂದಾಜುಗಳು ಹೇಗಿರುತ್ತದೋ, ತೆರಿಗೆ ಬೆಳವಣಿಗೆ ಹೇಗಿರುತ್ತದೋ, capital Receipts ಹೇಗಿರುತ್ತದೋ Revenue Receipts ಹೇಗಿರುತ್ತದೋ, Revenue Expenditure ಹೇಗಿರುತ್ತದೋ, Capital Expenditure ಹೇಗಿರುತ್ತದೋ, ಸಾಲ ಹೇಗೆ ಬೆಳವಣಿಗೆ

ಆಗುತ್ತದೆ, ಯಾವ ರೀತಿ ಇಟ್ಟುಕೊಳ್ಳಬೇಕು. ಯಾವ ಪ್ರಮಾಣದಲ್ಲಿ ಇಟ್ಟುಕೊಳ್ಳಬೇಕೆಂಬ ಬಗ್ಗೆ Fiscal Responsibility Act ನಲ್ಲಿ ನಾವು ಹೇಳಿದ್ದೇವೆ. ಆ ಚೌಕಟ್ಟಿನಲ್ಲಿಯೇ ನಾವು ಮಾಡಿಕೊಳ್ಳಬೇಕು. ಈ ವರ್ಷ ಆ ಚೌಕಟ್ಟನ್ನು ಮೀರಿದ್ದೇವೆ. ಏಕೆಂದರೆ, ಯಾವುದೇ ಕಾರಣಕ್ಕೂ Fiscal Responsibility Act ನಲ್ಲಿ ನಾವು ಏನು ಹೇಳಿಕೊಂಡಿದ್ದೆವು ಎಂದರೆ, fiscal deficit. There are two types of deficits. One is, Revenue Deficit, another is, Fiscal Deficit. Revenue Deficit ನಲಿ 2004-05 ರಲ್ಲಿ ಒಂದು ವರ್ಷ ಮುಂಚಿತವಾಗಿ ನಾವು surplus, ಬಂದೆವು. ಅದಾದ ನಂತರ, continuous ಆಗಿ 2006-07ರಲ್ಲಿ 4,000 ಕೋಟಿ ಚಿಲ್ಲರೆಯಷ್ಟು surplus, 2007-08 ರಲ್ಲಿ 2,900 ರೂ.ಗಳು ಸುಮಾರು 3,000ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿತ್ತು. 3,200 ಕೋಟಿ ರೂ.ಗಳಷ್ಟು surplus, ಹಣ capital receipts ನಲ್ಲಿ ಖರ್ಚು ಮಾಡುವುದಕ್ಕೆ ಸಿಕ್ಕಿತು.

2007-08ರಲ್ಲಿ ಸುಮಾರು ಮೂರು ಸಾವಿರ ಕೋಟಿ surplus, ಹಣ capital side ನಲ್ಲಿ ಖರ್ಚು ಮಾಡುವುದಕ್ಕೆ ಸಿಕ್ಕಿತ್ತು. 2006-07 ರಲ್ಲಿ ನಾಲ್ಕು ಸಾವಿರ ಕೋಟಿ surplus ಸಿಕ್ಕಿತ್ತು. ಆದರೆ, ಈಗ 2008-09 ರಲ್ಲಿ ಎಲ್ಲಾ ಸರ್ಕಸ್ ಮಾಡಿ 767 ಕೋಟಿ ಸಿಗಬಹುದು ಎಂದು ಅಂದಾಜು ಮಾಡಿಕೊಂಡಿದ್ದಾರೆ. ಅಷ್ಟು ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಅದು ಅಂದಾಜು. ಇವೆಲ್ಲ ಲೆಕ್ಕವಲ್ಲ. ಆದರೆ, 2006-07 ರಲ್ಲಿ ಮತ್ತು 2007-08 ರಲ್ಲಿ ಆಗಿರುವುದೆಲ್ಲಾ ಅಅಕೌಂಟ್ಸ್ ಆಗಿರುವಂಥದ್ದು. ಇದರ ಪ್ರಕಾರ ಒಂದು ರೂಪಾಯಿಯೂ ಸಿಕ್ಕುವುದಿಲ್ಲ. ಮುಂದಿನ ವರ್ಷಕ್ಕೆ ಸುಮಾರು ಸಾವಿರ ಚಿಲ್ಲರೆ ಕೋಟಿ surplus ಸಿಗುತ್ತದೆಂದು ಹೇಳಿಕೊಂಡಿದ್ದಾರೆ. Social services, Economic services ನಲ್ಲಿ cut ಮಾಡಿ ಎಲ್ಲಾ ಬಿಗಿ ಮಾಡಿ ಇದನ್ನು ತೋರಿಸಿದ್ದಾರೆ. ಕೇಂದ್ರ ಸರ್ಕಾರ ಬೇರೆ ಇವರಿಗೆ permission ಕೊಟ್ಟಿದ್ದಾರೆ. ನಿಮ್ಮ physical deficit ಈ ವರ್ಷಕ್ಕೆ 2.88 ಇಟ್ಟುಕೊಳ್ಳುತ್ತೇವೆಂದು ಹೇಳಿದ್ದರು ಅದು 3.49 ಆಗಿಬಿಟ್ಟಿದೆ. ಸುಮಾರು ಮೂರೂವರೆ, ಅದಕ್ಕಿಂತ ಜಾಸ್ತಿ ಸಹ ಆಗಬಹುದು. ಲೆಕ್ಕ ಹಾಕಿದ ಮೇಲೆ ಎಷ್ಟು ಬರುತ್ತದೋಗೊತ್ತಿಲ್ಲ. ಅಂದರೆ ಈ ವರ್ಷ ಮೂರು ಪರ್ಸೆಂಟ್‌ಗಿಂತ ಜಾಸ್ತಿ Economic Recession ಇರುವುದರಿಂದ ಮಾಡಿಕೊಳ್ಳಿ, ಅದಕ್ಕೋಸ್ಕರ to protect the expenditure on the social services and ecpenditure on the economic services ಅದನ್ನು maintain ಮಾಡಬೇಕು ಎಂಬುದು ಅದರ ಅರ್ಥ. ಅದನ್ನೂ ಇವರು ಮಾಡಲಿಲ್ಲ. Over all, in the process ಏನಾಗಿದೆಯೆಂದರೆ 7 ಪರ್ಸೆಂಟ್ social services ನಲ್ಲಿ cut ಆಗುತ್ತದೆ. ಇನ್ನೂ

ಜಾಸ್ತಿಯಾಗಬಹುದು. Economic services ನಲ್ಲಿ economic services ಅಂದರೆ ಕೃಷಿ, ನೀರಾವರಿ, ವಿದ್ಯುತ್, ಗ್ರಾಮೀಣಾಭಿವೃದ್ಧಿ ಇವುಗಳು ಬರುವ ಕಡೆಗಳಲ್ಲಿ ಸುಮಾರು 17 ಪರ್ಸೆಂಟ್ cut ಆಗುತ್ತದೆ. Over all more than 8 ಪರ್ಸೆಂಟ್ cut ಆಗುತ್ತದೆ. ಇದನ್ನು ಹೇಗೆ ಬೆಳವಣಿಗೆಯ ಪರವಾಗಿದೆಯೆಂದು ಹೇಳುವುದಕ್ಕಾಗುತ್ತದೆ? ಇದು ಅಭಿವೃದ್ಧಿ ಪರವಾಗಿದೆಯೆಂದು ಹೇಳುವುದಕ್ಕಾಗುತ್ತದೆಯೇ? ಇಷ್ಟೆಲ್ಲಾ ಆದರೂ ಸಹ, ನಾನು ಬೇರೆ ಬೇರೆ ಕಾಲದಲ್ಲಿ ಮಂಡಿಸಿರುವ ಎಲ್ಲಾ ಬಜೆಟ್‌ಗಳನ್ನು ನೋಡಿದ್ದೇನೆ. ಈ ರೀತಿ non-developmental expenditure ನ್ನು ಸ್ವೇಚ್ಛೆಯಾಗಿ ಕೊಡುವುದನ್ನು ನಾನು ಎಲ್ಲೂ ನೋಡಿಲ್ಲ. ಹಣವೇ ಇಲ್ಲದಿರುವಾಗ, ಕೃಷಿಗೆ, ನೀರಾವರಿಗೆ, ಗ್ರಾಮೀಣಾಭಿವೃದ್ಧಿಗೆ, ಕುಡಿಯುವ ನೀರಿಗೆ, ಶಿಕ್ಷಣಕ್ಕೆ ಆರೋಗ್ಯಕ್ಕೆ, ಸೋಶಿಯಲ್ ಸ್ಕೀಮ್‌ಗಳಿಗೆ ಹಣ ಕಡಿಮೆ ಇರುವಾಗ ನೀವು ತೆಗೆದುಕೊಂಡು ಅಲ್ಲಿ ದೇವಸ್ಥಾನಕ್ಕೆ ಕೊಡುತ್ತೇವೆ, ಮತ್ತೊಂದಕ್ಕೆ ಕೊಡುತ್ತೇವೆಂದರೆ ಹೇಗೆ? ಹಣ ಧಾರಾಳವಾಗಿದ್ದರೆ ಎಲ್ಲಾ ದೇವಸ್ಥಾನಕ್ಕೆ ಕೊಟ್ಟುಬಿಡಿ. ನಮ್ಮದೇನು ತಕರಾರಿಲ್ಲ. ಕರ್ನಾಟಕದಲ್ಲಿ ಎಷ್ಟು ದೇವಸ್ಥಾನಗಳಿವೆಯೋ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಏಳು ಸಾವಿರ ಜಾತಿಗಳು ಇವೆ. ಎಂದರು ಇನ್ನೂ ಎಂದರು ಮೂರೂವರೆ ಸಾವಿರ ಜಾತಿಗಳು ಇವೆ, ಇನ್ನು ಇದರ ಬಗ್ಗೆ ಸರಿಯಾಗಿ ಲೆಕ್ಕ ಸಿಗುತ್ತಿಲ್ಲ. ಏಕೆಂದರೆ ಸರ್ವೆಯೇ ಆಗಿಲ್ಲವಲ್ಲಾ? ಅದು ಅಷ್ಟು ಇದೆಯೋ ಗೊತ್ತಿಲ್ಲ. ಅಂದಾಜಿನ ಮೇಲೆ ಹೇಳಿದ್ದಾರೆ. ಎಲ್ಲಾ ಜಾತಿಗಳಿಗೂ ತೆಗೆದುಕೊಳ್ಳಿ ನಿನಗೆ ಐದು, ಹತ್ತು ಕೋಟಿ ಎಂದು ಕೊಡಲು ಆಗುತ್ತದೆಯೇ? ಆ ರೀತಿ ಕೊಡುವುದರಿಂದ ಅವರ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಾಗುತ್ತದೆಯೇ? ಏನೂ ಆಗುವುದಿಲ್ಲ. ರಾಜ್ಯದ ಬೆಳವಣಿಗೆಯೂ ಆಗುವುದಿಲ್ಲ. ಆವರ quality life ಕೂಡ improvement ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಮತ್ತು ನೀವು ಕಾಗಿನೆಲೆ ಅಭಿವೃದ್ಧಿ ಬಗ್ಗೆ ಕನಕದಾಸರ ಪೀಠದ ವಿಚಾರದಲ್ಲಿ ಹೋಗಿ ಉದ್ಘಾಟನೆ ಮಾಡಿ ಬಂದೆವು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆವು. ಕಾಗಿನೆಲೆಯಲ್ಲಿ ನಾವು 15-20 ಕೋಟಿ ಖರ್ಚು ಮಾಡಿದರೆ ಆ ಸುತ್ತ ಮುತ್ತ ಇರುವ ಹಳ್ಳಿಗಳ ರಸ್ತೆಗಳು ಅಭಿವೃದ್ಧಿ ಕಾರ್ಯಗಳು, ಇನ್ನು ಸಾವಿರಾರು ವರ್ಷಗಳಿಗೆ ಇಂಥ ಮಹಾನುಭಾವ ಹುಟ್ಟಿದ್ದ ಎಂಬುದನ್ನು ನೆನಪಿನಲ್ಲಿಡುವಂಥ ಒಂದು permanent work ಅದರ ನೆಲ್ಲಿಪದಲ್ಲಿ ರಸ್ತೆಗಳು, ಕಟ್ಟಡಗಳು, ಅಭಿವೃದ್ಧಿ ಕಾರ್ಯಗಳು, ಕೆರೆಕಟ್ಟೆಗಳು ಇವೆಲ್ಲ ಆಗುತ್ತದೆ. ಅದನ್ನು ನಾವು ನೀವು ಹೋಗಿ ನೋಡಿಕೊಂಡು ಬಂದಿದ್ದೇವೆ. ನನ್ನ ಆಸೆ ಏನು ಎಂದರೆ ಯಾವ್ಯಾವುದೋ ಪಾಪಕ್ಕೆ, ಯಾರ್ಯಾರದೋ ಕಾರಣಕ್ಕಾಗಿ ಮಳೆ ಬೆಳೆ ಆಗದೆಯೆ ಸುಭಿಕ್ಷೆ ಇಲ್ಲದಿರುವ ಈ ಪರಿಸ್ಥಿತಿ ಇದೆಯಲ್ಲಾ, ದೇವರಾದರೂ ಏನಾದರು ಕಣ್ಣುಬಿಟ್ಟು ನೋಡಿ, ಇನ್ನಾದರೂ ಮನುಷ್ಯ ಪ್ರಯತ್ನದಿಂದ ಆಗಲಿಲ್ಲ, ದೇವರ

ದಯೆಯಿಂದಲಾದರೂ ಒಳ್ಳೆಯದು ಆಗುತ್ತದೆಂದು ನನ್ನ ನಂಬಿಕೆ. ಹೀಗಾಗಿ ನಿಶ್ಚಿತವಾಗಿ ಅದನ್ನು ತಾವು ನೋಡುವವರಿರುತ್ತೀರಾ. ಆ ಪೂಜೆ ಪುರಸ್ಕಾರಗಳೂ, ದೇವರು ದಿಂಡರ ಪರಿಣಾಮ ಒಳ್ಳೆಯದು ಆಗುತ್ತದೆ ಎಂಬುದನ್ನು ನೀವೇ ಪ್ರತ್ಯಕ್ಷವಾಗಿ ನೋಡುವಿರಂತೆ.

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರ ನಂಬಿಕೆಯಿಂದ ಈ ಮಾತನ್ನು ಅವರು ಹೇಳಿದ್ದಾರೆ. ಈ ದೇಶದಲ್ಲಿ ನಮಗೆ ಬೇಕಾದಷ್ಟು ಆಹಾರ ಧಾನ್ಯದ ಉತ್ಪತ್ತಿ ಇರಲಿಲ್ಲವೆಂಬುದು ನಮಗೆ ಗೊತ್ತಿದೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಅಥವಾ ಅದರ ಪೂರ್ವದಲ್ಲಿ ಕೂಡ ನಮ್ಮ ದೇಶದಲ್ಲಿರುವ ಜನರಿಗೆ ಹೊಟ್ಟೆ ತುಂಬುವಷ್ಟು ಅನ್ನ, ಆಹಾರ ಧಾನ್ಯ ಇರಲಿಲ್ಲ. ಆಗ ಪಂಡಿತ್ ಜವಹರಲಾಲ್ ನೆಹರುರವರು, ಡಾ:ಸ್ವಾಮಿನಾಥ್‌ರವರಂಥ experts ಮತ್ತು ಅನೇಕ irrigation projects ತಜ್ಞರು ಇವರೆಲ್ಲರೂ ಇವರೆಲ್ಲರು ಸೇರಿ ನಮ್ಮ ದೇಶದಲ್ಲಿ ಮಾಡಿದ ಮೊದಲ ಕೆಲಸವೇನೆಂದರೆ ಬಾಕ್ರಾನಂಗಲ್‌ನಂಥ ದೊಡ್ಡ ದೊಡ್ಡ ಡ್ಯಾಂಗಳು, public sectors ನಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು, ಅನೇಕ ನೀರಾವರಿ ಯೋಜನೆಯನ್ನು ತೆಗೆದುಕೊಂಡು ಆಹಾರದ ಉತ್ಪಾದನೆಯನ್ನು ಮಾಡಿದರು. ಪಂಡಿತ್ ಜನಹರಲಾಲ್ ನೆಹರುರವರಿಗೆ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದರೆ ಅದಕ್ಕೆ ಅವರು ಇವೆಲ್ಲವು ಕೂಡ modern temples, ಆಧುನಿಕ ಗುಡಿಗಳು ಎಂದು ಉತ್ತರ ಕೊಟ್ಟರು. ಈ ದೇವಾಲಯಗಳು ಇದ್ದರೆ ನಮ್ಮ ದೇಶದ ಅಭಿವೃದ್ಧಿಯಾಗುತ್ತದೆ, ಅದಕ್ಕಾಗಿ ಇದನ್ನು ಕಟ್ಟಿಸುತ್ತಿದ್ದೇನೆಂದು ಆ ಪುಣ್ಯಾತ್ಮ ಹೇಳಿದರೆ, ಇಲ್ಲಿ ಇವರಿಗೆ ನೀರಾವರಿಗೆ ರೈತರಿಗೆ ನೀರು ಕೊಡಿ ಎಂದರೆ ಇದಕ್ಕೆ 220 ಕೋಟಿಯಂತೆ, ಅಲ್ಲಿ ಮಠಮಾನ್ಯರಿಗೆ 130 ಕೋಟಿಯಂತೆ. ಇದು ನ್ಯಾಯವೇ? ಮೊದಲು ಇದನ್ನು ಮಾಡಿ ಉಳಿದರೆ ಮುಂದೆ ನೋಡೋಣ. ಜನರು ವಿದ್ಯುತ್‌ಚ್ಛಕ್ತಿ ಇಲ್ಲವೆಂದು ಸಾಯುತ್ತಿರುವುದು ನಿಮಗೇ ಗೊತ್ತಿದೆ. 15 ಲಕ್ಷ ಪಂಪುಸೆಟ್‌ನವರು ವಿದ್ಯುತ್ ಇಲ್ಲವೆಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ದಿನಾ ಎದ್ದು ನೀವು ಅವರಿಗೆ ಆಶ್ವಾಸನೆ ಕೊಡುತ್ತೀರಿ. ಇಂಥ ಎಲ್ಲಾ ಕೊರತೆ ಇದ್ದಾಗ ಇದು ಮಾಡುವುದು ಸೂಕ್ತವೆ ಎಂಬ ಪ್ರಶ್ನೆ ಈ ದೇಶದ ಮುಂದಿದೆ. ಅದಕ್ಕೆ ನೀವು ಸಮರ್ಥನೆಯನ್ನು ಯಾವ ರೀತಿಯಾದರು ಮಾಡಿಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ನೂರಕ್ಕೆ ನೂರು ಒಪ್ಪಕೊಳ್ಳುತ್ತೇನೆ. ಈ ಕೆರೆಕಟ್ಟೆ, ಜಲಾಶಯಗಳು, ಕನ್ನಾಂಬಾಡಿ ಕಟ್ಟೆಯನ್ನೇನು ಸರ್.ಎಂ.ವಿಶ್ವೇಶ್ವರಯ್ಯ ಕಟ್ಟಿದರು ಇಂಥದ್ದೇ permanent works. ಬುದ್ಧ ವಿಹಾರಕ್ಕೆ ಖರ್ಗೆಯವರು ಹೇಳಿದರೆಂದು ನಾನು 6–7 ಕೋಟಿ ಹಣವನ್ನು ಕೊಟ್ಟೆ. ಅಲ್ಲೇನು ವಿಹಾರಕ್ಕೆ ಕೊಟ್ಟಿದ್ದೇವೆಯೇ? ಆ ನೆಪದಲ್ಲಿ Infrastructure

development ಮಾಡಿದ್ದೇವೆ. ಅದು ಈ ಲೆಕ್ಕದಲ್ಲೇ ಬರುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬುದ್ಧ ವಿಹಾರಕ್ಕೆ 6-7 ಕೋಟಿಯನ್ನೇನು ಕೊಟ್ಟು ಖರ್ಚು ಮಾಡಿದೇವೆ, ನಾನು ನಿಮ್ಮನ್ನೇ ಕೇಳುತ್ತೇನೆ. ನಾವೇನು ಅಲ್ಲಿ ಗುಡಿ ಗುಮ್ಮಾರಗಳನ್ನು ಕಟ್ಟಿದೆವೆಯೇ? ಆ ನೆಪದಲ್ಲಿ ಕುಡಿಯುವ ನೀರು, ರಸ್ತೆಗಳ ಅಭಿವೃದ್ಧಿಯನ್ನು ಮಾಡಿದ್ದೇವೆ. ಬೀದರ್‌ನಲ್ಲಿ ಸಿಖ್ ಸಮುದಾಯದವರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ 120 ಕೋಟಿ ಮಾಡುತ್ತಿದ್ದೇವೆ. ಇಡೀ ಬೀದರ್ ಜಿಲ್ಲೆಯಲ್ಲಿ 25 ವರ್ಷದಿಂದ ಏನು ಕೆಲಸ ಆಗಿರಲಿಲ್ಲ ಅಷ್ಟು ಕೆಲಸ ಆ ಒಂದು ಜಿಲ್ಲೆಯಲ್ಲಿ ನಡೆಯುತ್ತಿದೆ. ದೇವರ ಹೆಸರಿನಲ್ಲಿ ಇನ್ನೊಂದರ ಹೆಸರಿನಲ್ಲಿ ನಾವು ಮಾಡುತ್ತಿರುವ infrastructure development, ಶಿಕ್ಷಣ ಸಂಸ್ಥೆಗೆ encouragement ಮಾಡುತ್ತಿದ್ದೇವೆಯೇ ಹೊರತು ದೇವರು ದಿಂಡರಿಗೇ ಕೊಡುತ್ತಿಲ್ಲ, ಮಾಧ್ಯಮದ ಮೂಲಕ ತಪ್ಪು ಗ್ರಹಿಕೆ ಆಗುತ್ತಿದೆ. ಆ ನೆಪದಲ್ಲಿ, ಮಠ ಮಂದಿರಗಳು ಎಂದರೆ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತಿದ್ದೇವೆ. ರಸ್ತೆಗಳಿಗೆ, ಅಭಿವೃದ್ಧಿ ಕೆಲಸಗಳಿಗೆ ಕೊಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಖಾಯಿಲೆ ಇದ್ದವರಿಗೆ ಮೊದಲ ಬರತಕ್ಕಂಥ ಔಷಧಿಯನ್ನು ಕೊಡಬೇಕು. ife saving drugs ಕೊಡಬೇಕು. ಆಮೇಲೆ ಉಳಿದದ್ದು. ನೀವು ನೂರು ಕಡೆ ಮಾಡಿರಬೇಕು. ಅದೇ ರೀತಿ ಬುದ್ಧವಿಹಾರದಲ್ಲೂ ರಸ್ತೆ ಮಾಡಿರಬೇಕು, ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ನಿಮಗೆ ಅಷ್ಟು ಅಸೂಯೆ ಇದ್ದರೆ ಬೇಕಾದರೆ ಆ ರಸ್ತೆಯನ್ನೇ ತೆಗೆದುಕೊಂಡು ಹೋಗಿ ಎಂದು ನಾನು ಹೇಳಿದೆ. ಬೇಕಾದರೆ ಆ Road ಕುಡಿಯುವ ನೀರಿನದನ್ನೆಲ್ಲಾ ಕಿತ್ತುಕೊಂಡು ಹೋಗಿ. ನೀವು ಹತ್ತಾರು ತಪ್ಪು ಮಾಡುವಾಗ ಇದೂ ಒಂದು ತಪ್ಪು ಮಾಡಿರಬಹುದು.

ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ...

[ಗೊಂದಲ]

ಛೇರ್ಮನ್:- ಮಾನ್ಯ ನಾಯ್ಡುರವರೆ, ತಾವು ಮಧ್ಯೆ ಮಾತನಾಡಬೇಡಿ. ಮಾನ್ಯ ಖರ್ಗೆಯವರು ಮಾತನಾಡಲಿ. ತಾವು ಬೇಕಾದರೆ ನಂತರ ಮಾತನಾಡಿ. ಮಾನ್ಯ ಖರ್ಗೆಯವರು ಮಾತನಾಡಲಿ. ತಾವು ಬೇಕಾದರೆ ನಂತರ ಮಾತನಾಡಿ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ರೋಷನ್‌ಬೇಗ್, ನಾನು ಎಲ್ಲವನ್ನೂ ನೋಡಿದ್ದೀನಪ್ಪ. ನಿನಗಿಂತಲೂ ಒಳ್ಳೆಯ portfolio ತೆಗೆದುಕೊಂಡು ನಾನು ನಿಭಾಯಿಸಿದ್ದೇನೆ.

[ಗೊಂದಲ]

ಛೇರ್ಮನ್ :- ಮಾನ್ಯ ನಾಯ್ಡುರವರೆ, ತಾವು ನಂತರ ಮಾತನಾಡಿ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ರೋಷನ್‌ಬೇಗ್, ನಿನಗಿಂತಲೂ ಒಳ್ಳೆಯ portfolio ನಾನು ಮೊದಲೇ ತೆಗೆದುಕೊಂಡು ನಿಭಾಯಿಸಿದ್ದೇನೆ. ನಿನಗಿಂತಲೂ ಒಳ್ಳೆಯ portfolio ದಲ್ಲಿ ನಾನಿದ್ದೇನೆ. ಇದನ್ನು ನೀವು ಅರ್ಥ ಮಾಡಿಕೊಳ್ಳಿ ನಿನಗಿಂತಲೂ ಒಳ್ಳೆಯ post ನಲ್ಲಿ ಇದ್ದೇನೆ, ನಿನಗಿಂತಲೂ ಒಳ್ಳೆಯ ಜಾಗದಲ್ಲಿದ್ದೇನೆ. ನೀವೇನೂ ನನಗೆ ಹೇಳಬೇಕಾಗಿಲ್ಲ. [ಗೊಂದಲ] ನಾನು ಒಳ್ಳೆಯ portfolio ವನ್ನು ನೋಡಿ ಬಂದಿದ್ದೇನೆ. ಇವತ್ತೂ ನನ್ನ ಹತ್ತಿರ 5 portfolio ಇದೆ. ನೀವು ಕೇಳಿದ್ದಕ್ಕೆ ಕೊಡಲಿಲ್ಲ. ಇದನ್ನು ಮಾನ್ಯ ಯಡಿಯೂರಪ್ಪನವರು ನನಗೆ ಕೊಟ್ಟಿದ್ದಾರೆ. ನೀವಲ್ಲ ನಮಗೆ ಕೊಟ್ಟಿರುವುದು. ಮಾನ್ಯ ಯಡಿಯೂರಪ್ಪನವರು ನನಗೆ ಇದನ್ನು ಕೊಟ್ಟಿರುವುದು. [ಗೊಂದಲ] ನಿನಗಿಂತಲೂ ಒಳ್ಳೆಯ portfolio ದಲ್ಲಿ, ನಿನಗಿಂತಲೂ ಒಳ್ಳೆಯ ಕೆಲಸವನ್ನು ಮಾಡಿದ್ದೇನೆ. ನೀವೇನು ನಮಗೆ ಹೇಳುವುದು?

[ಗೊಂದಲ]

ಡಾ: ಬಿ.ಎಸ್.ಯಡಿಯೂರಪ್ಪ:- ಹಜ್ ಯಾತ್ರಿಗಳಿಗೆ...

[ಗೊಂದಲ]

ಶ್ರೀ ಆರ್. ರೋಷನ್ ಬೇಗ್:- Sir, I protest. ಬೆಂಗಳೂರು ನಗರದಲ್ಲಿ ಇವರು ಮಂತ್ರಿಗಳಾಗಿದ್ದಾರೆ. ಬೆಂಗಳೂರು ನಗರದಲ್ಲಿ ಇರುವ ಆಸ್ಪತ್ರೆಯಲ್ಲಿ Patients ಕುಡಿಯುವುದಕ್ಕೆ ನೀರಿಲ್ಲ, ತೊಳೆಯುವುದಕ್ಕೆ ನೀರಿಲ್ಲ. ಏನು ಮಾತನಾಡುತ್ತೀರಿ?

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ನೀವು ಮಾಡಿದ್ದು ಪಾಪ. 50 ವರ್ಷದಿಂದ ಬೆಂಗಳೂರು ನಗರದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ನೀವು ನೀರು ಕೊಡಲಿಲ್ಲ. ನೀವು ಮಾಡಿದ ಪಾಪದ ಕೊಡ ಇವತ್ತು ತುಳುಕುತ್ತಿದೆ. [ಗೊಂದಲ] ಬೆಂಗಳೂರಿಗೆ 40-50 ಟಿಎಂಸಿ ನೀರು ಬೇಕಾಗಿತ್ತು. ಕೇಂದ್ರಗಳಲ್ಲಿ ನೀವು ಇದ್ದಿರಿ, ರಾಜ್ಯದಲ್ಲಿ ನೀವು ಇದ್ದಿರಿ. ಬೆಂಗಳೂರು ನಗರಕ್ಕೆ ನೀವು ಕುಡಿಯುವ ನೀರು ಕೊಡಲಿಲ್ಲ. ಮೋಸ ಮಾಡಿದವರು ನೀವು, ದಗಾ ಮಾಡಿದವರು ನೀವು. ಈ ರಾಜ್ಯದ ಜನತೆಗೆ, ಬೆಂಗಳೂರು ನಗರ ಜನತೆಗೆ ಮೋಸ ಮಾಡಿದವರು ನೀವು. ನೀವು ಜವಾಬ್ದಾರರು, ನಾವಲ್ಲ.[ಗೊಂದಲ] you are the culprit here.

[ಗೊಂದಲ]

ಛೇರ್ಮನ್:- ಇಲ್ಲಿ ಬಜೆಟ್ ಮೇಲೆ ಚರ್ಚೆಯಾಗುತ್ತಿದೆ. ಮೂಲ ಚರ್ಚೆಯಿಂದ ಬೇರೆ ಕಡೆಗೆ ಹೋಗಬೇಡಿ. ದಯವಿಟ್ಟುಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:- ಮಂತ್ರಿಗಳೇ ಮಧ್ಯೆ ಪ್ರವೇಶ ಮಾಡಿದರೆ ಹೇಗೆ?

[ಗೊಂದಲ]

ಛೇರ್ಮನ್:- ಮಾನ್ಯ ನಾಯ್ಡುರವರೆ, ತಾವು ಕುಳಿತುಕೊಳ್ಳಿ, ನಿಮಗೆ ಅವಕಾಶ ಕೊಟ್ಟಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. [ಗೊಂದಲ] ಮಾನ್ಯ ರಮಾನಾಥ ರೈರವರೆ, ನಿಮ್ಮನ್ನೂ ಕರೆದಿಲ್ಲ ತಾವೂ ಕೂಡ ದಯವಿಟ್ಟು ಕುಳಿತುಕೊಳ್ಳಿ [ಗೊಂದಲ] ಮಾನ್ಯ ಸಿದ್ದರಾಮಯ್ಯನವರೆ, ತಾವು ಮಾತನಾಡುವುದನ್ನು ಮುಂದುವರೆಸಿ. [ಗೊಂದಲ] ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇಲ್ಲಿ ಯಾರೂ ಪರಸ್ಪರ ಮಾತನಾಡುವುದು ಬೇಡ.

[ಗೊಂದಲ]

ಡಾ:ಬಿ.ಎಸ್.ಯಡಿಯೂರಪ್ಪ:- ದಯವಿಟ್ಟು ಈ ಕಡೆಗೆ ಯಾರೂ ಮಾತನಾಡಬೇಡಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:- ಏಕೆ ಅದನ್ನೇ ಹೇಳುವುದು?

[ಗೊಂದಲ]

ಛೇರ್ಮನ್ :- ಮಾನ್ಯ ರಮಾನಾಥ ರೈರವರೆ, ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಡಾ: ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ, ಅನುಭವ ಇರುವಂತಹ, ಹಣಕಾಸಿನ ಸಚಿವರಾಗಿ ಇಷ್ಟು ಒಳ್ಳೆಯ ಕೆಲಸ ಮಾಡಿರುವಂತಹ ಮಾನ್ಯ ಸಿದ್ದರಾಮಣ್ಣನವರು ಮಾತನಾಡಬೇಕಾದರೆ, ಮಾನ್ಯ ಖರ್ಗೆಯವರು ಮಾತನಾಡಬೇಕಾದರೆ ಮಧ್ಯದಲ್ಲಿ ಸ್ವಲ್ಪ ಕೆಣಕಿದರೆ, ಅವರು ಇನ್ನೂ ಹೆಚ್ಚಿನ ಉತ್ಸಾಹದಲ್ಲಿ ನಮಗೆ ಸಲಹೆ ಕೊಡುತ್ತಾರೆ ಎಂಬುದು ನಮ್ಮ ಭಾವನೆ. ನನ್ನ ವಿಚಾರವೇನೆಂದರೆ, ನಮ್ಮದು ತಪ್ಪಾದರೆ ನಿಲ್ಲಿಸೋಣ. ಉದಾಹರಣೆಗೆ, ಹಜ್ ಯಾತ್ರೆಗೆ ಎಲ್ಲರೂ ಡಿಮ್ಯಾಂಡ್ ಮಾಡಿದರು, ನಾನು 5 ಕೋಟಿ ರೂ.ಗಳನ್ನು ತೆಗೆದಿಟ್ಟಿದ್ದೇನೆ. ನನ್ನ ದೃಷ್ಟಿಯಿಂದ ಅದು waste ಅಲ್ಲ. ಅದು ಮೂಲಭೂತ ಸವಲತ್ತುಗಳನ್ನು ಒದಗಿಸುವಂತಾದ್ದು. ಆ point ಅನ್ನು ನಾನು ಇಲ್ಲಿ ಹೇಳಲಿಕ್ಕೆ ಹೊರಟಿದ್ದೆ. ಇದೊಂದು ಭಾಗ. ಎರಡನೆಯದು, ನೀವು ಕೊಡಲಿಲ್ಲ. you are right, ಮಾನ್ಯ ಸಿದ್ದರಾಮಣ್ಣ ಕೊಡಲಿಲ್ಲ. ಹಿಂದಿನ ಯಾವುದೇ ಸರ್ಕಾರದಲ್ಲಿ ದೇವರು ದಿಂಡರಿಗೆ ಕೊಡಲಿಲ್ಲ, OK. ಆದರೆ ಮೂಲ ಭೂತ ಸೌಲಭ್ಯಗಳೇನು ಸಿಗಬೇಕಾಗಿತ್ತೋ, ಅದು ಸಿಕ್ಕಿತೇ? ಬೆಂಗಳೂರಿನ ಬಗ್ಗೆ ಈಗ ಮಾತನಾಡಿದಿರಿ. ಸವಲತ್ತುಗಳನ್ನು ಕೊಡದಂತೆ ನಾವು ತಡೆದಿದ್ದೇವೆಯೇ? ನಾವು ಬಂದು ಕೇವಲ 8-9 ತಿಂಗಳಾಯಿತು. ನಾನು ವರ್ಷದ ಕೊನೆಯೊಳಗೆ, ದೇವರು-ದಿಂಡರಿಗೂ ದುಡ್ಡು ಕೊಡುತ್ತೇವೆ, ಬೆಂಗಳೂರನ್ನು ಮತ್ತು ರಾಜ್ಯವನ್ನು ಅಭಿವೃದ್ಧಿ ಮಾಡಿ, ಮೂಲಭೂತ ಸವಲತ್ತುಗಳನ್ನು ಒದಗಿಸದಿದ್ದರೆ, ಆಗ ಕೇಳಿ. ನಾನು ನಿಮಗೆ ಉತ್ತರ ಕೊಡುತ್ತೇನೆ.

[ಗೊಂದಲ]

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಡಾ: ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಉದ್ದೇಶ, social investmentಗಿಂತ social expenditure ಮಾಡಿದರೆ ರಾಜ್ಯದ ಅಭಿವೃದ್ಧಿಯಾಗುತ್ತದೆ, ಜನರ ಹಿತವಾಗುತ್ತದೆ ಎನ್ನುವ ಭಾವನೆ ಇರುವಂತೆ ಕಾಣುತ್ತದೆ. ಜೊತೆಗೆ ಜನರ ಏಳಿಗೆಗಿಂತ ಹೆಚ್ಚಾಗಿ ಮಠ ಮತ್ತು ದೇವಸ್ಥಾನಗಳಿಗೆ ದುಡ್ಡು ಕೊಟ್ಟರೆ, ಸುಖೀರಾಜ್ಯ ಸ್ಥಾಪನೆ ಮಾಡಿದಂತಾಗುತ್ತದೆಂದು ನೀವು ಭಾವಿಸಿದ್ದೀರಿ. ಅನೇಕ ಸಾಹಿತಿಗಳು ಮತ್ತು ಕವಿಗಳ ಹೆಸರುಗಳನ್ನೂ ಇಲ್ಲಿ ಉಲ್ಲೇಖ ಮಾಡಿದ್ದಾರೆ. ಇದೆಲ್ಲವನ್ನೂ ನೋಡಿದಾಗ, ಹಿಂದೆ ಡಿ.ವಿ.ಗುಂಡಪ್ಪನವರಿಗೆ ಸನ್ಮಾನ ಮಾಡಬೇಕು, pension ಕೊಡಬೇಕೆಂದು ಹೇಳಿದಾಗ, ಡಿ.ವಿ.ಜಿ.ಯವರು 'ಏಕ್ರೀ? Tax payers ದುಡ್ಡು ನನಗೆ ಕೊಡುತ್ತೀರಿ, ಅದು ನನಗೆ ಬೇಡ' ಎಂದು ಅವರು pension ಸಹ ತೆಗೆದುಕೊಳ್ಳಲಿಲ್ಲ, ಸನ್ಮಾನವನ್ನೂ ಸಹ ಸ್ವೀಕಾರ ಮಾಡಲಿಲ್ಲ. ಅಂತಹ ಉದಾಹರಣೆಗಳಿವೆ. ಬಜೆಟ್‌ನಲ್ಲಿ ಗಾಂಧೀಜಿ ಸೇರಿದಂತೆ ಅನೇಕ ಮಹನೀಯರ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅವರು ಯಾವ ರೀತಿಯಾಗಿ ನಡೆದುಕೊಂಡರು ಎನ್ನುವುದನ್ನು ಅನುಸರಿಸುವುದು ಬಿಟ್ಟು, ಬೇರೆ ಬೇರೆ ತರಹ ನಡೆದುಕೊಂಡು ಹೋದರೆ ಹೇಗೆ? ಇಲ್ಲಿ backward class ಮತ್ತು minority education institutions ಇವೆ. Institutions ಗೆ ಕೊಡಬೇಕಾದರೆ ಅವರಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ? ಇವರ ಸಂಸ್ಥೆಗಳು ಎಷ್ಟಿವೆ? ವರ್ಷಕ್ಕೆ grant-in-aid ಯಾರ್‍ಯಾರು ಎಷ್ಟೆಷ್ಟು ತೆಗೆದುಕೊಳ್ಳುತ್ತಿದ್ದಾರೆ? Tax payers money ಯಾವ್ಯಾವುದಕ್ಕೆ ಎಷ್ಟೆಷ್ಟು ಬಳಕೆಯಾಗುತ್ತದೆ? ಒಟ್ಟಾರೆ ರಾಜ್ಯದ ಅಭಿವೃದ್ಧಿ ಮತ್ತು ಜನರ ಹಿತ ಆಗದಿದ್ದ ಮೇಲೆ, ಮಠಗಳನ್ನು ಮತ್ತು ದೇವಸ್ಥಾನಗಳನ್ನು ಎರಡನೆಯದಾಗಿಟ್ಟುಕೊಂಡು, ಅಭಿವೃದ್ಧಿ ಕಡೆ ಹೆಚ್ಚು ಗಮನ ಕೊಡದಿದ್ದರೆ, ಇದೇ ಮುಖ್ಯವೆಂದು ಹೇಳಿದರೆ, ಯಾವ ರೀತಿ ಅಭಿವೃದ್ಧಿಯಾಗುತ್ತದೆ ಅಥವಾ tax payers money ಗೆ ಬಜೆಟ್‌ಗೆ ಏನು ಅರ್ಥ ಮತ್ತು ಗೌರವ ಅದಕ್ಕಾಗಿ ಸರ್ಕಾರ ತನ್ನ ದೃಷ್ಟಿಕೋನವನ್ನು ಬದಲಾವಣೆ ಮಾಡಿಕೊಳ್ಳಬೇಕು. ಅವರ ಧಾರ್ಮಿಕವಾದಂತಹ ವಿಧಿ ಅಥವಾ ಆಚಾರಗಳನ್ನು ಖಾಸಗಿಯಾಗಿ ಏನಾದರೂ ಮಾಡಿಕೊಳ್ಳಲಿ. ಅದನ್ನು ಕಾನೂನು ಬದ್ಧವಾಗಿ ರಾಜ್ಯಾಂಗದ ಕೆಳಗಡೆ ನಡೆಸುವಂತಾದ್ದು ರಾಜ್ಯಾಂಗಕ್ಕೆ ಮಾಡಿದಂತಹ ಅಪಚಾರವಾಗುತ್ತದೆ.

ಶ್ರೀ ಸಿದ್ದರಾಮಯ್ಯ:- Sorry. ಇದೆಲ್ಲಾ ಇರಬೇಕು. ಇಲ್ಲದಿದ್ದರೆ ನಿಮ್ಮ ಆದ್ಯತೆಗಳೆಲ್ಲಾ ನಮಗೆ ಗೊತ್ತಾಗುತ್ತಲೇ ಇರಲಿಲ್ಲವಲ್ಲ. ನಿಮ್ಮ ಆದ್ಯತೆಗಳೇ ನಮಗೆ ಗೊತ್ತಿರಲಿಲ್ಲ. ನೀವು ಹೇಳಿದ್ದು ನಮಗೆ ಒಳ್ಳೆಯದೇ ಆಯಿತು. ಮಾನ್ಯ ಅಧ್ಯಕ್ಷರೇ, ಕಾಗಿನೆಲೆಗೆ ಕೊಟ್ಟಿದ್ದೇವೆ, ಬಸವ ಕಲ್ಯಾಣಕ್ಕೆ ಕೊಟ್ಟಿದ್ದೇವೆ, ಕೂಡಲ ಸಂಗಮ

ಕೊಟ್ಟಿದ್ದೇವೆ, ಅಲ್ಲಿ ಬುದ್ಧ ವಿಹಾರಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. Alright, ಅವುಗಳಿಗೆಲ್ಲಾ ಕೊಟ್ಟಿರುವುದಕ್ಕೆ thanks ಹೇಳೋಣ. ಮಾನ್ಯ ಜೆ.ಹಚ್.ಪಟೇಲರ ಸಂಪುಟದಲ್ಲಿ ನಾನು ಹಣಕಾಸಿನ ಸಚಿವನಾಗಿದ್ದಾಗಲೇ ಕೂಡಲ ಸಂಗಮ ಅಭಿವೃದ್ಧಿಗೆ ಖರ್ಚು ಮಾಡಿದ್ದೆವು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಆಗ ದೇವರು ಇರಲಿಲ್ಲವೇ?

ಶ್ರೀ ಸಿದ್ದರಾಮಯ್ಯ :- ಅದನ್ನು ದೇವರು ಎಂದು ಮಾಡಲಿಲ್ಲ ಸುಮ್ಮನೆ ಕುಳಿತುಕೊಳ್ಳಿ. ಬಸವಣ್ಣ ದೇವರಲ್ಲ, ಕುಳಿತುಕೊಳ್ಳಿ.

[ಗೊಂದಲ]

ಶ್ರೀ ;ಕಟ್ಟಾ ಸುಬ್ರಹಣ್ಯ ನಾಯ್ಡು:- ಕಾಗಿನೆಲೆ ಮಠ ಅಲ್ಲವೇ?

[ಗೊಂದಲ]

ಶ್ರೀ ಸಿದ್ದರಾಮಯ್ಯ:- ನಿಮ್ಮ ಪ್ರಕಾರ ಬಸವಣ್ಣನನ್ನು ನೀವು ದೇವರು ಎಂದೇ ಇಟ್ಟಕೊಳ್ಳಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ಕನಕದಾಸರನ್ನು ದೇವರು ಎಂದು ನಾನು ಅಂದುಕೊಳ್ಳುವುದಿಲ್ಲ. ಬಸವಣ್ಣ ದೇವರು ಎಂದು ನಾನು ಅಂದುಕೊಳ್ಳುವುದಿಲ್ಲ. ಅವರು ಸಮಾಜ ಸುಧಾರಕರು, ಒಬ್ಬ ದೊಡ್ಡ ಶರಣರು. ಕನಕದಾಸರು ಒಬ್ಬ ಶ್ರೇಷ್ಠ ದಾಸರು, ಅವರೂ ಕೂಡ ಸಮಾಜ ಸುಧಾರಕರು. ಅವರನ್ನು ಆ ಹಿನ್ನೆಲೆಯಲ್ಲಿ ನೋಡುತ್ತಿದ್ದೇವೆಯೇ ಹೊರತು, ಬಸವಣ್ಣನವರನ್ನು ದೇವರು ಎಂದು ನೋಡುವುದಿಲ್ಲ. ಕಾಗಿನೆಲೆಯಲ್ಲೂ ಕೂಡ ಕನಕದಾಸರನ್ನು ದೇವರು ಎಂದು ನೋಡುವುದಿಲ್ಲ. ಅವರನ್ನು ಒಬ್ಬ reformer ಎಂದು ನಾವು ನೋಡುತ್ತೇವೆ, ಅವರೊಬ್ಬರು ಶ್ರೇಷ್ಠ ದಾಸರೆಂದು ನಾವು ನೋಡುತ್ತೇವೆ. ಎಲ್ಲರನ್ನೂ ದೇವರು ಎಂದು ಹೇಳಿಬಿಟ್ಟರೆ ಹೇಗೆ? ಮಾನ್ಯ ಅಧ್ಯಕ್ಷರೆ, ಮುಜರಾಯಿ ಇಲಾಖೆ ಎಂಬುದಿದೆ. ಮುಜರಾಯಿ ಇಲಾಖೆಗೆ ಇನ್ನೊಂದಿಷ್ಟು ದುಡ್ಡು ಕೊಡಿ. ಯಾವ್ಯಾವ ದೇವಸ್ಥಾನಗಳು ಶಿಥಿಲವಾಗಿವೆಯೋ, ಅವುಗಳನ್ನು ರಿಪೇರಿ ಮಾಡತಕ್ಕದ್ದು, ಇತ್ಯಾದಿಗಳನ್ನು ಆ ಹಣದಿಂದ ಮಾಡಲಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. But, ಇಲ್ಲಿ ಯಾವ ಹಣವನ್ನು ನಾವು ಅಭಿವೃದ್ಧಿಗೆ ಖರ್ಚು ಮಾಡಬೇಕಾಗಿತ್ತೋ, ಆ ಹಣವನ್ನು ತೆಗೆದುಕೊಂಡು ಹೋಗಿ, ನಾವು ಯಾವ್ಯಾವುದಕ್ಕೋ non developmental expenditure ಮಾಡತಕ್ಕ ರೀತಿ ಇದೆಯಲ್ಲಾ, that is a bad practice. It's very bad practice. ಹಾಗಾದರೆ, ನೀರಾವರಿಗೆ ಹಣ ಖರ್ಚು ಮಾಡುವುದು ಬೇಡ, ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಖರ್ಚು ಮಾಡುವುದು ಬೇಡ, ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಖರ್ಚು ಮಾಡುವುದು ಬೇಡ, ಮನೆ ಕಟ್ಟಿಸುವುದು ಬೇಡ, ಬಡವರಿಗೆ ಅಕ್ಕಿ ಕೊಡುವುದು ಬೇಡ, ಎಲ್ಲರೂ ಬರೇ ದೇವಸ್ಥಾನಗಳನ್ನೇ ಕಟ್ಟಿಕೊಂಡು ಕುಳಿತುಬಿಡೋಣ. ಅದರಿಂದ ಎಲ್ಲರಿಗೂ ಹೊಟ್ಟೆ ತುಂಬತ್ತದೆ! ಅದನ್ನೇ ಮಾಡುವುದಕ್ಕಾಗುತ್ತದೆಯೇ? ಯಾಗ ಯಜ್ಞಗಳನ್ನೇ ಮಾಡಿಕೊಂಡು ಕುಳಿತುಕೊಂಡು

ಬಿಡೋಣ. ಮಳೆಯೂ ಬರುತ್ತದೆ, ಬೆಳೆಯೂ ಬರುತ್ತದೆ, ಎಲ್ಲಾ ಬರುತ್ತದೆ. ಆದ್ದರಿಂದ ನಾವೆಲ್ಲ ಅದನ್ನೇ ಮಾಡೋಣ. ದೇವರ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದೇವೆ, ದೇವಸ್ಥಾನಗಳಿಗೂ ಸಹ ಹೋಗುತ್ತೇವೆ. ಕುವೆಂಪು ಹೇಳಿರತಕ್ಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಕುವೆಂಪುರವರು ದೇವಸ್ಥಾನಗಳು, ಮಂದಿರಗಳು, ಮಠಗಳು, ಚರ್ಚ್‌ಗಳು ಎಲ್ಲವನ್ನೂ ಬಿಟ್ಟು ಹೊರಗಡೆ ಬನ್ನಿ ಎಂದು ಹೇಳೀದ್ದಾರೆ. ಅವರ ವಿಚಾರ ತಾನೇ ಮುಖ್ಯವಾಗಿರುವುದು ಬಸವಣ್ಣನವರೂ ಸಹ ಅದನ್ನೇ ಹೇಳಿದ್ದಾರೆ. ದೇವಸ್ಥಾನಕ್ಕೆ ಹೋಗಲೇಬೇಕೆಂದು ಬಸವಣ್ಣನವರು ಹೇಳಿದ್ದಾರೆಯೇ? 'ಉಳ್ಳವರು ದೇವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ ನನ್ನ ದೇಹವೆ ದೇಗುಲ, ನನ್ನ ಕಾಲೇ ಕಂಬ ನನ್ನ ಶಿರವೇ ಹೊನ್ನ ಕಳಸವಯ್ಯ ಕೂಡಲು ಸಂಗಮದೇವ' ಎಂದು ಅವರು ಹೇಳಿದ್ದಾರೆ. ಅವರು ದೇವಸ್ಥಾನಗಳನ್ನೇ ಮಾಡಿ ಎಂದು ಹೇಳಿದ್ದಾರೆಯೇ?

ಶ್ರೀ ರಾಮಚಂದ್ರಗೌಡ:– ನೀವೇ ದೇವರು,

ಶ್ರೀ ಸಿದ್ದರಾಮಯ್ಯ :– ಏಕೋ ಮಾನ್ಯ ರಾಮಚಂದ್ರಗೌಡರೆ, ನೀವು ಮುಂಚೆ ಸರಿಯಾಗಿದ್ದೀರಿ. ಇತ್ತೀಚೆಗೆ ಏಕೋ ಈ ತರಹ ಆಗಿಬಿಟ್ಟಿದ್ದೀರಿ.

ಡಾ: ಹೆಚ್.ಸಿ.ಮಹದೇವಪ್ಪ :– ನೀವು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಪಕ್ಕ ಕುಳಿತುಕೊಂಡು ಕೆಟ್ಟಿದ್ದೀರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ನಿಮ್ಮನ್ನೂ ದೇವರು ಎಂದು ಹೇಳುತ್ತಿದ್ದಾರೆ. ನಿಮಗೂ ಈಗ ಬಜೆಟ್‌ನಲ್ಲಿ 2 ಕೋಟಿ ರೂ.ಗಳನ್ನು ಕೊಡುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ:– ನಾನು ದೇವರಲ್ಲ. ದೇವರು ಎಂದು ಯಾರೂ ಕೂಡ ಆಗಲಿಕ್ಕೆ ಸಾಧ್ಯವಿಲ್ಲ. ಯಾರಿಗೂ ದೇವರು ಎಂದು ಹೇಳಲೂ ಬಾರದು.

ಶ್ರೀ ರಾಮಚಂದ್ರಗೌಡ:– 'ದೇವರೇ' ಎಂದು ಸಂಬೋಧಿಸಿ ಮಾತನಾಡಿಸುತ್ತಾರೆ. ಅದು ಇರುವ ಪದ್ಧತಿ.

ಶ್ರೀ ಸಿದ್ದರಾಮಯ್ಯ ;– ಸುಮ್ಮನೆ ಇರುವುದು ಬಿಟ್ಟು, ನೀವು ಇತ್ತೀಚೆಗೆ ಏನೇನೋ ಹೇಳಿ ಬೈಸಿಕೊಳ್ಳುತ್ತಿದ್ದೀರಲ್ಲ? ಈ ರೀತಿ ಹೇಳಿ ಫಜೀತಿಗೆ ಸಿಕ್ಕಿಹಾಕಿಕೊಳ್ಳಬೇಡಿ.

ಆದುದರಿಂದ, ನಾನು ಮುಜರಾಯಿ ದೇವಸ್ಥಾನಗಳನ್ನು ರಿಪೇರಿ ಮಾಡಬಾರದೆಂದು ಹೇಳುವುದಕ್ಕೆ ಹೋಗಲಿಲ್ಲ. ಇಲ್ಲಿ ನಾವು ಹಣಕಾಸಿನ ಬಿಕ್ಕಟ್ಟಿನಲ್ಲಿ ಸಿಕ್ಕಹಾಕಿಕೊಂಡಿದ್ದೇವೆ. ಪ್ಲಾನ್‌ನಲ್ಲಿ 10,–000 ಕೋಟಿ ಕಡಿತವಾಗುತ್ತಿದೆ, ನೀರಾವರಿಗೆ ಹಣ ಕೊಡುವುದಕ್ಕಾಗಲಿಲ್ಲ. ನೀರಾವರಿಗೆ 29% ಖರ್ಚು ಮಾಡುತ್ತಿದ್ದದ್ದು, ಇವತ್ತು ಯಾವ ಪರ್ಸೆಂಟ್‌ಗೆ ಬಂದಿದ್ದೇವೆ? 13%ಗೆ. ಇದಕ್ಕೆ ಖರ್ಚು ಮಾಡಬೇಕೋ ಅಥವಾ 29%ಗೆ ತೆಗೆದುಕೊಂಡು ಹೋಗಬೇಕೋ ಇಲ್ಲ ಮತ್ತೆ ಇವೆಲ್ಲಾ ಖರ್ಚು ಮಾಡಿ ಅದನ್ನು 5% ಗೆ ತೆಗೆದುಕೊಂಡು ಹೋಗಬೇಕೊ? That is my point. 2005–06 ರಲ್ಲಿ 29% ನೀರಾವರಿಗೆ ಇದ್ದದ್ದು, it has been reduced to 13%

ಮುಂದಿನ ವರ್ಷಕ್ಕೆ ಪ್ಲಾನ್ ಸೈಜ್ 29,500ಕೋಟಿ ಇದೆ, ಅದಕ್ಕೆ ಅನುಗುಣವಾಗಿ ಈ ವರ್ಷ ನೀರಾವರಿಗೆ ಇಡಬೇಕಾದ್ದದ್ದು ಸುಮಾರು ೬,000–7,000 ಕೋಟಿ ಇಡಬೇಕಾಗಿತ್ತು to maintain that percentage. ನೀವು ಎಲ್ಲಿ ಇಟ್ಟಿದ್ದೀರಿ? ನೀರಾವರಿಯಾಗಬೇಕು. ಇವತ್ತು food production ನೀವೆ ಒಪ್ಪಕೊಂಡಿದ್ದೀರಿ, ಈ ಸಾರಿ ನಮಗೆ ಸರಿಯಾಗಿ ಮಳೆಯಾಗಲಿಲ್ಲ, ಹಿಂಗಾರು ಮಳೆ ಕಡಿಮೆಯಾಯಿತು, ಆದುದರಿಂದ ಆಹಾರ ಉತ್ಪಾದನೆ ಎಷ್ಟು ಆಗಬೇಕಾಗಿತ್ತೋ ಅದಕ್ಕಿಂತ ಕಡಿಮೆ, ಅಂದರೆ 2008–09ಕ್ಕೆ 125 ಲಕ್ಷ ಟನ್ ಆಹಾರ ಉತ್ಪಾದನೆಯಾಗುತ್ತದೆ ಎಂದು ಲೆಕ್ಕ ಇಟ್ಟುಕೊಂಡಿದ್ದರು. ಎಷ್ಟು ಆಗಬಹುದು, ಅಂದಾಜು 108 ಲಕ್ಷ ಟನ್ ಆಗುತ್ತದೆಂದ ಎಕನಾಮಿಕ್ ಸರ್ವೇನಲ್ಲಿ ಇಟ್ಟುಕೊಂಡಿದ್ದೀರಿ, ಒಂದೊಂದರಲ್ಲಿ ಒಂದೊಂದು ರೀತಿ ಹೇಳಿದ್ದಾರೆ. 108 ಎಂದರೆ ಅದಕ್ಕಿಂತ ಕಡಿಮೆಯಾಗಬಹುದು. Every year population growth 2% ಇದೆ, ಕರ್ನಾಟಕದಲ್ಲಿ 1.8% ಇದೆ, ಪ್ರತಿ ವರ್ಷ 2% population growth ಇರುವಾಗ ನಿಮ್ಮ ಫುಡ್ ಪ್ರೊಡಕ್ಷನ್ ಹೆಚ್ಚಾಗಬೇಕೋ ಕಡಿಮೆಯಾಗಬೇಕೋ, ಕೃಷಿ ರಂಗಕ್ಕೆ ಹೆಚ್ಚು ಖರ್ಚು ಮಾಡಬೇಕೋ ಕಡಿಮೆ ಮಾಸಬೇಕೋ? If you don't invest more money on agriculture sector, how can you expect more production? ಹಣವನ್ನು ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಮಾಡಿದ್ದೀರಿ, ಫುಡ್ ಪ್ರೊಡಕ್ಷನ್ ಹೇಗೆ ಆಗುತ್ತದೆ? ನೀವು ಏನು ಹೇಳುತ್ತೀರಿ, ಇಲ್ಲ, ನಾವು ಸಾವಯವ ಕೃಷಿ 100 ಕೋಟಿ ಕೊಟ್ಟಿದ್ದೇವೆ, ಸಣ್ಣ ಅತೀ ಸಣ್ಣ ರೈತರಿಗೆಲ್ಲಾ ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ, 3% ಬಡ್ಡಿದರದಲ್ಲಿ ಸಾಲವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. But where is the result? The result is zero. ನೀರಾವರಿಯನ್ನು ನೀವು ಹೆಚ್ಚು ಮಾಡಲಿಲ್ಲ, ವಿದ್ಯುಚ್ಛಕ್ತಿ ಹೆಚ್ಚು ಮಾಡಲು ನೀವು ಪ್ರಯತ್ನ ಮಾಡಲಿಲ್ಲ. ಹೆಚ್ಚು ಮಾಡುವುದಿರಲಿ, T&D losses, Transmission loss, Distribution loss and theft 2002–03 ರಲ್ಲಿ 35.6% ಇತ್ತು, ಈಗ ಎಷ್ಟಾಗಿದೆ? ನಿಮ್ಮ Medium Term Fiscal plan ನಲ್ಲಿ 27.06% ಆಗಿದೆ ಎಂದು ಹೇಳುತ್ತಾರೆ. ಅಂದರೆ ನಿಮಗೆ Fiscal Responsibility Act ಪ್ರಕಾರ ಅದನ್ನು ಪ್ರತಿ ವರ್ಷ 5% ಕಡಿಮೆ ಮಾಡಬೇಕೆನ್ನುವ ಗುರಿ ಇತ್ತು. From the day of Fiscal demand started, ಇವತ್ತಿನವರೆಗೆ ನೀವು ಕಡಿಮೆ ಮಾಡಿರುವುದು 35.6–2706%. ಎಷ್ಟಾಯಿತು About 8%. ಏಕೆ, 16ನ್ನು ಕಡಿಮೆ ಮಾಡುವುದನ್ನು ಪ್ರಯತ್ನ ಮಾಡಬಾರದಾಗಿತ್ತು? ನೀವು ಪಂಪ್ ಸೆಟ್‌ಗಳಿಗೆಲ್ಲಾ ಹೇಗೆ ವಿದ್ಯುತ್ ಕೊಡುತ್ತೀರಿ? 6 ಗಂಟೆ 3 ಫೇಸ್ ನಲ್ಲಿ ವಿದ್ಯುತ್ ಕೊಡುತ್ತೇವೆಂದು ನೀವು ಆದೇಶವನ್ನು ಹೊರಡಿಸಿದ್ದೀರಿ, but the truth is, 3 ಗಂಟೆನೂ ಸರಿಯಾಗಿ ವಿದ್ಯುತ್ ಸಿಗುತ್ತಿಲ್ಲ. ನಾವು ಏನು ಲೆಕ್ಕಾ ಹಾಕಿಕೊಂಡಿದ್ದೇವೆಂದರೆ, 15 ಲಕ್ಷ

ಹೆಕ್ಟೇರ್‌ನಲ್ಲಿ ಗ್ರೌಂಡ್‌ವಾಟರ್ ಮೂಲಕ ನೀರನ್ನು ಕೊಟ್ಟು ಆಹಾರ ಉತ್ಪಾದನೆ ಹೆಚ್ಚು ಮಾಡಬೇಕು. Where is the power to increase the agriculture production? ಪವರೇ ಇಲ್ಲ, ಗ್ರೌಂಡ್ ವಾಟರ್ ಅನ್ನು ತೆಗೆಯಲು ವಿದ್ಯುತ್ ಇದ್ದರೆ ತಾನೆ ಪಂಪ್ ಸೆಟ್ ಓಡುವುದು? ಅಲ್ಲಿ ಸ್ವಿಚ್ ಹಾಕಿ ಬರುವುದರೊಳಗೆ ನಿಂತು ಹೋಗಿರುತ್ತದೆ, ಫುಡ್ ಪ್ರೊಡಕ್ಷನ್ ಹೇಗೆ ಜಾಸ್ತಿಯಾಗುತ್ತದೆ? ರಾತ್ರಿ 12 ಗಂಟೆ ಮೇಲೆ ನಿಲ್ಲಿಸಿಬಿಟ್ಟರೆ, ಹಳ್ಳಿಗಳಲ್ಲಾದರೆ ಪರವಾಗಿಲ್ಲ, ಇಲ್ಲೆಲ್ಲಾ ಕಳ್ಳತನಗಳೆಲ್ಲಾ ಆರಂಭವಾಗಿವೆ, ಕೊಲೆಗಳು, ಸುಲಿಗೆಗಳು ಏಕೆ ಆಗುತ್ತವೆಂದರೆ ಇದಕ್ಕೆ. ಕತ್ತಲೆಯಲ್ಲಿ ಬೆಳಿಗ್ಗೆ ಹೊತ್ತು ನುಗ್ಗಿಬಿಡುತ್ತಾರೆ, ಈಗ ಮಧ್ಯಾಹ್ನದ ಹೊತ್ತೆ ಶುರು ಮಾಡಿಕೊಂಡಿದ್ದಾರೆ. ಕರೆಂಟ್ ಇಲ್ಲದೆ ಈಗ ಹಳ್ಳಿಗಳಲ್ಲೂ ಕಳ್ಳತನಗಳು ಶುರುವಾಗಿದ್ದಾವೆ. ಹೊಟ್ಟೆಗಿಲ್ಲದವರು ಏನು ಮಾಡುತ್ತಾರೆ? ಬದುಕುವುದಕ್ಕೋಸ್ಕರ ಈ ರೀತಿಯ ಕೆಲಸಗಳನ್ನು ಶುರು ಮಾಡಿಕೊಳ್ಳುತ್ತಾರೆ. ಬಚ್ಚೇಗೌಡರಿಗೆ ಹಳ್ಳಿಜೀವನ ಗೊತ್ತಿದೆ, ಅವರು ತೋಟಗೀಟ ಮಾಡಿಕೊಂಡಿದ್ದಾರೆ, ನಿಮ್ಮ ತೋಟಕ್ಕೆ ಕರೆಂಟ್ ಇದೆಯೊ, ಎಲ್ಲ ಒಣಗಿ ಹೋಗಿದ್ದಾವೆ ಒಂದು ಸಾರಿ ಹೋಗಿ ನೋಡಿಕೊಂಡು ಬನ್ನಿ. ನೀರಾವರಿ ಫ್ಲೋ ವಾಟರ್ ಮೂಲಕ 35 ಹೆಕ್ಟೇರ್ ಪೊಟೆನ್ಷಿಯಲ್ ಇದೆ ಎಂದು ಹೇಳುತ್ತಿದ್ದೀರಿ, ಏನು 3 ವರ್ಷದಿಂದ ಜಾಸ್ತಿಯಾಯಿತೊ? ಅಲ್ಲಿ ಇನ್ನು 24 ಲಕ್ಷನೇ ಇದೆ, 35 ಲಕ್ಷವಾಗಬೇಕು. 10 ಲಕ್ಷ ಮೈನರ್ ಇರಿಗೇಷನ್‌ನಿಂದ ಮಾಡುತ್ತೇವೆ, ಆಹಾರ ಉತ್ಪಾದನೆ ಜಾಸ್ತಿ, ಗ್ರೌಂಡ್ ವಾಟರ್ ನಿಂದ 15 ಲಕ್ಷ ಹೆಕ್ಟೇರ್, ಎಲ್ಲಾ ಸೇರಿ 60 ಹೆಕ್ಟೇರ್ ಗೆ ನೀರು ಕೊಟ್ಟು ಆಹಾರ ಉತ್ಪಾದನೆಯನ್ನು ದ್ವಿಗುಣ ಮಾಡುತ್ತೇವೆ, ಎಲ್ಲಿದೆ ದ್ವಿಗುಣ? ಕಳೆದ ಸಾರಿಯಷ್ಟು ಈ ಸಾರಿ ಬಂದಿಲ್ಲವೆನ್ನುವಾಗ ದ್ವಿಗುಣವೆಲ್ಲಿ? ದ್ವಿಗುಣದ ಕಡೆ ಹೆಜ್ಜೆಯಾದರು ಹಾಕಬೇಕಲ್ಲ. ಕಳೆದ ಸಾರಿ ಕೊಟ್ಟಿದ್ದ ದುಡ್ಡನ್ನು ಕೂಡ ಕಡಿಮೆ ಮಾಡಿಬಿಟ್ಟಿದ್ದೀರಿ, ಅಲೋಕೇಷನ್ ಮಾಡುವುದು ಒಂದು ಖರ್ಚು ಮಾಡುವುದು ಇನ್ನೊಂದು, ದುಡ್ಡನ್ನೇ ಬಿಡುಗಡೆ ಮಾಡುವುದಿಲ್ಲ. ನಾನು ಹೇಳಿದಂತೆ 57,429 ಕೋಟಿ 2007–08 ರಲ್ಲಿ ಖರ್ಚನ್ನು ತೋರಿಸಿಬಿಟ್ಟು ಬಿಡುಗಡೆ ಮಾಡಿರುವುದು 48,487 ಕೋಟಿ. ಇದನ್ನು ನಾನು ಹೇಳುತ್ತಿರುವುದಲ್ಲ, ಇದು AGS report. It is not my figure, ಇದು ಸಿಎಜಿಯವರ ಫಿಗರ್ಸ್. ನೀವು ಸುಮಾರು 9000 ಕೋಟಿಯನ್ನು ಬಿಡುಗಡೆ ಮಾಡಿಲಿಲ್ಲವೆಂದರೆ, ಏಕೆ ಪ್ಲಾನ್ ಅಲೋಕೇಷನ್ ಅನ್ನು ಅಷ್ಟು ದೊಡ್ಡದಾಗಿ ಮಾಡುತ್ತೀರಿ? ನೀವು ವಾಸ್ತವಿಕ ಜಗತ್ತಿನಲ್ಲಿ ಸ್ವಲ್ಪ ನಿಂತುಕೊಂಡು ಕಾರ್ಯಕ್ರಮಗಳನ್ನು ಮಾಡಿ, ಎಲ್ಲಾ ಭ್ರಮಾಲೋಕದಲ್ಲಿ ನಿಂತುಕೊಂಡು ಮಾಡುವುದಕ್ಕೆ ಹೋದರೆ, ಅದು ಒಂದು ದಿನ ಎಕ್ಸ್‌ಪೋಸ್ ಆಗಿಯೇ ಆಗುತ್ತದೆ. ಈಗ ನೀವು ದುಡ್ಡನ್ನೆ ಬಿಡುಗಡೆ ಮಾಡುವುದಿಲ್ಲವೆಂದು ಸಿಎಜಿ ಎಕ್ಸ್‌ಪೋಸ್ ಮಾಡಿಲ್ಲವೇ? ಮುಂದಿನ ವರ್ಷ ಎಷ್ಟು ಬಿಡುಗಡೆ ಮಾಡುವುದಿಲ್ಲವೆಂದು ಗೊತ್ತಾಗುವುದಿಲ್ಲವೊ, ಪ್ಲಾನ್‌ಗೆ 26,000 ಕೋಟಿಯನ್ನು ಎಲ್ಲಿಂದ ಮಾಡುತ್ತೀರಿ? ಬಿಡುಗಡೆ ಮಾಡುವುದಕ್ಕೆ ಎಲ್ಲಿದೆ ದುಡ್ಡು? ಅದರ ಜೊತೆಗೆ

ಇಲ್ಲೇ ಖರ್ಚಾಗಿರುವುದಿಲ್ಲ, ಪ್ರತಿ ವರ್ಷ 10–15% ಸಪ್ಲಿಮೆಂಟರಿ ಎಸ್ಟಿಮೇಟ್, ಇಲ್ಲೇ ದುಡ್ಡು ಬಿಡುಗಡೆಯಾಗಿರುವುದಿಲ್ಲ, ಇಲ್ಲೇ ರಿಸೋರ್ಸಸ್ 7000–8000 ಕೋಟಿ ಆಗಿರುವುದಿಲ್ಲ. in addition to that, ಹೋದ ಹೋದಾಗೆಲ್ಲಾ ನಿಮಗೆ ಇಷ್ಟು ಕೋಟಿ ಕೊಡುತ್ತೇನೆ, ಅಷ್ಟು ಕೋಟಿ ಕೊಡುತ್ತೇನೆಂದು ಪ್ರಕಟಣೆ ಮಾಡಿರುತ್ತಾರಲ್ಲ, ಅವೆಲ್ಲಾ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಸೇರಿರುತ್ತದೆ. Fiscal Responsibility Act ನಲ್ಲಿ ಈ ರೀತಿ ಮಾಡಿ ಎಂದು ಹೇಳಿದ್ದಾರೆಯೇ?

ಈ ತರಹ ಮಾಡಿಕೊಳ್ಳಿ ನಮಗೆ ಇಷ್ಟ ಬಂದ ಹಾಗೆ ಹೇಳಿ ಎಂದು ಹೇಳಿದ್ದಾರಾ? ಇವನ್ನೆಲ್ಲಾ ಮಾಡಬಾರದು ಎಂದು Fiscal Responsibility Act ನಲ್ಲಿ ಬಹಳ specific ಆಗಿ ಹೇಳಿರುವುದು. ಇವೆಲ್ಲಾ ಮಾಡಬಾರದು ಮತ್ತೆ ಹಿಂದಿನ ಹಳೆಯ ಪರಿಸ್ಥಿತಿ ಕರ್ನಾಟಕ್ಕೆ ಬರಬಾರದು, ಹಿಂದಿನ ಆರ್ಥಿಕ ಪರಿಸ್ಥಿತಿ ಕರ್ನಾಟಕಕ್ಕೆ ಬರಬಾರದು ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕೆಂದು. ಈ ವರ್ಷ 47.215 ಕೋಟಿ ರೂ. ಬರುತ್ತದೆ ಎಂದು ಲೆಕ್ಕ ಹಾಕಿಕೊಂಡಿದ್ದರು, ಅದನ್ನು ಅವರು 42,247 ಕೋಟಿ ರೂ.ಗೆ ರೆಡ್ಯೂಸ್ ಮಾಡಿ ಬಿಟ್ಟಿದ್ದಾರೆ. 47,240 ಕೋಟಿ ರೂ. ಬರುತ್ತದೆ, ರೆವಿನ್ಯೂ ರಿಸೀಟ್ಸ್ ಇಷ್ಟು ಬರುತ್ತದೆ ಎಂದು ಲೆಕ್ಕ ಹಾಕಿಕೊಂಡಿದ್ದರು. ನಿರೀಕ್ಷೆ ಇತ್ತು. ಈಗ ಅದನ್ನು ರಿವೈಸ್ ಮಾಡಿ, ನಮಗೆ ರಿಸಿಷನ್ ಬಂದು ಬಿಟ್ಟಿತು ಆದ್ದರಿಂದ ರಿವೈಸ್ ಮಾಡಿದ್ದೇವೆ, ದೇವಸ್ಥಾನಗಳಿಗೆ ಕೊಟ್ಟಿದ್ದೇವೆ, ಮಠಗಳಿಗೆ ಕೊಟ್ಟಿದ್ದೇವೆ ಅದರಿಂದ ರಿಸಿಷನ್ ಆಗಿದ ಎಂದು ಹೇಳಿ ಈಗ 42,817 ಕೋಟಿ ರೂ.ಗೆ ಇಟ್ಟುಕೊಂಡಿದ್ದೀರಿ. You cannot reach this also. Because it is not an accounted figure, it is also an estimated figure. ಇದೂ ಕೂಡ ತಲುಪತ್ತದೆಯೋ ಇಲ್ಲವೋ ಗೊತ್ತಿಲ್ಲ. ಏಕೆ ಈ ತರಹ ಮಾಡುವುದಕ್ಕೆ ಹೋಗುತ್ತೀರಿ? ಇದು ಒಂದು ರೀತಿಯಲ್ಲಿ ಜನಗಳಿಗೆ ದಾರಿ ತಪ್ಪಿಸತಕ್ಕಂತಹ, ಮೋಸ ಮಾಡತಕ್ಕಂತಹ ಕೆಲಸ ಆಗುತ್ತದೆ. ಪತ್ರಿಕೆಯವರು ಬರೆಯುತ್ತಾರೆ, ಏನು ಕರ್ನಾಟಕದಲ್ಲಿ ಪ್ಲ್ಯಾನ್ ಸೈಜ್ 29,500 ಕೋಟಿ ಇದೆ ಎಂದು ಬರೆಯುತ್ತಾರೆ. ಇಲ್ಲಿ ಕಟ್ ಆಗಿರುವುದು ಯಾರಿಗೂ ಗೊತ್ತಾಗುವುದಿಲ್ಲ. ಜನಗಳ ಎಷ್ಟು ಕಟ್ ಆಗಿದೆ ಎಂದು ಅದನ್ನೆಲ್ಲಾ ನೋಡುವುದಕ್ಕೆ ಹೋಗುತ್ತಾರಾ? ನನಗೇ ಗೋತ್ತಾಗುವುದಿಲ್ಲ. ಇನ್ನು ಅವರಿಗೆ ಗೊತ್ತಾಗುತ್ತದಾ? ಏಕೆಂದರೆ ಫಿಗರ್ಸ್ ಎಲ್ಲಾ transparency ನೇ ಇರುವುದಿಲ್ಲ. ಸಾಧ್ಯವಾದ ಮಟ್ಟಿಗೆ ಪರದರ್ಶಕವಾಗಿರಬೇಕೆಂದು ಹೇಳುತ್ತಾರೆ. ಬಜೆಟ್‌ನಲ್ಲಿ ಇಟ್ಟಿರತಕ್ಕಂತಹ ಅಂಕಿ ಅಂಶಗಳೆಲ್ಲ ಪಾರದರ್ಶಕವಾಗಿರಬೇಕು. ಗೋಪ್ಯವನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡಬೇಕು. ಎಲ್ಲವೂ ಗೋಪ್ಯವೇ ಆದರೆ ಏನು ಮಾಡುವುದು? ಎಲ್ಲ ಗೋಪ್ಯವೇ ಆಗಿಬಿಟ್ಟರೆ ಕಷ್ಟವಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಮೂರು ಬಜೆಟ್‌ಗಳನ್ನು ಮಂಡಿಸಿದಾಗ Medium Term Fiscal Plan ಅದೂ ಮಂಡಿಸಿರಲಿಲ್ಲ. Over review budget ಅದನ್ನೂ

ಮಂಡಿಸಿರಲಿಲ್ಲ. Half year report ಅದನ್ನೂ ಮಂಡಿಸಿರಲಿಲ್ಲ. ಈ ಸಾರಿ ಏನೋ ಮಂಡಿಸಿದ್ದೀರಿ. ನಾವು ಹೇಳಿ ಹೇಳೀ ಸಾಕಾದ ಮೇಲೆ ನಾಲ್ಕನೇ ಸಾರಿಗೆ ಈ ಸಾರಿ ಮಂಡಿಸಿದ್ದೀರಿ. ಅದನ್ನು ಮಂಡಿಸುವುದಕ್ಕೆ ಹೋಗೇ ಇರಲಿಲ್ಲ ಇವರು. Fiscal Responsibility Act ಓದುವುದಕ್ಕೇ ಹೋಗಿರಲಿಲ್ಲ. ಈ ಸಾರಿ ಏನು ಓದಿದ್ದೀರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನೀವೇ ಇಷ್ಟು ಶ್ರಮ ಹಾಕಿ ಓದಿ ಭಟ್ಟಿ ಇಳಿಸಿ ನಮಗೆ ಮಾರ್ಗದರ್ಶನ ಮಾಡುತ್ತೀರಿ ಅದನ್ನು ನಾನು ನೆನಪು ಇಟ್ಟುಕೊಳ್ಳುತ್ತೇನೆ ಎಂದು ಹೇಳೀದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಶ್ರವಣ ಶಕ್ತಿ ಮೇಲೆ ನಿಮ್ಮ ಜ್ಞಾಪಕ ಶಕ್ತಿ ಮೇಲೆ ನನಗೆ ಬಹಳ ನಂಬಿಕೆ ಇದೆ. ಇನ್ನು ಮೇಲೆ ನೀವು ಓದುವುದಕ್ಕೇ ಹೋಗಬೇಡಿ, ನಾವು ಹೇಳಿದ್ದನ್ನು ಕೇಳಿಕೊಂಡು ಬರೆದು ಬಿಡಿ. ಶ್ರಮವೇ ಬೇಡ. ಸುಮ್ಮನೆ ಚುನಾವಣೆಗೆ ಓಡಾಡಿಕೊಂಡು ಇರಿ. ಇವರೆಲ್ಲಾ ಓದುವುದೇ ಬೇಡ ನಾವೆಲ್ಲ ಹೇಳುವುದು ಕೇಳಿಕೊಂಡು ಸುಮ್ಮನೆ ಇದ್ದುಬಿಡಿ.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಆಯಿತು.

ಶ್ರೀ ಸಿದ್ದರಾಮಯ್ಯ: ಇನ್ನು ಒಂದು ಗಂಟೆ ಕೋಡಿ ಸಾಕು. ಇಲ್ಲ ನಿಲ್ಲಿಸಿ ಎಂದರೆ ನಿಲ್ಲಿಸಿ ಬಿಡುತ್ತೇನೆ.

ಅಧ್ಯಕ್ಷರು: ನನ್ನದೇನೂ ಅಭ್ಯಂತರವಿಲ್ಲ. ನಾನು ಮೊದಲಿನಿಂದಲೂ ನಿಮಗೆ ನಿಯಂತ್ರಣ ಹಾಕಿಲ್ಲ. ನೀವೇ ಅರ್ಥ ಮಾಡಿಕೊಳ್ಳಿ. ನಿಮ್ಮ ಪಕ್ಷದಿಂದ ಒಟ್ಟು 18 ಹೆಸರುಗಳು ಬಂದಿವೆ. ಈಗ ಮಾತನಾಡಿರುವವರು ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಮತ್ತು ಶ್ರೀನಿವಾಸಪ್ರಸಾದ್ ಮೂರು ಜನ ಮಾತನಾಡಿದ್ದೀರಿ. ನಿಮ್ಮ ಪಕ್ಷದ ಸಮಯ ನೀವೇ ತೆಗೆದುಕೊಳ್ಳಿ. ಇವತ್ತು ಸಾಯಂಕಾಲದ ಒಳಗೆ ಮುಗಿಸಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಎಷ್ಟು ಹೊತ್ತಾದರೂ ಇವತ್ತು ಸಾಯಂಕಾಲದ ಒಳಗೆ ಇದು ಮುಗಿಯಬೇಕು. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ: ಮಾತನಾಡಲಿ, ಎಲ್ಲರೂ ಮಾತನಾಡಲಿ, I don't come in their way.

ಅಧ್ಯಕ್ಷರು: ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವೇ ನಿಯಂತ್ರಣ ಹಾಕಿಕೊಳ್ಳಿ. ನಾನು ಏನೂ ಹೇಳುವುದಿಲ್ಲ. ನೀವು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಅದು ನಿಮಗೆ ಬಿಟ್ಟದ್ದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಒಂದು ಸಲಹೆ ಏನೆಂದರೆ, ನಾಳೆ ಮಧ್ಯಾಹ್ನದವರೆಗೆ ಚರ್ಚೆ ಆಗಲಿ. ಮಧಾಹ್ನದ ಮೇಲೆ ಉತ್ತರ ಕೊಡಲಿ. ರಾತ್ರಿ ಅಲ್ಲಿಗೆ ಹೋಗಲಿ. ಉತ್ತರ ನೀವು ಹೇಗೂ

ಕೇಳಿಸಿಕೊಂಡಿದ್ದೀರಿ, ದಬಾಯಿಸುತ್ತೀರಿ. ನಾಳೆ ಮಧ್ಯಾಹ್ನದವರೆಗೂ ಚರ್ಚೆ ಮುಂದುವರೆಯಲಿ. ನೀವು ಅನುಮತಿ ಕೊಟ್ಟರೆ ಮುಂದುವರೆಸುತ್ತೇನೆ.

ಅಧ್ಯಕ್ಷರು: ನಾನು ಅನುಮತಿ ಕೊಟ್ಟಿದ್ದೇನೆ. ನಿಮಗೆ ಬಿಟ್ಟಿದ್ದು. ನಿಮ್ಮ ಉಳಿದ ಶಾಸಕರಿಗೆ ಅವಕಾಶ ಸಿಗಲಿಲ್ಲವೆಂದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಎರಡು ಗಂಟೆಯವರೆಗೆ ಮಾತನಾಡಿ. ಅವರು ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಉಳಿದ ಶಾಸಕರು ಸ್ವಲ್ಪ ತ್ಯಾಗ ಮಾಡಬೇಕು.

ಶ್ರೀ ಸಿದ್ದರಾಮಯ್ಯ: ಅವರೆಲ್ಲಾ ನನ್ನನ್ನೇ ಮಾತನಾಡಿ ಎಂದು ಹೇಳುತ್ತಿದ್ದಾರೆ. ಯಾಕೋ disturb ಆಯಿತು, ಮೂರು ಗಂಟೆಗೆ ಮುಂದುವರೆಸೋಣ.

ಅಧ್ಯಕ್ಷರು: ಆದಷ್ಟು ಸಮಯವನ್ನು ನೋಡಿಕೊಂಡು ಮಾತನಾಡಿ. ಉಳಿದವರೂ ಮಾತನಾಡುವವರಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಒಂದು ಗಂಟೆಗೆ 57 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 3.00 ಗಂಟೆಗೆ ಸೇರುವಂತೆ ನಿರ್ಧರಿಸಿತು)

(ಭೋಜನ ವಿರಾಮದ ನಂತರ ಸದನದ ಕಲಾಪವು 3.13ಕ್ಕೆ ಪ್ರಾರಂಭವಾಯಿತು ಮಾನ್ಯ ಉಪಾಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

2009-10 ನೇಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ:

ಶ್ರೀ ಆರ್. ರೋಷನ್‌ಬೇಗ್: ಮಾನ್ಯ ಉಪಾಧ್ಯಕ್ಷರೇ, front bench ನಲ್ಲಿ ಯಾರೂ ಇಲ್ಲ.

ಉಪಾಧ್ಯಕ್ಷರು: ಬರುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

ಉಪಾಧ್ಯಕ್ಷರು: ಸರ್ಕಾರ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ನಾವಿಲ್ಲ ಇದ್ದೇವೆ.

(ಗೊಂದಲ)

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ, ಎಲ್ಲಿದೆ ಸರ್ಕಾರ? ಸರ್ಕಾರವೇ ಇಲ್ಲವಲ್ಲ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ರಾಜ್ಯದಲ್ಲಿ ಯಡಿಯೂರಪ್ಪ ಸದನದಲ್ಲಿ ಕುಳಿತುಕೊಂಡಷ್ಟು ಸಮಯ ಯಾವ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಅನಿಸುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಶಿವಕುಮಾರ್ ಎಲ್ಲಿದ್ದಾರೆ ಹುಡುಕಿಕೊಡಿ ಎಂದು ನಾನು Intelligence ಗೆ ಹೇಳಿದ್ದೇನೆ, ಕೇಳಿ. ನಮ್ಮ ಕಾಂಗ್ರೆಸ್ಸ್ ಸ್ನೇಹಿತರೆಲ್ಲ ಬಂದು ಶಿವಕುಮಾರ್ ಪತ್ತೆ ಇಲ್ಲ, ಹುಡುಕಿಕೊಡಿ ಎಂದು ನನ್ನನ್ನು ಕೇಳಿದರು.

ಉಪಾಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರಲ್ಲ, ಚರ್ಚೆಯನ್ನು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಶಿವಕುಮಾರ್‌ರವರು ಕಾಲು ಕೆರೆದುಕೊಂಡು ಜಗಳಕ್ಕೆ ಬರುವುದಕ್ಕೋಸ್ಕರ ನೋಡುತ್ತಿದ್ದಾರೆ ನಾವು ಶಿವಕುಮಾರ್‌ರವರಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಏನಾದರೂ ಮಾಡಿ ಒಂದು ಸಣ್ಣ ಸಣ್ಣ ವಿಷಯ ಹುಡುಕಿ. ಜಗಳ ಮಾಡಲು ಬರುತ್ತೀರಿ. ನೀವು ನೋಡಿದರೆ ಪತ್ತೆನೇ ಇಲ್ಲ. ಸಿದ್ದರಾಮಣ್ಣನವರನ್ನು ಬಿಟ್ಟು ನೀವು ಒಬ್ಬರೇ ಎಲ್ಲೋ ಹೋಗಿರುತ್ತೀರಿ. ನೀವು ಬಂದರೆ ಅವರು ಇರುವುದಿಲ್ಲ. ನಾವು ಏನು ಮಾಡಬೇಕು ಎಂದು ದಿಕ್ಕು ತೋಚುತ್ತಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿದ್ಧರಾಮಣ್ಣನವರನ್ನು ಹಾಗೂ ಶಿವಕುಮಾರ್‌ರವರನ್ನು ಒಟ್ಟಿಗೆ ಸೇರಿಸಿದ್ದು ಮಾನ್ಯ ಮುಖ್ಯಮಂತ್ರಿಗಳೇ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಹಳ ಸದುದ್ದೇಶದಿಂದ ಮಾಡಿದ್ದೇನೆ. ಆದರೆ ನೀವು ಎಲ್ಲಿ ಮಧ್ಯೆ ಬಂದು ಕುಳಿತುಕೊಂಡು ಬಿಡುತ್ತೀರೋ ಎಂದು ನನಗೆ ಭಯ ಅಷ್ಟೇ. ಅವರಿಬ್ಬರು ಕುಳಿತುಕೊಂಡರೆ ನನಗೇನು ಭಯವಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾದಮೇಲೆ, ಸಾಲ ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. Debt stock 65,000 ಕೋಟಿ ಆಗುತ್ತಿದೆ. ಮುಂದೆ ಅದು 77,000 ಕೋಟಿ ರೂಪಾಯಿ ಆಗುತ್ತದೆ. ನಾನು ಸಾಲ ತೆಗೆದುಕೊಳ್ಳಬಾರದು ಎಂದು ಹೇಳುವುದಿಲ್ಲ. ಆದರೆ ಪ್ರತಿವರ್ಷ ಅದನ್ನು ಹೆಚ್ಚು ಮಾಡಿಕೊಂಡು debt service, interest payment, repayment of loan ಗೆ ಇವೆಲ್ಲ ಹೆಚ್ಚಾಗಿಬಿಟ್ಟರೆ, ಮತ್ತೆ ನಮಗೆ developmental activities ಹಣ ಕಡಿಮೆಯಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತಾ ಹೋಗುತ್ತದೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಈಗಲೇ ಇವರು ಎಚ್ಚರಿಕೆ ವಹಿಸದೇ ಹೋದರೆ, ಈಗಾಗಲೇ ಅವರು ದಾರಿ ತಪ್ಪಿ ಬಿಟ್ಟಿದ್ದಾರೆ. Fiscal discipline ನಿಂದ deviation ಆಗಿಬಿಟ್ಟಿದ್ದಾರೆ. ದಾರಿ ತಪ್ಪಿದರೆ ರಾಜ್ಯದ ಜನ ಶಾಪ ಹಾಕುತ್ತಾರೆ. ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಡಿಯೂರಪ್ಪನವರ ಕಾಲದಲ್ಲಿ ಬಹಳ ಕೆಟ್ಟುಹೋಯಿತು, ಅಭಿವೃದ್ಧಿಗಳಿಗೆ ದುಡ್ಡು ಇಲ್ಲದ ಹಾಗೆ ಮಾಡಿದರು, ಸಾಲಕ್ಕೆ ಹೊರೆ ಹೆಚ್ಚು ಮಾಡಿದರು ಎನ್ನುವಂತಹ

ಪರಿಸ್ಥಿತಿ ಬಂದರೆ ರಾಜ್ಯದ ಜನ ಶಪಿಸುತ್ತಾರೆ. ನಾನು ಹಿಂದೆ ಹಣಕಾಸಿನ ಮಂತ್ರಿಯಾಗಿದ್ದರಿಂದ ಹೇಳುತ್ತಿದ್ದೇನೆ. ಈಗಾಗಲೇ ಇವರದು deviation ಪ್ರಾರಂಭವಾಗಿಬಿಟ್ಟಿದೆ. ಇವರ ಕಾಲದಲ್ಲಿ ತೆರಿಗೆ growth ಕಡಿಮೆಯಾಗುತ್ತಿದೆ. ಅಭಿವೃದ್ಧಿ ಕುಂಠಿತವಾಗುತ್ತಿದೆ. ಇವತ್ತು ನಾವೇನು revenue surplus ನಲ್ಲಿದ್ದೇವೆ, 4,000 ಚಿಲ್ಲರೆ ಕೋಟಿ ಇತ್ತು. 2005-06, 2006-07,2007-08 ರಲ್ಲಿ 3,000 ಚಿಲ್ಲರೆ ಕೋಟಿ ಇದ್ದು, ಇವತ್ತು 767 surplus ಬಂದಿದೆ. ಮುಂದಿನ ವರ್ಷ 1152 ಕೋಟಿ ರೂಪಾಯಿ surplus ಆಗುತ್ತದೆಂದು ಹೇಳಿದ್ದಾರೆ, ಅದು ಕೂಡ ತಮಗೆ ಸಾಧ್ಯವಾಗುವುದಿಲ್ಲ. ನನಗೆ ಭಯ ಏನೆಂದರೆ ಮತ್ತೆ revenue deficit ಗೆ ಇವರು ಎಲ್ಲಿ ಹೋಗುತ್ತಾರೆ ಎಂದು. Revenue deficit ಗೆ ಹೋದರೆ ಮತ್ತೆ ರಾಜ್ಯ ಸಾಲಕ ಸುಳಿಗೆ ಸಿಕ್ಕಿಹಾಕಿಕೊಳ್ಳುತ್ತದೆ. ಋಣಭಾರ ಜಾಸ್ತಿಯಾಗುತ್ತದೆ. ಅಭಿವೃದ್ಧಿ ಕೆಲಗಳೆಲ್ಲ ಸಂಪೂರ್ಣ ಕುಂಠಿತವಾಗುತ್ತದೆ. ಇವತ್ತು Medium Fiscal plan Budget ಜೊತೆಯಲ್ಲಿ ಕೊಟ್ಟಿದ್ದಾರೆ. ತೆರಿಗೆ growth ಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. 2003-04ರಲ್ಲಿ commercial taxes growth 22% ಇತ್ತು. 2004-05 ರಲ್ಲಿ compare to previous year growth 30.05%.2005-06 ರಲ್ಲಿ 14.1% 2006-07 ರಲ್ಲಿ 19.42%. 2007-08ಕ್ಕೆ ಕಳೆದ ವರ್ಷ 13.4% 2004-05 ರಲ್ಲಿ 30% ಇದ್ದಂತಹ revenue growth, it has come down to 13.4%. ಈ ವರ್ಷ 13.1%. 2009-10 ಕ್ಕೆ ಇವರೇ project ಮಾಡಿರುವ ಪ್ರಕಾರ 11%. 30% ಇದ್ದಂಥ ತೆರಿಗೆ growth ಇವತ್ತು 11% ಇದೆಯೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟದಲ್ಲಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ವಾಣಿಜ್ಯ ತೆರಿಗೆ ಮತ್ತು ಅಬಕಾರಿ ತೆರಿಗೆಯಲ್ಲೂ ಹಾಗೆ ಆಗಿದೆ. 2003-04 ರಲ್ಲಿ 11.45% , 2004-05ರಲ್ಲಿ 20.2%, 2005-06 ರಲ್ಲಿ 21.07%, 2006-07ರಲ್ಲಿ 32.34% 2007-08ರಲ್ಲಿ 6.03%, 2008-09 ರಲ್ಲಿ 16.94% ಎಂದು ಹೇಳುತ್ತೀರಿ. ಮುಂದಿನ ವರ್ಷಕ್ಕೆ ಎಷ್ಟು ಆಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಪ್ರತಿ ವರ್ಷವೂ ಕೂಡ 2003-04 ರಿಂದ ಕಡಿಮೆಯಾಗುತ್ತಾ ಹೋಗುತ್ತಿದೆ. ಅದೇ ರೀತಿಯಲ್ಲಿ motor vehicle tax ಕೂಡ ಆಗುತ್ತಿದೆ. 2003-04ರಲ್ಲಿ 18.4%, 2004-05ರಲ್ಲಿ 27.86% 2005-06 ರಲ್ಲಿ 12.46%, 2006-07 ರಲ್ಲಿ 24.34% 2007-08ರಲ್ಲಿ 20.54%, 2008-09 ಈವರ್ಷಕ್ಕೆ 6.7% ಇದೆ. ಇದೇ ಪರಿಸ್ಥಿತಿ stamp & registration ನಲ್ಲೂ ಕೂಡ ಇದೆ. ಅಲ್ಲೂ ಕೂಡ 2002-03ರಲ್ಲಿ 30%, next year 21%,29%,25%,44%, 2007-08ಕ್ಕೆ 6.33%, 2008-09ಕ್ಕೆ -8.7%, ಇದಕ್ಕೆ ಇವರು ಏನು ಹೇಳುತ್ತಾರೆಂದು, real estate ಎಲ್ಲಾ ಬಿದ್ದು ಹೋಗಿದೆ,

Economic Recession ನಿಂದ ಜಮೀನುಗಳು transfer ಆಗುತ್ತಿಲ್ಲ, registration ಗಳಾಗುತ್ತಿಲ್ಲ, ಎಲ್ಲಾ ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಕಳೆದ ವರ್ಷವೇ ಈ ಚಿಹ್ನೆ ಇರುವಾಗ 2007–08 ರಲ್ಲಿ 6.3% ಇರುವಾಗ ಅವತ್ತಿನಿಂದ ಇವತ್ತಿನವರೆಗೆ ಇದರ ಬಗ್ಗೆ ಸರ್ಕಾರ ಏನಾದರೂ ಗಮನ ಹರಿಸಬೇಕಾಗಿತ್ತಲ್ಲಾ, ಹಣಕಾಸಿನ ಇಲಾಖೆ ಗಮನಹರಿಸಬೇಕಲ್ಲಾ.. ..

ಡಾ:ಬಿ.ಎಸ್.ಯಡಿಯೂರಪ್ಪ: ತಾವು ಇದಕ್ಕೆ ಏನು ಮಾಡಬಹುದಾಗಿತ್ತೆಂದು ಸಲಹೆ ಕೊಡಿ.

ಶ್ರೀ ಸಿದ್ದರಾಮಯ್ಯ: ತಾವು ಈ ವರ್ಷ ಏನು ಮಾಡಿದ್ದೀರಿ? ಕಳೆದ 7.5% ನಿಂದ 6% ಇಳಿದಿದೆಯಲ್ಲಾ ಅದನ್ನು ಏನು ಮಾಡಿದಿರಿ? ಈ ವರ್ಷ ಅದನ್ನು ಏಕೆ ಮಾಡಿದಿರಿ? ಅದನ್ನು last year ಮಾಡಬಹುದಾಗಿತ್ತಲ್ಲಾ. Stamp duty, registration ಎಲ್ಲಾ ತಡೆಯುವುದಕ್ಕೋಸ್ಕರ ನೀವು ಈಗ ಕಡಿಮೆ ಮಾಡಿದ್ದಿರಲ್ಲಾ ಮುಂದಿನ ವರ್ಷಕ್ಕೆ ಏಕೆ ಯೋಚನೆ ಮಾಡಲಿಲ್ಲ? ಮತ್ತೆ ಇವತ್ತು under value ಆಗುತ್ತಿವೆಯಲ್ಲಾ, stamp rate registration under valuation ಆಗುತ್ತಿವೆ. ಇದನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ. Lot of under valuation ಆಗುತ್ತಿವೆ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಬೇರೆ ಬೇರೆ ಪಟ್ಟಣಗಳಲ್ಲಿ ಮಾರ್ಕೆಟ್ ಬೆಲೆ ಇರುವುದೇ ಒಂದು, sub-registrar ರವರ ಬೆಲೆ ಇರುವುದೇ ಒಂದು. ಅದರಲ್ಲಿ ಎಷ್ಟು ಕಪ್ಪು ಹಣ ಹೋಗುತ್ತಿದೆ ಎಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಲ್ಲಾ. ಇದು ಕಳೆದ ವರ್ಷವೇ ಕಡಿಮೆಯಾಗಿದೆ. ತಾವು ಕಳೆದ ವರ್ಷವೇ ಎಚ್ಚರಿಕೆ ವಹಿಸಬೇಕಾಗಿತ್ತು, ಕಳೆದ ವರ್ಷ recession ಇರಲಿಲ್ಲ. ಈ ವರ್ಷ ಆರ್ಥಿಕ ಬಿಕ್ಕಟ್ಟು ಇದೆ, ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಇದೆಲ್ಲವೂ ತೊಂದರೆಯಾಗಿದೆಯೆಂದರೆ all right. 2007–08ರಲ್ಲಿ ಏನು ಇತ್ತು? No crisis. ಮತ್ತೆ ಮುನ್ಸೂಚನೆ ಇದ್ದಾಗಲೂ ಕೂಡ ಇದನ್ನು ತಡೆಗಟ್ಟುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ನಾವು ಹಿಂದೆ ಎಲ್ಲ ಮಂತ್ರಿಗಳಾಗಿದ್ದಾಗ ನಾವು ಸರ್ಕಾರದಲ್ಲಿದ್ದು ನೋಡಿದ್ದೆವು. ಈಗ ಯಾರನ್ನಾದರೂ ನೋಡಿ, ಕೆಲಸವಿಲ್ಲದೇ ಇರುವವರಿಗೆಲ್ಲಾ cabinet rank. ನಮ್ಮ ಎಂ.ಎಲ್.ಎ ರಾಮದಾಸ್‌ರವರನ್ನು ನಿಮ್ಮ Political Secretaryಯನ್ನಾಗಿ ಮಾಡಿಕೊಂಡಿದ್ದೀರಿ. ಮಾಡಿಕೊಂಡಿದ್ದೀರಿ. ಅವರು ಮೈಸೂರಿನಲ್ಲೆ ಇರುತ್ತಾರೆ, ಅವರಿಗೆ cabinet rank ಕರಾವಳಿ ಪ್ರಾಧಿಕಾರ ಎಲ್ಲರಿಗೂ cabinet rank. ನಾನು ನೋಡುತ್ತೇನೆ, ಯಾರು Charirman ಗಳು ಆಗಿರುವವರಿಗೆಲ್ಲ, ಎಲ್ಲಾ pilot ಮತ್ತು ಹಿಂದಗಡೆ escort. ಇದು ಹಿಂದೆ ಯಾವ ಕಾಲದಲ್ಲೂ ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಎಲ್ಲರಿಗೂ pilot, chairman ಗೂ ಎಲ್ಲರಿಗೂ cabinet rank

ಗಳಾಗಿ ಉದಾರವಾಗಿ ಕೊಟ್ಟು ಬಿಟ್ಟಿದ್ದಾರೆ. ಯಾವುದಾದರೂ ಕೂಡ ಇವತ್ತು non-plan expenditure ಅನ್ನು cut down ಮಾಡುವುದಕ್ಕೆ chairman ಗಳಿಗೆ ಏಕೆ ಬೇಕು. ಯಾರ ಕಾಲದಲ್ಲೂ chairman ಗಳಿಗೆ ಕೊಟ್ಟಿರಲಿಲ್ಲ. ಇವತ್ತು ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡುವಂಥಾದ್ದನ್ನು ಏನಾದರೂ ಮಾಡಿದ್ದಿರ? ಎಲ್ಲಾ ಕಡೆಗಳಲ್ಲೂ computerization ಆಗಿದೆ. ಅದರೆ ಅಷ್ಟೇ ಉಳಿದು ಕೊಂಡಿದೆ. ನೀವು computerization ಗೆ ಹಣವನ್ನು ಅಷ್ಟೇ ಖರ್ಚು ಮಾಡುತ್ತೀರಿ, Man-power ಅನ್ನು ಅಷ್ಟೆ ಇಟ್ಟುಕೊಂಡಿರುತ್ತೀರಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಉದ್ಯೋಗ ಸೃಷ್ಟಿ ಆಗಬೇಕಲ್ಲಾ..

ಶ್ರೀ ಸಿದ್ಧರಾಮಯ್ಯ: ಉದ್ಯೋಗವನ್ನು ಬೇರೆ ಕಡೆ ಸೃಷ್ಟಿ ಮಾಡಬೇಕು. ತಾವು ಆಗಿದ್ದೀರಿ. ತಾವು Small Scale Industry Minister ಆಗಿದ್ದೀರಿ. ಕುಳಿತುಕೊಳ್ಳಿ, ನಾನು ನಿಮ್ಮನ್ನು ಎದ್ದೇಳಿ ಎಂದು ಹೇಳಿದೆನೆ? ನೀವು ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಹೇಳೂವಂಥಾದ್ದು ಏನೆಂದರೆ ದಿನನಿತ್ಯ ಎಲ್ಲಾ ಎಂ.ಎಲ್.ಎಗಳು ಕೇಳುವಂಥದ್ದು, ನಾವು ಕುಡಿಯುವ ನೀರು ಕೋಡತ್ತೇವೆ, ಇಲ್ಲಿ ಇಂಜಿನಿಯರ್ಸ್ ಇಲ್ಲ, ಅಬಕಾರಿ ಇಲಾಖೆಯಲ್ಲಿ ತನಿಖೆ ಮಾಡುವುದಕ್ಕೆ Inspectors ಇಲ್ಲವೆಂದು ಎಲ್ಲರೂ ಹೇಳುತ್ತಿದ್ದಾರೆ. ಇವೆಲ್ಲಾ service sector ನಲ್ಲಿ ತೆಗೆದುಕೊಳ್ಳ ಬೇಡಿಯೆಂದು ಹೇಳುತ್ತೀರಾ? ಪೊಲೀಸ್ ಪೇದೆಗಳು ಇಲ್ಲ.

ಶ್ರೀ ಸಿದ್ಧರಾಮಯ್ಯ: ಅವೆಲ್ಲವನ್ನು ತೆಗೆದುಕೊಳ್ಳಿ, ಹಿಂದೆ ಕೆಲವರೆ Joint Directorಗಳನ್ನು ರದ್ದು ಮಾಡಬೇಕೆಂದು ಶಿಫಾರಸ್ಸು ಆಗಿತ್ತು. ಈಗ ಪುನಃ restore ಮಾಡಿಕೊಂಡಿದ್ದೀರಿ. ಅವರಿಗೆ ಏನು ಕೆಲಸವಿದೆ? ನಾನು ಹೇಳುವಂಥಾದ್ದು Forest Departmentನಲ್ಲಿ ಕಾಡು ಕಾಯುವವರನ್ನೆಲ್ಲಾ ತೆಗೆದು ಹಾಕಿಯೆಂದು ನಾನು ಹೇಳುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಅದನ್ನೇ ಹೇಳಿದ್ದು.

ಶ್ರೀ ಸಿದ್ಧರಾಮಯ್ಯ: ಇದರಲ್ಲಿ ಹಣವನ್ನು ವಸೂಲು ಮಾಡುವುದಕ್ಕೆ, ಹಣ ಸೋರಿಕೆ ಆಗುವುದನ್ನು ತಪ್ಪಿಸುವುದಕ್ಕೆ ಇದನ್ನು ತಪ್ಪಿಸಿ ಎಂದು ನಾನು ಹೇಳುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: Service sectorಗೆ ಎಲ್ಲೆಲ್ಲಿ essential service ಇದೆ ಅಲ್ಲಿ ಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ನಾನು ಅದನ್ನೇಲ್ಲಾ ಹೇಳಿಲ್ಲ. ನಾನು ಬೇರೆಯದನ್ನು ಹೇಳುತ್ತಿದ್ದೇನೆ. ಈಗ ನಿಮ್ಮ ಇಲಾಖೆಯಲ್ಲಿ ಖಾಲಿ ಇರುವುದನ್ನೆಲ್ಲಾ ಭರ್ತಿ ಮಾಡಿಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೌದು, ಅಲ್ಲಿಗೆ ಬೇಕೆ ಬೇಕು.

ಶ್ರೀ ಸಿದ್ದರಾಮಯ್ಯ: ಅದನ್ನು ಜಾಸ್ತಿ ;ಮಾಡಿಕೊಳ್ಳಿ, ಕಳೆದ ವರ್ಷಕ್ಕಿಂತ ಈ excise duty ವರ್ಷ ಕಡಿಮೆ ಆಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇಲ್ಲ, 5,600 ಕೋಟಿ ರೂಪಾಯಿಗಳಾಗಿದೆ, ಒಂದು ರೂಪಾಯಿ ಕಡಿಮೆ ಅಗಲಿಲ್ಲ. ಮುಂದಿನ ವರ್ಷ ಇನ್ನೂ ಜಾಸ್ತಿಯಾಗುತ್ತದೆ. ನಾವು ಸೋರಿಕೆಯನ್ನು ತಡೆದಿದ್ದೇವೆ. ನಮ್ಮ ಗುರಿ ಏನು ಇತ್ತು, ಆ ಗುರಿಯನ್ನು ನಾವು ಸರಿಯಾಗಿ ಮುಟ್ಟಿದ್ದೇವೆ.

ಶ್ರೀ. ಸಿದ್ದರಾಮಯ್ಯ: ಸರಿಯಾಗಿ ಮುಟ್ಟಿದ್ದೀರಾ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೌದು.

ಶ್ರೀ ಸಿದ್ದರಾಮಯ್ಯ: very good. ನೀವು ಇಲ್ಲಿ ಏನು ಹೇಲಿದ್ದೀರೆಂಬುದನ್ನು ನೋಡಿ, ಇದು ನಿಮ್ಮ ಸರ್ಕಾರ ಕೊಟ್ಟಿರುವ ಪುಸ್ತಕ 2008–09ಕ್ಕೆ 5,574 ಕೋಟಿ ಆಗಬಹುದೆಂದು ಹೇಳಿದ್ದೀರಿ. ಇದು 5,600 ಕೋಟಿ ರೂಪಾಯಿಗಳೀಗೆ ಕಡಿಮೆ ಅಯಿತೋ ಹೆಚ್ಚು ಅಯಿತೋ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೆಚ್ಚಾಯಿತು.

ಶ್ರೀ ಸಿದ್ದರಾಮಯ್ಯ: 5,600 ಕೋಟಿ ರೂಪಾಯಿಗಳಿಗೆ ಹೆಚ್ಚು ಆಯಿತಾ? 5,574–5,600 ಕೋಟಿ ಎಂದರೆ ಎಷ್ಟಾಗುತ್ತದೆ? ಇವರ budgeted target 5,600 ಕೋಟಿ ಇದೆ, ಒಂದು ವರ್ಷಕ್ಕೆ 6,500 ಕೋಟಿ ಇದೆ. ಈ ವರ್ಷ ನೀವು collect ಮಾಡುತ್ತೇವೆಂದು ಹೇಳಿರುವಂಥಾದ್ದು ಇದು correct figure ಅಲ್ಲ. 5,500 ಕೋಟಿ ರೂಪಾಯಿಗಳನ್ನು ಮಾತ್ರ ಮಾಡುವುದಕ್ಕೆ ಆಗುತ್ತದೆ, ನೀವು ಕಡಿಮೆ ಆಗಿದೆಯೆಂದು ಹೇಳಿಕೊಂಡಿದ್ದೀರಿ. ಈ ಪುಸ್ತಕ Medium Term Fiscal plan ಇದನ್ನು ನಿಮಗೆ ಕಳುಹಿಸಿ ಕೊಡಲಾ, ನೀವು ಓದಿ ಕೊಳ್ಳುತ್ತಿರಾ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೇಳಿ ಸಾರ್,

ಶ್ರೀ ಸಿದ್ದರಾಮಯ್ಯ: ನೀವು ಕಡಿಮೆಯಾಗುತ್ತದೆಂದು ಹೇಳಿಕೊಂಡಿದ್ದೀರಿ. ನೀವು ಜಾಸ್ತಿ ವಸೂಲು ಮಾಡಿ, ಏಕೆಂದರೆ ಸಾರಾಯಿ ನಿಲ್ಲಿಸಿದ ಮೇಲೆ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ಈಗ ಎಷ್ಟು ಒಂದು ತಿಂಗಳಿಗೆ case ಖರ್ಚಾಗುತ್ತಿದೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: 33 ಲಕ್ಷ ರೂಪಾಯಿಗಳು.

ಶ್ರೀ ಸಿದ್ದರಾಮಯ್ಯ: ಸಾರಾಯಿ ನಿಲ್ಲಿಸುವುದಕ್ಕೂ ಮುಂಚೆ ಎಷ್ಟು ಇತ್ತು? 10–11 ಲಕ್ಷ ಇತ್ತು. ಸಾರಾಯಿ ನಿಲ್ಲಿಸುವುದಕ್ಕೆ ಮುಂಚಿತವಾಗಿ IML ಖರ್ಚಾಗುತ್ತಿದ್ದದ್ದು 10 to 11 lakhs cases. ಒಂದು cases. ಎಂದರೆ 48 bottles ಈಗ ಒಂದು ತಿಂಗಳಿಗೆ 33 ಲಕ್ಷ caseಗಳಾಗುತ್ತಿವೆ. ಅಂದರೆ 22.23 ಲಕ್ಷ caseಗಳು ಜಾಸ್ತಿಯಾಯಿತು. ಆದುದರಿಂದ excise.ತೆರಿಗೆ ಕಡಿಮೆಯಾಗುವ ಪ್ರಶ್ನೆ ಇಲ್ಲ.

ಪ್ರತಿವರ್ಷವೂ IML .ಜಾಸ್ತಿಯಾಗುತ್ತಿದೆ. ಆದರೆ ಇನ್ನೂ ಸೋರಿಹೋಗುತ್ತಿದೆ. ಹಳ್ಳಿಗಳಲ್ಲಿ ಏನಾಗಿದೆ ಎಂದರೆ, ಬೀಡಿ ಅಂಗಡಿಗಳಲ್ಲಿ, ಟೀ ಅಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ನ್ಯಾಯ ಬೆಲೆ ಅಂಗಡಿಗಳಲ್ಲಿ, 38 ರೂಪಾಯಿಗಳಿಗೆ ಸಿಗಬೇಕಾದಂಥ ವಿಸ್ಕಿ ಕ್ವಾರ್ಟರ್ ಬಾಟಲ್‌ಅನ್ನು 45–46 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಬೇಡಿಕೆ ಜಾಸ್ತಿಯಾಗಿದೆ ಎನ್ನುವುದು M.L.A. ಗಳಿಗೆಲ್ಲಾ ಗೊತ್ತಿದೆ. It is a known fact. ನಾನು ಏಕೆ ಎದನ್ನೆಲ್ಲಾ ಹೇಳುತ್ತಿದ್ದೇನೆ ಎಂದರೆ, ಆದಾಯವನ್ನು ಹೆಚ್ಚು ಮಾಡಬೇಕಾದರೆ ಇದನ್ನೆಲ್ಲಾ ತಡೆಗಟ್ಟಬೇಕಲ್ಲವೇ? ಕಿರಾಣಿ ಅಂಗಡಿಯಲ್ಲಿ ಮಾರುವುದಕ್ಕೆ ಲೈಸೆನ್ಸ್ ಕೊಟ್ಟಿರುವಿರಾ? ಹರಾಜು ಹಾಕುವುದನ್ನು ಈ ಸಲ ಏಕೆ ನಿಲ್ಲಿಸಿ ಬಿಟ್ಟಿರಿ? ಬೇಡ ಅಂದುಬಿಟ್ಟರೆ? ಅವರು ನನ್ನ ಹತ್ತಿರವೂ ಬಂದಿದ್ದರು. ಅವರಿಗೆ ನಾನು ಹೇಳಿದೆ, auction .ಮಾಡುವುದು ಬೇಡ ಎಂದು ಹೋಗಿ ಹೇಳಿ ಎಂದು ಹೇಳಿದೆ. ಅವರು ಬಂದು ನಿಮಗೆ ಹಾಗೆಂದು ಹೇಳಿದರೇ? ನಾನು ಏಕೆ ಇದನ್ನೆಲ್ಲ ಹೇಳುತ್ತಿದ್ದೇನೆ ಎಂದರೆ, ನೋಡಿ revenue arrears ಸುಮಾರು 6,200 ಕೋಟಿ ರೂಆಯಿಗಳಿದೆ. ಹೀಗೆ ಕೋಟಿಗಟ್ಟಲೆ ಹಣ litigation ನಲ್ಲಿ ಸಿಕ್ಕಿಕೊಂಡಿದೆ. ಇಂಥ recession ಇರತಕ್ಕಂಥ period ನಲ್ಲಿ ಅವುಗಳನ್ನೆಲ್ಲ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೋ, ಬೇಡವೋ? ನಿಮ್ಮ Excise ನಲ್ಲೇ 675 ಕೋಟಿ ರೂಪಾಯಿಗಳಿದೆ. Am I correct? I am absolutely correct. Excise ನಲ್ಲಿ 675 ಕೋಟಿ ರೂಪಾಯಿ ಇದೆ, K.E.B. ನಲ್ಲಿ 682 ಕೋಟಿ ರೂಪಾಯಿ ಇದೆ, Commercial tax ನಲ್ಲಿ 4,700 ಕೋಟಿ ರೂಪಾಯಿ ಇದೆ. ಎಲ್ಲವೂ ಕೋರ್ಟಿನಲ್ಲಿ ಇವೆ. ಕೋರ್ಟಿನಲ್ಲಿವಾದ ಮಾಡಲು ನೀವು ಲಾಯರ್ಗಳನ್ನು ಇಟ್ಟುಕೊಂಡಿಲ್ಲವೇ? ಅಷ್ಟೊಂದು ಲಾಯರ್‌ಗಳಿದ್ದಾರೆ, Government advocates ಇದ್ದಾರೆ. Legal cell ಎಂದು ಮಾಡಿಕೊಂಡಿರುತ್ತೇವೆ. ಅವರ ಕೋರ್ಟುಗಳಿಗೆ ಹೋಗುವುದಿಲ್ಲ, ಸರಿಯಾಗಿ appear ಆಗುವುದಿಲ್ಲ ವಸೂಲಿ ಮಾಡುವುದಿಲ್ಲ. ಯಾವ ಅಧಿಕಾರಿಗಳೂ ಕೂಡ ಅರಿಯರ್ಸ್ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅರಿಯರ್ಸ್ ಅಂತೂ ವಸೂಲೇ ಮಾಡುವುದಿಲ್ಲ. Arrears from various departments ಸುಮಾರು ಆರು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಬಾಕಿ ಇದೆ. ನಾವು ಇಂಥ recession ನಲ್ಲಿದ್ದೇವೆ, ಕಷ್ಟದಲ್ಲಿದ್ದೇವೆ, ತೆರಿಗೆ ಕಡಿಮೆಯಾಗುತ್ತಿದೆ, ಸಾಲ ತೆಗೆದು ಕೊಳ್ಳುವುದನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆ ಎನ್ನುವ ಕಡೆ ಗಮನ ಕೊಡಬೇಕಲ್ಲವೇ? ಈ ಕಡೆ ಒಂದು ಮೂರು ಕಾಸಿನ ಕೆಲಸ ಮಾಡಿ ಆದಾಯವನ್ನು ತೆಗೆದುಕೊಳ್ಳುತ್ತಿಲ್ಲ. ಮತ್ತೆ ಹೇಗೆ ನಿಮಗೆ ಆದಾಯ ಬರುತ್ತದೆ? ತೆರಿಗೆ growth ಬಿದ್ದು ಹೋಯಿತು. ಸಾಲ ತೆಗೆದುಕೊಳ್ಳುವುದನ್ನು ಹೆಚ್ಚು ಮಾಡಿಕೊಂಡಿದ್ದೀರಿ. ಈ ಬಜೆಟ್‌ನಲ್ಲಿ 47,214

ಕೋಟಿ ರೂಪಾಯಿ ಇತ್ತು. ಮುಂದಿನ ವರ್ಷಕ್ಕೆ ಎಷ್ಟು ದುಡ್ಡು ಇ
ಎಂದರೆ ಸುಮಾರು 48,000 ಕೋಟಿ ರೂಪಾಯಿಗಳ revei
ಬರುತ್ತದೆ ಎಂದು ಹೇಳಿದ್ದೀರಿ. What will be the growth? 2.43.. ಖರ್ಚಿನಲ್ಲಿ growth rate ಎಷ್ಟೆಂದರೆ 3.33% Expenditure side ನಲ್ಲಿ growth 3.33% ಇದೆ. Revenue receipts side ನಲ್ಲಿ growth 2.43% ಇದೆ. What is the inflation? About 4%. Taking the inflation into consideration, what is the growth? The growth will be minus. ಇಪ್ಪತ್ತೊಂಬತ್ತೂವರೆ ಸಾವಿರ ಕೋಟಿ ರೂಪಾಯಿಗಳನ್ನು plan ನಲ್ಲಿ ಹೇಗೆ ಖರ್ಚು ಮಾಡುವಿರಿ? Taking 4% inflation into consideration, absolutely there is no growth at all.4% inflation ಇದೆ ಎಂದು ಲೆಕ್ಕ ಹಾಕಿಕೊಂಡರೆ ತೆರಿಗೆ ಬೆಳವಣಿಗೆ 2.43% ಖರ್ಚು 3.33% inflation 4%, so minus growth ಆಯಿತು. ಹೀಗಿರುವಾಗ ನಿಮಗೆ ಅಭಿವೃದ್ಧಿಗೆ, ನೀರಾವರಿಗೆ, ಕೃಷಿಗೆ, ಆರೋಗ್ಯಕ್ಕೆ ಶಿಕ್ಷಣಕ್ಕೆ ಹಣ ಸಿಗುತ್ತದೆಯೇ? ನಾವು education ನಲ್ಲಿ ಬಹಳ ಕ್ರಾಂತಿ ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತೀರಲ್ಲ, 2007–08ಕ್ಕೆ ಸುಮಾರು 8,600 ಕೋಟಿ ರೂಪಾಯಿಗಳನ್ನು education ಗಾಗಿ ಖರ್ಚು ಮಾಡಿದ್ದರೆ, ಈ ವರ್ಷ 8,888 ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಅದೂ ಸಹ targeted figures, expected figures. What is the growth in education? Absolutely negligible growth. ಹೀಗಿರುವಾಗ ಸಾಕ್ಷಾರತಾ ಪ್ರಮಾಣ ಹೆಚ್ಚಾಗಿಲ್ಲ ಎಂದರೆ ಹೇಗೆ? ಇನ್ನೂ
ನಾವು 67% ಸಾಕ್ಷರತೆಯಲ್ಲಿದ್ದೇವೆ. ಗುಲ್ಬರ್ಗ, ರಾಯಚೂರು ಮುಂತಾದ ಕಡೆಗಳಲ್ಲಿ literacy percentage ಇನ್ನೂ 48–49% ಇದೆ. ಇದನ್ನೆಲ್ಲಾ ಮೇಲಕ್ಕೆ ಎತ್ತುವುದು ಹೇಗೆ? ಶಿಕ್ಷಣಕ್ಕೂ ಕಡಿಮೆ ಮಾಡಿದಿರಿ. ಮಾನವ ಸಂಪನ್ಮೂಲವನ್ನು ವೃದ್ಧಿ ಮಾಡಬೇಕು. ಎಲ್ಲಿ ಮಾಡುತ್ತಿದ್ದೀರಿ? Regional imbalance ಗೋಸ್ಕರ ಡಾ: ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅವರಿಂದ ಒಂದು report ತರಿಸಿಕೊಂಡು ಅಭಿವೃದ್ಧಿ ಮಾಡಲಾಗುತ್ತಿತ್ತು. ನಾವು ಅದಕ್ಕೆ ಭಾರೀ Special ಆಗಿ grants ಕೊಟ್ಟಿದ್ದೇವೆ ಎಂದು ಇವರು ಹೇಳಿದ್ದಾರೆ. ಬಜೆಟ್‌ನ ಜೊತೆಯಲ್ಲಿ Special Development ಎಂದು ಒಂದನ್ನು ಕೊಡುತ್ತಾರೆ. 2007–08 ಕ್ಕೆ, 1,552 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದರು. ಅದನ್ನೇನು separate ಆಗಿ ಇಟ್ಟಿಲ್ಲ. plan size ನಲ್ಲೇ ಏನೇನು ಅಭಿವೃದ್ಧಿ ಕೆಲಸಗಳನ್ನು ಹೇಳೀದ್ದಾರೋ ಅದರಲ್ಲೇ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಎಷ್ಟು ಹಣವನ್ನು ಖರ್ಚು ಮಾಡಬೇಕು, ಇಷ್ಟು ರಸ್ತೆ ಮಾಡಬೇಕು, ಕುಡಿಯುವುದಕ್ಕೆ ನೀರು ಕೊಡಬೇಕು, ನೀರಾವರಿಗೆ ಇಷ್ಟು ದುಡ್ಡು ಕೊಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ.

2008–09ಕ್ಕೆ ಅಂದರೆ ಈ ವರ್ಷಕ್ಕೆ 2,542 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, ಮುಂದಿನ ವರ್ಷಕ್ಕೆ 2,574 ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ಎಲ್ಲ M.L.A ಗಳಿಗೂ ಇರುವ ಅನುಮಾನ ಏನೆಂದರೆ, ಅನೇಕ ಕಡೆಗಳಲ್ಲಿ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಕೊಟ್ಟಿರುವುದು ಎಂದು ಹೇಳಿ ಕೊಟ್ಟಂಥ ದುಡ್ಡನ್ನೂ ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದಾರೆ. P.W.D ನಲ್ಲಿ ಬೇರೆಬೇರೆ ಇಲಾಖೆಗಳಲ್ಲಿ ಹೀಗೆ ಕೊಟ್ಟರುವಂಥಾದ್ದನ್ನು ವಾಪಸ್ಸು ತೆಗೆದು ಕೊಂಡಿದ್ದಾರೆ. ಅದಕ್ಕೆ ಸುಶಿಲ್ ನಮೋಶಿಯವರ ಅಧ್ಯಕ್ಷತೆಯಲ್ಲಿ ಅಧಿಕಾರಸ್ಥರ ಸಮಿತಿ ಇದೆ. ಅದಕ್ಕೆ cabinet rank ಕೊಟ್ಟಿದ್ದಾರೆ. ಅದಕ್ಕೆ ದುಡ್ಡೇ ಕೊಡದಿದ್ದರೆ ಅವರು ಏನು ಮಾಡುತ್ತಾರೆ? ಅದರ ಜೊತೆಗೆ, ನೀವು ಅನುದಾನಗಳನ್ನು ಕೂಡ ವಿವೇಚನೆ ಇಲ್ಲದೇ ಕೊಡತಕ್ಕಂಥಾದ್ದು ಆಗಿದೆ. ನಿಮಗೆ ಯಾರ್‍ಯಾರು ಬೇಕೋ ಅಲ್ಲಿಗೆ ಅನುದಾನವನ್ನು ಕೊಡುತ್ತಿದ್ದೀರಿ. ಇದೆ ರೀತಿ ಮುಂದುವರೆದರೆ, ಅವರಿಗೆ ಬೇಕಾದಂಥ ಶಾಸಕರುಗಳಿಗೇ ಅನುದಾನವನ್ನು ಕೊಟ್ಟುಕೊಂಡು ಹೋದರೆ, ಡಾ: ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಿರುವ 114 ತಾಲ್ಲೂಕುಗಳಿಗೆ ವಿಶೇಷ ಗಮನ ಕೊಡದೇ, ನಂಜುಂಡಪ್ಪನವರ ವರದಿಯಲ್ಲಿ ಇಲ್ಲದೇ ಇರತಕ್ಕಂಥ ತಾಲ್ಲೂಕುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿದರೆ ಇನ್ನೊಂದು ನಂಜುಂಡಪ್ಪನವರ ವರದಿಯನ್ನು ಸ್ಥಾಪನೆ ಮಾಡಬೇಕಾಗುತ್ತದೆ. The regional imbalance will be further widened. ಈ 114 ತಾಲ್ಲೂಕುಗಳಲ್ಲಿ 39 ತಾಲ್ಲೂಕುಗಳು ಅತೀ ಹಿಂದುಳಿದವು, 40 ತಾಲ್ಲೂಕುಗಳು ಹಿಂದುಳಿದವು, ಇನ್ನುಳಿದ 35 ತಾಲ್ಲೂಕುಗಳಲ್ಲಿ ಬರುತ್ತದೆಯೇ? ಹಾಗಿದ್ದರೆ, ಚಾಮರಾಜನಗರಕ್ಕೆ ನಿಮ್ಮ ತಾಲ್ಲೂಕಿಗೂ ಎಷ್ಟು ದುಡ್ಡು ವ್ಯತ್ಯಾಸವಿದೆ ಎಂದು ಹೇಳಿ, ಏಕೆಂದರೆ ಚಾಮರಾಜನಗರ ಮೊದಲ 39 ಬರುತ್ತದೆ. ಶಿಕಾರಿಪುರವಂತೂ ಆ 114 ತಾಲ್ಲೂಕುಗಳಲ್ಲಿ ಇಲ್ಲವೇ ಇಲ್ಲ. ವರದಿಯಲ್ಲಿ ಇಲ್ಲದೇ ಇರುವಂಥ ಕಡೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿ, ನಂಜುಂಡಪ್ಪನವರು most backward, more backward and backward ಎಂದು ಏನು ಹೇಳಿದ್ದಾರೆ, ಅವುಗಳಿಗೆ ದುಡ್ಡನ್ನೇ ಖರ್ಚು ಮಾಡದಿದ್ದರೆ what will be the fate of those most backward, more backward and backward Taluks? ದುಡ್ಡನ್ನೂ ಇಡುವುದಿಲ್ಲ, ಖರ್ಚೂ ಮಾಡುವುದಿಲ್ಲ. ಅವರು report ಕೊಟ್ಟಾಗ 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಂದು ಹೇಳಿದರು. 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, 15 ಸಾವಿರ ಕೋಟಿ normal plan ನಲ್ಲಿ ಬರುತ್ತದೆ, ಇನ್ನು 16 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ 2 ಸಾವಿರ ಕೋಟಿ ರೂಪಾಯಿಗಳಂತೆ 8 ವರ್ಷಗಳ ಕಾಲ ಖರ್ಚು ಮಾಡಬೇಕು ಎಂದು ಅವತ್ತು ಅವರು ಹೇಳಿದರು. ಇನ್ನು 16 ಸಾವಿರ ಕೋಟಿ ರೂಪಾಯಿಗಳಲ್ಲಿ 8 ವರ್ಷಗಳಲ್ಲಿ

ವರ್ಷಕ್ಕೆ 2–2 ಸಾವಿರ ಕೋಟಿ ರೂಪಾಯಿಗಳಂತೆ ಖರ್ಚು ಮಾಡಬೇಕೆಂದು ಆವತ್ತು ಹೇಳಿದರು. ಅವತ್ತಿಗೂ ಇವತ್ತಿಗೂ inflation rate ಲೆಕ್ಕಕ್ಕೆ ತೆಗೆದುಕೊಂಡರೆ ಈಗ ಆ 2 ಸಾವಿರ ಕೋಟಿ ಕನಿಷ್ಠ 4 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. 4 ಸಾವಿರ ಕೋಟಿ ರೂಪಾಯಿ ಇಡಬೇಕು. ಇಲ್ಲದೇ ಹೋದರೆ regional imbalance ನಲ್ಲಿ ನಾವು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ನಾವು ಪ್ರತಿ ಬಜೆಟನಲ್ಲಿಯೂ inclusive growth ಎಂದು ಅಂದರೆ ಸಮಾನ ಬೆಳವಣಿಗೆ ಎಂದು ಹೇಳುತ್ತೇವೆ, ಸಾಮಾಜಿಕ ನ್ಯಾಯ ಎಂದು ಹೇಳುತ್ತೇವೆ. ಇದನ್ನೇ ಸಾಮಾಜಿಕ ನ್ಯಾಯ, ಸಮಾನ ಬೆಳವಣಿಗೆ ಎಂದು ಕರೆಯುವುದು? ಇದನ್ನೇ ಸಾಮಾಜಿಕ ನ್ಯಾಯ ಎಂದು ಕರೆಯುವುದೇ? ಹಾಗೆ ಮಾಡುವುದಕ್ಕಾಗುವುದಿಲ್ಲ. ಒಂದು ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಬೇಕೆನ್ನುವುದಾದರೆ prudent fiscal management ಇರಬೇಕಾಗುತ್ತದೆ. ಹಣ ಖರ್ಚು ಮಾಡುವುದರಲ್ಲಿಯೂ ಕೂಡ prudent ಆಗಿ ಖರ್ಚು ಮಾಡಬೇಕಾಗುತ್ತದೆ. Unrealistic ಆಗಿ plan ಗಳನ್ನು ಮಾಡಿದರೆ, ಆಗಿ ಗಳನ್ನು ಮಾಡಿದರೆ it is also an economic offence ನಿಮ್ಮ ಕೈಪಿಡಿಗಳಲ್ಲಿರುವ ಕೋಡ್‌ಗಳಲ್ಲಿ ಈ ಬಗ್ಗೆ ಹೇಳುತ್ತಾರೆ. Unrealistic ಆಗಿ ಮಾಡುವುದು, ದುಡ್ಡು ಬಿಡುಗಡೆ ಆಗದಿರುವುದು it is also an offence ಯಡಿಯೂರಪ್ಪನವರಿಗೆ ಒಂದು ಒಂದು ಅವಕಾಶ ಸಿಕ್ಕಿದೆ. ಅವರು ಹಣಕಾಸು ಮಂತ್ರಿಯಾದ ಕಾಲದಲ್ಲಿ ಬಹಳ ಉತ್ತಮ ಪರಿಸ್ಥಿತಿ ಇದ್ದಾಗ ಬಂದರು. ಇವರ ಕಾಲದಲ್ಲಿ 4 ಸಾವಿರ ಕೋಟಿ ರೂಪಾಯಿ surplus ಇದ್ದ ಕಾಲದಲ್ಲಿ ಇವರು ಬಂದರು. ಚಿಲ್ಲಾರೆ 4 ಸಾವಿರ ಕೋಟಿ ರೂಪಾಯಿಯಿಂದ ಹಿಡಿದು ಈಗ 2008–09ರ ಸಾಲಿಗೆ 757 ಕೋಟಿ ರೂಪಾಯಿಗಳ surplus ಗೆ ತಂದು ನಿಲ್ಲಿಸಿದ್ದೀರಿ. ಮುಂದಿನ ವರ್ಷಕ್ಕೆ ಅದು ಕೊರತೆಯಾದರೂ ಆಗಬಹುದು. ಒಳ್ಳೆಯದಾಗಲಿ ಎಂದೇ ಹೇಳುತ್ತಿದ್ದೇನೆ. ಒಳ್ಳೆಯದು ಮಾಡಿ ಎಂದು ನಿಮಗೆ ಹೇಳುತ್ತಿದ್ದೇನೆ. ನೀವು ಒಳ್ಳೆಯದು ಮಾಡುತ್ತಿಲ್ಲವೆಂದು ನಮಗೆ ನೋವಾಗಿದೆ. ಅಂಥ ಪರಿಸ್ಥಿತಿಯಲ್ಲಿ ನೀವು ಬಂದಾಗ ಯಡಿಯೂರಪ್ಪನವರೇ, ನಿಮಗೆ ಎಂಥ opportunity ಸಿಕ್ಕಿತ್ತು ಎಂದರೆ ಬಹಳ ಒಳ್ಳೆಯ opportunity ಸಿಕ್ಕಿತ್ತು. ನಾವಿದ್ದಾಗ ಆ opportunity ಇರಲಿಲ್ಲ. ಕಷ್ಟಕಾಲದಲ್ಲಿ ನಾನು ಅಧಿಕಾರ ತೆಗೆದುಕೊಂಡಿದ್ದೆ. ಹಣಕಾಸಿನ ಪರಿಸ್ಥಿತಿ ಹಾಗಿತ್ತು 4132 ಕೋಟಿ ರೂಪಾಯಿ revenue surplus ಇದ್ದಾಗ ಬಜೆಟ್ ಮಂಡಿಸುವ ಕಾಲಕ್ಕೆ ನೀವು ಬಂದಿರಿ. ನಾನು ಹಣಕಾಸು ಸಚಿವನಾಗಿದ್ದಾಗ 2004–05 ರಲ್ಲಿ 1668 ಕೋಟಿ ರೂ. revenue deficit ಇತ್ತು. ನಾನು ಹೇಳುವುದೇನೆಂದರೆ, ಹೀಗಾದರೆ ಅಭಿವೃದ್ಧಿಯಾಗುವುದಿಲ್ಲ ನೀರಾವರಿಯಾಗುವುದಿಲ್ಲ. Food production ಎಲ್ಲಿ ಹೆಚ್ಚಾಗುತ್ತದೆ? ನೀರಾವರಿ ಹೆಚ್ಚಾದರೆ ತಾನೆ ಇದು ಹೆಚ್ಚಾಗುವುದು ನಾನು ಇಲ್ಲಿ

ಸುಮ್ಮನೆ CAG report ಅನ್ನು observe ಮಾಡಿದೆ. CAG ಯವರು ತಮ್ಮ report ನಲ್ಲಿ ನಿಮ್ಮ ಜಿಲ್ಲೆಯ Upper Tunga project ಅನ್ನು analyzeಮಾಡಿದ್ದಾರೆ. ಅದು ಪ್ರಾರಂಭವಾಗಿದೆ. 17 ವರ್ಷವಾಗಿದೆ. 1052 ಕೋಟಿ ರೂಪಾಯಿಗಳಲ್ಲಿ ಮಾಡಬೇಕೆಂದಿದ್ದು, ಅದು 2005 ರಲ್ಲಿ ಮುಗಿಯಬೇಕಾಗಿತ್ತು. ಈಗ ನಾವು 2009ರ ಸಾಲಿನಲ್ಲಿದ್ದೇವೆ. ಇದಕ್ಕೆ 600 ಕೋಟಿ ಚಿಲ್ಲರೆ ರೂಪಾಯಿ ಖರ್ಚಾಗಿದೆಯಂತೆ. CAG ಯವರು ಎಲ್ಲಾ ಹಣ ನಿಷ್ಫಲವಾಯಿತು ಎಂದು ಹೇಳುತ್ತಾರೆ ಅದು ನೀರಾವರಿಯಾದರೆ 2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಸಿಗುತ್ತಿತ್ತು. ಆ 2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಿದ್ದರೆ ಆಹಾರೋತ್ಪಾದನೆ ಆಗುತ್ತಿತ್ತು. ಆ ಯೋಜನೆ ಇನ್ನೂ ಕೂಡ ಯಾವಾಗ ಮುಗಿಯುತ್ತದೋ ಗೊತ್ತಿಲ್ಲ. ಅಂದಿನ ದರಗಳಲ್ಲಿ 1052 ಕೋಟಿ ರೂ. ಅಂದರೆ ಈಗ ಅದು ಎಷ್ಟು ದರ ಆಗುತ್ತದೋ ಗೊತ್ತಿಲ್ಲ. ಈಗ 630 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆಯಂತೆ. ಇನ್ನು ಕೂಡ ಅದಕ್ಕಿಂತ ಜಾಸ್ತಿ ಹಣ ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಇದೆ. ಇನ್ನೂ ಅನೇಕ ಪ್ರಾಜೆಕ್ಟ್‌ಗಳು ಅದೇ ರೀತಿ ಇವೆ. ಅದಕ್ಕೋಸ್ಕರ, ನೀರಾವರಿ ಇಲಾಖೆಯಲ್ಲಿ ಹಣ ತೊಡಗಿಸುವುದನ್ನು ಒಂದು ಕಡೆ ನೀವು ಕಡಿಮೆ ಮಾಡುತ್ತಿದ್ದೀರಿ, time bound ನಲ್ಲಿ ಹಣ ಖರ್ಚು ಮಾಡದೇ ಹೋದರೆ ಆ ಯೋಜನೆ ಫಲಪ್ರದವಾಗುವುದಿಲ್ಲ ನಿಮಗೆ plan ನಲ್ಲಿಯೇ ಹೇಳಿದ್ದಾರೆ. 11th Five year plan ನಲ್ಲಿ planning commission ನವರು ಬಹಳ ಸ್ಪಷ್ಟವಾಗಿ, ನೀರಾವರಿಗೆ ಗರಿಷ್ಠ 29% ರಷ್ಟು ಖರ್ಚು ಮಾಡಬೇಕೆಂದು ಹೇಳಿದ್ದಾರೆ. For the 11th five year plan total plan size 1 ಲಕ್ಷದ 1 ಸಾವಿರದ 642 ಕೋಟಿ ರೂಪಾಯಿ ಆಗಿದೆ. ಅದರಲ್ಲಿ 29% ಎಂದರೆ more than 30 thousand crores of rupees ಆಗುತ್ತದೆ. 11th Five year plan ನಲ್ಲಿ ಕನಿಷ್ಠ 30 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಂತೆ. ಎಲ್ಲಿ ಖರ್ಚು ಮಾಡುತ್ತಿದ್ದಾರೆ? ನಾವು ನೀರಾವರಿಗೆ ಆದ್ಯತೆ ಕೊಟ್ಟಿದ್ದೇವೆ, ಕೃಷಿಗೆ ಆದ್ಯತೆ ಕೊಟ್ಟಿದ್ದೇವೆ, ಗ್ರಾಮೀಣಾಭಿವೃದ್ಧಿಗಾಗಿ ಆದ್ಯತೆ ಕೊಟ್ಟಿದ್ದೇವೆಂದು ಈ ತರಹ ಹೇಳುವುದರಿಂದ ವಾಸ್ತವಿಕವಾಗಿ ಬೆಳವಣಿಗೆಯಾಗುವುದಕ್ಕೆ ಸಾಧ್ಯವಿಲ್ಲ, ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಮುಂದಿನ ವರ್ಷಕ್ಕೂ ಕೂಡ ಜಾಸ್ತಿಯಾಗುತ್ತದೆಂದು ನನಗೇನೂ ಅನಿಸುವುದಿಲ್ಲ. ಕೃಷಿಗೆ 2006-07 ರಲ್ಲಿ 29.74% 2007-08ರಲ್ಲಿ 44%, 2008-09 ರಲ್ಲಿ 19%, 2009-10ಕ್ಕೆ 11.8% allocation ಇದೆ. ಹೀಗಾದರೆ ಕೃಷಿ ಹೇಗೆ ಅಭಿವೃದ್ಧಿಯಾಗುತ್ತದೆ? ಕೃಷಿಗೆ ಬಹಳ allocation ಹೇಳುತ್ತಾರೆ. ಹೀಗಾದರೆ, food production ಹೇಗೆ ಜಾಸ್ತಿ ಆಗುತ್ತದೆ? ಸಾಧ್ಯವೇ ಇಲ್ಲ. ಹಾಗೆಯೇ, ಗ್ರಾಮೀಣಾಭಿವೃದ್ಧಿಗೆ 2005-06 ರಲ್ಲಿ 23.6%, 2006-07ರಲ್ಲಿ 23% 2007-08ರಲ್ಲಿ 26.4%, 2008-09ರಲ್ಲಿ 11% allocation ಇದೆ. 2009-10ಕ್ಕೆ minus growth ಇದೆ. ದುಡ್ಡು ಎಲ್ಲಿದೆ? ಗ್ರಾಮೀಣಾಭಿವೃದ್ಧಿ, ಗ್ರಾಮೀಣ ರಸ್ತೆಗಳು,

ಕುಡಿಯುವ ನೀರು ಇದಕ್ಕೆ ದುಡ್ಡು ಎಲ್ಲಿದೆ? ಇವುಗಳಿಗೆ ಹಣ ಕಡಿಮೆ ಆಗುತ್ತಾ ಹೋಗುತ್ತಿದೆ. ಮೊದಲಿನಿಂದಲೂ ಹಾಗೆಯೇ ಆಗುತ್ತಿದೆ. Health ನಲ್ಲೂ ಕೂಡ ಹಾಗೆಯೇ ಇದೆ. ಇದರಲ್ಲಿ 2007–08ಕ್ಕೆ 30%, 2008–09ರಲ್ಲಿ 24% ಇದೆ. It has come down. plan size is increasing every year according to their Budget speech. plan size ಜಾಸ್ತಿ ಆದಮೇಲೆ core subject ಗಳಲ್ಲಿ investment ಕೂಡ ಜಾಸ್ತಿ ಆಗಬೇಕು. ಆದರೆ, ಕಡಿಮೆಯಾಗುತ್ತಿದೆ, ಹಾಗಾದರೆ, ಆರೋಗ್ಯ ಸುಧಾರಣೆಯಾಗಬೇಕೆಂದರೆ ಹೇಗೆ ಆಗುತ್ತದೆ? ಸುಧಾರಣೆಯಾಗುವುದಕ್ಕೆ ಸಾಧ್ಯವೇ ಇಲ್ಲ. 2007–08ಕ್ಕೆ 30%, 2008–09ಕ್ಕೆ 24.4%, 2009–10ಕ್ಕೆ 3.59% ಆಗುತ್ತದೆ. Health ನಲ್ಲೂ ಕೂಡ ಹೀಗಾದರೆ ಅಭಿವೃದ್ಧಿ ಸಾಧ್ಯವೇ ಇಲ್ಲ. Social Sector ಗೆ ಬಹಳ ಹೊಡೆತ ಬಿದ್ದಿದೆ. ಹಣವೇ ಇಲ್ಲ. ಕರ್ನಾಟಕ ಅಭಿವೃದ್ಧಿ ಆಗಿಹೋಯಿತು ಎನ್ನುತ್ತೀರಿ. ಆದರೆ, ಎಲ್ಲಿ ಆಗುತ್ತದೆ? ನೀವು ಕೊಟ್ಟಿರುವ ಅಂಕಿಅಂಶಗಳನ್ನೇ ನಾನು ಹೇಳುತ್ತಿದ್ದೇನೆ. ನಾನು ಎಲ್ಲಿಂದಲೋ ತಂದು ಹೇಳುತ್ತಿಲ್ಲ. ಶಿಕ್ಷಣದ ಬಗ್ಗೆ ಆಗಲೇ ಹೇಳಿದ ಹಾಗೆ, 2007–08ಕ್ಕೆ 6859 ಕೋಟಿ ರೂಪಾಯಿಗಳನ್ನು ಅಂದರೆ 21%, 2008–09ಕ್ಕೆ 8666, 2009–10ಕ್ಕೆ 8800 ಕೋಟಿ ರೂಪಾಯಿಗಳು ಅಂದರೆ ಇಲ್ಲಿ 2.83% ಗೆ ಬಂದುಬಟ್ಟಿದೆ. 2008–09ಕ್ಕೆ 26%, 2009–10ಕ್ಕೆ 2.83% ಅಂದರೆ ಶಿಕ್ಷಣಕ್ಕೆ ಹಣ ಜಾಸ್ತಿ ಆಯಿತೆ ಅಥವಾ ಕಡಿಮೆ ಆಯಿತ? ಎಂಬುದನ್ನು ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಬೇಕು. ಇರುವ ದುಡ್ಡನ್ನು ತೆಗೆದುಕೊಂಡು ಹೋಗಿ ಬೇರೆ ಯಾವುದಕ್ಕೋ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ. ದುಡ್ಡೇ ಇಲ್ಲ. ಅದಕ್ಕೆ ಬೇರೆಯಾದಕ್ಕೆ ಏಕೆ ಖರ್ಚು ಮಾಡುವುದಕ್ಕೆ ಹೋಗುತ್ತೀರಿ? ಹೀಗಾದರೆ ಎಲ್ಲರಿಗೂ ಶಿಕ್ಷಣ ಕೊಡುವುದು ಹೇಗೆ? ನಿನ್ನೆ ಖರ್ಗೆಯವರು ಹೇಳೀದ್ದಾರೆ, ಅದನ್ನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. 2009–10ಕ್ಕೆ 25% ನಿಂದ 13% ಗೆ ಬಂದು ನಿಂತಿದ್ದೇವೆ. ಕಾರಜೋಳರವರೇ, Minor Irrigation ಈ ವರ್ಷ ಹಣವೇ ಇಲ್ಲ. ಹಣವನ್ನು cut ಮಾಡಿದರು.

ಬಜೆಟ್‌ನಲ್ಲಿ 782 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ, ಏನೂ ಇಲ್ಲವೇ ಇಲ್ಲ. ಮುಂದಿನ ಸಲವೂ ಅದೇ ಆಗುತ್ತದೆ. ಕೇವಲ ಬಜೆಟ್ ಪುಸ್ತಕದಲ್ಲಿ ತೋರಿಸುವುದು ಮತ್ತೆ ತೆಗೆದುಕೊಳ್ಳುವುದು. Minor irrigation ಗೆ 782 ಕೋಟಿ ರೂಪಾಯಿ ಎಂದು ಹೇಳುವುದು, ಆದರೆ, ಬಿಡುಗಡೆ ಮಾಡುವುದು 300 ಕೋಟಿ ರೂಪಾಯಿಗಳಷ್ಟು ಮಾತ್ರ. pending Bills ಬಹಳ ಇವೆ. Irrigation PWD ಅಡಿಯಲ್ಲಿ ನನಗೆ ಗೊತ್ತಿರುವ ಹಾಗೆ, for irrigation since 6 months LOC has not been reduced, likewise for Rural Development. ಈ ತರಹ ಆದರೆ ಹೇಗೆ? Can you call it as a prudent fiscal management? Is it growth oriented budget? You can't, nobody can. ವಿದ್ಯುಚ್ಛಕ್ತಿಯಲ್ಲೂ

ಹಾಗೆಯೇ ಆಗಿದೆ. 2300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ revised estimates ನಲ್ಲಿ 1880 ಕೋಟಿ ರೂಪಾಯಿಗಳಷ್ಟು ಮಾತ್ರ ಇಟ್ಟಿದ್ದಾರೆ. ನೀರಾವರಿಯಲ್ಲೂ ಎಷ್ಟು ಇತ್ತೋ ಅಷ್ಟೇ ಇದೆ. ನಾನು ಆಗಲೇ ಹೇಳಿದ ಹಾಗೆ T&D loss and other things 35% ನಿಂದ 27.06% ಗೆ ಬಂದಿದೆ. ಜಲವಿದ್ಯುತ್‌ನಲ್ಲಿ ಸಹ 3637 ಕೋಟಿ ರೂಪಾಯಿಗಳಷ್ಟಕ್ಕೆ ನಿಂತಿದೆ. ಅದಕ್ಕಿಂತ ಮೇಲೆ ಹೋಗಿಲ್ಲ. ಇನ್ನು ಕರ್ನಾಟಕದಲ್ಲಿ potential 7750 ಇದೆ. ನಾವಿನ್ನೂ not even 50% able to utilize. ಇನ್ನು Housing ನಲ್ಲಿ 2005-06,2006-07ರಲ್ಲಿ ಮನೆಗಳನ್ನು ಕಟ್ಟಲಿಲ್ಲ. ಈಗ 50 ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಪಂಚಾಯಿತಿಗೆ 35 ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಊರಿಗೆ ಐದೈದು, ಮೂರು ಮೂರು ಮನೆಗಳನ್ನು ಕೊಟ್ಟಿದ್ದಾರೆ. ಯಾರಿಗೆ ಕೊಡುವುದು ಎಂದು ಪಂಚಾಯತಿ ಮೆಂಬರುಗಳು ಒಬ್ಬರಿಗೊಬ್ಬರು ಹೊಡೆದಾಡಿಕೊಳ್ಳುತ್ತಿದ್ದಾರೆ. ಶನಿವಾರ ದಿವಸ ಜನಸ್ಪಂದನ ಕಾರ್ಯಕ್ರಮ ಏರ್ಪಾಡು ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿದರೆ 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದೇ ಬರುತ್ತವೆ. ಇವರು 6 ಲಕ್ಷ ಚಿಲ್ಲರೆ ಅರ್ಜಿ ಬಂದಿತ್ತು, ಅದರಲ್ಲಿ 5 ಲಕ್ಷ ಚಿಲ್ಲರೆ ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆ, about 80% disposed off ಎಂದು ಹೇಳುತ್ತಾರೆ. 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದು ಬರುತ್ತವೆ. ಆ 90 ಅರ್ಜಿಗಳಿಗೆ ಮನೆ ಕೊಡುವುದಿಲ್ಲ ಎಂದು ಬರೆದು ಕಳುಹಿಸುತ್ತಾರೆ. ಅದೇ disposed off 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದು ಬಂದಿವೆ, ಆ 90 ಅರ್ಜಿಗಳಿಗೆ ಸಂಬಂಧಿಸಿದಂತೆ, ಮನೆ ಕೊಡುವುದಕ್ಕೆ ಮನೆ ಇಲ್ಲ, ಹಣ ಇಲ್ಲ, ಆದ್ದರಿಂದ ಮನೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ 90 ಅರ್ಜಿ disposed off ಎಂದು ಹೇಳುತ್ತಾರೆ. ಆ ಲೆಕ್ಕದ ಮೇಲೆ ಜನಸ್ಪಂದನದಲ್ಲಿ 6 ಲಕ್ಷ ಅರ್ಜಿ ಬಂದರೆ, ನಾನು ಒಂದು ಜನಸ್ಪಂದನ ಕಾರ್ಯಕ್ರಮಕ್ಕೆ ಹೋಗಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಇದ್ದು ಅರ್ಜಿಗಳನ್ನು ತಹಶೀಲ್ದಾರರಿಗೆ ಕೊಡದೆ ನನಗೇ ನೇರವಾಗಿ ತೆಗೆದುಕೊಂಡು ಬಂದು ಕೊಟ್ಟರು, ಆ ಅರ್ಜಿಗಳನ್ನು ನೋಡಿದರೆ ಎಲ್ಲವೂ ಮನೆ ಕೊಡಿಸಿ ಎಂದು ಬಂದಿದ್ದವು ಅದರಲ್ಲಿ ಕೆಲವು ಕಾರ್ಡ್ ಕೊಡಿಸಿ ಎಂದು ಬಂದಿದ್ದವು. ಆ ಕಾರ್ಡ್ ಕೊಡಿಸಿ ಎನ್ನುವ ಅರ್ಜಿಗಳ ಮೇಲೆ ನಿಮ್ಮದಿ ಕೇಂದ್ರಗಳಿಗೆ ಹೋಗಿ ಎಂದು ಬರೆದು ಕಳುಹಿಸುತ್ತಾರೆ. ಈ ತರಹ ಅರ್ಜಿಗಳನ್ನೆಲ್ಲ disposed off ಮಾಡುತ್ತಾರೆ. social welfare Deprtment ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದರು. ಹಣ ಇಡುತ್ತಾರೆ ಆದರೆ ಬಿಡುಗಡೆ ಮಾಡುವುದಿಲ್ಲ, ಖರ್ಚು ಮಾಡುವುದಿಲ್ಲ. ಏಕೆಂದರೆ social welfare ಗೆ Department comitted officers ಹೋಗುವುದಿಲ್ಲ. social justice ಬಗ್ಗೆ commitment ಇರುವವರು ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗಗಳ ಬಗ್ಗೆ, minorities ಬಗ್ಗೆ commitment ಇರುವವರು

ಬಂದಾಗ ಮಾತ್ರ ಈ ಹಣ ಖರ್ಚಾಗುತ್ತದೆಯೇ ಹೊರತು ಇಲ್ಲದಿದ್ದರೆ ಖರ್ಚಾಗುವುದಿಲ್ಲ. ನಾನು ಕಳೆದ ಸಲವೂ ಹೇಳಿದೆ.

ಡಾ: ಹೆಚ್.ಸಿ. ಮಹದೇವಪ್ಪ: ಮಂತ್ರಿಗಳಿಗೂ ಕೂಡ ಅಂಥ ಬದ್ಧತೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಮಂತ್ರಿಗಳ ವಿಷಯ ಇರಲಿ, ಅಧಿಕಾರಿಗಳಿಗಾದರೂ ಬದ್ಧತೆ ಇರಬೇಕಲ್ಲವೇ? ಅಧಿಕಾರಿಗಳು Social welfare ಎಂದರೆ ಅದು punishment post ಎಂದು ತಿಳಿದುಕೊಳ್ಳುತ್ತಾರೆ. ಯಾರೂ ಕೆಲಸ ಮಾಡುವುದಿಲ್ಲ. ಹಿಂದುಳಿದವರಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊಡಿ ಎಂದು ಒಬ್ಬ ಎಂಎಲ್ಎ ಗೆ 10 ಕೊಟ್ಟಿದ್ದಾರೆ, ನಾವು ಯಾರಿಗೆ ಕೊಡುವುದು ಯಾರಿಗೆ ಬಿಡುವುದು? ಅದನ್ನು ನೀವೇ ಇಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಒಂದು ಕ್ಷೇತ್ರಕ್ಕೆ ಶ್ರಮಶಕ್ತಿ 43 ಎಂದು ಇದೆ. ಅದಕ್ಕೆ 13 ಸಾವಿರ ಅರ್ಜಿಗಳು ಬಂದಿವೆ.

ಶ್ರೀ ಸಿದ್ದರಾಮಯ್ಯ: ಒಬ್ಬ ಎಂಎಲ್ಎ 10 ಜನರಿಗೆ ಕೊಡುವುದಕ್ಕೆ ಅಧಿಕಾರವಿದೆಯೆಂದು ನನಗೆ ಬಂದು ಹೇಳಿದರು. ನೊಡಿದರೆ, 200–300 ಅರ್ಜಿಗಳು ಬಂದಿವೆ. ನಮ್ಮ ಊರಿನ ಅರ್ಜಿಗಳು 10–15 ಬಂದಿವೆ. ಅವರೆಲ್ಲರೂ ಬಂದು ನನಗೆ ಕೊಡಿ, ನನಗೆ ಕೊಡಿ ಎಂದು ಕೇಳಿದಾಗ, ನಾನು ಯಾರಿಗೂ ಕೊಡುವುದಿಲ್ಲ ಅಧಿಕಾರಿಗಳ ಹತ್ತಿರ ಹೋಗಿ ಎಂದು ಕಳುಹಿಸಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಹೇಗೆ ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಏನಾದರೂ ಮಾಡಬೇಕಾದರೆ ನಾವು resource mobilization ಅನ್ನು ಹೆಚ್ಚು ಹೆಚ್ಚು ಮಾಡಿ ಈ ಬಾಬ್ತುಗಳಿಗೆ ಹಣ ಖರ್ಚು ಮಾಡಬೇಕು. Un productivity ಗೆ ಹಣ ಖರ್ಚು ಮಾಡುವುದಲ್ಲ, ಎಲ್ಲಿ productivity ಇದೆ ಅಲ್ಲಿಗೆ ಕಳುಹಿಸಬೇಕು. ಎಲ್ಲಿ quality of life improve ಆಗಬೇಕಾಗಿದೆ, ಯಾರಿಗೆ economic empowerment ಆಗಬೇಕಾಗಿದೆ, ಅವರಿಗೆ ಮಾಡಬೇಕಾಗಿದೆ, ಕೆಲಸ. ನಾನು ಕಳೆದ ಸಲವೂ ಹೇಳಿದ್ದೆ, ಈ ಸಲವೂ ಹೇಳುತ್ತೇನೆ. ಪರಿಶಿಷ್ಟ ಜಾತಿ ವರ್ಗದವರು SC/ST Development corporation ಗಳಿಂದ ಸಾಲ ತೆಗೆದುಕೊಂಡಿದ್ದಾರೆ. ನಾವು ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದ್ದೇವೆ. ಪಾಪ, ಅವರಿಗೂ ಆ ರೀತಿ ಮನ್ನಾ ಮಾಡಬೇಕಲ್ಲವೇ? ಅವರಲ್ಲಿ ಅನೇಕ ಜನ agricultural labourers ಇದ್ದಾರೆ. ಅವರೂ ಸಾಲ ತೆಗೆದುಕೊಂಡಿದ್ದಾರೆ. ಅವರಿಗೂ ಕಷ್ಟವಾಗಿದೆ. ಅವರು ಸಾಲ ವಾಪಸ್ಸು ಕಟ್ಟುವುದಕ್ಕಗುವುದಿಲ್ಲ. 6% interest ಬೇರೆ ಇದೆ. ಅವರಿಗೂ ಮನ್ನಾ ಮಾಡೋಣ. ನಾನು ಕಳೆದ ಸಲ demand ಮಾಡಿದ್ದೆ. This year also I demand. ಪಾಪ. ಅವರಿಗೇಕೆ ಮಾಡಬಾರದು? Even now ಯಡಿಯೂರಪ್ಪನವರು ಎಲ್ಲಾ ಕಡೆಗೆ ಸಹಾಯ ಮಾಡುತ್ತಿದ್ದಾರೆ. ಎಲ್ಲಾ ದೇವಸ್ಥಾನಗಳಿಗೂ ಹಣ ಕೊಟ್ಟರು, ನಮ್ಮ ಊರಿನ ದೇವಸ್ಥಾನ ಬಿಟ್ಟಿದ್ದಾರೆ, ಅದು important ದೇವಸ್ಥಾನ, ಸ್ವಲ್ಪ

ಯಡಿಯೂರಪ್ಪನವರಿಗೆ ಹೇಳಿ ಎಂದು ನನಗೆ ಹೇಳಿದರು. ಯಡಿಯೂರಪ್ಪನವರೇ, ಅವರ ದೇವಸ್ಥಾನಕ್ಕೂ ಬೇಕಂತೆ, ಮಾಡಿಕೊಡಿ, ದೇವರುಗಳಲ್ಲಿ ಕೆಲವು important ದೇವರುಗಳು ಇರುತ್ತಾರೆ. ಗುರುತು ಮಾಡಿಕೊಂಡು ಅವರುಗಳಿಗಾದರೂ ಕೊಡಬೇಕಲ್ಲವೇ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ದೇವರೇ ಇಲ್ಲ ಎಂದು ಹೇಳುತ್ತೀರಿ. ಈಗ ದೇವರು ಎಂದು ಹೇಳುತ್ತೀರಲ್ಲ?

ಶ್ರೀ ಸಿದ್ದರಾಮಯ್ಯ: ದೇವರು ;ಇಲ್ಲವೆಂದು ಎಲ್ಲಿ ಹೇಳಿದ್ದೇನೆ? ಕುಳಿತುಕೊಳ್ಳಿ. ಬಸವಣ್ಣನವರು ದೇವರು ಇಲ್ಲವೆಂದು ಹೇಳಲಿಲ್ಲ. ದೇವಸ್ಥಾನಗಳಿಗೆ ಹೋಗಬೇಕಾದ ಅಗತ್ಯವಿಲ್ಲವೆಂದು ಹೇಳಿದರು. ನೀವು ಕೇಳಿಸಿಕೊಳ್ಳಲಿಲ್ಲ, ಈಗ ಬಂದಿದ್ದೀರಿ ಎಂದು ತೋರುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಸಂಸ್ಕಾರ ಪಡೆದ ಶಿಲೆ ಮೂರ್ತಿಯಾಗುತ್ತದೆ, ಸಂಸ್ಕಾರ ಪಡೆದ ಜಲ ತೀರ್ಥವಾಗುತ್ತದೆ, ಸಂಸ್ಕಾರ ಪಡೆದ ಮಾನವ ದೇವಮಾನವನಾಗುತ್ತಾನೆ. ಆ ದೇವಮಾನವ ರೂಪದಲ್ಲಿ ಕನಕದಾಸರು, ಬಸವಣ್ಣನವರು ಬಂದಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಮುಜರಾಯಿ ಮಿನಿಸ್ಟರ್ ಆಗುವುದು ಒಳ್ಳೆಯದು. ಕೃಷ್ಣಯ್ಯ ಶೆಟ್ಟಿಯವರು ಗಂಗಾಜಲ ತೆಗೆದುಕೊಂಡು ಬರುತ್ತಾರೆ. ನೀವು ಯಾವ ಜಲ ತರುತ್ತೀರಿ?

ಶ್ರೀ ಹೆಚ್.ಎಸ್. ಶಂಕರಲಂಗೇಗೌಡ : ನೆಲವೇ ಜಲ, ಈ ನೆಲದಲ್ಲಿದೆಯಲ್ಲ.

ಶ್ರೀ ಸಿದ್ದರಾಮಯ್ಯ: ಶ್ರೀ ಹೆಚ್.ಎಸ್. ಶಂಕರಲಂಗೇಗೌಡರನ್ನು ಮಿನಿಸ್ಟರ್ ಮಾಡಿ ಎಂದು ನಾನು ಎಷ್ಟೋ ಸಲ ರೆಕಮಂಡ್ ಮಾಡಿದೆ. ನೀವು ಮಾಡಲೇ ಇಲ್ಲವಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಹಣೆಯಲ್ಲಿ ಬರೆದಿಲ್ಲವಲ್ಲ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಇಷ್ಟೊಂದು ದೇವರ ಪೂಜೆ ಮಾಡುತ್ತೀರಿ. ಅವರು ನಿಮ್ಮ ಹಣೆಯಲ್ಲಿ ಬರೆದಿಲ್ಲವೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನಮ್ಮ ಯಡಿಯೂರಪ್ಪನವರು ದೈವಾಂಶ ಸಂಭೂತರು. ನೀವು ಕೂಡ ಅವರ ಹಿಂದೆ ಬರುವವರು. ಕುಮಾರಸ್ವಾಮಿಯವರು ಕೂಡ ಹಿಂದುಳಿದ ವರ್ಗದ ಎಲ್ಲಾ ಜನರ ಹಿತ ಕಾಪಡುವುದಕ್ಕೆ ಹೋಗುವುದರಿಂದ ಜನರು ಅವರನ್ನು ದೇವರೆಂದು ಪೂಜಿಸುತ್ತಾರಲ್ಲ.

ಶ್ರೀ ಸಿದ್ದರಾಮಯ್ಯ: ನೀವು ನಿಮ್ಮ ಕ್ಷೇತ್ರದಲ್ಲಿ ಆಂಜನೇಯ ದೇವಸ್ಥಾನವನ್ನೇ ಕಟ್ಟಿಸಿದ್ದೀರಲ್ಲ? ಇವರು ಆಂಜನೇಯನ ಮಹಾಭಕ್ತರು.

ಡಾ: ಹೆಚ್.ಸಿ ಮಹದೇವಪ್ಪ: ಬಿಜೆಪಿಯಲ್ಲಿ ಶಂಕರಲಿಂಗೇಗೌಡರಿಗೆ ಅವರ ಹಣೆಬರಹಗೊತ್ತಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಆ ತರಹ ಏನೂ ಇಲ್ಲ. ಕಾಲಾಯ ತಸ್ಮೈ ನಮ:.

ಶ್ರೀ ಸಿ.ಟಿ.ರವಿ: ಡಾಕ್ಟರೆ, ನಿಮಗೆ ಜನತಾದಳದಲ್ಲಿ ಗೊತ್ತಾದ ಹಾಗೆ. ಶ್ರೀ **ಹೆಚ್.ಸಿ. ಬಾಲಕೃಷ್ಣ:** ಅವರಿಗೂ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ:- ಆಂಜನೇಯ ಸ್ವಾಮಿಯ ಮಹಾ ಭಕ್ತರು. ಬಹಳ ದೊಡ್ಡದಾದ ಗುಡಿ ಕಟ್ಟಿಸಿದ್ದಾರೆ ನಮ್ಮನ್ನೆಲ್ಲಾ ಒಂದು ಸಾರಿ ಕರೆದುಕೊಮಡು ಹೋಗಿದ್ದರು. ಒಂದು ಸಭೆಯಲ್ಲಿ ನಾವು ಅವರು ಯಡಿಯೂರಪ್ಪನವರು ಒಟ್ಟಿಗೆ ಕುಳಿತಿದ್ದೆವು. ಆಗ ಇವರು ಸಿದ್ದರಾಮಯ್ಯನವರು ಮುಂದಿನ ಮುಖ್ಯಮಂತ್ರಿ ಎಂದು ಹೇಳಿಬಿಟ್ಟಿರು. ಹೀಗಾಗಿ ನಿಮಗೆ ತೊಂದರೆಯಾಯಿತು ನೋಡಿ. It is fact ಬೇಕಾದರೆ ಅವರನ್ನು ಕೇಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನಾನು ಬಾಯಿ ತಪ್ಪಿ ಹೇಳಿದೆನೊ ಗೊತ್ತಿಲ್ಲ. ನೀವು ಮುಖ್ಯಮಂತ್ರಿಯಾಗಲಿಲ್ಲ ಆದರೆ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದರು. ಏನು ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನನ್ನನ್ನು ಜೊತೆಗೆ ಕೂಡಿಸಿಕೊಂಡು ಯಡಿಯೂರಪ್ಪನವರ ಮುಂದೆ ಆ ರೀತಿ ಹೇಳಿದರೆ ಹೇಗೆ? ಅದಕ್ಕೆ ನಾನು ಏಕೆ ಈ ರೀತಿ ಹೇಳುತ್ತೀರಿ ನಾಳೆ ಅವರು ಮುಖ್ಯಮಂತ್ರಿಯಾದ ಮೇಲೆ ನಿನಗೆ ತೊಂದರೆಯಾಗಿ ಬಿಡುತ್ತದೆಂದು ಹೇಳಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಅದು ಆ ರೀತಿ ಅಲ್ಲ. ನೀವು ದೀನದಲಿತರಗೋಸ್ಕರ ಕೆಲಸ ಮಾಡುತ್ತೀರಿ ಎಂದು ನಾನು ಆ ಮಾತನ್ನು ಹೇಳಿದೆ ವಿನಾಃ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಬಾರದೆಂದು ನಾನು ಹೇಳಲಿಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುತ್ತಾರೆಂದು ಅವರ ಅದೃಷ್ಟದಲ್ಲಿತ್ತು. ನನಗೆ ಮಂತ್ರಿ ಸ್ಥಾನ ಕೊಡಲಿಲ್ಲವೆಂದು ಬೇಜಾರಿಲ್ಲ. ಮುಂದೆ ನೋಡೋಣ. ನಮಗೆ ಒಳ್ಳೆಯ ಕಾಲ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪಾಪ ಬೇಜಾರಾಗಿ ಬೇಜಾರಾಗಿ ಸೊರಗಿ ಸಿಟ್ಟಿನಿಂದಲೇ ಅವರು ಮೈಸೂರಿಗೆ ಹೋಗಿದ್ದರು. ಈಗ ನೋಡಿದರೆ ಇಲ್ಲವೆಂದು ಹೇಳುತ್ತೀರಿ. ಅದು ಏನೆ ಇರಲಿ ಬಿಡಿ. ಈಗ ಮಾನ್ಯ ಸಿದ್ದರಾಮಯ್ಯನವರು ಬಹಳ ದೀರ್ಘವಾಗಿ ಭಾಷಣ ಮಾಡುತ್ತಿದ್ದಾರೆ. ಆದರೆ ಅಲ್ಲಿ ನೋಡಿದರೆ "ಕೈಯಾಗ ಕಾಸು ಇಲ್ಲ ಮೈಯಾಗ ಉಲ್ಲಾಸಿಲ್ಲ" ಹೀಗಿರುವಾಗ ನೀವು ಮಾತ್ರ ಇಲ್ಲಿ ಭಾಷಣ ಮಾಡುತ್ತಲೇ ಇದ್ದೀರಿ. ಕೇಳುವವರು ಯಾರು? ಮಾಡುವವರು ಯಾರು? ದುಡ್ಡು ಎಲ್ಲಿದೆ? ಹೀಗಾಗಿ "ಕೈಯಾಗ ಕಾಸು ಇಲ್ಲ ಮೈಯಾಗ ಉಲ್ಲಾಸಿಲ್ಲ" ಕೇಳುವವರಿಗೆ ಬಹಳ ನಿರಾಶೆಯಾಗಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಎಲ್ಲಾ ನಿಮ್ಮ ಕಾಲದಲ್ಲೂ ಆಗಿದೆ ಬಿಡಿ.

ಶ್ರೀ ಸಿದ್ದರಾಮಯ್ಯ: ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ಒಂದು ಶಿಫಾರಸ್ಸು ಮಾಡಿದ್ದಾರೆ. ಆ ಶಿಫಾರಸ್ಸು ಏನೆಂದರೆ, ಹಿಂದುಳಿದ ವರ್ಗದವರಿಗೆ ಕೆನೆಪದರ ಏನ ಇದೆ ಇದರ ಸಿಲಿಂಗ್ ಅನ್ನು ಒಂದೂವರೆ ಲಕ್ಷಕ್ಕೆ ಇದ್ದದ್ದನ್ನು ನಾಲ್ಕೂವರೆ ಲಕ್ಷಕ್ಕೆ ಏರಿಸಬೇಕೆಂದು ಒಂದು ಶಿಫಾರಸ್ಸು ಇದೆ. ಕೇಂದ್ರ ಸರ್ಕಾರದವರು ಈಗಾಗಲೇ ಅ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದಾರೆ. ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ಇವತ್ತಿನ ಇನ್‌ಫ್ಲೇಷನ್, ಆದಾಯ ಇವೆಲ್ಲವನ್ನು ಲೆಕ್ಕ ಹಾಕಿಕೊಂಡು ಕೇಂದ್ರ ಸರ್ಕಾರದವರು ಹಿಂದುಳಿದ ವರ್ಗದವರಿಗೆ ಇನ್‌ಕಂ ಸಿಲಿಂಗ್ 1.5 ಇದ್ದದ್ದನ್ನು 4.5 ವರೆಗೆ ಏರಿಸಿದ್ದಾರೆ. ಕರ್ನಾಟಕ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದವರು ಕೂಡ ಅದನ್ನೇ ಶಿಫಾರಸ್ಸು ಮಾಡಿದ್ದಾರೆ. ಕೂಡಲೇ ಅದನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ, ಅನೇಕ ಹಿಂದುಳಿದ ವರ್ಗದವರಿಗೆ ಅದರಿಂದ ಸಹಾಯವಾಗುತ್ತದೆ. ಮೀಸಲಾತಿಯಲ್ಲಿ ಬರುವ ಹಿಂದುಳಿದ ವರ್ಗದವರಿಗೆ ಬಹಳಷ್ಟು ಅನುಕೂಲವಾಗುತ್ತದೆ, ಹೀಗಾಗಿ ನೀವು ಇದನ್ನು ಜಾರಿಗೆ ತರಬೇಕು. 2005–06 ರಲ್ಲಿ ಜಾತಿವಾರು ಜನಗಣತಿ ಮಾಡಬೇಕೆಂದು ದುಡ್ಡು ಇಟ್ಟಿದ್ದೆವು. ಕರ್ನಾಟಕ ಸರ್ಕಾರದಿಂದ ಎರಡು ಕೋಟಿ ಮತ್ತು ಕೇಂದ್ರ ಸರ್ಕಾರದಿಂದ ಇಪ್ಪತ್ತೊಂದು ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ಕಾಗಿ ಕರ್ನಾಟಕ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಲ್ಲಿ ಪೂರ್ಣವಾಗಿ ಇಟ್ಟಿದ್ದೇವು. ಅದು ಇನ್ನು ಆ ಕೆಲಸ ಪ್ರಾರಂಭವಾಗಿಲ್ಲ. ನಾನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಏಕೆ ಜನಗಣತಿ ಕೆಲಸ ಶುರು ಮಾಡಿಲ್ಲವೆಂದು ಕೇಳಿದೆ. ಅದಕ್ಕೆ ಅವರು ಈಗಿರುವ ಇಪ್ಪತ್ಮೂರು ಕೋಟಿ ಸಾಲುವುದಿಲ್ಲ ಇನ್ನು ಹೆಚ್ಚಿಗೆ ದುಡ್ಡು ಬೇಕಾಗುತ್ತದೆ ಆ ದುಡ್ಡನ್ನು ರಾಜ್ಯ ಸರ್ಕಾರದವರು ಬಿಡುಗಡೆ ಮಾಡಿಲ್ಲ ನಾವು ಕೇಳಿದ್ದೇವೆ ಎಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತಿದ್ದೇನೆ, ಆದಕ್ಕೆ ಅಗತ್ಯವಾದ ಹಣವನ್ನು ಕೂಡಲೇ ಕೊಡಬೇಕು. ಈಗಾಗಲೇ ಮೂರು ವರ್ಷಗಳು ಲ್ಯಾಪ್ಸ್ ಆಗಿವೆ. ಇಷ್ಟೊತ್ತಿಗೆ ಜಾತಿವಾರು ಗಣತಿ ಆಗಿಬಿಡಬೇಕಾಗಿತ್ತು. ಏಕೆಂದರೆ, 1931 ರಲ್ಲಿ ಆಗಿರಬೇಕು ನಂತರ 1941 ರಲ್ಲಿ ಇಂಡಿಪೆಂಡೆಸ್ ಗಲಾಟೆ, ವರ್ಲ್ಡ್‌ವಾರ್‌ಗಳೆಲ್ಲಾ ಬಂದು ಅಲ್ಲಿಗೆ ನಿಂತು ಹೋಯಿತು. ನಂತರ ಸ್ವಾತಂತ್ರ್ಯ ಬಂದ ಮೇಲೆ ಜಾತಿವಾರು ಜನಗಣತಿ ಕಾರ್ಯ ಮಾಡಲೇ ಇಲ್ಲ. 1951 ನೇ ಇಸ್ವಿಯಿಂದ ಇವತ್ತಿನವರೆಗೆ ಜಾತಿವಾರು ಜನಗಣತಿ ಆಗಲಿಲ್ಲ. ಇದಾಗದೇ ಇರುವುದರಿಂದ ಎಲ್ಲರಿಗೂ ಸಮಪಾಲು ಸಮಬಾಳು ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಯಾವಾಗಲೂ ಎಲ್ಲರಿಗೂ ಸಮಪಾಲು, ಸಮಬಾಳು ಎಂದು ಹೇಳುತ್ತಿರುತ್ತಾರೆ. ಅವರು ಅನೇಕ ಸಾರಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂದು ಹೇಳೀದ್ದೇ ಹೇಳುತ್ತಾರೆ. ಇವತ್ತು ಇದೆಲ್ಲಾ ಅಗಬೇಕಾದರೆ ಮೊದಲು ಈ ಕೆಲಸ ಆಗಲೇಬೇಕು. ಯಾರ್ಯಾರಿಗೆ

ಸ್ವಾತಂತ್ರ್ಯದ ಫಲ ಎಷ್ಟೆಷ್ಟು ಸಿಕ್ಕಿದೆ? ಯಾರಿಗೆ ಸಿಕ್ಕಿಲ್ಲ? ಯಾರಿಗೆ ಕೊಡಬೇಕು? ಎನ್ನುವುದಾದರೆ ಮೊದಲು ಈ ಕೆಲಸ ಆಗಲೇಬೇಕು. ಅದಕ್ಕಾಗಿ 2005–06 ನೇ ಸಾಲಿನಲ್ಲಿ ನಾವು ಕಾರ್ಯಕ್ರಮವನ್ನು ಬಜೆಟ್ ಭಾಷಣದಲ್ಲಿ ಹೇಳಿ ದುಡ್ಡು ಕೂಡ ಇಟ್ಟಿದ್ದೇವು. ಇದಕ್ಕೆ ಕೇಂದ್ರ ಸರ್ಕಾರದವರು ಕೂಡ ಇಪ್ಪತ್ತೊಂದು ಕೋಟಿ ಕೊಟ್ಟಿದ್ದಾರೆ. ಅದಕ್ಕೆ ಎಷ್ಟು ಬೇಕಾಗುತ್ತದೆ ಅಷ್ಟು ಹಣವನ್ನು ಕೂಡಲೇ ಬಿಡುಗಡೆ ಮಾಡಿ, ಜಾತಿವಾರು ಸಮೀಕ್ಷೆ ಮಾಡುವುದಕ್ಕೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ಕೊಡಬೇಕು. ಜೊತೆಗೆ ಅವರಿಗೆ ಹಣ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಈ ಕಡೆಗೆ ತಾವು ಸ್ವಲ್ಪ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಂತರ ಎಸ್‌ಸಿ ಎಸ್‌ಟಿ ಕಾರ್ಪೋರೇಷನ್ ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಲ 6% ಗೆ ಕೊಡುತ್ತಾರೆ. ಅವರಲ್ಲಿ ಹೆಚ್ಚಿನವರು ಬಡವರು ಇದ್ದಾರೆ.

ಡಾ: ಹಚ್.ಸಿ.ಮಹಾದೇವಪ್ಪ: ಕಳೆದ ಸಾರಿ ಕೇಳಿಕೊಂಡಿದ್ದೆವು ಇನ್ನು ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಬೇರೆಯವರಿಗೆ ಸಾಲ 3% ಕೊಡುತ್ತಾರೆಂದು ಹೇಳಿದ್ದಾರೆ. ಹೀಗಾಗಿ ಕನಿಷ್ಠ ಅವರಿಗೆ ನಾಮಿನಲ್ ಆಗಿ 1% ಮಾಡುವುದು ಒಳ್ಳೆಯದು.

ಡಾ: ಬಿ.ಎಸ್.ಯಡಿಯೂರಪ್ಪ: ನೀವು ಎಲ್ಲಾ ಹಿಂದೆ ಅಧಿಕಾರದಲ್ಲಿದ್ದಾಗ ಎಸ್‌ಸಿ ಎಸ್‌ಟಿ ಯವರಿಗೆ ಸಬ್ಸಿಡಿ ಕೊಡಬೇಕು ಕಡಿಮೆ ಬಡ್ಡಿಯ ದರದಲ್ಲಿ ಸಾಲ ಕೊಡಬೇಕು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಏಕೆ ಅನ್ನಿಸಲಿಲ್ಲ ಮಾನ್ಯ ಸಿದ್ದರಾಮಣ್ಣನವರೆ?

ಶ್ರೀ ಸಿದ್ದರಾಮಯ್ಯ: ನಾನು ಮುಖ್ಯಮಂತ್ರಿಯಾಗಲಿಲ್ಲವಲ್ಲ. ನೀವು ಆಗಿದ್ದೀರಿ ಮಾಡಿ.

ಡಾ: ಬಿ.ಎಸ್. ಯಡಿಯೂರಪ್ಪ: ತಾವು ಪವರ್ ಫುಲ್ ಹಣಕಾಸಿನ ಸಚಿವರಾಗಿ ಕೆಲಸ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ನೀವು ಹಣಕಾಸಿ ಪರಿಸ್ಥಿತಿ ಬಹಳ ಸಮೃದ್ಧಿ ಆಗಿದ್ದಾಗ ಬಂದು ಕುಳಿತುಕೊಂಡಿದ್ದೀರಿ. ಏಕೆ ಮಾಡಲಿಲ್ಲ ನೀವು ಮಾಡಿ. ಆಯಿತು ನಾವು ಮಾಡಲಿಲ್ಲ ಸೋತು ಬಿಟ್ಟಿದ್ದೇವೆ ಜನ ನಮ್ಮನ್ನು ಆಚೆಗೆ ಹಾಕಿ ಬಿಟ್ಟಿದ್ದಾರೆ ನೀವು ಆದರೂ ಮಾಡಿ.

ಡಾ: ಹೆಚ್.ಸಿ. ಮಹಾದೇವಪ್ಪ: ಅವರು ಇದ್ದಾಗ ಎಷ್ಟು ಮಾಡುವುದಕ್ಕೆ ಸಾಧ್ಯವಾಯಿತೋ ಅಷ್ಟು ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಾವೇನು ಮಾಡಲಿಲ್ಲವೆಂದು ಇಟ್ಟುಕೊಳ್ಳಿ.

ಡಾ: ಹೆಚ್.ಸಿ. ಮಹಾದೇವಪ್ಪ: ಕಳೆದ ಸಾರಿನೂ ನಾವು ಕೇಳಿದೆವು. ಮಾನ್ಯ ಮುಖ್ಯಮಂತ್ರಿಗಳೇ ದಯಮಾಡಿ ತಾವು ಅದನ್ನು ಮಾಡಿ

ಡಾ: ಬಿ.ಎಸ್. ಯಡಿಯೂರಪ್ಪ: ಈ ದೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆಗೆದುಕೊಳ್ಳುವ ಸಾಲಕ್ಕೆ 3% ಬಡ್ಡಿಯನ್ನು ಇದುವರೆವಗೂ ಯಾರೂ ಕೊಡಲಿಲ್ಲ. ಈ ದೇಶದಲ್ಲಿ ಯಾರೂ ಮಾಡಲಿಲ್ಲ. ಕೋ-ಆಪರೇಟಿವ್‌ನಲ್ಲಿ 3%, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 3%, ಕೊಡಿಸಲಿಲ್ಲವೆ? ಎಲ್ಲವನ್ನೂ ಮಾಡಿದ್ದೇವೆಂದು ಹೇಳಲಿಲ್ಲ. ಆ ದಿಕ್ಕಿನಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೀದ್ದೇವೆ. ತಾವು ಅದನ್ನು ದಯಮಾಡಿ ಒಪ್ಪಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ: ನಾನು ಇದ್ದಾಗ 11% ನಿಂದ 6% ಗೆ ಮಾಡಿದ್ದು. ಆಗ ರಾಜ್ಯ ಸರ್ಕಾರದ ಮೇಲೆ ಸಬ್ಸಿಡಿ 5% ಕೇಂದ್ರ ಸರ್ಕಾರ 7% ಮಾಡಿದ ಮೇಲೆ ನೀವು4%, 3%, ಮಾಡಿದಿರಿ, burden will be 3%. 5% ಜಾಸ್ತಿಯೇ? 3% ಜಾಸ್ತಿಯೇ?

ಶ್ರೀ ಸಿದ್ದು ಸವದಿ: ನೀವು ಎಸ್‌ಸಿ ಎಸ್‌ಟಿಯವರಿಗೆ ಏಕೆ ಮಾಡಲಿಲ್ಲ? ತಮಗೆ ಅವಕಾಶವಿದ್ದರೂ ಏಕೆ ಮಾಡಲಿಲ್ಲ?

ಡಾ: ಹೆಚ್.ಸಿ ಮಹಾದೇವಪ್ಪ: ನೀವು ಈಗ ಮಾಡಿ.

ಶ್ರೀ ಸಿದ್ದರಾಮಯ್ಯ: ನಾನು ಮಾಡಲಿಲ್ಲ ನಿಜ, ನಿಮ್ಮ ಕೈಯಲ್ಲಿ ಅಧಿಕಾರ ಇದೆಯಲ್ಲಾ ನೀವು ಮಾಡಿ. ನಿಮಗೆ ಖರ್ಚು ಮಾಡುವುದಕ್ಕೆ ಹಣ ಇದೆಯಲ್ಲವೆ ನೀವು ಮಾಡಿ.

ಶ್ರೀ ಚಂದ್ರಶೇಖರ ಚರಂತಿ ಮಠ: ಅವರು ಈಗ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಆಯಿತು ಬಿಡಿ ನಿಮಗೂ ದುಡ್ಡು ಕೊಡಲಿಲ್ಲ ನೀವು ಏಕೆ ಎದ್ದು ನಿಂತು ಮಾತನಾಡುತ್ತೀರಿ? ಬಾಗಲಕೋಟೆಗೆ ದುಡ್ಡು ಕೊಟ್ಟಿದ್ದಾರೆಯೆ?

ಶ್ರೀ ಚಂದ್ರಶೇಖರ ಚರಂತಿ ಮಠ: ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಕೊಟ್ಟಿಲ್ಲ ಬಿಡಿ... ಸುಮ್ಮನೆ ಕುಳಿತುಕೊಳ್ಳಿ. ಈ ಆಯವ್ಯಯ ಏನು ಇದೆ ಇದು ದೂರದೃಷ್ಟಿ ಇಲ್ಲದೇ ಇರುವಂಥ, ಬಡವರ ಪರವಾಗಿ ಇಲ್ಲದೇ ಇರುವಂಥ, ಬೆಳವಣಿಗೆಗೆ ಪೂರಕವಾಗಿಲ್ಲದೇ ಇರುವಂಥ, ಅವಾಸ್ತಿಕವಾಗಿ ಪ್ಲಾನ್ ಸೈಜ್ ನಿಗಧಿಗೊಳಿಸಿ ಪ್ಲಾನ್ ಸೈಜ್ ಕಟ್ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗದೆ ಇವತ್ತು ಆರ್ಥಿಕ ದುಸ್ಥಿತಿಯ ಕಡೆಗೆ ರಾಜ್ಯವನ್ನು ತೆಗೆದುಕೊಂಡು ಹೋಗುವಂಥ ದಾರಿ ಏನು ಇದೆ ಈ ದಾರಿಯನ್ನು ನೀವು ಸರಿಪಡಿಸಿಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ನಾನು ಇವತ್ತು ನೋಡುತ್ತಿದ್ದೇನೆ. Non tax revenue ಏನಾದರೂ ಒಂದು ರೂಪಾಯಿ ಜಾಸ್ತಿಯಾಗಿದೆಯೇ? ಪ್ರತಿ ವರ್ಷ ಕಡಿಮೆ ಇಟ್ಟುಕೊಂಡು ಹೋಗುತ್ತಿದ್ದೀರಿ. Non tax revenue ಬೆಳವಣಿಗೆ ಆಗುತ್ತಿದೆಯೆ? ಇದರ ಕಡೆಗೆ ಗಮನ ಕೊಡುವುದೇ ಇಲ್ಲ. ತೆರಿಗೆ ಬೆಳವಣಿಗೆಯೂ ಇಲ್ಲ, Non tax revenue ಇಲ್ಲ open market ನಲ್ಲಿ ಸಾಲ ಸಿಗುತ್ತದೆ ಎಂದು ಸಾಲ ಮಾಡಿಕೊಂಡು ಬಂದು

ಬಿಡುವುದೆ? ಇದು ಜನ ವಿರೋಧಿ ಬಜೆಟ್. ರಾಜ್ಯಕ್ಕೆ ಮತ್ತು ರಾಜ್ಯದ ಹಿತ ದೃಷ್ಟಿಯಿಂದ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಈ ಬಜೆಟ್ ಅಲ್ಲ. ಬರೀ ಕೃಷಿ ನೀರಾವರಿ ಇವೆಲ್ಲ ಅಭಿವೃದ್ಧಿ ಪಡಿಸುತ್ತಿದ್ದೇವೆ, ರಾಜ್ಯ ಅಭಿವೃದ್ಧಿ ಪಡಿಸುತ್ತಿದ್ದೇವೆ ಎಂದು ಹೇಳುವುದು ಬರೀ ಘೋಷಣೆಗಳಾಗುತ್ತವೆ. ಇದು ಬರೀ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಮಂಡಿಸಿರತಕ್ಕಂಥ ಬಜೆಟ್ ಹೊರತು ದೂರದೃಷ್ಟಿ ಇಲ್ಲವೇ ಇಲ್ಲ. ರಾಜ್ಯದ ಹಿತ ದೃಷ್ಟಿ ಇಲ್ಲ, ದೂರ ದೃಷ್ಟಿ ಇಲ್ಲ. ಆದುದರಿಂದ, ನಾನು ಈ ಆಯವ್ಯಯವನ್ನು ವಿರೋಧಿಸುತ್ತೇನೆ.

ಶ್ರೀ ಆರ್. ಅಶೋಕ್ : ಒಳ್ಳೆಯದನ್ನು ಸ್ವಾಗತಿಸುತ್ತೇನೆಂದು ಹೇಳಿ ನಂತರ ವಿರೋಧಿಸಿ

ಶ್ರೀ ಸಿದ್ದರಾಮಯ್ಯ: ನಿಮಗೂ ಸಬ್ಸಿಡಿ ಕಡಿಮೆ ಮಾಡಿದ್ದಾರೆ. 230 ಕೋಟಿ ಇರುವುದು 90 ಕೋಟಿಗೆ ಕಡಿಮೆ ಮಾಡಿದ್ದಾರೆ. ನೀವು ಅದನ್ನು ನೋಡಿದ್ದೀರಾ? ನೀವು ನಮ್ಮ ತರಹ ಆಗಿಬಿಟ್ಟಿದ್ದೀರಿ. ಬಜೆಟ್‌ನಲ್ಲಿ 230 ಕೋಟಿ ಇದ್ದದ್ದು 90 ಕೋಟಿಗೆ ರೆಡ್ಯೂಸ್ ಆಗಿದೆ. ಅವರಿಗೂ ಸಬ್ಸಿಡಿ ಕಡಿಮೆಯಾಗಿದೆ ಇದನ್ನು ನೋಡಿಕೊಂಡು ತಾನೇ ನಾವು ಮಾತನಾಡಬೇಕು? At least restore ಮಾಡಿ ಎಂದು ನೀವು ಗಲಾಟೆ ಮಾಡಬೇಕು. ಯಾವಾಗ ಕೊಟ್ಟಿದ್ದಾರೋ ಏನು ಕತೆಯೋ? ಈಶ್ವರಪ್ಪನವರು ಪಾಪ ಹಾಗೆ ಸುಮ್ಮನೆ ಕುಳಿತಿದ್ದಾರೆ. 1880 ಕೋಟಿ, ಹೋದ ವರ್ಷಕ್ಕಿಂತ ಕಡಿಮೆ. ನೀವು ಸುಮ್ಮನೆ ಅಷ್ಟು ಪವರ್ ಬಂತು ಇಷ್ಟು ಪವರ್ ಬಂತು ಎಂದು ಹೇಳುತ್ತೀರಿ, ದುಡ್ಡು ಕೊಡದೇ ಹೋದರೆ ಎಲ್ಲಿಂದ ಕೊಡುತ್ತೀರಿ? ಬಹಳ ಕಷ್ಟವಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಮುನಿಯಪ್ಪ(ಶಿಡ್ಲಘಟ್ಟ):- ಮಾನ್ಯ ಉಪಾಧ್ಯಕ್ಷರೆ, 2009-10ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಮಂಡಿಸಿದ್ದಾರೆ. ಈ ಆಯವ್ಯಯದ ಮೇಲೆ ನಮ್ಮ ಹಿರಿಯ ನಾಯಕರಾಗಿರುವಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಮಾತನಡಿದ್ದಾರೆ. ನಾನು ಎಲ್ಲಾ ಇಲಾಖೆಗಳ ಬಗ್ಗೆ ಮಾತನಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತಿನ ದಿವಸ ಇರತಕ್ಕಂಥ ಸಮಸ್ಯೆಗಳಿಗೆ ಅನುಗುಣವಾಗಿ ಮಾತನಾಡುತ್ತೇನೆ. ಇವತ್ತು ರಾಜ್ಯದಲ್ಲಿ ಸಾಮೂಹಿಕವಾಗಿ ಮತ್ತು ವ್ಯಾಪಕವಾಗಿ ವಿದ್ಯುತ್ ಸಮಸ್ಯೆ ಇದೆ. ಇದೊಂದು ಆದ್ಯತಾ ಕ್ಷೇತ್ರವಾಗಿರುವುದರಿಂದ ಈ ಒಂದು ಆದ್ಯತಾ ಕ್ಷೇತ್ರಕ್ಕೆ ಇವತ್ತಿನ ದಿವಸ ಯಾವರೀತಿಯಾಗಿ ಪ್ರಯಾರಿಟಿ ಕೊಟ್ಟಿದ್ದಾರೆಂಬುದರ ಬಗ್ಗೆ ಇವತ್ತಿನದಿವಸ ಚರ್ಚೆಯಾಗಬೇಕಾಗಿದೆ. ಇವತ್ತು ವಿದ್ಯುತ್ ಎನ್ನತಕ್ಕಂಥದ್ದು It is nothing but one of the essential commodity in human life. ಇವತ್ತಿನ ದಿವಸ ವಿದ್ಯುತ್ ಇಲ್ಲದಿದ್ದರೆ ಕುಡಿಯುವ ನೀರು ಸಿಗುವುದಿಲ್ಲ. ಅನೇಕ ಹಳ್ಳಿಗಳಲ್ಲಿ ಇವತ್ತು ಕುಡಿಯುವುದಕ್ಕೆ ನೀರು ಇಲ್ಲ. ಮತ್ತೆ

ಕಾನೂನುಸುವ್ಯಸ್ಥೆಯ ತೊಂದರೆಯೂ ಕೂಡ ಇದರಿಂದ ಆಗುತ್ತಿದೆ. ಈ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಜಲವಿದ್ಯುತ್ ಉತ್ಪಾದನೆಯಲ್ಲಿ ಸುಮಾರು 200 ದಶಲಕ್ಷ ಯುನಿಟ್‌ನಷ್ಟು ಕೊರತೆಯಾಗಿದೆ ಆದ್ದರಿಂದ, ಇದಕ್ಕೆ ಪರ್ಯಾಯವಾಗಿ ರಾಜ್ಯದಲ್ಲಿ ಉಷ್ಣ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆಂದು ಹಾಗೂ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್‌ನ್ನು ಖರೀದಿ ಮಾಡಲಾಗುತ್ತಿದೆ ಎಂದು ಹೇಳೀದ್ದೀರಿ. ಆದರೆ, ಎಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಖರೀದಿಯಾಗುತ್ತಿದೆ ಎಂದು ಮತ್ತು ಹೆಚ್ಚು ವಿದ್ಯುತ್‌ನ್ನು ಎಲ್ಲಿ ಉತ್ಪಾದನೆ ;ಮಾಡಲಾಗುತ್ತಿದೆ ಎಂಬುದು ನನಗೆ ಗೊತ್ತಿಲ್ಲ. ಮತ್ತೆ ಈಗಿರುವ ಕ್ಲಿಷ್ಟ ಪರಿಸ್ಥಿತಿಯನ್ನು ಯಾವರೀತಿಯಾಗಿ ಭೇದಿಸಲಗುತ್ತಿದೆ ಎಂಬುದ ಬಗ್ಗೆ ನಿಖರವಾದ ಉತ್ತರವನ್ನು ಸರ್ಕಾರ ಇವತ್ತು ಕೊಡಬೇಕು. ಬೆಂಗಳೂರಿನ ಸುತ್ತಾ ಮುತ್ತಾ ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು. ಬೆಂಗಳೂರು ಮಹಾನಗರದಲ್ಲಿರುವ ಸುಮಾರು 1 ಕೋಟಿ ಜನರಿಗೆ 100ಕ್ಕೆ 75 ರಷ್ಟು ತರಕಾರಿಯನ್ನು ನಮ್ಮ ಜಿಲ್ಲೆಗಳಿಂದ ರೈತರು ಬಎಳೆದು ಇಲ್ಲಿಗೆ ಕಳುಹಿಸಿಕೊಡುತ್ತಾರೆ. ತರಕಾರಿ ಬೆಳಗಳನ್ನು ಜನವರಿ ತಿಂಗಳಲ್ಲಿ ಹಾಕಿರುತ್ತಾರೆ. ಜನವರಿ ಯಿಂದ ಮೇ 15ನೇ ತಾರೀಖಿನವರೆಗೆ ಬಹಳ ಕ್ಲಿಷ್ಟಕರವಾದ ಅವಧಿಯಾಗಿರುತ್ತದೆ. ವರ್ಷದಲ್ಲಿ ಜನವರಿ ತಿಂಗಳಿಂದ ಏಪ್ರಿಲ್ ತಿಂಗಳ ಕೊನೆಯವರೆಗೆ ಮಾತ್ರ ವಿದ್ಯುತ್ ಬೇಡಿಕೆ ರೈತರಿಗೆ ಇರುತ್ತದೆ. ಆ ನಂತರ ಬರತಕ್ಕಂಥ ಮಳೆಗಾಲದಲ್ಲಿ ಅಲ್ಪಸ್ವಲ್ಪ ವಿದ್ಯುತ್ ಕೊಟ್ಟರೂ ಸಹ ಅ ಅವಧಿಯನ್ನು ಹೇಗೋ ಸರಿದೂಗಿಸುತ್ತಾರೆ. ಆದ್ದರಿಂದ ಈ ನಾಲ್ಕು ತಿಂಗಳು ಮಾತ್ರ ವಿದ್ಯುತ್‌ಗೆ ಹೆಚ್ಚಿನ ಒತ್ತಡ ಇರುತ್ತದೆ. ಈ ಒತ್ತಡದ ಕ್ಲಿಷ್ಟಕರವಾದ ಪರಿಸ್ಥಿತಿಯನ್ನ ನಿಮ್ಮ ವ್ಯವಸ್ಥೆಯಲ್ಲಿ ನೀವು ಯಾವರೀತಿ ರೈತರಿಗೆ ಆದ್ಯತೆ ಕೊಡಬೇಕೆಂಬುದರ ಬಗ್ಗೆ ಏನಾದರೂ ಗಮನ ಹಿರಿಸಿದ್ದೀರಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ. ಇವತ್ತಿನ ದಿವಸ ವಿದ್ಯುತ್ ಸರಿಯಾಗಿ ಕೊಡದೆ ಇರುವುದರಿಂದ ರೈತರ ಗೋಳಾಡುತ್ತಿದ್ದಾರೆ. ಬೆಳಿಗ್ಗೆ 2 ಗಂಟೆ ಮತ್ತು ರಾತ್ರಿ 2 ಗಂಟೆ ಮಾತ್ರ ಕರೆಂಟ್ ಕೊಡುತ್ತಾರೆ. ಈ ಪರಿಸ್ಥಿತಿ ಇವತ್ತಿನ ದಿವಸ ನಮ್ಮಲ್ಲಿದೆ. ಚಿಂತಾಮಣಿ ಪವರ್ ಸ್ಟೇಷನ್ 150 ಮೆ.ವಾ.ವಿದ್ಯುತ್ ಸರಬರಾಜು ಮಾಡಬೇಕಾಗಿತ್ತು. ಆದರೆ ಅಲ್ಲಿಗೆ ಸುಮಾರು 45 ರಿಂದ 48 ಮೆ.ವಾ.ವಿದ್ಯುತ್ ಮಾತ್ರ ಬರುತ್ತಿದೆ. 8 ಗಂಟೆ ಅವಧಿಗೆ ಸರಿದೂಗಿಸಿ ಅಲ್ಲಿ 150 ಮೆ.ವಾ.ನಷ್ಟು ವಿದ್ಯುತ್ ಅನ್ನು ಕೊಡಬೇಕಾಗಿತ್ತು. ಆದರೆ, ದುರಾದೃಷ್ಟವಶಾತ್ ಅಲ್ಲಿಗೆ 45 ರಿಂದ 48 ಮೆ.ವಾ ವಿದ್ಯುತ್ ಸರಬರಾಜಾಗುತ್ತಿದೆ. ಈ ರೀತಿಯಾದರೆ ಅಲ್ಲಿ ಯಾವ ರೀತಿಯಾಗಿ ವಿದ್ಯುತ್ ಡಿಸ್ಟ್ರಿಬ್ಯುಟ್ ಮಾಡುತ್ತಾರೆ? Generation, Transmission and Distribution ಇವತ್ತು ವಿದ್ಯುತ್‌ನಲ್ಲಿ ಬಹಳ ಪ್ರಮುಖವಾದಂಥ ಅಂಶಗಳಾಗಿವೆ. ವಿದ್ಯುತ್ Generation ಎಷ್ಟು ಪ್ರಮುಖವಾಗಿದಯೇ ಅದೇ ರೀತಿಯಾಗಿ Transmission and Dstribution ವಿಷಯದಲ್ಲಿಯೂ ಕೂಡ ತಾವು ಹೆಚ್ಚಿನ ಆಸಕ್ತಿ ವಹಿಸಬೇಕಾಗುತ್ತದೆ. ವಿದ್ಯುತ್

ಕಳವು ಬಗ್ಗೆ ತಾವು ಎಷ್ಟು ಗಮನ ಕೊಟ್ಟದ್ದೀರೆಂದು ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಹೇಳಿದ್ದಾರೆ. 1933 ರಲ್ಲಿ theft ಕೇವಲ 17% ನಷ್ಟು ಇತ್ತು. ಆದರೆ, ಇವತ್ತಿನ ದಿವಸ 33% ನಷ್ಟು theft ಆಗಿದೆ. 17 ಲಕ್ಷ ಐಪಿ ಸೆಟ್‌ಗಳಿವೆ ಎಂದು ತಾವು ಹೇಳುತ್ತಿದ್ದೀರಿ. ಆದರೆ, ಇವತ್ತಿನ ದಿವಸ ಸುಮಾರು ನಾಲ್ಕರಿಂದ 5 ಲಕ್ಷ ಐಪಿ ಸೆಟಗಳು ಡ್ರೈ ಆಗಿವೆ. ಈ ಎಲ್ಲಾ ಬೋರ್‌ವೆಲ್‌ಗಳು ಬತ್ತಿಹೋಗಿವೆ, ಇದ್ಯಾವುದು ಕೆಲಸ ಮಾಡುತ್ತಿಲ್ಲ. ಆದರೆ, ನಿಮ್ಮ ಲೆಕ್ಕದಲ್ಲಿ ರೈತರದ್ದು 17 ಲಕ್ಷ ಪಂಪ್‌ಸೆಟ್‌ಗಳಿವೆ, ಎಂದು ಇದೆಯಷ್ಟೆ. ಸುಮಾರು 4–5 ಲಕ್ಷ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಇದ್ದರು ಕೂಡ ಅವುಗಳು ಇವತ್ತಿನ ದಿವಸ ಕೆಲಸ ನಿರ್ವಹಿಸುತ್ತಿಲ್ಲ. ಬೇಕದರೆ ಇದರ ಬಗ್ಗೆ ನೀವು ತನಿಖೆ ಮಾಡಿಸಿ ಒಂದು ವರಿದ ತರಿಸಿಕೊಳ್ಳಿ. ಇದರ ಜೊತೆಯಲ್ಲಿ ಸುಮಾರು 30 ರಿಂದ 40 ಸಾವಿರ illegal connections ಇರಬಹುದು. ಆದರೆ, ನಮ್ಮಲ್ಲಿರತಕ್ಕಂಥ 17 ಲಕ್ಷ ಪಂಪ್‌ಸೆಟ್‌ಗಳಲ್ಲಿ ಎಲ್ಲವೂ ಕೂಡ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಎಷ್ಟೋ ಕೊಳವೆ ಬಾವಿಯಲ್ಲಿ ನೀರಿಲ್ಲ. ನೀರು ಇತರಕ್ಕಂಥ ಕೊಳವೆ ಬಾವಿಗಳಿಗೆ ಕನಿಷ್ಟ 8 ಗಂಟೆ ವಿದ್ಯುತ್ ಕೊಡದಿದ್ದರೆ ರೈತರ ಗತಿ ಏನಾಗಬೇಕು? ಇವತ್ತಿನ ದಿವಸ ರೈತರು ಗೋಳಾಡುತ್ತಿದ್ದಾರೆ. ಅವರ ಗೋಳಿನ ನೋವು ನಿಮಗೆ ಇನ್ನು ತಟ್ಟಿಲ್ಲವೆಂದು ನಮಗೆ ಯೋಚನೆಯಾಗಿಬಿಟ್ಟಿದೆ. ಇವತ್ತಿನ ದಿವಸ ರೈತರು ಬೆಳೆದಿರುವ ತರಕಾರಿ ಬೆಳೆಗಳು ಸೊರಗಿ ಸೊಪ್ಪಾಗಿ ನೆಲಕ್ಕೆ ಬೀಳುತ್ತಿವೆ. ಈ ವಿಷಯದ ಬಗ್ಗೆ ನಿಮ್ಮ ವಿದ್ಯುತ್ ಇಲಾಖೆಯನ್ನು ಕೇಳಿದರೆ ಮೇಲಿರುವ ಅಧಿಕಾರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಮೇಲಕ್ಕೆ ಬೆಟ್ಟು ತೋರಿಸುತ್ತಾರೆ. Executive Engineer, Chief Engineer, Operation Director ಅಥವಾ ಇತರೇ ಯಾವುದೇ ಅಧಿಕಾರಿಗಳನ್ನು ಕೇಳಿದರೆ ಇದೇ ರೀತಿಯಾಗಿಯೇ ಹೇಳುತ್ತಾರೆ. ಕೆಪಿಟಿಸಿಎಲ್ ಛೇರ್ಮನ್‌ರವರು ಯಾರಿಗೂ ಕೂಡ ಸಿಗುವುದಿಲ್ಲ. ಈ ರೀತಿಯಾಗಿ ವಿದ್ಯತ್ ಸಮಸ್ಯೆಯಾಗಿದೆ. ರೈತರಿಗೆ ಉಚಿತವಗಿ ವಿದ್ಯುತ್ ಕೊಡುತ್ತೇವೆಂದು ಹೇಳಿ ಇವತ್ತಿನ ದಿವಸ ರೈತರಿಗೆ ಮಣ್ಣು ಮುಕ್ಕಿಸುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ನಮ್ಮಲ್ಲಿ ಪವರ್ ಇದೆ, ಪ್ರತಿದಿವಸ 10 ರಿಂದ12 ಗಂಟೆವರೆಗೆ ಕೊಡುತ್ತೇವೆಂದು ಸದಾ ಹೇಳಿಕೊಂಡು ಬರುತ್ತಿದ್ದೀರಿ. ಆದರೆ, ಕೇವಲ ಎರಡು ಗಂಟೆ ಅವಧಿ ವಿದ್ಯುತ್ ಕೊಟ್ಟರೆ ರೈತರ ಗತಿ ಏನಾಗಬಹುದೆಂದು ತಾವು ದಯವಿಟ್ಟು ಯೋಚನೆ ಮಾಡಿ. ಈ ಪರಿಸ್ಥಿತಿ ಬಗ್ಗೆ ತಾವೇನಾದರು ಚಿಂತನೆ ಮಾಡಿದ್ದೀರಾ? ಪವರ್ ಎಷ್ಟು ಬರುತ್ತಿದೆ ಎಂದು ಮತ್ತು Power consumption ಎಲ್ಲೆಲ್ಲಿ ಎಷ್ಟಿದೆ ಎಂಬುದರ ಬಗ್ಗೆ ಹಾಗು ಯಾವ ರೀತ ವಿತರಣೆ ಮಾಡಬೇಕೆಂಬುದರ ಬಗ್ಗೆ ನೀವು ಸರಿಯಾಗಿ ಚಿಂತನೆ ಮಾಡಿದ್ದೀರಾ? ಮತ್ತೆ ಎಲ್ಲೆಲ್ಲಿ ಹೆಚ್ಚು ಬೇಡಿಕೆ ಇದೆ ಎಂಬುದರ ಬಗ್ಗೆ ಮತ್ತು ಯಾವ ಕ್ಷೇತ್ರಕ್ಕೆ ಹೆಚ್ಚಿನ ಟಾಪ್ ಪ್ರಯಾರಿಟಿ ಕೊಡಬೇಕೆಂಬುದರ ಬಗ್ಗೆ ಚಿಂತೆ ಮಾಡಿದೀರಾ? ನಿಮಗೆ ದುಡ್ಡು ಬೇಕಾಗಿರುವುದರಿಂದ ಕೈಗಾರಿಕೆಗಳಿಗೆ ಸರಾಗವಾಗಿ ವಿದ್ಯುತ್ ಅನ್ನು ಕೊಡುತ್ತಿದ್ದೀರಿ.

ಈಗಾಗಲೇ ಸುಮಾರು 3–4 ತಿಂಗಳಿಂದ ಪವರ್ ಕಟ್ ಮಾಡುತ್ತಿದ್ದೀರಿ. ಈ ರೀತಿಯಾದರೆ ರೈತರ ಗತಿ ಏನು? ಮೊದಲು ಈ ರೀತಿಯಾದ ಕ್ರೈಸಸ್ ಬಂದಾಗ ಮಾತ್ರ ಪವರ್ ಕಟ್ ಮಾಡುತ್ತಿದ್ದರು. ಈ ಸಾರಿ ನೀವೇಕೆ ಪವರ್ ಕಟ್ ಅನ್ನು impose ಮಾಡುತ್ತಿಲ್ಲ. ಪವರ್ ಕಟ್ ಮಾಡದೆ ಇದ್ದರೆ ಬೇರೆ ಕಡೆಯಿಮದ ಪವರ್ ಅನ್ನು ತರಿಸಿ ಕೊಡಬೇಕಾಗಿತ್ತು. ಈಕೆಲಸವನ್ನು ತಾವು ಮಾಡುತ್ತಿಲ್ಲ. ಈ ರೀತಿಯಾದರೆ ರೈತರ ಗತಿ ಏನಾಗಬೇಕು? ಇವತ್ತಿನ ದಿವಸ ನೀವುಗಳು ಸುಮ್ಮನೆ ಕುಳಿತುಕೊಂಡಿದ್ದೀರಿ. ಇದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರಾ? ಇವತ್ತಿನ ದಿವಸ 2 ಗಂಟೆ ಮಾತ್ರ ವಿದ್ಯುತ್ ಕೊಡುತ್ತಿದ್ದೀರಿ. ಈ ರೀತಿಯಾದರೆ ರೈತರ ಗತಿ ಏನಾಗಬಹುದು? ಬಹುಶಃ ಅತೀ ಶೀಘ್ರದಲ್ಲಿ ನಿಮ್ಮ ಮೇಲೆ ರೈತರು ದಂಗೆ ಹೇಳುವಂಥ ಪರಿಸ್ಥಿತಿ ಉದ್ಭವಿಸುತ್ತದೆ. ಇದನ್ನು ಎದುರಿಸುವ ಪರಿಸ್ಥಿತಿಗೆ ನೀವೆಲ್ಲಾ ತಯರಾಗಬೇಕಾಗುತ್ತದೆ ಎನ್ನುವ ಮಾತನ್ನು ಅನಿವಾರ್ಯವಾಗಿ ವಿಧಿ ಇಲ್ಲದೆ ರೈತರ ಪರವಾಗಿ ನಾನು ಹೇಳಬೇಕಾಗಿದೆ. ಇಂಥ ಒಂದು ಸ್ಥಿತಿಗೆ ಇವತ್ತಿನ ದಿವಸ ವಿದ್ಯುತ್ ಇಲಾಖೆ ಬಂದಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಉಚಿತ ವಿದ್ಯುತ್ ಅನ್ನು ಕೊಡುತ್ತೇವೆಂದು ಸರ್ಕಾರ ಆಶ್ವಾಸನೆ ಕೊಟ್ಟಿದೆ.

(ಈ ಹಂತದಲ್ಲಿ ಅಧ್ಯಕ್ಷ ಸ್ಥಾನವನ್ನು ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಅಲಂಕರಿಸಿದರು)

ಆದ್ದರಿಂದ, ಮೇ ತಿಂತಳ 15ನೇ ತಾರೀಖಿನವರೆಗೂ 8 ರಿಂದ 10 ಗಂಟೆಯವರೆಗೆ ಉಚಿತ ವಿದ್ಯುತ್ ಅನ್ನು ಸರಾಗವಾಗಿ ಕೊಡುವುದಕ್ಕೆ ಪವರ್ ಮ್ಯಾನೇಜ್‌ಮೆಂಟ್‌ನ್ನು ನೀವು ತಕ್ಷಣ ಮಾಡಬೇಕೆಂಬ ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತೇನೆ. ಮತ್ತೆ ಲೋಡ್ ಶೆಡ್ಡಿಂಗ್ ಮಾಡತಕ್ಕಂಥದರ ಬಗ್ಗೆ ಹೇಳುವುದಾದರೆ, ಇಷ್ಟು ಸಮಯದಿಂದ ಇಷ್ಟು ಸಮಯದವರೆಗೆ ಲೋಡ್‌ಶೆಡ್ಡಿಂಗ್ ಮಾಡಲಾಗುತ್ತದೆಂದು ಒಂದು ಷೆಡ್ಯುಲ್ ಇಟ್ಟುಕೊಂಡಿದ್ದೀರಾ? ನಿಮ್ಮಲ್ಲಿ ಸ್ಪೆಸಿಫಿಕ್ ಷೆಡ್ಯುಲ್ ಇಲ್ಲ. ಅಂದರೆ, ನಿರ್ದಿಷ್ಟವಾದ ಅವಧಿ ಎಂದು ನಿಗದಿ ಮಾಡಿಲ್ಲ. ವಿದ್ಯುತ್ ಸ್ವೇಚ್ಛಾನುಸಾರ ಬರಬಹುದು ಹೋಗಬಹುದು. ಇದರ ಬಗ್ಗೆ ಕೇಳುವುದಕ್ಕೆ ಹೋದರೆ, ಮೇಲ್ಗಡೆ ಕಟ್ ಮಾಡಿದ್ದಾರೆಂದು ಹೇಳುತ್ತಾರೆ. ಇಲ್ಲದಿದ್ದರೆ ಇದು 220 ಕೆವಿ ಸ್ಟೇಷನ್ ಅಥವಾ ಮೇನ್‌ನಲ್ಲಿಯೆ ಕಟ್ ಮಾಡಿದ್ದಾರೆಂದು ಹೇಳುತ್ತಾರೆ. ಈ ರೀತಿಯಾದ ಪರಿಸ್ಥಿತಿಯಾದರೆ ರೈತರ ಗತಿ ಏನೆಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕು. ಇವತ್ತಿನ ದಿವಸ ನಿಮ್ಮ ಪವರ್ ಮ್ಯಾನೇಜ್‌ಮೆಂಟ್‌ನಲ್ಲಿ ಏನಾಗಿದೆ ಎಂದರೆ, It would have been a total faillure, failed to supply power exclusively for the formers. ಈ ಸರ್ಕಾರ ರೈತರಿಗೆ ಅನ್ಯಾಯ ಮಾಡಿದೆ. ಈ ರೀತಿಯಾಗಿ ಹೀನ ಸ್ಥಿತಿಗೆ ಬಂದಿರತಕ್ಕಂಥದ್ದನ್ನು ನಾನು ಎಂದು ನೋಡಿರಲಿಲ್ಲ. ಇವತ್ತಿನ ದಿವಸ ಇಂಥ ಒಂದು ಹೀನ ಸ್ಥಿತಿಗೆ ವಿದ್ಯುತ್ ವಿತರಣಾ ವ್ಯವಸ್ಥೆ ಬಂದಿದೆ. ಮಾನ್ಯ ಇಂಧನ ಸಚಿವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ದುರಾದೃಷ್ಟವಾಶಾತ್ ಅವರಿಗೆ

ಬೇಕಾಗಿರತ್ತಂಥ ವ್ಯವಸ್ಥೆ ಇಲ್ಲ. ವಿದ್ಯುತ್‌ನ್ನು ಖರೀದಿ ಮಾಡಬೇಕೆಂದರೆ ಇವರ ಕೈ ಅನ್ನು ಕಟ್ಟಿ ಹಾಕಿದ್ದಾರೆ. ಈ ರೀತಿಯಾದ ಸ್ಥಿತಿಯಲ್ಲಿ ನಿಮ್ಮ ಕೈ ಕಟ್ಟಿ ಹಾಕಿದರೆ ರೈತರ ಗತಿ ಏನಾಗಬೇಕೆಂಬುದರ ಬಗ್ಗೆ ಒಂದು ಕ್ಷಣ ಯೋಚನೆ ಮಾಡಿ. ನಾವೆಲ್ಲಾ ತರಕಾರಿ ಬೆಳೆಯುತಕ್ಕಂಥ ರೈತರು. ಮೂರು ದಿವಸ ನೀರು ಬೆಳೆಗೆ ಹಾಯಿಸದಿದ್ದರೆ ಬೆಳೆದಿರತಕ್ಕಂಥ ಬೆಳೆಯಲ್ಲಾ ಹಾಳಾಗುತ್ತದೆ. ಆದ್ದರಿಂದ, ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ತಕ್ಷಣ ಸರಿಪಡಿಸದಿದ್ದರೆ ಖಂಡಿತ ಇದಕ್ಕೆ ನೀವು ಬೆಲೆ ತರಬೇಕಾಗುತ್ತದೆಂಬ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಕೆ ಮಾಡುತ್ತೇನೆ. Transmission, Distribution and theft ಸೇರಿ 33.5% ನಷ್ಟು ವಿದ್ಯುತ್ ಸೋರಿಕೆಯಾಗುತ್ತಿದೆ. Transmission and Distribution ಮಾಡುವಾಗ ಆಗತಕ್ಕಂಥ ಲೈನ್ ಲಾಸಸ್ ಅನ್ನು ಮಿನಿಮೈಸ್ ಮಾಡುವುದಕ್ಕೆ ಪ್ರತಿ ವರ್ಷ ಒಂದು ದೊಡ್ಡ ಕಾರ್ಯಕ್ರ ಇತ್ತು. ಆದರೆ, ಈ ಕಾರ್ಯಕ್ರಮ ಏನಾಗಿದೆ ಎಂದು ಮತ್ತು ಯಾರಾದರು ಕೇಳುತ್ತಿದ್ದಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗಂತೂ ಗೊತ್ತಿಲ್ಲ. ಲೈನ್ ಲಾಸಸ್ ಮಿನಿಮೈಸ್ ಮಾಡುವುದಕ್ಕೆ ಒಂದು ಮೆ.ವಾ.ವಿದ್ಯುತ್‌ಗೆ 2 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇತ್ತು. ಈಗ ಅದು ಜಾಸ್ತಿಯಾಗಿ ಸುಮಾರು 5 ಕೋಟಿ ರೂಪಾಯಿ ಆಗಿರಬಹುದು. ಈ ವಿಚಾರ ಬೇರೆ. ಆದರೆ, ಮಿನಿಮೈಸ್ ಮಾಡತಕ್ಕಂಥ ಕಾರ್ಯಕ್ರಮ ಏನಾಗಿದೆ? ಪವರ್ ಜನರೇಷನ್ ಬಗ್ಗೆ ಯಾವ ರೀತಿಯಾದ ಸುಧಾರಣೆಯನ್ನು ತರಲಾಗಿದೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಇಷ್ಟೊಂದು ಕ್ರೈಸಸ್ ಇದ್ದರೂ ಕೂಡ ಇದನ್ನು ಬೇಧಿಸುವುದಕ್ಕೆ ಏನು ಮಾಡಿದ್ದೀರಿ? ಯಾವರೀತಿಯಾಗಿ ಪವರ್ ಕಟ್ ಮಾಡುತ್ತೇವೆಂದು ಮತ್ತು ರೈತರಿಗೆ ಪ್ರತ್ಯೇಕವಾಗಿ ವಿದ್ಯುತ್ ಸರಬರಾಜು ಮಾಡತಕ್ಕಂಥದ್ದರ ಬಗ್ಗೆ ಮತ್ತು ಇಷ್ಟು ವಿದ್ಯುತ್ ಅನ್ನು ನಿಮಗೆ ಪ್ರತಿ ದಿವಸ ಕೊಡುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ನೀವು ಸುಮ್ಮನೆ ಅಲ್ಲಿ ತೊಂದರೆಯಾಗಿದೆ ಇಲ್ಲಿ ತೊಂದರೆಯಾಗಿದೆ ಎಂದರೆ, ರೈತರ ಗತಿ ಏನಾಗುತ್ತದೆಂದು ನೀವು ಯೋಚನೆಯನ್ನು ಮಾಡಿದ್ದೀರಾ? ಇವತ್ತು ಒಂದು ಕೋಟಿ ರೈತ ಜನರಿಗೆ ದಿನನಿತ್ಯ ತರಕಾರಿಯನ್ನು ಕಳುಹಿಸತಕ್ಕಂಥ ಬೆಂಗಳೂರು ಸುತ್ತಮುತ್ತಲಿನ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ತಾಲ್ಲೂಕಿನಲ್ಲಿ ಇವತ್ತು ರೈತರು ಗೋಳಾಡುತ್ತಿದ್ದಾರೆ. ಬೆಳೆ ಇಟ್ಟುಬಿಟ್ಟಿದ್ದಾರೆ, ಆಲೂಗಡ್ಡೆ , ಈರುಳ್ಳಿ, ಮೆಣಸಿನಕಾಯಿ ಹೀಗೆ ಎಲ್ಲಾ ತರಕಾರಿಯನ್ನು ಹಾಕಿದ್ದಾರೆ. ಎಲ್ಲ ತರಕಾರಿ ಇವತ್ತು ಸೊರಗುತ್ತಿದೆ. ವಿಧಿಯಿಲ್ಲದೆ ಅವರು ಹೇಳುವಂತಿಲ್ಲ ಸುಮ್ಮನೆ ಇರುವಂತಿಲ್ಲ. ಆ ರೀತಿಯಾದ ಒಂದು ಕಷ್ಟಕರವಾದ ಪರಿಸ್ಥಿತಿಗೆ ಬಂದಿದ್ದಾರೆ. ಇವತ್ತು ಎರಡು-ಮೂರು ಗಂಟೆ ವಿದ್ಯುತ್‌ನ್ನು ಕೊಡುತ್ತಾರೆಂದರೆ, ಇದಕ್ಕಿಂತ ಶೋಚನೀಯವಾದ ಸರ್ಕಾರವನ್ನು ನಾನು

ಇಲ್ಲಿಯವರೆಗೆ ಖಂಡಿತವಾಗಿ ನೋಡಿಲ್ಲ. ಇಂತಹ ಪರಿಸ್ಥಿತಿಗೆ ಈ ಸರ್ಕಾರ ತಂದಿದೆ. ಇದು ರೈತರ ಸರ್ಕಾರ ಎಂದು ಹೇಳುತ್ತಾರೆ. ಈ ಪರಿಸ್ಥಿತಿ ಬಂದಿರಲೇ ಇಲ್ಲ. ಈ ಪರಿಸ್ಥಿತಿ ಈಗಲೇ ಬರುತ್ತಿರುವುದು. ಇಂತಹ ಕಷ್ಟ ಬಂದಾಗ ಕೂಡಲೇ ರಿಲೀಫ್ ಮಾಡುವಂಥದ್ದದ್ದು ಸರ್ಕಾರದ ಜವಾಬ್ದಾರಿ. ಏಕೆ ಪವರ್ ಕಟ್‌ನ್ನು ಇಂಡಸ್ಟ್ರಿ ನಡೆಸುವವರಿಗೆ ಫಿಕ್ಸ್ ಮಾಡಲಿಲ್ಲ. ವಿದ್ಯುತ್‌ನ್ನು ಮಳೆಗಾಲದಲ್ಲಿ 4 ಗಂಟೆ ಜಾಸ್ತಿ ಕೊಡಿ. ಅವರಿಗೆ ಈಗ 4 ಗಂಟೆ ಪವರ್ ಕಟ್ ಮಾಡಿ. ಅವರಿಗೆ ಏನು ಕಡಿಮೆಯಾಗಿರುವುದು. ರೈತರಿಗೆ ಈ ಎರಡು-ಮೂರು ತಿಂಗಳು ಸಹಾಯ ಮಾಡಿ ಎಂದು ನಾವು ಕೇಳುತ್ತಿರುವುದು. ನಾವು ಮೇ 15ರವರೆಗೆ ಒತ್ತಾಯವನ್ನು ಮಾಡುತ್ತೇವೆ. ಆಮೇಲೆ ಮಳೆ ಬಂದ ನಂತರ ರೈತರ ಬೆಳೆ ಇಡುವುದಕ್ಕೆ ಹೋಗುವುದು. ರೈತರಿಗೆ ಬೆಳೆ ಅವನ ಪ್ರಾಣಕ್ಕಿಂತ ಹೆಚ್ಚು, ಅವನಿಗೆ ಅದೇ ಜೀವನಾಧಾರ, ಅದು ಒಣಗಿ ಹೋದರೆ ಅವನ ಗತಿ ಏನಾಗಬಹುದು.

ಛೇರ್ಮನ್: ಅವರು ರೈತರ ಸಲುವಾಗಿಯೇ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಶ್ರೀ ವಿ.ಮುನಿಯಪ್ಪ: ಛೇರ್ಮನ್‌ರೆ, ನೀವು ರೈತರು, ಅಲ್ಲಿ ನೀವು ಕುಳಿತುಕೊಂಡು ಅವರು ಮಾಡುತ್ತಾರೆಂದರೆ ಹೇಗೆ. ರೈತರಿಗೆ ಏನು ಮಾಡುತ್ತಿದ್ದಾರೆನ್ನುವ result ಬೇಕು. ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರು ಹೇಳಲಿ. ನೋಡಿ ಇವತ್ತು ವಿದ್ಯುತ್ ವಿತರಣಾ ವ್ಯವಸ್ಥೆಯ ಬಗ್ಗೆ, 17 ಲಕ್ಷ ಪಂಪಸೆಟ್‌ಗಳಿಗೆ 10 HP ಯವರೆಗೆ ಉಚಿತ ವಿದ್ಯುತ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ. 1982 ನೇ ಇಸ್ವಿಯಲ್ಲಿ ದಿವಂಗತ ಗುಂಡೂರಾಯರು ರೈತರ ಮಕ್ಕಳು ಅಲ್ಲ. ಅವರು ಉಪಾಧ್ಯಾಯರ ಮಕ್ಕಳು. ಅವರು ಮೀಟರ್‌ಗಳನ್ನು ಕಿತ್ತಿ ಬೀಸಾಕಿದರು. ಇವತ್ತಿನವರೆಗೂ ಯಾವುದೋ ಸರ್ಕಾರಕ್ಕೂ ಮೀಟರ್ ಹಾಕುವುದಕ್ಕೆ ಶಕ್ತಿ ಬರಲಿಲ್ಲ. 1982 ರಲ್ಲಿ ತೆಗೆದುಕೊಂಡ ತೀರ್ಮಾನ ಇವತ್ತಿನವರೆಗೆ ಯಾವುದೇ ಸರ್ಕಾರಕ್ಕೆ ಧೈರ್ಯ ಬರುತ್ತಿಲ್ಲ. ಅವತ್ತೆ ಅವರು 10 HP ವರೆಗೆ announce ಮಾಡಿದ್ದಾರೆ. ಆ 10 HP ಗೆ ನೀವು ಇವತ್ತು ಫ್ರೀ ಕೊಡುತ್ತೇವೆಂದರೆ ಏನು ಅರ್ಥ? ಇವತ್ತು ನೀರಿನ ಆಳ 800 ರಿಂದ 1000 ಅಡಿಯವರೆಗೆ ಹೋಗಿದೆ. 1982 ರಲ್ಲಿ 150 ರಿಂದ 200 ಅಡಿಯವರೆಗೆ ನೀರು ಸಿಗುತ್ತಿತ್ತು. ನೀವು 20 HP ಯವರೆಗೆ ಉಚಿತ ವಿದ್ಯುತ್ ಕೊಟ್ಟರೆ ಆ ರೈತರಿಗೆ ಅನುಕೂಲವಾಗುತ್ತದೆ. ನಿಮ್ಮ ಕಾರ್ಯಕ್ರಮವೇ ನಿಷ್ಪ್ರ ಯೋಜಕ. ಉಚಿತ ಎಂದು ಹೇಳಿದವು ಆ ಪದಕ್ಕೆ ಅರ್ಥವೇ ಇಲ್ಲ. ಎಲ್ಲಾ ಕಡೆ 800 ರಿಂದ 1000 ಅಡಿರವೆಗೆ ನೀರಿನ ಆಳ ಹೋಗಿದೆ, ಕನಿಷ್ಟ ಅಂದರೆ 15 ರಿಂದ 20 HP ಬೇಕಾಗುತ್ತದೆ. ಅದರ ಕಡೆಗೆ ಗಮನವನ್ನು ಹರಿಸಬೇಕು. ಕನಿಷ್ಟ 15 ರಿಂದ 20 HP ಗೆ ಹೆಚ್ಚಿಸಬೇಕು 1982 ರಲ್ಲಿ ಘೋಷಣೆ ಮಾಡಿರುವುದನ್ನು ನೀವು ಇವತ್ತಿಗೂ parameters ಇಟ್ಟುಕೊಂಡು ಆ 10 HP ಗೆ ಅದನ್ನು ನಿಗಧಿ ಮಾಡುವುದಾದರೆ, ಅದರ ಪ್ರತಿಫಲ

ನಮ್ಮ ಯಾವ ರೈತರಿಗೆ ಸಿಗುವುದಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಗೆ ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ನೀವು ಇನ್ನು ಅನೇಕ ಸುಧಾರಣೆಗಳ ಬಗ್ಗೆ ಹೇಳಿದ್ದೀರಿ. 500 ಮೆಗಾವಾಟ್ ಸಾಮರ್ಥ್ಯ ಬಳ್ಳಾರಿಯಲ್ಲಿ ಮಾಡಬೇಕು ಎಂದು, ಅದು ಎಲ್ಲಾ ಹಿಂದಿನ ಸರ್ಕಾರದ ಶ್ರಮ, ನೀವು ಹೋಗಿ ಉದ್ಘಾಟನೆ ಮಾಡಿದ್ದೀರಿ ನಾನು ಒಪ್ಪಿಕೊಳ್ಳುತ್ತೇನೆ. ವಾರಾಹಿಯಲ್ಲಿ 230 ಮೆಗ್ಯಾವಾಟ್ ಜಲ ವಿದ್ಯುತ್‌ನ್ನು ಕಾರ್ಯಾರಂಭಗೊಳಿಸಿ ಇದು ಬಹಳ ಕಾಲದಿಂದ ಹೋರಾಟವನ್ನು ಮಾಡಿ ಈ ಜಲಸ್ಥಾವರ ವಿದ್ಯುತ್‌ನ್ನು ಉತ್ಪಾದನೆ ಮಾಡುವಂಥದ್ದನ್ನು ನೀವು ಉದ್ಘಾಟನೆ ಮಾಡಿದ್ದೀರಿ. ಸಂತೋಷ ಆದರೆ ನಿಮ್ಮ ಎಫರ್ಟ್ ಏನು? ಎಲ್ಲಾ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು ಎಂದು ಹೇಳುತ್ತಿದ್ದೀರಿ ಅದರೆ ಮುಂದೆ ಹೋಗಲೆ ಇಲ್ಲ. ಇದನ್ನು ನಾವು ಸುಧಾರಣೆ ಎಂದು ಹೇಗೆ ಒಪ್ಪಿಕೊಳ್ಳುವುದು. ಒಪ್ಪಂದ ಮಾಡಿಕೊಂಡ ತಕ್ಷಣ ಕೆಲಸ ಕಾರ್ಯಾರಂಭ ಮಾಡಿದ್ದೇವೆನ್ನುವಂಥ ಮಾತನ್ನು ನೀವು ಹೇಳಲೇ ಇಲ್ಲ. ಬರೀ ಒಪ್ಪಂದ ಎಂದರೆ ಅದನ್ನು reforms ಎಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಈ ರಾಜ್ಯದಲ್ಲಿ ಬಹಳ ಮಹತ್ತರವಾತಂಥ ಆದ್ಯತಾ ಕ್ಷೇತ್ರ. ಇವತ್ತು essential commodity ಮನುಷ್ಯನಿಗೆ ಎಷ್ಟು ಅವಶ್ಯಕತೆಯೋ ಅದೇ ತರಹ ಇದೊಂದು item. ವಿದ್ಯುತ್ ಇಲ್ಲವೆಂದರೆ ಇವತ್ತು ಕುಡಿಯುವ ನೀರು ಸಿಕ್ಕುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಆಧ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡತ್ತೇನೆ. ದಯವಿಟ್ಟು ಈ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಆ ವಿತರಣಾ ವ್ಯವಸ್ಥೆಗೆ ಮತ್ತು transmission ಗೆ ಹೆಚ್ಚು ಆಧ್ಯತೆಯನ್ನು ಕೊಡಬೇಕು. ನೀವು portfolio ಕೊಟ್ಟುಬಿಟ್ಟು ಅದಕ್ಕೆ ಹಣವನ್ನು ಕೊಡದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ. ಈಗ ಬಹಳ ಕಷ್ಟ ಇದೆ. ಇದನ್ನು ಸುಧಾರಣೆ ಮಾಡಿಕೊಡಬೇಕು. ಇವತ್ತು ನಿಮ್ಮ power demands ಏನಿದೆ, ಅದಕ್ಕೆ immediate relief ಕೊಡುವುದಕ್ಕೆ ಅವಶ್ಯಕತೆ ಇದೆ. ಅದಕ್ಕೆ ಅನುಗುಣವಾಗಿ ನಿಮಗೆ ಅನುಧಾನವನ್ನು ಕೊಟ್ಟಿಲ್ಲ. ವಿಧಿಯಿಲ್ಲದೆ ನೀವು ಮಾತಿಗೋಸ್ಕರ ಅಥವಾ ಸರ್ಕಾರದ ಹಿತ ಕಾಪಾಡುವುದಕ್ಕೋಸ್ಕರ ನೀವು ಸಮರ್ಥನೆಯನ್ನು ಮಾಡಿಕೊಳ್ಳುವುದನ್ನು ಬಿಟ್ಟರೆ, ವಾಸ್ತವಿಕವಾಗಿ ಅಲ್ಲಿರತಕ್ಕಂಥ ಸಮಸ್ಯೆಗೆ ಅನುಗುಣವಾಗಿ ನೀವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆ ಒಂದು ವಾಸ್ತವಿಕವಾದ ಪರಿಸ್ಥಿತಿ ಇವತ್ತು ಬಿಕ್ಕಟ್ಟಾಗಿದೆ. ದಯವಿಟ್ಟು ಆಕಡೆ ಹೆಚ್ಚಿಗೆ ನೀವು ಗಮನವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ನಿಮಗೆ ಇವತ್ತು 500 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ನಮ್ಮ ಕೇಂದ್ರಮಂತ್ರಿಗಳಾದ ಮಾನ್ಯ ಜೈರಾಮ್ ರಮೇಶ್‌ರವರು 460 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ನಮ್ಮ ಸರ್ಕಾರಕ್ಕೆ ಅವರು ಗ್ರಾಂಟ್‌ನ್ನು ಕೊಟ್ಟಿದ್ದಾರೆ. ತತ್‌ಕ್ಷಣ ಆ ಹಣ ತೆಗೆದುಕೊಂಡು ನೀವು ಆ ಕೆಲಸವನ್ನು

ಮಾಡಬೇಕು. ಅದನ್ನು ಆದ್ಯತಾ ಕ್ಷೇತ್ರಕ್ಕೆ ಉಪಯೋಗಿಸಿಕೊಂಡು, ನಿಜವಾಗಿ ರೈತರ ಮೇಲೆ ಏನಾದರೂ ಕಾಳಜಿ ಇದ್ದರೆ, ಅವರಿಗೆ ಕೊಡಬೇಕಾಗಿರುವುದು ಒಂದೆ ಸಹಾಯ. ನಮ್ಮ ಭಾಗದಲ್ಲಿ ವಿದ್ಯುತ್ ಕೊಡಬೇಕು. ಅವರು ವಿದ್ಯುತ್‌ನ್ನು ಬಿಟ್ಟು ನಿಮ್ಮನ್ನು ಕೊಳವೆಬಾವಿಗೆ ದುಡ್ಡು ಕೊಡಿ ಎಂದು ಕೇಳುವುದಿಲ್ಲ. ಅವರು ಸ್ವಂತ ಎರಡುವರೆಯಿಂದ ಮೂರು ಲಕ್ಷ ರೂ. ಗಳನ್ನು ಖರ್ಚು ಮಾಡಿ ಕೊಳವೆ ಬಾವಿಯನ್ನು ತೋಡಿಸುತ್ತಾರೆ. ಆದರೆ ಬೆಳೆಯನ್ನು ಎರಡು ಎಕರೆಗೆ ಮಾತ್ರ ಇಡುವುದಕ್ಕೆ ಸಾಧ್ಯವಾಗುತ್ತದೆ ನಮಗೆ 5000 ಗ್ಯಾಲನ್ ನೀರು ಇರುವುದಿಲ್ಲ ಬರೀ 2500 ಗ್ಯಾಲನ್ ನೀರು ಇರತಕ್ಕಂಥದ್ದು. ಅದಕ್ಕೂ ಕೂಡ ನಿಮ್ಮ ವಿದ್ಯುತ್ ಸಪ್ಲೈ ಇಲ್ಲವೆನ್ನುವುದಾದರೆ, ಬಹುಶಃ ಅವರ ಪಂಪ್‌ಸೆಟ್ ಏನಾಗುತ್ತದೆನ್ನುವುದು ನನಗಂತೂ ಗೊತ್ತಿಲ್ಲ. ಅದನ್ನೇ ನಂಬಿಕೊಂಡಿದ್ದು ಅವರಿಗೆ ಬೇರೆ ಯಾವ ಸೋರ್ಸ್ ಇಲ್ಲ. ಈ ತರಹ ಒಂದು ಪರಿಸ್ಥಿತಿಯನ್ನು ನೀವು ನಿವಾರಿಸುವಂಥ ಕೆಲಸವನ್ನು ತತ್‌ಕ್ಷಣ ಮಾಡಬೇಕು. ಇಲ್ಲದಿದ್ದರೆ ಈ ಬೇಸಿಗೆಯಲ್ಲಿ ರೈತರು ನಿಮಗೆ ಶಾಪ ಹಾಕದೇ ಖಂಡಿತವಾಗಿ ಬಿಡುವುದಿಲ್ಲ. ಅದಕ್ಕೆ ಯಾವ ರೀತಿಯಾಗಿ ತುರ್ತುಕ್ರಮ ತೆಗೆದುಕೊಳ್ಳುತ್ತೀರಿ ತಕ್ಷಣ ಕೈಗೊಳ್ಳಬೇಕು. ತಕ್ಷಣ ಅದಕ್ಕೆ relief ಕೊಟ್ಟು ಯಾವ ಕ್ಷೇತ್ರಕ್ಕೆ ವಿದ್ಯುತ್‌ನ್ನು ಕಟ್ ಮಾಡುತ್ತೀರಿ ಮಾಡಿ. ಹಿಂದೆ ಕೆಲವು ಕ್ಷೇತ್ರಕ್ಕೆ ತೊಂದರೆ ಬಂದಾಗ ಪವರ್ ಕಟ್ ಮಾಡುತ್ತಿದ್ದರು. ಆ ಪವರ್‌ನ್ನು ಕಟ್ ಮಾಡಿ ಇವತ್ತು ರೈತರಿಗೆ ಕೊಡಿ. ರೈತರು ಅಲ್ಲಿ ಸಾಯುತ್ತಿದ್ದರೆ, ಗೋಳಾಡುತ್ತಿದ್ದಾರೆ. ನೀವು ದುಡ್ಡು ಮಾಡುವ ಕಮರ್ಷಿಯಲ್ ಒಂದನ್ನು ಯೋಚನೆ ಮಾಡಬಾರದು. ಬೇರೆ ಕ್ಷೇತ್ರವನ್ನು ಯೋಚನೆ ಮಾಡಬೇಕು.

(ಗೊಂದಲ)

ಆ ರೈತರ ನೋವು ನೋಡಿದರೆ ನಿಮಗೆ ಗೊತ್ತಾಗುತ್ತದೆ. ನೀವು ನಿಧಾನವಾಗಿ ಮಾತನಾಡಿ ಎಂದು ಹೇಳುವುದು ಆಗ ಗೊತ್ತಾಗುತ್ತದೆ. ರೈತರಾದರೆ ನಿಮಗೆ ಆ ನೋವು ಗೊತ್ತಾಗುತ್ತದೆ. ವಿದ್ಯುತ್ ಕ್ಷೇತ್ರಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಕೇಳುತ್ತಾ ಮಾನ್ಯ ಇಂದನ ಮಂತ್ರಿಗಳಾದ ಮಾನ್ಯ ಈಶ್ವರಪ್ಪನವರು ತಕ್ಷಣ ಗಮನ ಕೊಡಬೇಕು. ನೀವು ಯಾವ ರೀತಿಯಾಗಿ emergency meeting ಕರೆಯುತ್ತೀರೋ ಈ ವಿದ್ಯುತ್ ಸಮಸ್ಯೆಯನ್ನು ಹೇಗೆ manage ಮಾಡುತ್ತೀರೋ ಗೊತ್ತಿಲ್ಲ. ನಿಮಗೆ ಯಾವ ರೈತರೂ ಕೂಡ 24 ಗಂಟೆ ಕೊಡಿ ಎಂದು ಕೇಳುತ್ತಿಲ್ಲ. ಅವರು ಕೇಳುವುದು ಕನಿಷ್ಟ 8 ರಿಂದ 10 ಗಂಟೆ ಮಾತ್ರ. ಅದಕ್ಕೆ ಅವರು ಸೀಮಿತವಾಗಿ ಬೆಳೆಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕೂ ಕೂಡ ನೀವು ಸರಿಯಾಗಿ ವಿದ್ಯುತ್ ಕೊಡದಿದ್ದರೆ ಅವರ ಗತಿ ಏನಾಗಬೇಕು. ರಾಜ್ಯದಲ್ಲಿ ವಿದ್ಯುತ್ ಕೊರತೆಯಿರುವುದು ಎಲ್ಲರಿಗೂ ಗೊತ್ತಿದೆ. ಬರೀ ಎರಡು ಗಂಟೆ ಕೊಟ್ಟರೆ, ರೈತರ ಗತಿ ಏನಾಗಬೇಕು? ಇದನ್ನು ಸ್ವಲ್ಪ ತಾವು ಸೀರಿಯಸ್ಸಾಗಿ ತೆಗೆದುಕೊಳ್ಳದೆ ಹೋದರೆ ಆ ದೇವರೇ ಅಥವಾ ಯಾರೇ ಬಂದರೂ ನಿಮ್ಮನ್ನ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನೀವು ಬೆಲೆ ತೆರಲೇ

ಬೇಕಾಗುತ್ತದೆ ಎನ್ನುವ ಮಾತನ್ನು ನಾನು ಅನಿವಾರ್ಯವಾಗಿ ನಮ್ಮ ಅಧ್ಯಕ್ಷರ ಮುಖಾಂತರ ನಿಮಗೆ ಮನವರಿಕೆ ಮಾಡಿಕೊಡತ್ತಾ ಇದಕ್ಕೆ ತಕ್ಷಣ ಕ್ರಮಕೈಗೊಳ್ಳುಬೇಕು ಎನ್ನತಕ್ಕಂಥ ಮಾತು ಮತ್ತು ಸುಧಾರಣೆ ಕ್ರಮಗಳನ್ನು ಏನೇನು ಹೇಳಿದ್ದೀರಿ ನೀವು ಕೊಟ್ಟಿರತಕ್ಕಂಥ ಹಣ, ಅದರ ಬಗ್ಗೆ ಸರಿಯಾದಂಥ ರೀತಿಯಲ್ಲಿ ಸ್ವಲ್ಲಪ ತುರ್ತಾಗಿ ನಿಮ್ಮ Engineering Wing ನ್ನು ಮಾಡತಕ್ಕಂಥ ಕೆಲಸವನ್ನು ಖಂಡಿತ ಮಾಡಬೇಕು ಎಂದು ನಾನು ಹೇಳೂತ್ತೇನೇ, Alert ಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. 33% ಅಂದರೆ ಅವೆಲ್ಲಾ ಇಲ್ಲ. ಅದು ಬಹಳ ಜಾಸ್ತಿ ಅದನ್ನು ಹೇಗೆ minimize ಮಾಡಬೇಕು ಮತ್ತು ಅದಕ್ಕೆ reform ತರತಕ್ಕಂಥ ಕೆಲಸ ನೀವು ಮಾಡಲೇಬೇಕು. ಅಲ್ಲದೇ ಇದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದು parallel ಆಗಿ ಆಗಬೇಕು. ಈ reforms ನಲ್ಲಿ ಒಂದು ಕಡೆ ಉತ್ಪಾದನೆ ಜಾಸ್ತಿ ಮಾಡಬೇಕು, transmission, distribution ನಲ್ಲಿ ಆಗತಕ್ಕಂಥ ನಷ್ಟವನ್ನು minimize ಮಾಡತಕ್ಕಂಥದ್ದು. parallel ಆಗಿ ಮಾಡಕೊಂಡು ಹೋದರೇನೇ ಅದು ಉಳಿಯೋದು. ಇಲ್ಲದಿದ್ದರೆ ಅದು ಖಂಡಿತಾ ಉಳಿಯುವುದಿಲ್ಲ. ಒಂದು ಕ್ಷೇತ್ರಕ್ಕೆ ನಾವು ಆದ್ಯತೆ ಕೊಟ್ಟರೆ ಇನ್ನೊಂದು ಕ್ಷೇತ್ರವನ್ನು negleet ಮಾಡಿದರೆ ಅದರ ಪರಿಣಾಮ ಅಲ್ಲೇ ತೊಂದರೆಯಾಗುತ್ತದೆ. ಅದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಅನ್ನತಕ್ಕಂಥ ಮಾತನ್ನು ಇವತ್ತು ವಿದ್ಯುತ್ ವಿಷಯದಲ್ಲಿ ಹೇಳಿ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೇರೆ ಬೇರೆ ವಿಚಾರಗಳನ್ನು ತೆಗೆದುಕೊಳ್ಳುತ್ತೇನೆ. ಇವತ್ತು ನೀರಾವರಿ. ರೈತರಿಗೆ ಇನ್ನೊಂದು ಪ್ರಮುಖವಾಗಿ ಬೇಕಾಗಿರುವಂಥದ್ದು ನೀರಾವರಿ.

ಛೇರ್ಮನ್: ಸಾಕು. ವಿದ್ಯುತ್ನಲ್ಲಿಯೇ ಬೇಕಾದಷ್ಟು ಹೇಳಿದ್ದೀರಿ.

ಶ್ರೀ ವಿ. ಮುನಿಯಪ್ಪ: ಇಲ್ಲಾ ಸ್ವಾಮಿ, ನೀರಾವರಿಯಲ್ಲಿ 1200 ಅಡಿಯಲ್ಲಿ ಇರುವುದು ನಾವು. ಇವತ್ತು Nitrate, fluoride ನಿಂದ ಕೂಡಿರುವಂಥ ನೀರನ್ನು ಕುಡಿಯುತ್ತಿದ್ದೇವೆ. ಆದುದರಿಂದ ನನಗೆ ಸ್ವಲ್ಪ ಸಮಯ ಕೊಡಿ.

ತಾವು ನೀರನ್ನು ಒದಗಿಸಿಕೊಟ್ಟರೆ ಅವನು ಜೀವನವನ್ನು ನಡೆಸಿಕೊಂಡು ಹೋಗುತ್ತಾನೆ. ಇವತ್ತು ನಾನು ಸಣ್ಣ ಮಾಹಿತಿಯನ್ನು ತಮಗೆ ಕೊಡುತ್ತೇನೆ. ಇವತ್ತು ಈ ರಾಜ್ಯದಲ್ಲಿ 2002-03 ರಲ್ಲಿ ಒಂದು ಸಮೀಕ್ಷೇಯನ್ನು ನೀರಾವರಿಯ ಬಗ್ಗೆ ಮಾಡಿದ್ದಾರೆ. ಈಗ ರಾಜ್ಯದಲ್ಲಿ ಕೃಷ್ಣ, ಕಾವೇರಿ, ತುಂಗಾ, ಭಾದ್ರಾ, ಪಶ್ಚಿಮದ ಕಡೆಗೆ ಹರಿಯುವಂತಹ ಎಲ್ಲಾ ನದಿಗಳ ಮೂಲದಿಂದ ನದಿಯಲ್ಲಿ ಜಲಸಂಪನ್ಮೂಲ ಎಷ್ಟು ಇದೆ ಎಂದರೆ 3500 ಟಿಎಂಸಿ ನೀರು ಇದೆ. ಆದರ ದುರಾದೃಷ್ಟವಾಶಾತ್ ನಾವು ಇಲ್ಲಿಯವರೆಗೆ ಪ್ರಯತ್ನವನ್ನು ಮಾಡಿರುವುದು ಕೇವಲ 1015 ಟಿಎಂಸಿಗೆ ನಾವು ಕಾರ್ಯಕ್ರಮವನ್ನು ಮಾಡಿದ್ದೇವೆ. ಅದರಲ್ಲಿ ನಾವು 900 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳುತ್ತಿದ್ದೇವೆ. ಈನ್ನು ನಾವು ಗುರಿಯನ್ನು ಇಟ್ಟುಕೊಂಡಿರುವುದು 60-70

ಟಿಎಂಸಿ ನೀರನ್ನು ಬಳಸಿಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇನ್ನು 2500 ಟಿಎಂಸಿ ನೀರು ನಮ್ಮ ರಾಜ್ಯದಲ್ಲಿ ಲಭ್ಯವಿದೆ. ಇಂತಹ ನೀರನ್ನು ಉಪಯೋಗ ಮಾಡುವಂತಹ programmನ್ನು ನಾವು Top priorityಯಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಒಂದು ಕಡೆ 7 ಜಿಲ್ಲೆಗಳಲ್ಲಿ ಕುಡಿಯುವ ನೀರು ಇಲ್ಲ. ಪ್ರತಿವರ್ಷ 50–100 ಅಡಿ declineಆಗುತ್ತಿದೆ. ಅದು depthಗೆ ಹೋಗುತ್ತಿದೆ. 100 ಅಡಿ ಆಳಕ್ಕೆ ಹೋಗುತ್ತಿದೆ, ನಾವು ಕೊಳವೆ ಬಾವಿಗಳನ್ನು ಹಾಕಿ ಫೇಲ್ ಆಗುತ್ತಿದ್ದೇವೆ. ಇವತ್ತು ಕುಡಿಯುವ ನೀರು ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಡಾ: ಪರಮಶಿವಯ್ಯನವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟರು. ಅವರು 10 ವರ್ಷಗಳ ಕಾಲ ಸತತವಾಗಿ ಪ್ರಯತ್ನವನ್ನು ಮಾಡಿದ್ದಾರೆ. ಅವರು ಕಾಲು ನಡಿಗೆಯಲ್ಲಿ ಅನೇಕ ಕಿಲೋಮೀಟರ್‌ಗಳಷ್ಟು ನಡೆದುಕೊಂಡು ಹೋಗಿದ್ದಾರೆ. ಅವರು ನಡೆದುಕೊಂಡು ಹೋಗಿ ಸಮೀಕ್ಷೆಯನ್ನು ಮಾಡಿ ಒಂದು Topo Sheetನ್ನು ರೆಡಿ ಮಾಡಿದ್ದಾರೆ. ಅದರಲ್ಲಿ ಗುರುತ್ವಾಕರ್ಷಣೆ ಆಧಾರದ ಮೇಲೆ ನೀರನ್ನು ಪಶ್ಚಿಮದಿಂದ ಪೂರ್ವಕ್ಕೆ ಹರಿಸತಕ್ಕಂತಹ technicalಆಗಿ ಅವಕಾಶವಿದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಅವರು ಇನ್ನೊಂದು challengeನ್ನು ಸಹ ಮಾಡಿದ್ದಾರೆ. ಈ ರಾಜ್ಯದಲ್ಲಿ ಸುಮಾರು 19 ಜನ retiredಆಗಿರುವ Chief Engineers ಇದ್ದಾರೆ ಅವರೆಲ್ಲರೂ ಸಹ ಬದುಕಿದ್ದಾರೆ. ಅವರ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯ ಮುಂದೆ ಆ ವರದಿಯನ್ನು ಇಟ್ಟು ಚರ್ಚೆ ಮಾಡೋಣ. ಆ ವರದಿಯ ಆಗುಹೋಗುಗಳ ಬಗ್ಗೆ Pros and Consಬಗ್ಗೆ discuss ಮಾಡೋಣ. Technical ಆಗಿ ಅಲ್ಲಿ ನೀರು ಬರುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ಚರ್ಚೆ ಮಾಡೋಣ. ದಯವಿಟ್ಟು 19 ಜನ ನಿವೃತ್ತ ಇಂಜಿನಿಯರುಗಳು ಯಾರು ಇದ್ದಾರೆ. ಅವರ ಒಂದು ಕಮಿಟಿಯನ್ನು ಮಾಡಿ ಎಂದು ಅವರು ಸವಾಲನ್ನು ಹಾಕಿದ್ದಾರೆ. ಅದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಒಂದು ದುರಾದೃಷ್ಟ ಕರ ಸಂಗತಿ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಈ ವರದಿಯ ಸಮೀಕ್ಷೆಯನ್ನು Topo sheetಮಾಡಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ISROಸಂಸ್ಥೆಯವರು satelliteಸರ್ವೆ ಮಾಡಿ ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಅವತ್ತು ಅವರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಸನ್ಮಾನ್ಯ ಧರ್ಮಸಿಂಗ್‌ರವರು ಮಯಖ್ಯಮಂತ್ರಿಗಳಾಗಿದ್ದಾಗ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 15 ಕೋಟಿ ರೂಪಾಯಿಗಳನ್ನು ಕೊಟ್ಟರೆ ವರದಿಯನ್ನು ಕೊಡುತ್ತೇವೆಂದು ISROಸಂಸ್ಥೆಯವರು ಸರ್ಕಾರಕ್ಕೆ ಹೇಳಿದ್ದಾರೆ. ಇಲ್ಲಿ ಮಠಮಂದಿರಗಳಿಗೆ ಕೇಳಿದವರಿಗೆಲ್ಲಾ ದುಡ್ಡು ಕೊಡುತ್ತಿದ್ದೀರಿ. ISROಂಸಂಸ್ಥೆಯವರಿಗೆ 15 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಈ

ಸರ್ಕಾರಕ್ಕೆ ಬರ ಬಂದಿದೆಯೇ ಎಂದು ನಾನು ಸರ್ಕಾರವನ್ನು ಕೇಳಬೇಕಾಗುತ್ತದೆ. ಡಾ:ಪರಮಶಿವಯ್ಯನವರು 10 ವರ್ಷಗಳ ಕಾಲ ಸತತವಾಗಿ ಕಾಲುನಡಿಗೆಯಲ್ಲಿ ಅನೇಕ ಕಡೆ ಓಡಾಡಿ ಯಾವುದೇ ಸರ್ಕಾರಕ್ಕೆ ನೆರವು ಇಲ್ಲದೆ ವರದಿಯನ್ನು ಕೊಟ್ಟು topo sheetರಮಾಡಿ ಎಲ್ಲೆಲ್ಲಿ gravityಂಬರುತ್ತದೆ ಎಲ್ಲಿ Lift Irrigationಅನ್ನು ಮಾಡಬೇಕೆನ್ನುವಂತಹ ಎಲ್ಲಾ ಅಂಕಿಅಂಶಗಳನ್ನು ಕೊಟ್ಟು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಸ್ತಾಪದ ಬಗ್ಗೆ ಇವತ್ತು advance technologyರಇರತಕ್ಕಂತಹ ಸಂದರ್ಭದಲ್ಲಿ scientific ಆಗಿ ಒಂದು satellite surveyರಮಾಡಿ ಅದನ್ನು ಉಪಯೋಗ ಮಾಡುವಂತಹದ್ದಕ್ಕೆ ಕೇವಲ 15 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದರೆ ಇವತ್ತಿನವರೆಗೂ ಕೂಡ ಸರ್ಕಾರದವರು ಆ ಕಡೆಗೆ ಗಮನವನ್ನು ಕೊಟ್ಟಿರುವುದಿಲ್ಲ. ಇದು ಎಂತಹ ದುರ್ಗತಿಯೆಂದು ಹೇಳೋಣ. ಕೇವಲ 15 ಕೋಟಿ ರೂಪಾಯಿಗಳನ್ನು ಕೊಟ್ಟು ಆ ವರದಿಯನ್ನು ತರಿಸಿಕೊಂಡು ಆ ವರದಿಯ ಆಧಾರದ ಮೇಲೆ ಯಾವ ರೀತಿಯಾಗಿ ಮಾಡಬಹುದು ಎಂದು ಇವತ್ತಲ್ಲ ಇನ್ನು 10 ವರ್ಷಗಳು ಆಗಲಿ. ಅದು ಮುಂದಿನ, ಪೀಳಿಗೆಗಾದರೂ ಬೇಕಾಗುತ್ತದೆ ಇವತ್ತು 7 ಜಿಲ್ಲೆಗಳಲ್ಲಿ ಕುಡಿಯುವ ನೀರಿಲ್ಲದೆ ಜನ ಕಷ್ಟ ಪಡುತ್ತಿದ್ದಾರೆ. ಇನ್ನೊಂದು 5 ವರ್ಷ ಇದೇ ರೀತಿಯಾಗಿ ಮಳೆಯು ಬಾರದೆ ಹೋದರೆ, ಪರಿಣಾಮ ಏನಾಗಬಹುದು ಎಂದು ಯೋಚಿಸಿ. ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳಲ್ಲಿ 700 ಸೆಂ.ಮೀ.ಮಾತ್ರ ಮಳೆ ಬೀಳುತ್ತಿರುವುದು. ಕಳೆದ 15 ವರ್ಷಗಳಿಂದ 450–500 ಸೆಂ.ಮೀ.ಗೆ ಬಂದು ನಿಂತಿದೆ. ಇಲ್ಲಿ ನಮ್ಮ Minor Irrigationಸಚಿವರು ಇದ್ದಾರೆ. ಅವರಿಗೆ ಕೇಳಿ ಮಾತ್ರ ನಮ್ಮ ಜಿಲ್ಲೆಯಲ್ಲಿ 4620 ಕೆರೆಗಳು ಇವೆ. ಅವೇ ನಮ್ಮ ಜೀವನಾಧಾರಗಳಾಗಿವೆ. ಅದರೆ ದುರಾದೃಷ್ಟ 15 ವರ್ಷಗಳಿಂದ ಆ ಕೆರೆಗಳಿಗೆ ನೀರು ಬರಲಿಲ್ಲ. ಇವತ್ತು ಅದರ ದುಷ್ಪರಿಣಾಮ 1000 ಅಡಿಗೆ ನಾವು ಹೋಗಿದ್ದೇವೆ. ಅಲ್ಲಿ ಏನಾಗಿದೆ ಎಂದರೆ ಎಲ್ಲಾ ನೀರು fluoride ಮತ್ತು nitrateನಿಂದ ಕೂಡಿದೆ. ಈ ನೀರನ್ನು ನಾವು ಕುಡಿಯುತ್ತಿದ್ದೇವೆ. ಇದರಿಂದ ದಂತಕ್ಷಯ ರೋಗ ಬರುತ್ತಿದೆ. ಅಲ್ಲಿ ಎಲ್ಲರೂ ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಇವತ್ತು ಅಲ್ಲಿ ದನಕರುಗಳು ಸಹ ಆ ನೀರನ್ನು ಕುಡಿಯುವುದರಿಂದ ರೋಗಕ್ಕೆ ತುತ್ತಾಗುವಂತಹ ಪರಿಸ್ಥಿತಿಗೆ ಬಂದು ಮುಟ್ಟಿದೆ. ಈ ಪರಿಸ್ಥಿತಿಯಲ್ಲಿ ಇವತ್ತು ಏನು ಅಭಿವೃದ್ಧಿ, ಅಭಿವೃದ್ಧಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಅಭಿವೃದ್ಧಿ ಎಂದರೆ ಇದೆ ಏನು? ಇವತ್ತು ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಬ್ಬ ಮನುಷ್ಯ ಕಟ್ಟಕಡೆ ಹಳ್ಳಿಯಲ್ಲಿರುವಂತಹವನು ಸಹ ತೆರಿಗೆಯುನ್ನು ಕೊಡುತ್ತಾನೆ. ಅವನು ಹಾಕುವ ಬಟ್ಟೆ ಮೇಲೆ ತೆರಿಗೆ ಹಾಕುತ್ತಾ ಬೀಡಿ ಮೇಲೆ ಅವನು ಮಾಡುವ ಊಟದ ಮೇಲೆ ಎಲ್ಲದರ ಮೇಲೆ ತೆರಿಗೆ ಇದೆ. ಜನಸಾಮಾನ್ಯರು ಕೊಡುವಂತಹ ತೆರಿಗೆಯನ್ನು ಎಲ್ಲೋ ಕೆಲವು ಕ್ಷೇತ್ರಗಳಿಗೆ ಉಪಯೋಗ ಮಾಡಿ ಇವತ್ತು 7 ಜಿಲ್ಲೆಗಳು ಬಯಲುಸೀಮೆ ಪ್ರದೇಶದಲ್ಲಿ ಬರುತ್ತವೆ. ಈ ಬಯಲು ಸೀಮೆ ಪ್ರದೇಶಗಳಿಗೆ ಈ ಸಾರಿಯ ಬಜೆಟಿನಲ್ಲಿ ಕನಿಷ್ಟ ಏನು

ಕಾರ್ಯಕ್ರಮವನ್ನು ಕೊಟ್ಟಿದ್ದೀರಿ ಅದರ ಬಗ್ಗೆ ತಾವು ಹೇಳಬೇಕು. ಇವತ್ತು ಮಳೆ ಬರತಕ್ಕಂತಹ Rain water harvesting programmeಗೆ ಏನಾದರೂ ಕಾರ್ಯಕ್ರಮವನ್ನು ಮಾಡಿದ್ದೀರಾ? "ಮಳೆ ನೀರು ಕೊಯ್ಲು" ಎಂದು ನೀವು ಸುಮ್ಮನೆ ಬಜೆಟ್‌ನಲ್ಲಿ ಹೇಳಿದ್ದೀರಿ. ಅದಕ್ಕೆ ಹಣವನ್ನು ಎಲ್ಲಿ ಕೊಟ್ಟಿದ್ದೀರಿ. ಬಯಲುಸೀಮೆ ಪ್ರದೇಶಗಳಿಗೆ ತಾವು ಏನು ಮಾಡಿದ್ದೀರಿ ಎಂಬ ಬಗ್ಗೆ ತಾವು ನಿರ್ದಿಷ್ಟವಾಗಿ ಸರ್ಕಾರ ಹೇಳಬೇಕು. ಪ್ರತಿ ವರ್ಷ ಅಲ್ಲಿ ಕುಡಿಯುವ ನೀರಿಗಾಗಿ ಜನರು ಸಾಯುತ್ತಿದ್ದಾರೆ. ಪ್ರತಿವರ್ಷವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಒಂದೊಂದು ಜಿಲ್ಲಾ ಪಂಚಾಯಿತಿಗೆ 50 ರಿಂದ 100 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರಲ್ಲಾ ಅದು ಪ್ರತಿವರ್ಷವು ಹೆಚ್ಚಾಗುತ್ತಿದೆ. ಒಂದೊಂದು ಊರಿನಲ್ಲಿ 10 ರಿಂದ 20 ಬೋರ್‌ವೆಲ್‌ಗಳನ್ನು ಹಾಕಿರುವಂತಹ ಉದಾಹರಣೆಗಳು ಇವೆ. permanent sourceಅಲ್ಲಾ, ಈ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇಂತಹ ದುಸ್ಥಿತಿಯಲ್ಲಿದ್ದರೂ ಕೂಡ ಸನ್ಮಾನ್ಯ ನೀರಾವರಿ ಮಂತ್ರಿಗಳು ಈಗ ಸದನಕ್ಕೆ ಬಂದಿದ್ದಾರೆ. ಇವತ್ತು ರಾಜ್ಯದಲ್ಲಿ 3500 ಟಿಎಂಸಿ ನೀರು ಲಭ್ಯವಿದೆ ಎಂದು ಹೇಳಿ 2002–03ನೇ ಸಾಲಿನಲ್ಲಿ ಸಮೀಕ್ಷೆಯನ್ನು ಮಾಡಿರುವಂತಹ ವಿಚಾರ ತಮಗೆ ಗೊತ್ತಿರುತ್ತದೆಂದು ನಾನು ಭಾವಿಸಿದ್ದೇನೆ. ಅದರಲ್ಲಿ 1071 ಟಿಎಂಸಿಗೆ ಮಾತ್ರ ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇನ್ನು 2500 ಟಿಎಂಸಿ ನೀರು ಲಭ್ಯವಿದ್ದರೂ ಕೂಡ ಅದಕ್ಕೆ ಕಾರ್ಯಕ್ರಮಗಳೆ ಇಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಆ ನೀರೆಲ್ಲ ವ್ಯರ್ಥವಾಗಿ ಗೋವಾ ಹಾಗೂ ಮಂಗಳೂರು ಮುಖಾಂತರ ಬೇರೆ ಬೇರೆ ರೀತಿಯಲ್ಲಿ ಸಮುದ್ರಕ್ಕೆ ಸೇರುತ್ತಿರುವಂತಹ ಪರಿಸ್ಥಿತಿ ಬಂದಿದೆ. 7 ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ನಾವು ಹೋರಾಡವನ್ನು ಮಾಡುತ್ತಿದ್ದೇವೆ. ಈ ಪರಿಸ್ಥಿತಿ ಇರುವಂಥಹ ಸಂದರ್ಭದಲ್ಲಿ ಇವತ್ತು ಸಮಗ್ರ ಕರ್ನಾಟಕದ ಅಭಿವೃದ್ಧಿಯೆಂದು ಹೇಳುವಂಥಹ ಸರ್ಕಾರವು ಇವತ್ತಿನದಿವಸ ತಾವು 7 ಜಿಲ್ಲೆಗಳಿಗೆ ಏನು ಕಾರ್ಯಕ್ರಮವನ್ನು ಕೊಟ್ಟಿದ್ದೀರಿ ಎಂದು ನಾವು ಅನಿವಾರ್ಯವಾಗಿ ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಇಲ್ಲಿ ಕುಡಿಯುವ ನೀರಿಗಾಗಿ ಒದ್ದಾಟ ಮಾಡುವಂತಹ ಸಂದರ್ಭದಲ್ಲಿ ಒಂದು ಶಾಶ್ವತವಾದಂತಹ ನೀರಾವರಿ ಕಾರ್ಯಕ್ರಮಗಳಿಗೆ ಯಾವ ರೀತಿಯಾಗಿ ಆದ್ಯತೆಯನ್ನು ಕೊಡಬೇಕೆಂಬುದರ ಬಗ್ಗೆ ಪಕ್ಕದ ರಾಜ್ಯಕ್ಕೆ ಹೋಗಿ ನೋಡಿಕೊಂಡು ಬನ್ನಿ. "ಜಲ ಯಜ್ಞ" ಎಂದು ಹೆಸರನ್ನಿಟ್ಟುಕೊಂಡು ಆಂಧ್ರ ಮುಖ್ಯಮಂತ್ರಿಯವರಾದ ಶ್ರೀ ವೈ.ಎಸ್.ರಾಜಸೇಖರರೆಡ್ಡಿಯವರು 1,15,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದು ರಾಯಲ್ ಸೀಮಾ ಎಂದೊ ಚಿತ್ತೂರಿನಿಂದ ಹಿಡಿದು ಅನಂತಪುರ ಮತ್ತು ಕರ್ನೂಲ್‌ವರೆಗೆ ಕಂಪ್ಲೀಟಾಗಿ ಮಾಡಿದ್ದಾರೆ. ನೀರು ಇರಲಿ, ಇಲ್ಲದೆ ಹೋಗಲಿ, ಎಲ್ಲಾ ಕೆರೆಕಟ್ಟೆಗಳಿಗೆ ಸಂಪರ್ಕವನ್ನು ಕೊಡುತ್ತಿದ್ದಾರೆ. ಅವರು ಭಾಷಣವನ್ನು ಮಾಡುತ್ತಾ ಒಂದು ಮಾತನ್ನು ಹೇಳಿದರು. ಅಕಸ್ಮಿಕವಾಗಿ ಈ

ಕಾಲುವೆಗಳಲ್ಲಿ ನೀರು ಬರದೆ ಹೋಗಬಹುದು. ಕನಿಷ್ಟ 10 ವರ್ಷಕ್ಕಾದರೂ ಮಳೆ ಬಂದಾಗ ಕಾಲುವೆಯಲ್ಲಿ ನೀರು ತುಂಬಿಕೊಂಡರೆ ಸಾಕು ಆಗ ಅಂತರ ಜಲ ಜಾಸ್ತಿಯಾಗುತ್ತದೆ. ಅವತ್ತಾದರೂ ಕೂಡ ಇದರ ಉಪಯೋಗವಾಗುತ್ತದೆ ಎಂಬ ಮಾತನ್ನು ಅವರು ಆಡಿದ್ದಾರೆ. ಅವರು 1,17,000 "ಜಲಯಜ್ಞ" ಕಾರ್ಯಕ್ರಮವನ್ನು ತೆಗೆದುಕೊಂಡು ಅದನ್ನು 4 ವರ್ಷದಲ್ಲಿ ಕಂಪ್ಲೀಟ್ ಮಾಡತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದರೆ ನೀವು 3000 ಕೋಟಿಯನ್ನು ಇಟ್ಟು 1800 ಕೋಟಿ ರೂಗಳನ್ನು ಖರ್ಚು ಮಾಡುವುದಕ್ಕಾಗದೆ ಲ್ಯಾಪ್ಸ್ ಮಾಡುತ್ತಿದ್ದಿರೆಂದರೆ ನೀವು ನೀರಾವರಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರೆಂದು ನಾವು ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗುತ್ತದೆ. ನಮ್ಮ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ 6000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವು. Upper Krishnaದಲ್ಲಿ ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಆ ಟೈಮ್ ಹೊರಟು ಹೋಗುತ್ತದೆಂದು ಹೇಳಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿ ಮಾಡಿದ್ದೆವು.

ಶ್ರೀ ಎಸ್.ಆರ್.ವಿಶ್ವನಾಥ್ : ಅವರ ಕಾಲದಲ್ಲಿ ನೀರು ಅಷ್ಟೇ ಲಭ್ಯವಾಗಿದ್ದು, ಅಲ್ಲಿ ಅದಕ್ಕಾಗಿಯೇ floride ಜಾಸ್ತಿಯಾಗಿರುವುದು.

ಶ್ರೀ ವಿ.ಮುನಿಯಪ್ಪ : ನನ್ನ ಕಾಲದಲ್ಲಿ ಮರಳು ಲಾರಿಯವರು ಒಂದೂವರೆ ತಿಂಗಳುಗಳ ಕಾಲ ಧರಣಿಯನ್ನು ಮಾಡಿದ್ದರು. ನಮ್ಮ effigyಗಳನ್ನು ಇಲ್ಲಿಗೆ ತಂದು ಸುಟ್ಟರು. ಆದರೂ ಕೂಡ ನಾವು ಯೀಲ್ಡ್ ಆಗಲಿಲ್ಲ. ನಿಮಗೆ ಆ ವಿಷಯಗೊತ್ತಿಲ್ಲ. ಮರಳನ್ನು regulate ಮಾಡಿರುವುದೇ ನಮ್ಮ ಕಾಲದಲ್ಲಿ. ಮರಳನ್ನು ಅವರು ಇಷ್ಟಾನುಸಾರ ಹಾಗೂ ಸ್ವೇಚ್ಛಾಚಾರವಾಗಿ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ನಮ್ಮ ಕಾಲದಲ್ಲಿಯೆ ರಾಯಲ್ಟಿಯನ್ನು ಫಿಕ್ಸ್ ಮಾಡಿರುವುದು. ಅದರಿಂದಾಗಿಯೇ 18 ಕೋಟಿ ರೂಪಾಯಿಗಳು ಜಾಸ್ತಿ ಬಂದಿದೆ ನಿಮಗೇನು ಗೊತ್ತಿದೆ. ಮೊದಲು ರಾಯಲ್ಟಿ 1 ರೂಪಾಯಿ ಬರುತ್ತಿರಲಿಲ್ಲ. ಅದನ್ನು regulate ಮಾಡಬೇಕು. Sand is also oneof the essential commodities. ಮರಳು ಇಲ್ಲದೇ ಹೋದರೆ ಈ ನಗರದಲ್ಲಿ ಮಾತ್ರವಲ್ಲ, ಪ್ರತಿ ಊರಿನಲ್ಲಿಯೂ ಅಭಿವೃದ್ಧಿ ಕಾರ್ಯಗಳು ನಿಂತುಹೋಗುತ್ತದೆ. ಮರಳನ್ನು ಬಂದ್ ಮಾಡುವುದಕ್ಕಾಗುವುದಿಲ್ಲ ಮರಳನ್ನು ಕೊಳ್ಳಲೇಬೇಕು.

ಶ್ರೀ ಎಸ್.ಆರ್.ವಿಶ್ವನಾಥ್ : ಅದನ್ನು ಹೆಚ್ಚಿಸಬೇಕೆಂದು ಏನು ಇಲ್ಲ.

ಶ್ರೀ ವಿ.ಮುನಿಯಪ್ಪ : ವೈಜ್ಞಾನಿಕವಾಗಿ ಗಣಿ ಇಲಾಖೆಯಿಂದ ಫಿಕ್ಸ್ ಮಾಡಿದ್ದೇವೆ. ಎಲ್ಲೆಲ್ಲಿ ಮರಳನ್ನು ಎತ್ತಬೇಕೆಂದು ನಿಗದಿ ಮಾಡಿದ್ದೇವು. ಅಲ್ಲಿ ಮಾತ್ರ ಮರಳನ್ನು ಎತ್ತುತ್ತಿದ್ದರು. ನೋಡಿ ತಾವು ಮಧ್ಯದಲ್ಲಿ disturb ಮಾಡಬೇಡಿ, ತಾವು ಆಮೇಲೆ ಮಾತನಾಡಿ. ಪುನಃ ಎರಡನೇ ಸಾರಿ ರಿಪೀಟ್ ಮಾಡುತ್ತೇನೆ. ಇವರು 2500 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. 7 ಜಿಲ್ಲೆಗಳಲ್ಲಿ

ಕುಡಿಯುವ ನೀರಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಿದ್ದೀರಾ? ಇದು ಜ್ಞಾಪಕಕ್ಕೆ ಬಂತೇ? ಕೋಲಾರ, ಚಿಕ್ಕಬಳ್ಳಾಪುರದಿಂದ ಹಿಡಿದು ಚಿತ್ರದುರ್ಗಚಿಕ್ಕಮಂಗಳೂರು ಹಿಡಿದು ಆಂಧ್ರ ಭಾಗಗಳಲ್ಲಿರುವಂತಹ ಗ್ರಾಮಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಇದಕ್ಕಾಗಿ ತಾವು ಶಾಶ್ವತವಾದಂತಹ ಕಾರ್ಯಕ್ರಮವನ್ನು ಕೊಡಬೇಕು. ಇವತ್ತು ನಾವು ಆ ಬಗ್ಗೆ ಬುನಾದಿಯನ್ನು ಹಾಕೋಣವೆನ್ನುವುದರ ಬಗ್ಗೆ ತಾವು ಯೋಚನೆ ಮಾಡಿದ್ದೀರಾ? ಡಾ:ಪರಮಶಿವಯ್ಯನವರು ಒಂದು ವರದಿಯನ್ನು ಕೊಟ್ಟರು. ಅವರು 10 ವರ್ಷಗಳ ಕಾಲ ಬಹಳ ಕಷ್ಟಪಟ್ಟು ಒಂದು ವರದಿಯನ್ನುಕೊಟ್ಟಿದ್ದಾರೆ. ಅದು ನಿಮಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪಾಪಾ ಅವರು ಕಾಲುನಡಿಗೆಯಲ್ಲಿ ಹೋಗಿದ್ದಾರೆಂದು ಒಂದು ಭಾಷಣದಲ್ಲೊ ಹೇಳಿದ್ದಾರೆ. ಅವರು ಒಂದು ಸವಾಲನ್ನು ಸಹ ಹಾಕಿದ್ದಾರೆ. 19 ಜನ ನಿವೃತ್ತ ಚೀಫ್ ಇಂಜಿನಿಯರ್ಸ್ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡಿರುವಂತಹವರು ಇದ್ದಾರೆ. ಸರ್ಕಾರ ಅವರದೊಂದು ಕಮಿಟಿ ಮಾಡಲಿ, ಅವರು ನಾವು ಎಲ್ಲಾ ಸೇರಿ pros and cons ಚರ್ಚೆ ಮಾಡೋಣ. ನಾವು ಮಾಡಿರುವಂಥ ಸಮೀಕ್ಷೆಯಲ್ಲಿ topo sheet ready ಮಾಡಿದ್ದೇವೆ. Topo sheet ನಲ್ಲಿ ಎಲ್ಲೆಲ್ಲಿ gravity ಇದೆ. ಎಲ್ಲೆಲ್ಲಿ ಲಿಫ್ಟ್ ಇರಿಗೇಶನ್ ಮಾಡಬೇಕೆನ್ನುವುದರಬಗ್ಗೆ ನಿಖರವಾಗಿ ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಇಸ್ರೋಗೆ ದುಡ್ಡು ಕೊಡಿ ಎಂದು ಹೇಲಿ 5 ಕೋಟಿ ರೂಪಾಯಿಗಳನ್ನು ಶ್ರೀ.ಎಸ್.ಎಂ.ಕೃಷ್ಣ ಸರ್ಕಾರ ಕೊಟ್ಟಿದೆ. ನೀವು ಕೇವಲ ಇನ್ನು 15 ಕೋಟಿರೂ.ಗಳನ್ನು ಕೊಟ್ಟಿದೆ ಆ ವರದಿಯನ್ನು ತರಿಸಿ ಜನರ ಮುಂದಿರಿಸಿ. ಆ ವರದಿಯಲ್ಲಿರುವುದು ಇಷ್ಟಕ್ಕೆ ಸಾಧ್ಯವಾಗುತ್ತದೆಂದು ನೋಡುವುದನ್ನು ಬಿಟ್ಟು ಇದರಲ್ಲಿ ಇನ್ನೊಂದು ಒಳಸಂಚು ನಡೆದಿದೆ. ಯಾರೋ ಕೆ.ಸಿ.ರೆಡ್ಡಿಯವರ ಕಮಿಟಿಯನ್ನು ಮಾಡಿ ಅವರೊಂದು ವರದಿಯನ್ನು ಕೊಟ್ಟರು. ಅವರು ಕೋಲಾರ ಜಿಲ್ಲೆಯಲ್ಲಿ 4,224 ಕಎರೆಗಳಿದ್ದರೆ ಅದರಲ್ಲಿ 19 ಕೆರೆಗಳಿಗೆ ಭದ್ರಾ ನದಿಯಿಂದ Upper Bhadra ಅಥವಾ Lower Bhadra ಎನ್ನವುದು ನನಗೆ ನಿಗಾ ಇಲ್ಲ. ಒಟ್ಟು ಭದ್ರಾ ನದಿಯಿಂದ 19 ಕೆರೆಗಳಿಗೆ ಮಾತ್ರ ನೀರು ಕೊಡುತ್ತೇವೆಂದು ವರದಿಯನ್ನು ಕೊಟ್ಟಿದ್ದಾರೆ, ಎಂಥಾ ಸಂಚು ನೋಡಿ, ಡಾ:ಪರಮಶಿವಯ್ಯನವರ ವರದಿಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲಿಕ್ಕೆ ಒಂದು ಸಂಚು ನಡೆಸಿದ್ದಾರೆ. ಇದರ ಮಧ್ಯೆ ಇಂಥ ಒಂದು ವ್ಯವಸ್ಥೆ ಕೂಡ ಜರುಗುತ್ತಿದೆ, ಅದೇನೇ ಇರಲಿ, ದಯಮಾಡಿ ನೀರಾವರಿ ಸಚಿವರಲ್ಲಿ ನಾನು ಪ್ರಾರ್ಥಿಸುತ್ತೇನೆ, ನೀವು ತಡ ಮಾಡಬೇಡಿ. ಮಠ ಮಾನ್ಯಗಳಿಗೆ 150 ಕೊಟಿ ರೂ.ಗಳನ್ನು ಕೊಡುತ್ತಾರೆ. ಅದು ಯೋಚನೆಯಲ್ಲಿಲ್ಲ, ಮತ್ತೊಂದರಲ್ಲಿಲ್ಲ. ಒಂದು ಕಡೆ ನಿಮ್ಮ ಆದಾಯ decline ಆಗುತ್ತಿದೆ, ನಿಮಗೆ ಬರುತ್ತಿರುವ sources 9–10 ಸಾವಿರ ಕೋಟಿ Revenue mobilization ಕಡಿಮೆಯಾಗುತ್ತಿದೆ. ಅದರಲ್ಲಿ ಅನುತ್ಪಾದನೆಯ ಕೆಲಸಗಳಿಗೆಲ್ಲಾ ಹಣ ಕೊಡುತ್ತಿದ್ದೀರಿ.

ಬಹುಶಃ ಇದು ಮುಂದಿನ ಪೀಳಿಗೆಗೆ ಣೀರು ಕೊಡುವುದಕ್ಕೆ ಒಂದು ವರದಿಯನ್ನು ಕೊಟ್ಟರೆ, ಆ ವರದಿಯ ಬಗ್ಗೆ ಸಮೀಕ್ಷೆ ತರಿಸಲಿಕ್ಕೆ 15.00 ಕೋಟಿ ರೂ.ಗಳನ್ನು ಸರ್ಕಾರದಿಂದ ಕೊಡಲಿಕ್ಕಾಗಲಿಲಗಲವೆಂದರೆ ಇದಕ್ಕಿಂಥ ಹೀನಾಯವಾದ ಕೆಲಸ ಇನ್ನೇನಿದೆ ಎಂದು ನನಗೆ ಅನ್ನಿಸುತ್ತಿದೆ. ಈ ಸರ್ಕಾರದ ಚಿಂತನೆ ಯಾವ ಕಡೆಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ದಯಮಾಡಿ ನಾನು ಈ ವಿಚಾರವಾಗಿ ಸರ್ಕಾರದಲ್ಲಿ ಮನವಿ ಮಾಡಲಿಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ನನಗೆ ಬಹಳ ಬೇಸರವಾಗಿಬಿಟ್ಟಿದೆ. ನಾನು ಒತ್ತಾಯ ಮಾಡುತ್ತೇನೆ, ಅವರಿಗೇನಾದರೂ ಮನಸ್ಸು ಇದ್ದರೆ ಏಳು ಜಿಲ್ಲೆಗಳಲ್ಲಿ ಇರುವಂಥ ಜನರ ಬಗ್ಗೆ ಕಾಳಜಿ ಇದ್ದರೆ ತಕ್ಷಣ ನಾಳೆಯೇ ಅವರು 15–20 ಕೋಟಿ ರೂಪಾಯಿಗಳನ್ನು ಕೊಡಬೇಕು. ಇಸ್ರೋ ಸಂಸ್ಥೆಯವರು ತಯಾರು ಮಾಡಿರುವ ವರದಿಯನ್ನು ತರಿಸಿ ಮುಂದಿನ ಅವದಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಬೇಕೆಂದು ನಾನು ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಛೇರ್ಮನ್: ಇದೊಂದು ಒಳ್ಳೆಯ ಸಲಹೆಯಾಗಿದೆ.

ಶ್ರೀ ವಿ.ಮುನಿಯಪ್ಪ : ಇನ್ನೊಂದು 2500 ಟಿ.ಎಂ.ಸಿ.ನೀರನ್ನು ಉಪಯೋಗಿಸಿಕೊಳ್ಳುವಂಥ ಒಂದು ದೊಡ್ಡ ಕಾರ್ಯಕ್ರಮವನ್ನು ಮುಂದೆ ಯೋಚನೆ ಮಾಢಿ ಸ್ವಾಮಿ. ಸ್ವಾತಂತ್ರ್ಯ ಬಂದ ಮೇಲೆ ನಾವು ಮಾಡಿರುವುದು ಕೇವಲ ಒಂದು ಸಾವಿರ ಟಿ.ಎಂ.ಸಿ.ನೀರಿಗೆ ಅಷ್ಟೇ. ಇನ್ನು ಎರಡೂವರೆ ಸಾವಿರ ಟಿ.ಎಂ.ಸಿ.ನೀರು ಇದ್ದು ಇಲ್ಲಿ ಕುಡಿಯಲಿಕ್ಕೆ ನೀರಿಲ್ಲವೆಂದು ನಾವು ಸಾಯುತ್ತಿದ್ದೇವೆಂದರೆ ಇದಕ್ಕಿಂತ ಶೋಚನೀಯವಾದಂಥ ವಿಚಾರ ಬೇರೊಂದಿಲ್ಲ. ದಯವಿಟ್ಟು ಇದಕ್ಕೆ ಕಾರ್ತಕ್ರಮವನ್ನು ರೂಪಿಸಬೇಕೆಂಬ ಮಾತನ್ನು ತಮ್ಮ ಮೂಲಕ ನೀರಾವರಿ ಮಂತ್ರಿಗಳಲ್ಲಿ ಒತ್ತಾಯ ಮಾಡಿ ಈ ವರದಿಯ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲೇಬೇಕು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮುನಿಯಪ್ಪನವರು ವಿದ್ಯುಚ್ಛಕ್ತಿ ಮಂತ್ರಿಗಳಿಗೆ ಅನೇಕ ರೀತಿಯಾಗಿ ಚುಚ್ಚಿದ ಹಾಗೆ ಮಾತನಾಡಿದರೂ ಸಹ ಅವರು ಎದ್ದೇಳಲಿಲ್ಲ. ಅವರಿಗೆ ಶಾಕ್ ಹೊಡೆಯಲಿಲ್ಲ. ಅವರು ಹೇಳುತ್ತಿದ್ದಾರೆ ಸಾವಿರಾರು ಟಿ.ಎಂ.ಸಿ.ನೀರು ಸಮುದ್ರ ಪಾಲಾಗುತ್ತಿದ್ದು ನಮಗೆ ಕುಡಿಯಲಿಕ್ಕೆ ನೀರಿಲ್ಲವೆಂದು ಅವರು ಹೇಳುತ್ತಿದ್ದಾರೆ ಆದರೂ ನೀರಾವರಿ ಸಚಿವರೂ ಕೂಡ ಸುಮ್ಮನೆ ಕುಳಿತಿದ್ದಾರೆ. ದಯಮಾಡಿ ಅವರು ಮಾತನಾಡಬೇಕು.

ಛೇರ್ಮನ್: ಅವರು ಅವರ ಸ್ಥಳಕ್ಕೆ ಹೋಗಿದ್ದಾರೆ. ಅವರು ಏನೋ ಉತ್ತರ ಹೇಳಲಿದ್ದಾರೆ.

ಶ್ರೀ ವಿ.ಮುನಿಯಪ್ಪ : ಊಟ ಇಲ್ಲದವರಿಗೆ ಊಟ ಕೊಡುತ್ತಿದ್ದೀರಿ. ಕಾಲುವೆ ಇದ್ದರೂ ಅಲ್ಲಿ ಇನ್ನೊಂದು ಕಾಲುವೆ ಕೇಳಿದರೆ ಕಾಲಿವೆಗಳ ಮೇಲೆ ಕಾಲುವೆಗಳನ್ನು ಮಾಡುತ್ತಿದ್ದೀರಿ. ನಿಮ್ಮ ನೀರಾವರಿ ಯೋಜನೆಯಲ್ಲಿ ಎಷ್ಟು ಕಾಲುವೆಗಳನ್ನು ಅನೌನ್ಸ್ ಮಾಡಿದ್ದೀರಿ. ಏಳು ಜಿಲ್ಲೆಗಳಲ್ಲಿರುವ ಜನಸಾಮಾನ್ಯರು ನಿಮಗೆ ಟ್ಯಾಕ್ಸ್

ಕೊಡುತಿಲ್ಲವೇ? ಹಾಗಾಗಿ ಅವರಿಗೆ ಸೂಕ್ತವಾಗಿ ಕೊಡಬೇಕಾದ ರಿಲೀಫ್ ಅನ್ನು ಕೊಡಬೇಕಲ್ಲವೇ?

ಛೇರ್ಮನ್: ಮುನಿಯಪ್ಪನವರೇ ನೀರಾವರಿ ಸಚಿವರು ಉತ್ತರ ಕೊಡಲಿಕ್ಕೆ ನಿಂತಿದ್ದಾರೆ.

ಶ್ರೀ ವಿ.ಮುನಿಯಪ್ಪ : ಆಯಿತು. ಉತ್ತರ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮುನಿಯಪ್ಪನವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯ ಭಾಗ, ತುಮಕೂರಿನ ಕೆಲವು ಭಾಗ ಹಾಗೂ ಕೋಲಾರದ ಪೂರ್ಣ ಭಾಗ ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲೆ. ಕೋಲಾರ ಅಂದರೆ ಚಿಕ್ಕಬಳ್ಳಾಪುರ ಪ್ರದೇಶವು ಸೇರಿದಂತೆ ಕುಡಿಯುವ ನೀರನ್ನು ಕೆರೆಗಳಿಗೆ ತುಂಬಿಸುವುದಕ್ಕೆ ಬಹಳ ದೊಡ್ಡ ಪ್ರಮಾಣದ ನದಿಯ ಪಾತ್ರ ಅಲ್ಲಿಲ್ಲ. ಸಣ್ಣಪುಟ್ಟ ಹಳ್ಳಗಳು ಅಲ್ಲಿರುವುದರಿಂದ ಅದಕ್ಕೆ ಒಂದು ಶಾಶ್ವತವಾದ ಪರಿಹಾರ ಕೊಡಬೇಕಾದರೆ ನಾವೊಂದು ಪ್ರಮುಖ ನಿರ್ಣಯ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಡಾ.ಪರಮಶಿವಯ್ಯನವರೇನು ಅಧ್ಯಯನ ಮಾಡಿದ್ದಾರೆ ಅದರ ಸಂಪೂರ್ಣವಾದ ವಿವರವನ್ನು ನಾನು ಪಡೆದುಕೊಂಡಿದ್ದೇನೆ. ಅವರ ಹತ್ತಿರ ಮೂರು ನಾಲ್ಕು ಬಾರಿ ಚರ್ಚೆ ಮಾಢಿದ್ದೇನೆ ಮತ್ತು ನಾವು ಏನು ಸೆಟಲೈಟ್ ಮೂಲಕ ಸಂಪೂರ್ಣವಾದಂಥ ಒಂದು ಪ್ರಾಜೆಕ್ಟ್ ರೆಪೋರ್ಟ್ ಅನ್ನು ತರಿಸಬೇಕೆಂದು ಹೇಳಿ ಏನು ತೀರ್ಮಾನಿಸಿದ್ದೇವೆ, ಅದಕ್ಕೆ ಬಾಕಿ ಇರುವಂಥ ಹಣವನ್ನು ಸಹ ಬಿಡುಗಡೆಗೊಳಿಸಲಿಕ್ಕೆ ಆದೇಶವನ್ನು ಮಾಡಿದ್ದೇನೆ. ಬಹಳ ಗಂಬೀರವಾಗಿ ಈ ವಿಚಾರವನ್ನು ನಾವು ಪರಿಗಣಿಸಿದ್ದೇವೆ. ಈ ಸರ್ಕಾರ ಬಂದ ಮೇಲೆ ನಮ್ಮ ಮುಖ್ಯ ಉದ್ದೇಶ, ವಿಶೇಷವಾಗಿ Central Karnataka ಎಂದು ನಾವೇನು ಕರೆಯುತ್ತೇವೆ ಈ ಭಾಗ ಕುಡಿಯುವ ನೀರಿನ ಕೊರತೆಯಿಂದ ಫ್ಲೋರೈಡ್ ಹೆಚ್ಚಳದಿಂದಾಗಿ ಇಲ್ಲಿನ ಜನರಿಗೆ ಆಗಿರುವ ನೋವನ್ನು ಶಬ್ಧಗಳಲ್ಲಿ ಹೇಳತೀರದು, ಅದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಆ ಹಿನ್ನೇಲೆಯಲ್ಲಿ ಇದು ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿಯೂ ಸಹ ಬಂದಿದೆ. Upper Bhadra ಗೆ ಕೂಡ ಇದಕ್ಕೆ ಕೆಲವು ಮಟ್ಟಿಗೆ ಚಿತ್ರದುರ್ಗದ ಜಿಲ್ಲೆಯಲ್ಲಿ ಪರಿಹಾರವನ್ನು ಒದಗಿಸಲಿಕೆಕ ಸಾಧ್ಯವಿದೆ, ಆದರೆ ತುಮಕೂರಿನ ಬಹುತ್ತೇಕ ಭಾಗ ಹಾಗು ಕೋಲಾರದ ಭಾಗಕ್ಕೆ ಆಗಬೇಕಾದರೆ ತಾವೇನು ಮೂರು ಸಾವಿರ ಟಿ.ಎಂ.ಸಿ.ನೀರಿನ ಬಗ್ಗೆ ಪ್ರಸ್ತಾಪಿಸಿದಿರಿ ಅದರಲ್ಲಿ ಎರಡು ಸಾವಿರ ಟಿ.ಎಂ.ಸಿ.ನೀರು Western Ghat ನಲ್ಲಿ ಬಂದು ಪಶ್ಚಿಮವಾಹಿನಿಯಲ್ಲಿ ಹರಿದು ಅಲ್ಲೇ ಸಮುದ್ರ ಸೇರುವಂತದ್ದು ಎರಡು ಸಾವಿರ ಟಿ.ಎಂ.ಸಿ.ನೀರಿದೆ. ಇದರಲ್ಲಿ ಪಶ್ಚಿಮ ಘಟ್ಟದ ಕೆಳಗಿರುವಂಥ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೂ ಏನೂ ಉಪಯೋಗವಾಗುತ್ತಿಲ್ಲ. ಅದಕ್ಕೊಂದು ಯೋಜನೆಯನ್ನು ರೂಪಿಸಿದ್ದೇವೆ. ಅದೇ ರೀತಿ ನಮ್ಮ ಬುಲು ಸೀಮೆಗೆ ತಂದು ಕನಿಷ್ಠ ಕುಡಿಯುವ ನೀರಿಗಾದರೂ

ಮಾಡಬೇಕೆನ್ನುವ ತಮ್ಮ ಕಳಕಳಿಯನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಇದನ್ನು ಹಿಂದಿನ ಸರ್ಕಾರದಲ್ಲೇ ಮಾಡಿದ್ದಾರೆ ಇಷ್ಟೊತ್ತಿಗೆ ಈ ಭಾಷಣ ಮಾಡುವಂಥ ಅವಶ್ಯಕತೆ ಇರುತ್ತಿರಲಿಲ್ಲ. ಮುನಿಯಪ್ಪನವರಿಗೆ ಇರುವ ಈ ಕಳಕಳಿ, ಈ ನೋವು ಏನಿದೆ. ನೀವು ಐದು ವರ್ಷ ಸುದೀರ್ಘವಾಗಿ ಸರ್ಕಾರದಲ್ಲಿದ್ದಿರಿ. ಆಗಲೇ ಡಾ.ಪರಮಶಿವಯ್ಯನವರ ವರದಿಯನ್ನು ಕೊಟ್ಟಿದರೆ, ಆಗ ನೀವು ಇದನ್ನು ಅನುಷ್ಠಾನಗೊಳಿಸಿದ್ದರೆ ಬಹುತೇಕವಾಗಿ ಈ ಭಾಷಣವನ್ನು ನೀವು ಮಾಡುವಂಥ ಪ್ರಸಂಗ ಈಗ ಬರುತ್ತಿರಲಿಲ್ಲ. ಒಂದು ನಿಮಿಷ, ಈಗ ನೀವು ಹೇಳುವುದನ್ನು ಹೇಳಿದ್ದೀರಿ, ಈಗ ನಾನು ಹೇಳಬೇಕಲ್ಲವೇ? ಅದೇನೇ ಇರಲಿ, ಅದು ಮುಖ್ಯವಲ್ಲ, ಈಗ ನಾವು ನೀವು ಸೇರಿ ಇದರಲ್ಲಿ ಪಕ್ಷಾತೀತವಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ ನೀರಾವರಿ ಯೋಜನೆ ಹಾಗೂ ಕುಡಿಯುವ ನೀರಿನ ಯೋಜನೆ, ನೀರಿನ ವಿಷಯ ಬಂದಾಗ ರಾಜಕಾರಣ ಬೆರೆತರೆ ಅದು ಯುಗ ಯುಗಗಳು ಕಳೆದರೂ ಅದಕ್ಕೆ ಪರಿಹಾರ ಸಿಗುವುದಿಲ್ಲ. ರಾಕೀಯ ಸೋಂಕಿಲ್ಲದೇ ಕೆಲವು ಪಕ್ಷಾತೀತವಾದ ನಿಲುವುಗಳನ್ನು, ನಿರ್ಣಯಗಳನ್ನು ರಾಜ್ಯದ ಹಿತದೃಷ್ಟಿಯಿಂದ ವಿಶೇಷವಾಗಿ ಬರಪೀಡಿತ ಜನಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಆ ವರದಿ ಬಂದ ಮೇಲೆ ನಾನು ಅದನ್ನು ಅಸೆಂಬ್ಲಿಯಲ್ಲಿ ಇಡುತ್ತೇನೆ. ಸುದೀರ್ಘವಾಗಿ ಚರ್ಚೆಯಾಗಲಿ, ನನ್ನ ಉದ್ದೇಶವಿಷ್ಟೇ ಈ ವಿಷಯದಲ್ಲಿ, ಯಾವ ರೀತಿ ನಾವು ನಮ್ಮ ಗಡಿ ವಿಷಯದಲ್ಲಿ ಮತ್ತು ನಮ್ಮ ಕೃಷ್ಣಾ ಕಾವೇರಿ ವಿಷಯದಲ್ಲಿ ಒಂದಾಗಿ unanimous resolution ಮಾಡಿದೆವು. ಅದೇ ರೀತಿ ಈ ನಮ್ಮ ಆಂತರಿಕ ಕುಡಿಯುವ ನೀರಿನ ಮೂಲಭೂತ ಹಕ್ಕೇನಿದೆ ಅದನ್ನು ನಮ್ಮ ಜನರಿಗೆ ಕೊಡಲು ನಾವೆಲ್ಲ ಒಗ್ಗಟ್ಟಾಗಿದ್ದೇವೆಂಬ ಸಂದೇಶವನ್ನು ಈ ಸದನದ ಮೂಲಕ ಇಡೀ ರಾಜ್ಯಕ್ಕೆ ಕಳುಹಿಸುವಂಥ ದಿನ ಬರುತ್ತದೆ. ಅದಕ್ಕೆ ನಾನು ಎಲ್ಲಾ ಸಿದ್ದತೆಯನ್ನು ಮಾಡಿ ನಿಮ್ಮ ಮುಂದಿಡುತ್ತೇನೆ, ಸುದೀರ್ಘವಾಗಿ ಇದರ ಸಾಧಕಬಾಧಕಗಳ ಬಗ್ಗೆ ಚರ್ಚೆ ಮಾಡೋಣ. ಒಗ್ಗಟ್ಟಾಗೆ ಎರಡು ಸದನದಲ್ಲಿ ನಿರ್ಣಯ ಮಾಡೋಣ ಅದನ್ನು ಅನುಷ್ಠಾನಗೊಳಿಸಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಚಿವರ ಉತ್ತರದಿಂದ ನಮಗೆ ಸ್ವಲ್ಪ ಸಮಾದಾನವಾಗಿದೆ. ನಮ್ಮ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗಲೇ ಅದನ್ನು ISRO ಗೆ ರೆಫರ್ ಮಾಡಿದ್ದಯ. ರೆಫರ್ ಮಾಡಿ 5 ವರ್ಷಗಳಾದರೂ ಕೂಡ ಇದುವರೆಗೂ ಒಂದು ಪ್ರಾಥಮಿಕವಾದ ವರದಿ ಕೂಡ ಬರಲಿಲ್ಲ. ನನಗೆ ಗೊತ್ತಿರುವ ಪ್ರಕಾರ ಇದಕ್ಕೆ ನಾಲ್ಕೈದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. At least, topo sheet ಮೇಲೋ, ಅಥವಾ ಯಾವುದೋ ರೀತಿಯಲ್ಲಿ ಒಂದು preliminary report ಅನ್ನು ತರಿಸಿ ಆಮೇಲೆ ಡೆವಲಪ್ ಮಾಡುವಂಥ ಕೆಲಸವನ್ನು ಮಾಡಬಹುದಿತ್ತು. ದಯಮಾಢಿ ತಾವು ಈಗ ಹಣವನ್ನು ಬಿಡುಗಡೆಗೊಳಿಸಲಿಕ್ಕೆ ಆದೇಶವನ್ನು ಮಾಡಿದ್ದೀರಿ ಎಂದು ಹೇಳಿದಿರಿ, ಬಹಳ ಸಂತೋಷ. ಅದು ಎಷ್ಟು

ದಿವಸಗಳಲ್ಲಿ ಅದರ ಅಂತಿಮ ವರದಿಯನ್ನು ತರಿಸಲಿಕ್ಕೆ ಸಾಧ್ಯವಾಗುತ್ತದೆ? ಏಕೆಂದರೆ ಆ ವರದಿ ಇಲ್ಲದೆ ನಾವ್ಯಾರೂ ಏನನ್ನೂ ಮೂವ್ ಮಾಡಲಿಕ್ಕಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಛೇರ್‌ಮನ್‌ರವರೇ, ಈಗಾಗಲೇ ಸಂಬಂಧಪಟ್ಟವರಿಗೆ ಹೇಳಿದ್ದೇನೆ. interim report ಆದರೂ ನೀವು ಕೊಡಿ ಎಂದು ಅವರು ಅಂತಿಮ ವರದಿ ಕೊಡುತ್ತೇವೆ ಎಂದರೂ ನಾವು ಒಪ್ಪಿಲ್ಲ. interim report ಕೊಡಿ, ನಂತರ ಬಾಕಿ ಹಣವನ್ನು ನಾವು ಬಿಡುಗಡೆ ಮಾಡುವುದಕ್ಕೆ ಸಿದ್ದರಿದ್ದೇವೆ ಎನ್ನುವುದನ್ನು ಹೇಳಿದ್ದೇನೆ. ಅವರು ಅದಷ್ಟು ಬೇಗನೆ ಕೊಡುತ್ತೇವೆ ಎಂದು ಹೇಳಿದ್ದಾರೆ. interim report ಬಂದ ತಕ್ಷಣವೇ ಅದನ್ನು ಎಲ್ಲರಿಗೂ circulate ಮಾಡುತ್ತೇವೆ. ಆದರೆ, ಅದಷ್ಟೇ ಅಲ್ಲದೆ ಅದನ್ನು ಮೀರಿ ಕೂಡ ಕೆಲವು ವಿಚಾರಗಳು ಇವೆ. ಅದಕ್ಕೆ ಸಮಗ್ರವಾದ ತಾಂತ್ರಿಕ ಸಲಹೆಯನ್ನು ಪಡೆದುಕೊಂಡು, ಒಟ್ಟಾರೆ ಡಾ.ಪರಮಶಿವಯ್ಯನವರ ವರದಿಯನ್ನು ಮೂಲಭೂತವಾಗಿ ಇಟ್ಟುಕೊಂಡು, ಆಧುನಿಕ ತಂತ್ರಜ್ಞಾನ ಮತ್ತು ಆ ವರದಿ ಇವೆಲ್ಲವನ್ನೂ ಸೇರಿ ನಾನು ತಮ್ಮ ಮುಂದೆ ವಿಚಾರವನ್ನು ಹಂಚಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಛೇರ್‌ಮನ್‌ರವರೇ, ಮಾನ್ಯ ಮುನಿಯಪ್ಪನವರು ಎಷ್ಟು ಕಷ್ಟಪಟ್ಟಿದ್ದಾರೆ ಎನ್ನುವುದು ನಿಮಗೂ ಗೊತ್ತಿದೆ. ಈಗ ತಾವು ಹೇಳಿರತಕ್ಕಂಥಾದ್ದು ನನಗೆ ಅರ್ಥವಾಗುತ್ತದೆ. ಈಗ NRSI ವರದಿ ಬರುವುದು ಒಂದು ಕಡೆಯಾಗುತ್ತದೆ. ಆಧುನಿಕವಾಗಿರುವಂಥ ತಂತ್ರಜ್ಞಾನವನ್ನು ಬಳಸಿಕೊಂಡು, ಪರ್ಯಾಯವಾಗಿ ಬೇರೆ ವಿಚಾರಗಳೂ ಕೂಡ ಇದೆ ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದರ ಬಗ್ಗೆ ಕೂಡ ಇವತ್ತು ಚರ್ಚೆ ಮಾಡುವುದಕ್ಕೆ ದಯಮಾಡಿ ಶಾಸಕರೆಲ್ಲರ ಸಭೆಯನ್ನು ಕರೆಯಿರಿ. ತುಮಕೂರು, ಕೋಲಾರ, ಚಿತ್ರದುರ್ಗ ಈ ಭಾಗಗಳಿಗೆ ಏನು ನೀರು ಪಶ್ಚಿಮ ಘಟ್ಟದಿಂದ ಬರಬೇಕು ಎಂದು ಕಾತುರರಾಗಿದ್ದಾರಲ್ಲಾ, ಎವರನ್ನು ಕೂಡ ಕರೆದು ಸಭೆ ಮಾಡಿ. ನೀವು ಅಮೇರಿಕನ್ ಕಂಪನಿಗಳ ಜೊತೆ ಚರ್ಚೆ ಮಾಡಿರುವುದು ನನಗೆ ಗೊತ್ತಿದೆ. ದಯಮಾಡಿ ಅವರನ್ನು ಕರೆಯಿರಿ. ಆದರೆ, ಮೂಲತಃ ನಾನು ಅರ್ಥ ಮಾಡಿಕೊಂಡಿರುವುದೇನೆಂದರೆ, ಮಾನ್ಯ ಟಾ.ಪರಮಶಿವಯ್ಯನವರು ಕೊಟ್ಟಿರುವಂಥ ವರದಿ ಮತ್ತು NRSI ಯಿಂದ ಬರುತ್ತಿರುವ ವರದಿಗೂ, ಇವರು ಕೊಡುತ್ತಿರುವ ವರದಿಗೂ ಭಿನ್ನವಾಗಿದೆ. ಇದರಲ್ಲಿ ಯಾವುದೇ ರೀತಿಯಲ್ಲಾ ಪರಿಸರಕ್ಕೆ ಹಾನಿಯಾಗದೇ ಇರುವ ರೀತಿಯಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಒಂದು ಸಾರಿ ಅಲ್ಲ ನಾಲ್ಕು-ಐದು ಸಾರಿ ಈ ವರದಿ ಬಂತು.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಛೇರ್‌ಮನ್‌ರವರೇ, ವರದಿ ಇಲ್ಲದೇ ಚರ್ಚೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಮಾನ್ಯ ಜುಚಂದ್ರರವರೇ, ತಮಗೆ ಗೊತ್ತಿದೆ. ನೀವು ಹಲವಾರು ತಜ್ಞರ ಜೊತೆಗೆ ಚರ್ಚೆ ಮಾಡಿದ್ದೀರಿ, ನಾವು ಚರ್ಚೆ ಮಾಡಿದ್ದೇವೆ. ಏನೇ ಮಾತನಾಡಿದರೂ ಕೂಡ ವರದಿಯನ್ನು ಇಟ್ಟುಕೊಂಡು,

specific ಆಗಿ recommendation ಅನ್ನು ಇಟ್ಟುಕೊಂಡು, ತಾಂತ್ರಿಕವಾದ recommendation ಇಟ್ಟುಕೊಂಡು, ನಾವು ಅದನ್ನು ಚರ್ಚೆ ಮಾಡಿದರೆ ಅರ್ಥಪೂರ್ಣವಾಗುತ್ತದೆ. hear and say ನಲ್ಲಿ ವರದಿಯನ್ನು ಚರ್ಚೆ ಮಾಡಿದರೆ, ಅದಕ್ಕೆ ಗಾಂಭೀರ್ಯತೆ ಬರುವುದಿಲ್ಲ. ಆ ಹಿನ್ನೆಲೆಯಲ್ಲಿ ಇವೆಲ್ಲವೂ ಬಂದ ಕೂಡಲೇ ನಿಮ್ಮೆಲ್ಲರ ಜೊತೆ ಹಂಚಿಕೊಳ್ಳುತ್ತೇನೆ. ಅದರಲ್ಲಿ ಎರಡನೇ ಮಾತಿಲ್ಲ. ಅದಷ್ಟು ಬೇಗನೆ ಆ ಕೆಲಸ ಮಾಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ : ಮಾನ್ಯ ಛೇರ್ಮನ್‌ರವರೇ, ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದಕ್ಕೆ ಪೂರಕವಾಗಿ ನಾನು ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸಚಿವರು ಕೂಡ ಪಶ್ಚಿಮವಾಹಿನಿ ಬಗ್ಗೆ ಯೋಚನೆ ಮಾಡಿದ್ದೀರಿ. 13 ನದಿಗಳು, ಕೃಷ್ಣೆಯಲ್ಲಿ ಹರಿದುಹೋಗುವಂಥ ನೀರು 1200 ಟಿ.ಎಂ.ಸಿ.ದಾಖಲೆಯಲ್ಲಿ ಹರಿದು ಹೋಗುವಂಥ ನೀರು, 800 ಟಿ.ಎಂ.ಸಿ. ಒಟ್ಟು 2000 ಟಿ.ಎಂ.ಸಿ. ನೀರಿನ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಪಶ್ಚಿಮ ಕರಾವಳಿ ಜಿಲ್ಲೆಯ 13 ನದಿಗಳಲ್ಲಿ, 2000 ಟಿ.ಎಂ.ಸಿ.ಯಷ್ಟು ನೀರು ಸಮುದ್ರಕ್ಕೆ ಸೇರುತ್ತಿದೆ. ಎರಡೂವರೆ ಪರ್ಸೆಂಟ್‌ನಷ್ಟು ನೀರನ್ನು ಉಪಯೋಗ ಮಾಡುತ್ತಿಲ್ಲ. ಈ ಬಗ್ಗೆ ಪಶ್ಚಿಮವಾಹಿನಿಗೆ ಸಂಬಂಧಿಸಿದಂತೆ, ಅಲ್ಲಲ್ಲಿ ಚೆಕ್ ಡ್ಯಾಮ್‌ಗಳನ್ನು ಹಾಕಿಕೊಂಡು ಬಂದಿದ್ದಾರೆ. ಸೌಭಾಗ್ಯ ಸಂಜೀವಿನಿ ಎಂದು ಹೇಳುವ ಇನ್ನೊಂದು ಯೋಜನೆಯನ್ನು ಯಾವ ರೀತಿ ಅನುಷ್ಠಾನಕ್ಕೆ ತರಬಹುದು ಎಂದು ಹೇಳುವುದಾದರೆ, ಸಮಗ್ರವಾದ ಮಾಹಿತಿಗಳನ್ನು ಸರ್ಕಾರದ ಗಮನಕ್ಕೆ ತಂದು, ನಮ್ಮ ಕಡೆಯಿಂದ ಡೀಸಲ್‌ಅನ್ನು, ಪೆಟ್ರೋಲಿಯಂ ಪ್ರಾಡಕ್ಟ್ಸ್‌ಅನ್ನು ಪೈಪ್‌ಲೈನ್‌ನಿಂದ ಕಳುಹಿಸುವುದಕ್ಕೆ ಸಾಧ್ಯವಾಗುತ್ತಿದೆ. ಈ ಕಡೆಯಿರುವಂಥ ಹೆಚ್ಚುವರಿ ನೀರನ್ನು ಕೊಡುವುದಕ್ಕೆ ಖಂಡಿತವಾಗಿ ಯಾವ ಸಮಸ್ಯೆಯಾಗುವುದಿಲ್ಲ. ಹೆಚ್ಚು ಖರ್ಚಿಲ್ಲದೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕು. ತಾವು ಅನುಮೋದನೆ ಕೊಟ್ಟರೆ ಖಂಡಿತವಾಗಿ ನಾವು ಸಾಕಷ್ಟು ವಿವರಗಳನ್ನು ಕೊಡುತ್ತೇವೆ. ಪಶ್ಚಿಮವಾಹಿನಿ ಮತ್ತು ಸೌಭಾಗ್ಯ ಸಂಜೀವಿನಿ ಮೂಲಕ, ಕೇವಲ ಕರಾವಳಿ ಪ್ರದೇಶಕ್ಕೆ ಮಾತ್ರವಲ್ಲ, ಅನೇಕ ಜಿಲ್ಲೆಗಳಿಗೆ ನೀರುಣಿಸುವಂತಹ ಶಕ್ತಿ ನಮ್ಮ 13 ನದಿಗಳಿಗಿದೆ. 2000 ಟಿ.ಎಂ.ಸಿ.ಯಲ್ಲಿ ಎರಡೂವರೆ ಪರ್ಸೆಂಟ್ ಇದ್ದದನ್ನು, ಕನಿಷ್ಠ 10 ಪರ್ಸೆಂಟನ್ನಾದರೂ utilize ಮಾಡುವುದಕ್ಕೆ ಸಾಧ್ಯವಾದರೆ ಅನೇಕ ಸಮಸ್ಯೆಗಳು ಬಗೆಹರಿಸಲ್ಪಡುತ್ತವೆ.

ಶ್ರೀ ಬಸವರಾಜ ಬೊಮ್ಮಾಯಿ : ನೇರವಾಗಿ ಹೇಳಬೇಕೆಂದರೆ, ಸೌಭಾಗ್ಯ ಸಂಜೀವಿನಿಗೆ ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿ ಸರ್ವೆ ಕಾರ್ಯವನ್ನು ಮಾಡಿಸುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ,

ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ, ಇಲ್ಲಿ ಪಶ್ಚಿಮವಾಹಿನಿಗೆ ಹರಿಯುವಂಥಹ ನದಿಗಳಿಗೆ, ಆಂತರಿಕವಾಗಿ ನದಿಗಳನ್ನು ಜೋಡಣೆ ಮಾಡುವ ಮುಖಾಂತರ ಯಾವರೀತಿ utilization ಹೆಚ್ಚಿಗೆ ಮಾಡಿಕೊಳ್ಳಬಹುದು ಎನ್ನುವುದರ ಬಗ್ಗೆ ಈಗಾಗಲೇ ಸರ್ಕಾರದ ಮುಂದೆ ಪ್ರಾಸಾವನೆ ಇದೆ. ಈಗಾಗಲೇ, ಎರಡು ಕೋಟಿ ರೂಪಾಯಿಗಳನ್ನು ಸರ್ವೆಗೆ ಇಟ್ಟುಕೊಂಡಿದ್ದೇವೆ. ಅದು ಬಂದ ತಕ್ಷಣ ಅದಕ್ಕೂ ಕೂಡ ಕಾರ್ಯಕ್ರಮವನ್ನು ರೂಪಿಸುತ್ತೇವೆ. ಮೊದಲು ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ವಿ.ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯೋಗೇಶ್ ಭಟ್‌ರವರು ಹೇಳಿದ ಹಾಗೆ, ಬಹಳ ಸಂತೋಷ: 2000 ಟಿ.ಎಂ.ಸಿ.ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆ. ಇಡೀ ಏಳು ಜಿಲ್ಲೆ ಜನ ಕೇಳುತ್ತಿರುವುದು ಏನೇಂದರೆ ಕೇವಲ 150 ರಿಂದ 200 ಟಿ.ಎಂ.ಸಿ. ನೀರು ತಾವು ಏನು ಸಲಹೆ ಕೊಟ್ಟಿದ್ದೀರಿ, ಅಷ್ಟೇ ನಮಗೆ ಬೇಕಾಗಿರುವುದು, ಅದರ ಮೇಲೆ ನಮಗೆ ನೀರನ್ನು ಕೊಟ್ಟರೂ ಅದು ನಮಗೆ ಬೇಕಾಗಿಲ್ಲ. 2000 ಟಿ.ಎಂ.ಸಿ. ನೀರು ವ್ಯರ್ಥವಾಗಿ ಪಶ್ಚಿಮಘಟ್ಟಗಳ ಮುಖಾಂತರ ಸಮುದ್ರ ಸೇರುತ್ತಿದೆ. ಕೇವಲ 200 ಟಿ.ಎಂ.ಸಿ. ನೀರಿಗೆ ಮಾತ್ರ ನಾವು ಒತ್ತಾಯ ಮಾಡುತ್ತಿದ್ದೇವೆ. ಅದಕ್ಕೆ ಆದ್ಯತೆಯನ್ನು ಕೊಡುವಂತಹ ಕೆಲಸವಾಗಬೇಕು. ಇವತ್ತು ಏನು ಆಶ್ವಾಸನೆ ಕೊಟ್ಟಿದ್ದೀರಿ, ಡಾ.ಪರಮಶಿವಯ್ಯನವರ ವರದಿ ಪ್ರಕಾರ, ತಕ್ಷಣ ದುಡ್ಡನ್ನು ಕೊಡಿ ಸ್ವಾಮಿ, nterim report ಆ report ಇವೆಲ್ಲಾ ಬೇಡ. ನೀವು ತಕ್ಷಣ ಹಣವನ್ನು ಪಾವತಿಸಿ, report ತರಿಸಿಕೊಂಡು ನಂತರ ಚರ್ಚೆ ಮಾಡಿ. ಆ ಭಾಗದ ಶಾಸಕರನ್ನು ಕರೆಸಿ, ಚರ್ಚೆ ಮಾಡಿ, ಅದಕ್ಕೆ ಏನಾದರೂ ಪರಿಹಾರ ಕಂಡುಹಿರಿಯಿರಿ. ಮುಂದಿನ ಪೀಳಿಗೆಗೆ ಇದು ಅನುಕೂಲವಾಗಬೇಕು. ಏಳು ಜಿಲ್ಲೆಯ ಮುಂದಿನ ಪೀಳಿಗೆಯ ಭವಿಷ್ಯ ಇದು. ತಾವು ದಯಮಾಡಿ ಇದಕ್ಕೆ ಆದ್ಯತೆ ನೀಡಬೇಕು. ನೀರಾವರಿ ಇಲಾಖೆಗೆ ನನ್ನ ಒತ್ತಾಯವಿರುವುದು ಏನೆಂದರೆ ....

ಉಪಾಧ್ಯಕ್ಷರು : ಮಾನ್ಯ ಮುನಿಯಪ್ಪನವರೇ, ಬೇಗ ಮುಗಿಸಿ, ಇನ್ನು ಬಹಳಷ್ಟು ಜನ ಮಾತನಾಡುವವರು ಇದ್ದಾರೆ.

ಶ್ರೀ ವಿ.ಮುನಿಯಪ್ಪ : ಸ್ವಾಮಿ ಇದು ಬಹಳ ಪ್ರಾಮುಖ್ಯವಾದಂಥ ವಿಚಾರ, ನೀರಾವರಿ ಇಲಾಖೆ ಬಗ್ಗೆ ನಾನು ಮಾತನಾಡುಲೇ ಬೇಕು. ಮಾತನಾಡುವವರು ಇದ್ದರೆ ನಾಳೆ ಮಾತನಾಡಲಿ, ಇಲ್ಲದಿದ್ದರೆ ಅಧಿವೇಶನವನ್ನು ಶನಿವಾರಕ್ಕೆ extend ಮಾಡಿ.

ಉಪಾಧ್ಯಕ್ಷರು : ಆ ಪ್ರಶ್ನೆ ಬರುವುದಿಲ್ಲ. ಬೇಗ ಮುಗಿಸಿ.

ಶ್ರೀ ವಿ.ಮುನಿಯಪ್ಪ : Extend ಮಾಡುವ ಹಾಗಿದ್ದರೆ ಮಾರಿ. ಒಂದು ದಿವಸ extend ಮಾಡಿದರೆ ಏನು ಆಗುವುದಿಲ್ಲ. ನಾವೆಲ್ಲಾ ಇಲ್ಲೇ ಇದ್ದೇವೆ. ಒಂದು ವಿಚಾರವೇನೆಂದರೆ, ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಆಂಧ್ರದಲ್ಲಿ

ಒಂದು ಲಕ್ಷ ಹದಿನೈದು ಸಾವಿರ ಕೋಟಿ ರೂಪಾಯಿಳ ಜಲಯಜ್ಞ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ನೀವು ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಕೊಡುವಂಥಹ ಕೆಲಸವನ್ನು ಮುಂಧಿನ ಬಜೆಟ್ನಲ್ಲಿ ಮಾಡಿ.ಇವತ್ತು ಮೂರು ಸಾವಿರ ಕೋಟಿಗಳನ್ನು ಇಟ್ಟಿದ್ದೀರಿ, ಹತ್ತು ವರ್ಷಗಳಿಂದ ಒಂದೂವರೆ ಸಾವಿರ ಕೋಟಿಗೆ ಏನು ಕೆಲಸವಾಗುತ್ತಿತ್ತೋ, ಇವತ್ತು ಅಷ್ಟೂ ಆಗುವುದಿಲ್ಲ. 25 ರಿಂದ 30% ಮಾಡಿದರೆ ಮಾತ್ರ ಕೆಲಸವಾಗುತ್ತದೆ. ಎಲ್ಲಾ S.R. rates high pitchಗೆ ಹೋಗಿದೆ. ನೀವು ಆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಕನಿಷ್ಠ ಹತ್ತು ಸಾವಿರ ಕೋಟಿ ಹಣವನ್ನು ಪ್ರತಿ ವರ್ಷ ನೀರಾವರಿಗೆ minimum ಆಗಿ ಇಡಬೇಕು. ಇಟ್ಟರೆ ಮಾತ್ರ ಶಾಶ್ವತವಾದ ನೀರಾವರಿ ಕಾರ್ಯಕ್ರಮಗಳನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುತ್ತದೆ. 2000 ಟಿ.ಎಂ.ಸಿ. ನೀರಲ್ಲಿ ಕನಿಷ್ಠ ಇನ್ನೂ 500 ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ, ಆ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ಸಣ್ಣ ನೀರಾವರಿ ಬಗ್ಗೆ ಹೇಳಬೇಕಾದರೆ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಇದ್ದಾರೆ ಎಂದು ಕಾಣುತ್ತದೆ. ನಮ್ಮ ಭಾಗಕ್ಕೆ ಸಣ್ಣ ನೀರಾವರಿ ಸಧ್ಯಕ್ಕೆ ಬಹಳ ಪ್ರಮುಖವಾದಂಥಾದ್ದು. ನಾವು ಅದರ ಮೇಲೆ ಆಧಾರವಾಗಿದ್ದೇವೆ. ನಮಗೆ ಇವತ್ತಿನವರೆಗೂ ಯಾವುದೂ ನದಿ-ನಾಲೆ ಇಲ್ಲ. ಮಾನ್ಯ ಬೊಮ್ಮಾಯಿ ಸಾಹೇಬರು ನಮ್ಮ ಕಡೆ ನದಿ-ನಾಲೆ, ಕಾಲುವೆ ತೋಡಿಸಿದರೆ ಅನುಕೂಲವಾಗುತ್ತದೆ. ಬಹುಶ: ಟಾ: ಸರ್.ಎಂ.ವಿಶ್ವೇಶ್ವರಯ್ಯನವರನ್ನು ಮಂಡ್ಯ ಜಿಲ್ಲೆಯಲ್ಲಿ ಪೂಜೆ ಮಾಡುತ್ತಿದ್ದಾರೋ, ಅದೇ ರೀತಿ ನಮ್ಮ ಜನರು ನಿಮ್ಮನ್ನು ಜ್ಞಾಪಕ ಮಾಡಿಕೊಳ್ಳುತ್ತಾರೆ. ಅದಕ್ಕೆ ಏನದರೂ ಬುನಾದಿಯನ್ನು ಹಾಕಿ. ಪ್ರಯತ್ನ ಮಾಡಿ ನೋಡೋಣ. ನಿಮಗೆ ಅಲ್ಲಿಯವರೆಗೆ ನಾವು ಅವಕಾಶ ಮಾಡಿಕೊಡುತ್ತೇವೆ. ನಮಗೆ ನೀರು ಕೊಟ್ಟವನು ದೊಡ್ಡಪ್ಪ ಅಷ್ಟೆ. ದುಡ್ಡನ್ನು ಕೊಟ್ಟವನು ದೊಡ್ಡಪ್ಪ ಹೇಗೋ ಹಾಗೆ ನಮಗೆ ನೀರು ನಮಗೂ ನೀರು ಕೊಟ್ಟವನು ದೊಡ್ಡಪ್ಪ ಅಷ್ಟೆ. ನಮಲ್ಲಿ ನೀರಿಗೆ ಅಷ್ಟು ಪ್ರಾಮುಖ್ಯತೆ ಇದೆ. ದುಡ್ಡು ಬೇಕಾದರೆ ಸಿಗುತ್ತದೆ, ಆದರೆ ನೀರು ಸಿಗುವುದಿಲ್ಲ, ಆ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ, ನೀರಿನ ಮಹತ್ವವನ್ನು ಅರ್ಥ ಮಾಡಿಕೊಂಡು ಇದಕ್ಕೆ ಶಾಶ್ವತವಾದ ನೀರಾವರಿ ಕಾರ್ತಕ್ರಮಕ್ಕೆ ಒತ್ತು ಕೊಡಿ. ನಾವು ಒತ್ತಾಯ ಮಾಡುತ್ತಿರುವುದು ಕುಡಿಯುವ ನೀರಿಗೆ, ಬೇರೆ ಯಾವುದಕ್ಕೂ ಅಲ್ಲ. ಇದು ಇನ್ನೊಂದು ಕಡೆಗೆ ತಮ್ಮ ಗಮನದಲ್ಲಿರಲಿ. ಅದರ ಜೊತೆಗೆ, ಕೊಳವೆ ಬಾವಿಗಳು ಚಾರ್ಜ್ ಆಗುತ್ತದೆ, ಅಂತರ್ಜಲ ಜಾಸ್ತಿಯಾಗುತ್ತದೆ. ನಮ್ಮ ವ್ಯವಸಾಯವನ್ನು ನಮ್ಮ ಪಾಡಿಗೆ ನಾವು ಮಾಡಿಕೊಳ್ಳುತ್ತೇವೆ. ನಮ್ಮ ಕೆರೆಗಳಿಗೆ ಕುಡಿಯುವ ನೀರನ್ನು ವರ್ಷಕ್ಕೆ ಎರಡು ಸಾರಿ ತುಂಬಿಸಿಕೊಟ್ಟರೆ ಸಾಕು. ಅಷ್ಟನ್ನೇ ನಾವು ಒತ್ತಾಯ ಮಾಡುವುದು. ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ನೀವು ಬಜೆಟ್‌ನಲ್ಲಿ provision ಮಾಡುವ ಕೆಲಸವನ್ನು ಮಾಡಿದರೆ ಅನುಕೂಲ. ಎಲ್ಲಾ ಕೆಲಸಗಳನ್ನು ನಿಲ್ಲಸಿ, ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಅಭಿವೃದ್ಧ

ಎನ್ನುವ ಪದಕ್ಕೆ ಅರ್ಥವಿರುವುದಿಲ್ಲ. ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ಬರೀ ಮಾತಿನಲ್ಲಿ ಹೇಳಿದರೆ ಏನು ಅರ್ಥ? ಅದಕ್ಕೆ ಅರ್ಥ ಬರಬೇಕಾದರೆ, ತಾವು ಕಾರ್ಯಕ್ರಮಗಳನ್ನು ಕೊಡಬೇಕು, ಅದರ ಪ್ರತಿಫಲವನ್ನೂ ನೋಡಬೇಕು. ಅಂತಹ ಕಾರ್ಯಕ್ರಮಗಳಿಗೆ ನೀವು ಹೆಚ್ಚಿನ ಒತ್ತು ಕೊಡಬೇಕು. ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ಬಜೆಟ್‌ನಲ್ಲಿ ಇಡುವ ಕೆಲಸವಾಗಬೇಕು ಎಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಸಾಕಷ್ಟು ಜನ ಮಾತನಾಡುವವರು ಇದ್ದಾರೆ. ತಾವು ಒಂದು ಗಂಟೆಗಿಂತ ಹೆಚ್ಚಾಗಿ ಮಾತನಾಡಿದ್ದೀರಿ. ಬೇರೆಯವರಿಗೆ ಅವಕಾಶ ಕೊಡಬೇಕು.

ಶ್ರೀ ವಿ.ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೆ, ಸೂಕ್ಷ್ಮವಾಗಿ ಹೇಳುತ್ತೇನೆ. ಡಾ: ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಹಣ ಕೊಟ್ಟರು, ಬಂದ ಹಣದಲ್ಲಿ ಅನುಕೂಲ ಮಾಡಲು, ನಮ್ಮನ್ನು action plan ಕೊಡಿ ಎಂದು ಕೇಳಿದರು, action plan ಕೊಟ್ಟೆವು. ಎಲ್ಲಾ ready ಆಯಿತು. ನಾವು ಜನಗಳಿಗೆ ಹೇಳಿದೆವು, ಡಾ:ನಂಜುಂಡಪ್ಪ ವರದಿಯಲ್ಲಿ ಹಣ ಬಂದಿದೆ, ರಸ್ತೆ ಮಾಡಿಸುತ್ತೇವೆ ಎಂದು ಜನರಿಗೆ ಹೇಳಿದೆವು. ಅದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಆ ರಸ್ತೆಗೆ ಹೋದರೆ, ಜನರು ಸುಳ್ಳು ಹೇಳಿದಿರಿ ಶಾಸಕರೇ ಎಂದು ಕೇಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ : RDPRರವರು ಕೊಡಬೇಕು.

ಶ್ರೀ ವಿ.ಮುನಿಯಪ್ಪ : RDPRನವರು ಆದರೂ ಹಣವನ್ನು ಕೊಡಬೇಕಾಗಿತ್ತು. ಅವರು ಎಲ್ಲಿಗೆ ಕೊಟ್ಟರೋ ದೇವರಿಗೆ ಗೊತ್ತು. ಇದು ಬಹಳ ಅನ್ಯಾಯ. ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಿ, ಅದಕ್ಕೆ ಹಣ ಬಿಡುಗಡೆ ಮಾಡಿ, action plan ಮಾಡಿ, approve ಮಾಡಿ, ಮತ್ತೆ ಅದನ್ನು suspense ನಲ್ಲಿ ಇಡುವುದು ಎಂದರೆ, ಅದಕ್ಕಿಂತ ಶೋಚನೀಯ ಇನ್ನೊಂದಿಲ್ಲ. ಇದನ್ನೆಲ್ಲಾ ಏಕೆ ಮಾಡುತ್ತೀರಿ? ನಮಗೆ ಮಾದಲೇ ನೀವು ಹೇಳಲಿಲ್ಲವೆಂದರೆ, ನಾವು ಕಮಿಟ್ ಆಗುತ್ತಿರಲಿಲ್ಲ. ದಯವಿಟ್ಟು ಇದರ ಕಡೆಗೆ ಗಮನಕೊಟ್ಟು, ತಾವು ತಮ್ಮ ಇಲಾಖೆಯಿಂದ ಏನು action plan ಮಾಡಿಸಿದ್ದೇರಿ, ಅದನ್ನು ಅನುಷ್ಠಾನ ಮಾಡಿಸುವುದಕ್ಕೆ ತಾವು ದುವಿಟ್ಟು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ರಸ್ತೆಗಳು ಬಹಳ ಕೆಟ್ಟುಹೋಗಿವೆ. ನಮಗೆ ಮಳೆ ಬರಲಿಲ್ಲ. ನಂತರ ಬಂದ ಮಳೆ 15 ದಿವಸದಲ್ಲಿ ಬಂದುಬಿಟ್ಟಿತು. 700 ಸೆಂಟಿ ಮೀಟರ್ ಬೀಳುವ ಮಳೆ, 500 ಸೆಂಟಿ ಮೀಟರ್ ಮಳೆ ಕೇವಲ 15 ದಿವಸಗಳಲ್ಲಿ ಬಂದಿತು, ಏಕಾಏಕಿ ಮಳೆ ಬಂದು, ಪೂರ್ತಿ ರಸ್ತೆಗಳು ಎಲ್ಲಾ ಶಿಥಿಲವಾಗಿಬಿಟ್ಟಿವೆ. ಇದಕ್ಕೆ ಏನಾದರೂ ಒಂದು special package ಮಾಡಿಕೊಡಿ. ಈ take over roads ಅನ್ನು ಕೇಳುವವರು ಇಲ್ಲದ ಹಾಗೆ ಆಗಿದೆ. ZP ಅವರು ಕೇಳುವುದಿಲ್ಲ, ನೀವು ಕೇಳುವುದನ್ನು ಬಿಟ್ಟಿದ್ದೀರಿ. ಆ ರಸ್ತೆಗಳ ಗತಿಯೇಣು?

ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ಮೇಲೆ ತಕ್ಷಣ ಏನಾದರೂ ಕಾರ್ಯಕ್ರಮ ಮಾಡಬೇಕು. Take over roadsಗಾದರೂ ಒಂದು special package ಮಾಡಿ, ಸ್ವಾಮಿ. ಈಗ main roads, state highways, district roads ಆಗುತ್ತಿವೆ. ಆದರೆ, ZPಯಿಂದ ತೆಗೆದುಕೊಂಡಿರುವ take over roadsಗೆ ಯಾವುದೇ ಅನುದಾನವಿಲ್ಲ. ಬಹಳ ತೊಂಧರೆಯಾಗಿದೆ, ಕೇವಲ ನಮ್ಮ ಕಡೆಯೇ ಅಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಈ ಸಮಸ್ಯೆಗೆ ಸರಿಯಾದ ಪರಿಹಾರವನ್ನು ದಯಮಾಡಿ ಕೊಡಬೇಕು.

5.00 PM

ಇನ್ನು ರೇಷ್ಮೆ ಇಲಾಖೆಯು ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ನಮಗೆ ಒಂದು ಕಡೆ ಹಾಲು, ಇನ್ನೊಂದು ಕಡೆ ರೇಷ್ಮೆ, ಕಾಮಧೇನು, ಕಲ್ಪವೃಕ್ಷ ಇದ್ದ ಹಾಗೆ, ಕಾಮಧೇನು ಹಾಲು ಕೊಡುತತದೆ. ಕಲ್ಪವೃಕ್ಷ ಎಂದರೆ ಹಿಪ್ಪುನೇರಳೆ, ನಮಗೆ ಹಿಪ್ಪುನೇರಳೆ ಬೆಳೆಯೇ ಕಲ್ಪವೃಕ್ಷ. ಅಂಥದ್ದಕ್ಕೆ ಇವತ್ತು ಕಷ್ಟ ಬಂದಿದೆ. ಇವತ್ತು ರೇಷ್ಮೆ ಇಲಾಖೆಯ ಮಂತ್ರಿಗಳು ಇಲ್ಲಿ ಇಲ್ಲ. ಅದರೂ ಪರವಾಗಿಲ್ಲ. ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ, ನಾನು ಸಹ ಮಾಜಿ ರೇಷ್ಮೆ ಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದೇನೆ. ಬಿತ್ತನೆ ವಲಯ ಬಹಳ ಹದಗೆಟ್ಟಿದೆ. 100ಕ್ಕೆ 50% ಬೆಳೆಯಾಗುತ್ತಿಲ್ಲ. ಅದುದರಿಂದ, ನನ್ನ ಸಲಹೇ ಏನೆಂಧರೆ, ಬಿತ್ತನೆ ವಲಯದಲ್ಲಿ ಪ್ರತಿಯೊಬ್ಬರ ಮನೆಗೂ Central Silk Boardನಿಂದ Warehouses ಗೆ ಹಣ ಕೊಡುತ್ತಿದ್ದಾರೆ. ಅದನ್ನು ಉಚಿತವಾಗಿ 10 ಎಕರೆ ಇರಲಿ, 20 ಎಕರೆ ಇರಲಿ, ಪ್ರತಿಯೊಬ್ಬರಿಗೂ ಹುಳು ಸಾಕಾಣಿಕೆ ಮಾಡಲು, ಪ್ರತ್ಯೇಕವಾಗಿ living-cum-warehouse ಇರಬಾರದು. Independent warehouse ಇರಬೇಕು. ಅದನ್ನು ಸರ್ಕಾರವೇ ಕಟ್ಟಿಸಿಕೊಡಬೇಕು exclusive ಆಗಿ ಬಿತ್ತನೆ ವಲಯದಲ್ಲಿ, ಆ ಕೆಲಸವನ್ನು ಸರ್ಕಾರ ಮಾಡಬೇಕು. ರಾಸಾಯನಿಕ ಗೊಬ್ಬರವನ್ನು ಹಾಕುತ್ತಿದ್ದಾರೆ ಮಾದಲಿನಿಂದಲ್ಲೂ ರಾಸಾಯನಿಕ ಗೊಬ್ಬರಕ್ಕೆ ಬ್ಯಾನ್ ಇದೆ. ಅದನ್ನು ಪೂರ್ಣವಾಗಿ ತಡೆಗಟ್ಟಬೇಕು. ಅದಕ್ಕೆ ಕೊಟ್ಟಿಗೆ ಗೊಬ್ಬರ ಹಾಕಲು ಒತ್ತಾಯ ಮಾಡಬೇಕು. Mass Disease Control function, ಸಾಮೂಹಿಕ ರೋಗ ನಿಯಂತ್ರಣ ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ. ಆ ಕಾರ್ಯಕ್ರಮವನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ರೋಗಗಳು ಹೆಚ್ಚಾಗುತ್ತಿವೆ. ಬಿತ್ತನೆ ವಲಯ ಎಷ್ಟು ಚೆನ್ನಾಗಿ ರೋಗ ಮುಕ್ತವಾಗಿರುತ್ತದೆಯೋ ಅಷ್ಟು ಗುಣಮಟ್ಟ ಬಿತ್ತನೆ ಬರಲು ಸಾಧ್ಯವಾಗುತ್ತದೆ. ಸುಮಾರು 5–10 ವರ್ಷಗಳಿಂದ ಮಣ್ಣಿನ ಪರೀಕ್ಷೆ ಮಾಡುತ್ತಿಲ್ಲ. ರೇಷ್ಮೆ ಇಲಾಖೆಯವರು ಮಣ್ಣಿನ ಪರದಕ್ಕೆ ಮಾಡುವ ಕೆಲಸವನ್ನು ಕನಿಷ್ಟಪಕ್ಷ ಬಿತ್ತನೆ ವಲಯದಲ್ಲಾದರೂ ಮಾಡಲಿ. ಇದಕ್ಕೋಸ್ಕರ ತಲಘಟ್ಟಪುರದಲ್ಲಿ ಸಂಶೋಧನಾ ಕೇಂದ್ರವಿದೆ. ಅದು total defunct ಆಗಿದೆ. ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶವೆಂದರೆ, ಉತ್ತಮವಾದ ತಳಿಗಳನ್ನು ಸಂಶೋಧನೆ

ಮಾಡಿ field ಗೆ ಬಿಡುವುದು. ಆದರೆ, ಕಳೆದ ಐದಾರು ವರ್ಷಗಳಿಂದ ಉಆವುದೇ ಹೊಸ ರೇಷ್ಮೆ ತಳಿ ಬರಲಿಲ್ಲ. ಸಂಶೋಧನಾ ಕೇಂದ್ರವನ್ನು ಬಲಪಡಿಸುವ ಮುಖಾಂತರ ಉತ್ತಮ ರೇಷ್ಮೆ ತಳಿಯನ್ನು ಬಿಡುಗಡೆ ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಇನ್ನು ಎಸ್.ಸಿ., ಎಸ್.ಟಿ ಕಾರ್ಪೋರೇಷನ್ ಅವರು ಕೊಳವೆ ಬಾವಿಗಳನ್ನು ಕೊಡುತ್ತಿದ್ದಾರೆ. 40–50 ಎಷ್ಟಾದರೂ ಕೊಡಿಲಿ. ಸುಮಾರು ಹತ್ತು ವರ್ಷದಿಂದಲೂ ಒಂಧು ಕೊಳವೆ ಬಾವಿಗೆ ಒಂದು ಲಕ್ಷ ರೂಪಾಯಿ ಎಂದು ನಿಗದಿ ಮಾಡಿದ್ದಾರೆ. ಒಂದು ಕೊಳವೆ ಬಾವಿ ತೋಡಿಸಿ, ಮಓಟರ್ ಪಂಪ್ ಹಾಕಿ, ವಿದ್ಯುತ್ ಸಂಪರ್ಕ ಮಾಡಬೇಕಾದರೆ, ಸುಮಾರು ಎರಡೂವರೆಯಿಂದ ಮೂರು ಲಕ್ಷ ರೂಪಾಯಿ ಬೇಕು. ಹತ್ತು ವರ್ಷದಿಂದ ಒಂದೇ ಲಕ್ಷ ಕೊಡುತ್ತಿದ್ದಾರೆ. ಇವತ್ತು cost ಕೊಟ್ಟರೆ ಏನಾಗುವುದಿಲ್ಲ. ಎಲ್ಲೆಲ್ಲಿ 500 ಅಡಿಗೂ ಮೀಲ್ಪಟ್ಟು ಕೊಳವೆ ಬಾವಿಗಳನ್ನು ತೋಡುತ್ತಾರೆ, ಅಲ್ಲಿಯಾದರೂ ಕನಿಷ್ಟ ಮೂರು ಲಕ್ಷ ರೂಪಾಯಿ ಕೊಡುವ ಹಾಗೆ ಮಾಡಬೇಕು. ಇಲ್ಲವಶದರೆ ಎಸ್.ಸೊ., ಎಸ್.ಟಿ.ಕಾರ್ಪೋರೇಷನ್ ವತಿಯಿಂದ ಕೊಡುತ್ತಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುವುದಿಲ್ಲ. ಸುಮ್ಮನೆ ನಾಮಕಾವಸ್ಥೆಗೆ ಹಾಕಿ ಅರ್ಧಂಬರ್ಧಕ್ಕೆ ಕೈ ಬಿಟ್ಟು ಬಿಡುತ್ತಾರೆ. ಅದರ purpose ಸರಿಹೋಗುವುದಿಲ್ಲ. ದಯವಿಟ್ಟು, ಎಸ್.ಸಿ, ಎಸ್.ಟಿ ಕಾರ್ಪೋರೇಷನ್, ಸಮಾಜ ಕಲ್ಯಾಣ ಇಲಾಖೆಯವರು ತಕ್ಷಣ ಅದರ ಬೆಲೆಯನ್ನು ಕನಿಷ್ಟ ಎರಡು ಲಕ್ಷ ರೂಪಾಯಿಗಾದರೂ ಹೆಚ್ಚಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು : ಒಂದು ಗಂಟೆಯಾಯಿತು, ಸಾಕಷ್ಟು ಜನ ಮಾತನಾಡುವವರಿದ್ದಾರೆ, ದಯವಿಟ್ಟು ಬೇಗ ಮುಗಿಸಿ.

ಶ್ರೀ ವಿ.ಮುನಿಯಪ್ಪ : ಜನಸಾಮಾನ್ಯರ ತೆರಿಗೆ ವಿಚಾರದ ಬಗ್ಗೆ ನಾನು ಮಾತನಾಡಬೇಕಾಗಿತ್ತು, Value Added Taxನಲ್ಲಿ ಬಹಳ ಅನ್ಯಾಯವಾಗುತ್ತಿದೆ.

ಉಪಾಧ್ಯಕ್ಷರು : ತಾವು senior ಇದ್ದೀರಿ. ಸ್ವಲ್ಪ ಹೊಸ ಸದಸ್ಯರಿಗೆ ಅವಕಾಶ ಕೊಡೋಣ. ಅವರ ಸಲಹೆಗಳನ್ನೂ ಕೇಳೋಣ.

ಶ್ರೀ ವಿ.ಮುನಿಯಪ್ಪ : ಹೊಸ builders reimburse ಮಾಡುವುದರಲ್ಲಿ, VATನಲ್ಲಿ ಹೊಸ ಪದ್ಧತಿಯನ್ನು ಕಲಿತುಕೊಂಡಿದ್ದಾರೆ. ತೆರಿಗೆಯನ್ನು ಕಟ್ಟುವಲ್ಲಿ ಹೊಸ ಪದ್ಧತಿಯನ್ನು ಕಲಿತುಕೊಂಡಿರುವುದರಿಂದ ನಮ್ಮ ಖಜಾನೆಗೆ ಬರುವ ಹಣದಲ್ಲಿ ಮೋಸವಾಗುತ್ತಿದೆ. VAT ವ್ಯವಸ್ಥೆಯಲ್ಲಿ ಹಲವಾರು ದೋಷಗಳಿವೆ. ಅನೇಕ builders ಬೇರೆ ಬೇರೆ ಕಂಪನಿಗಳನ್ನು register ಮಾಡಿ, ಅದರಲ್ಲಿ ಯಾವ್ಯಾವ ಹಣ, ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಾರೆ, project complete ಆದ ಮೇಲೆ ಏನೇನು ಕಟ್ಟಬೇಕು. ಅದರಲ್ಲಿ ಉಳಿತಾಯವಾಗಿರುವುದರಲ್ಲಿ ಅವರು

reimburse ಮಾಡಿಕೊಳ್ಳಬೇಕು. ಅದರಲ್ಲಿ ಮೋಸ ಮಾಡುತ್ತಿದ್ದಾರೆ ಎನ್ನುವ ದೂರು ಇದೆ. ಅದನ್ನು ಸಿಪಡಿಸುವ ಕೆಲಸವನ್ನು ಮಾಡಬೇಕು. ಸರ್ಕಾರಕ್ಕೆ ಹಣ ಬಂದರೆ ತಾನೆ, demand ಅನ್ನು ಪೂರ್ತಿಗೊಳಿಸುವುದು. ನನಗೆ ಮಾತನಾಡಲು ಇನ್ನೂ 10–15 ನಿಮಿಷ ಬೇಕಾಗಿತ್ತು. ಆದರೆ, ತಾವು ಒತ್ತಾಯ ಮಾಡುತ್ತಿದ್ದೀರಿ. ಅದರೂ ಚಿಂತೆ ಇಲ್ಲ. ಸರ್ಕಾರವು ನಾನು ಕೊಟ್ಟಿರುವ ಸಲಹೆಗಳಲ್ಲಿ, ವಿದ್ಯುತ್ ಬಗ್ಗೆ, ನೀರಾವರಿ ಬಗ್ಗೆ, ನಮ್ಮ ರೇಷ್ಮೆ ಇಲಾಖೆ ಬಗ್ಗೆ ಮತ್ತು ಮಾನ್ಯ ಡಾ.ಪರಮಶಿವಯ್ಯನವರು ಕೊಟ್ಟಿರುವ ವರದಿ ಬಗ್ಗೆ ಆದ್ಯತೆ ಮೇರೆಗೆ ತೆಗೆದುಕೊಂಡು ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸಿ.ಟಿ.ರವಿ ಅವರು ಮಾತನಾಡಬೇಕು.

ಶ್ರೀ ಸಿ.ಟಿ.ರವಿ : ಚಿಕ್ಕಮಂಗಳೂರು ಮಾನ್ಯ ಉಪಾಧ್ಯಕ್ಷರೆ, ಮುಂಗಡಪತ್ರದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ನಮ್ಮ ಕಡೆ ಒಂದು ಗಾದೆ ಇದೆ, ಆಗದವರಿಗೆ ತುಪ್ಪದಲ್ಲಿ ಕರೆದುಕೊಟ್ಟರೂ ಅವರಿಗೆ ರುಚಿ ಕಾಣುವುದಿಲ್ಲವಂತೆ. ಹಾಗೆ ಈ ಬಜೆಟ್ ಅನ್ನು ಎಷ್ಟೇ ಜನಪ್ರಿಯವಾಗಿ, ಜನಪರವಾಗಿ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮಂಡಿಸಿದರೂ ಆ ಕಡೆಯವರೆಗೆ ತೃಪ್ತಿಯಾಗುವ ಹಾಗೆ ಇಲ್ಲ. ಏಕೆಂದರೆ, ಒಲ್ಲದ ಗಂಡ, ಹೇಗಿದ್ದರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾಡೇ ಮಾಡುತ್ತಾರೆ ಅವರು. ಆದರೆ, ಅವರಿಗೆ ಏನನ್ನಿಸುತ್ತದೆ ಎನ್ನುವುದನ್ನು ನಾವು ಗಣನಿಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಡಾ.ಹೆಚ್.ಸಿ.ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಕಡೆಯವರೆಗೆ ಏಕೆ ಸಮಾಧಾನ, ತೃಪ್ತಿಯಾಗುತ್ತಿಲ್ಲವೆಂದರೆ, ಮಾನ್ಯ ಯಡಿಯೂರಪ್ಪನವರು ಈ ಕಡೆ ಇದ್ದಾಗ ಏನೇನು ಹೇಳಿದ್ದರೋ ಅದು ಒಂದೂ ಇಲ್ಲ. ಅದಕ್ಕೋಸ್ಕರ ತೃಪ್ತಿಯಾಗುತ್ತಿಲ್ಲ.

ಶ್ರೀ ಸಿ.ಟಿ.ರವಿ : ನಾನು ಅನಂತರ ಆ ವಿಷಯಕ್ಕೆ ಬರುತ್ತೇನೆ. ಈಗ ಇವರು ಏನು ಹೇಳುತ್ತಾರೆ ಎನ್ನುವುದು ಮುಖ್ಯವಲ್ಲ. ಮಾನ್ನೆ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾದ ಸನ್ಮಾನ್ಯ ಡಿ.ಕೆ.ಶಿವಕುಮಾರ್ ಅವರು ಆಂಗ್ಲ ಪತ್ರಿಕೆಗಳನ್ನು ಹಿಡಿದುಕೊಂಡು ಈ ಸರ್ಕಾರದ ಬಗ್ಗೆ ಆಂಗ್ಲ ಪತ್ರಿಕೆಗಳು ಏನು ಬರೆಯುತ್ತವೆ ಎನ್ನುವುದನ್ನು ಇಲ್ಲಿ ವಿವರವಾಗಿ ಬಿಡಿಸಿ ಹೇಳುತ್ತಿದ್ದರು. ಈ ಪತ್ರಿಕೆಗಳು ಅಂದರೆ, ಜನಸಾಮಾಣ್ಯರಿಗೆ ಗೊತ್ತಿರದ ಭಾಷೆಯಲ್ಲಿ ಬರೆಯುವಂಥ, ಬುದ್ಧಿಜೀವಿಗಳಿಗೆ ಮತ್ತು ಕೆಲವೇ ಜನರಿಗೆ ಸೀಮಿತವಾಗಿರುವ ಪತ್ರಿಕೆಗಳು, ವಾದಗಳು ಒಂದು ಕಡೆ ಇರಲಿ. ರಾಜ್ಯದ ಮಾತೃ ಭಾಷೆಯ ಪತ್ರಿಕೆಗಳು ಏನು ಬರೆದಿವೆ ಎನ್ನುವುದನ್ನು ನೋಡಿ. ಕನ್ನಡ ಪ್ರಭ ಪತ್ರಿಕೆಯ ಪುಣ್ಯಕೋಟಿ ಬಜೆಟ್ ಎಂದು ಶೀರ್ಷಿಕೆಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ನಾನು ಓದುತ್ತೇನೆ ಕೇಳಿ, ನೀವೆಲ್ಲಾ ಓದಿದ್ದೀರೆಂದು ನಾನು ಸುಮ್ಮನಿದ್ದೆ. ನೀವು ಓದಿಲ್ಲವೆಂದರೆ ನಾನು ಓದುತ್ತೇನೆ. ರೈತರು ಫುಲ್ ಖುಷ್, ವಾಣಿಜ್ಯ ಬ್ಯಾಂಕಿನಲ್ಲೂ ಶೇಕಡ ಮೂರರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ. ಇವರು ಚಪ್ಪಾಳೆ ತಟ್ಟುವರೇ? ಇವರು ಹೇಳುವುದಕ್ಕೆ ತಯಾರಿಲ್ಲ. ಏಕೆಂದರೆ......

(ಗೊಂದಲ)

ಶ್ರೀ ಸಿ.ಟಿ.ರವಿ : ನೀರಾವರಿಗೆ ಧಾರಾಳ ಹಣ, 3,096ಕೋಟಿ. ಕಳೆದ ಬಾರಿಗಿಂತ ಶೇಕಡ 20ರಷ್ಟು ಹೆಚ್ಚು.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವ ಪತ್ರಿಕೆ ಅದು? ನೀವೆ ಮನೆಯಿಂದ ಪ್ರಿಂಟ್ ಮಾಡಿಕೊಂಡು ಬಂದಿರಬಹುದು. ಕಳೆದ ಸಲಕ್ಕಿಂಥ 20% ಹೆಚ್ಚು, ನಮಗೆ ನಗು ಬರುತ್ತಿದೆ......

ಶ್ರೀ ಸಿ.ಟಿ.ರವಿ : ನಿಮಗೆ ಅರ್ಥವಾಗುವ ಭಾಷೆಯಲ್ಲಿಯೇ ಪ್ರಿಂಟ್ ಆಗಿರುವ ಪತಿಕೆ. ಮಾತೃ ಭಾಷೆಯೂ ಬರದೇ ಇದ್ದರೆ, ಅದಕ್ಕೆ ನಾನೇನು ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಸಾಯಂಕಾಲದ ಶಾಲೆಯನ್ನು ತೆರೆದು ಮಾತೃ ಭಾಷೆಯನ್ನು ಕಲಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರಿಗೆ ವಿನಂತಿ ಮಾಡುತ್ತೇನೆ. ಹಿಂದೆ ಒಂದು ಶಾಲೆ ಇತ್ತಲ್ಲ ವಿಜಯಕುಮಾರ್, ಅದಕ್ಕೆ ಏನು ಹೇಳುತ್ತಾರೆ? ವಯಸ್ಕರ ಶಿಕ್ಷಣ ಎಂದು. ಇವರಿಗೆ ವಯಸ್ಕರ ಎಂದು ಹೇಳಲು ಬರುವುದಿಲ್ಲ. ಇನ್ನೂ ಹುಡುಗರೇ ಇದ್ದಾರೆ. ಇಂಥವರಿಗೆ ಮಾತೃ ಭಾಷೆ ಶಿಕ್ಷಣ ಕಲಿಸಿಕೊಡಲು ಎಲ್ಲಾದರೂ ಒಂದು ಶಾಲೆಯನ್ನು ತೆರೆದು, ಆ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಏನು ಬೇಕೋ ಅದನ್ನು ಹೇಳಿ ಕೊಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಈ ಸಂಜೆ ಪತ್ರಿಕೆಯ ವೆಂಕಟೇಶ್‌ಅವರು ಏನು ಬರೆದಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಸಿ.ಟಿ.ರವಿ : ಈ ಸಂಜೆ ಪತ್ರಿಕೆಯ ವೆಂಕಟೇಶ್‌ಅವರು ಏನು ಬರೆದಿದ್ದಾರೆ, ಅದನ್ನೂ ಹೇಳುತ್ತೇನೆ. ಬೆಂಗಳೂರಿಗೆ ಒಟ್ಟು 6 ಸಾವಿರ ಕೋಟಿ, ರಸ್ತೆ ಸರ್ವಾಂಗೀಣ ಅಭಿವೃದ್ಧಿಗೆ ಬಳಕೆ, ಇನ್ನೇನು ಮಾಡಬೇಕು? ಅದು ಯಾವ ಕಾಲದಲ್ಲಿ ಇತ್ತು ಇಡೀ ವಿಶ್ವದಲ್ಲೇ ಆರ್ಥಿಕ ಸಂಕಷ್ಟ ಇರುವ ಈ ಸಂದರ್ಭದಲ್ಲಿ ಇಷ್ಟು ಒಳ್ಳೆಯ ಬಜೆಟ್ ಕೊಟ್ಟ ಮೇಲೂ, ಟೀಕೆ ಮಾಡಬೇಕೆಂದು ಟೀಕೆ ಮಾಡುವುದೋ ಅಥವಾ ಏನು? ಅಲ್ಲಿ ಖಾಸಗಿಯಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಬಜೆಟ್ ಬಹಳ ಚೆನ್ನಾಗಿತ್ತು, first class ಎಂದು ಅಭಿನಂದಿಸುತ್ತಾರೆ. ಇದೆಲ್ಲಾ ನಿಮಗೆ ಹೇಗೆ ಹೊಳೆಯಿತು, ನಮ್ಮವರಿಗೆ ತಲೆಯೇ ಓಡಲಿಲ್ಲವಲ್ಲ ಸಾರ್ ಎಂದು ಅಲ್ಲಿ ಹೇಳುತ್ತಾರೆ. ಇಲ್ಲಿ ಬಂದು ಟೀಕೆ ಮಾಡುತ್ತಾರೆ. ಇದು ಯಾವ ನ್ಯಾಯ ? ದೇವರು ಮೆಚ್ಚುತ್ತಾನೆಯೇ? ಕೊನೆ ಪಕ್ಷ ದೇವರು ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳಬೇಕಲ್ಲವೇ?

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾರ್‍ಯಾರು ಆ ರೀತಿ ಅಭಿನಂಧಿಸಿದ್ದಾರೆಂದು ಹೇಳಲಿ. ನಿಮ್ಮ ನಾಯಕರು ನೀವು ಹಾಗೆ ಹೇಳಿದರೆ ನಿಮ್ಮನ್ನು ಮಂತ್ರಿಯಾಗಿಯೂ ಮಾಡುವುದಿಲ್ಲ. ಅಧ್ಯಕ್ಷರಾಗಿಯೂ ಮಾಡುವುದಿಲ್ಲ....

(ಗೊಂದಲ)

ಉಪಾಧ್ಯಕ್ಷರು : ಅವರು ಮಾತನಾಡಲಿ.

ಶ್ರೀ ಸಿ.ಟಿ.ರವಿ : ಯಾರ್‍ಯಾರು ಅಭಿನಂದಿಸಿದರು ಎನ್ನುವುದನ್ನು ನಾನು ಹೇಳಬಹುದು. ನನಗೇನು ಕಿರಿಕಿರಿ ಇಲ್ಲ. ಅವರಿಗೇ ಕಿರಿಕಿರಿ. ಅಲ್ಲೇ ಕಿರಿಕಿರಿ. ಹಾಗಾಗಿ ಹೇಳುವುದಿಲ್ಲ. ಹೇಳಲು ನನಗೇನು ಸಮಸ್ಯೆ ಇಲ್ಲ. ಹೇಳಬೇಕೆಂದರೆ ನಾನು ಹೇಲಿಬಿಡುತ್ತೇನೆ. ಆದರೆ, ಅವರಿಗೇ ಸಮಸ್ಯೆ. ಬೇಕಾದರೆ ಹೇಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ನೀವು ಅವರ ಹತ್ತಿರ ಹೇಳಿಸಬೇಕು.

ಶ್ರೀ ಸಿ.ಟಿ.ರವಿ : ನೀವು ಇದನ್ನೇ ಕಾಯುತ್ತಿದ್ದೀರಿ. ನೀವು ತಲೆ ಮೇಲೆ ಚಪ್ಪಡಿ ಎಳೆಯಬಹುದು ಎಂದು ಇದನ್ನೇ ಕಾಯುತ್ತಿದ್ದೀರಿ. ಹಾಗಾಗಿ ನಿಮ್ಮ ಪಕ್ಕದಲ್ಲಿರುವವರ ಹೆಸರನ್ನು ನಾನು ಹೇಳುವುದಿಲ್ಲ. ಚಪ್ಪಡಿ ಎಳೆಯಬಹುದೆಂದು ನೀವು ಕಾಯುತ್ತಿರುತ್ತೀರಿ.

ಶ್ರೀ ಟಿ.ಬಿ.ಜಯಚಂದ್ರ : ಬಜೆಟ್ ಮಂಡನೆಯಾದ ಬಳಿಕ ಪತ್ರಿಕೆಗಳಲ್ಲಿ ಏನು ವರದಿಯಾಗಿದೆ ಎಂಬುದನ್ನು ನೀವು ಓದುತ್ತಿದ್ದೀರಿ. ಅದನ್ನು ನಾವೆಲ್ಲರೂ ಕೂಡ ಓದಿದ್ದೇವೆ ಮತ್ತು ರಾಜ್ಯದ ಜನರೆಲ್ಲರೂ ಓದಿದ್ದಾರೆ. ಆದರೆ, ವಿಷಯ ಅದಲ್ಲ. ಬಜೆಟ್‌ನಲ್ಲಿರುವಂತೆ ಪತ್ರಿಕೆಗಳಲ್ಲಿ ಬರೆದಿರುವುದು ಮುಖ್ಯವಲ್ಲ. Editorialನಲ್ಲಿ ಬರೆದಿದ್ದಾರಲ್ಲ,ದಯಮಾಡಿ ಅದನ್ನು ಓದಿ. ಯಾವುದಾದರೂ ಒಂದು ಪತ್ರಿಕೆಯವರಾದರೂ appreciate ಮಾಡಿದ್ದರೆ, ನಾನು ಒಪ್ಪುತ್ತೇನೆ. ಬಜೆಟ್‌ನಲ್ಲಿರುವುದನ್ನೇ ಯಥಾವತ್ತಾಗಿ ಬರೆದಿದ್ದಾರೆ. ಆದರೆ, editorialನಲ್ಲಿ ಬರೆದಿದ್ದಾರೆ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಸಿ.ಟಿ.ರವಿ : Appreciate ಮಾಡುವವರು ಯಾರು ಗೊತ್ತೇ? ಈ ರಾಜ್ಯದ ಜನರು. ಮುಂದೆ ಚುನಾವಣೆ ಬರುತ್ತದಲ್ಲ, ಈಗ appreciate ಮಾಡುತ್ತಾರೆ. ನೀವು ಏನು ಹೇಳುತ್ತೀರೆಂಬುದು ಮುಖ್ಯವಲ್ಲ. ಸನ್ಮಾನ್ಯ ಜಯಚಂದ್ರರವರೆ, ಈಗ ಚರ್ಚೆಯಾಗುತ್ತಿರುವುದು ಈ ಮುಂಗಡ ಪತ್ರದ ಮೇಲೆ ತಾನೆ? ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದನ್ನು ಹೊರಗಡೆ ನಾವು ಮತ್ತು ನೀವು ಹೇಗೆ ಬೇಕೋ ಹಾಗೆ ಮಾತನಾಡಿಕೊಳ್ಳೋಣ. ಜನರು ತೀರ್ಮಾನ ಮಾಡುತ್ತಾರೆ. **"ವಿಜಯ ಕರ್ನಾಟಕ"** – ಮಹಾ ಚುನಾವಣೆಗೆ ಮುನ್ನ ಮಹಾಪ್ರಸಾದ. ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ವಿದ್ಯುತ್, ಸಾರಿಗೆ, ನಗರಾಭಿವೃದ್ಧಿ, ಶಿಕ್ಷಣ ಕ್ಷೇತ್ರಗಳಿಗೆ ಬಜೆಟ್‌ನಲ್ಲಿ ಆದ್ಯತೆ. ರೈತರಿಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ

ಬ್ಯಾಂಕುಗಳಿಂದಲೂ ಶೇಕಡ 3ರ ಬಡ್ಡಿ ದರದಲ್ಲಿ ಕೃಷಿ ಸಾಲ ಸೌಲಭ್ಯ, ನೀರಾವರಿ ಯೋಜನೆಗಳಿಗೆ 4,700 ಕೋಟಿ ರೂ.. ಇನ್ನು ಅವರು **"ಪ್ರಜಾವಾಣಿ"** ದಿನಪತ್ರಿಕೆ ಬಗ್ಗೆ ಹೇಳುತ್ತಿದ್ದರು. ಅದನ್ನೂ ಹೇಳಿಬಿಡುತ್ತೇನೆ. ಸರ್ವರಿಗೂ ಸಂಪ್ರೀತಿ, ಕೃಷಿ ಸಾಲ ಅಗ್ಗ, ಶಿಕ್ಷಣಕ್ಕೆ ಎಂಟರ ನಂಟು, ಇನ್ನಷ್ಟು ತೆರಿಗೆ ವಿನಾಯಿತೆ.

ಅಧ್ಯಕ್ಷರೆ, ಇದು ಈ ರಾಜ್ಯದ ಪತ್ರಿಕೆಗಳು ಏನು ಹೇಳಿವೆ ಎಂಬುದನ್ನು ಹೇಳುತ್ತಿದ್ದೇನೆ. "ಸಂಯುಕ್ತ ಕರ್ನಾಟಕ" – ಯಡಿಯೂರಪ್ಪ ಅದ್ಭುತ ದೀಪ, ಹಿತಾನುಭವ ಸೂತ್ರ, ಚುನಾವಣಾ ಸ್ತೋತ್ರ......ನೀವ್ಯಾರೂ ಎಲೆಕ್ಷನ್ ಇಲ್ಲದೆ ಗೆದ್ದು ಬಂದಿರೇನು? ಎಲ್ಲರೂ ಚುನಾವಣೆ ಎದುರಿಸಿಯೇ ಗೆದ್ದು ಬಂದಿರುವುದು. ಜನಹಿತ ಯಾರು ಮಾಡುತ್ತಾರೊ ಅವರಿಗೆ ಚುನಾವಣೆಯಲ್ಲೂ ಹಿತಾನುಭವ ಆಗುತ್ತದೆ. ಜನಹಿತ ಇದ್ದವರಿಗೆ ಚುನಾವಣೆಯಲ್ಲೂ ಹಿತಾನುಭವ ಆಗಿಯೇ ಆಗುತ್ತದೆ. ಇದರ ನಡುವೆ ನನಗೆ ಒಂದು ಯೋಜನೆ ಬಂದಿದ್ದು ಏನೆಂದರೆ, ಇಬ್ಬರು ತಾಯಂದಿರು ಇದ್ದರು. ಒಬ್ಬ ಭಿಕ್ಷುಕ ಅಕ್ಕಪಕ್ಕದಲ್ಲಿರುವ ಎರಡೂ ಮನೆಗಳಿಗೆ ಭಿಕ್ಷೆ ಕೇಳಲು ಯಾವಾಗಲೂ ಹೋಗುತ್ತಿದ್ದನಂತೆ. ಒಬ್ಬಳು ತಾಯಿ ಯಾವಾಗಲೂ ಭಿಕ್ಷೆ ಕೊಡುತ್ತಿರಲಿಲ್ಲ. ಇನ್ನೊಬ್ಬಳು ತಾಯಿ ಅವತ್ತು ಅನ್ನ ಮಾತ್ರ ಹಾಕಿದಳು. ಸಾರು ಇಲ್ಲ, ಮುಂದಿನ ಮನೆಗೆ ಹೋಗು ಎಂದು ಹೇಳಿದಳು. ಭಿಕ್ಷುಕ ಏನೆನ್ನಬೇಕು? ಆ ತಾಯಿ ಯಾವಾಗಲೂ ಕೊಡುವುದಿಲ್ಲ, ಆಕೆ ಇವತ್ತೂ ಕೊಡಲಿಲ್ಲ, ದೀನಾ ಕೊಡುವವಳಿಗೆ ಈಗೀಗ ಏನು ಬಂತೆಂದು ಒಂದು ಕೆಟ್ಟ ಶಬ್ದ ಸೇರಿಸಿ ದೀನಾ ಕೊಡುವವಳು ಬರೀ ಅನ್ನ ಮಾತ್ರ ಹಾಕಿದ್ದಾಳೆ ಎಂದು ಹೇಳಿದನಂತೆ. ಹಾಗಾಯಿತು ಈ ಪರಿಸ್ಥಿತಿ. ಅಧ್ಯಕ್ಷರೆ, ನಾನು ಮೊದಲ ಬಾರಿಗೆ ಶಾಸಕನಾದಾಗ.......

ಒಬ್ಬ ಮಾನ್ಯ ಸದಸ್ಯರು : ಅದನ್ನು ಬಿಡಿಸಿ ಹೇಳಿ.

ಶ್ರೀ ಸಿ.ಟಿ.ರವಿ : ನಾನು ಅದನ್ನು ಬಿಡಿಸಿ ಹೇಳುತ್ತೇನೆ. ಮೊದಲನೇ ಸಲ ಶಾಸಕನಾದಾಗ ಕಾಂಗ್ರೆಸ್ ಮತ್ತು ಜನತಾ ದಳ ಸರ್ಕಾರ 20 ತಿಂಗಳ ಸರ್ಕಾರ. ಅಧ್ಯಕ್ಷರೆ, ತಾವು ಮಾದಲನೇ ಬಾರಿಗೆ ಶಾಸಕರಾಗಿದ್ದಿರಿ. ಶಾಸಕರಿಗೆ ಅನುದಾನವೆಂದು ಈಗ ಒಂದೂವರೆ ಕೋಟಿ ರೂ.ಗಳನ್ನು ಕೊಟ್ಟಿದ್ದಾರಲ್ಲ, ನಮಗೆ ಒಂದು ರೂ.ಕೊಟ್ಟರೇ?

(ಗದ್ದಲ)

ಶ್ರೀ ಸಿ.ಟಿ.ರವಿ : ವಿಷಯ ಹೇಳುತ್ತಿದ್ದೇನೆ. ನೀವು ಈಗ ಹಂಚಿದ್ದೀರಲ್ರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಅವರು ಬಜೆಟ್‌ನಲ್ಲಿ ಸುಳ್ಳು ಹೇಳುತ್ತಾರೆ ತಿಳಿಕೊಂಡಿದ್ದೆವು. ರವಿಯವರು ಇಲ್ಲಿಯೇ ಸುಳ್ಳು ಹೇಳಲು ಶುರು ಮಾಡಿದ್ದಾರೆ. ಬರೀ ಸುಳ್ಳು ಹೇಳಬೇಡಿ. ಸತ್ಯ ಹೇಳುವುದನ್ನು ಕಲಿತುಕೊಳ್ಳಿ. ಎಲ್ಲಿದೆ 150 ಕೋಟಿ?

ಶ್ರೀ ಸಿ.ಟಿ.ರವಿ : ಹೇಳುತ್ತೇನೆ. ನಾನು ಹೇಳುವುದನ್ನು ಕೇಳಿ. ಅಧ್ಯಕ್ಷರೆ, ಒಂದೂವರೆ ಕೋಟಿ ರೂ. ಕಾಮಗಾರಿಗಳನ್ನು ಕೊಡುವುದಕ್ಕೆ ಹೇಲಿ, ಒಂದು ಕೋಟಿ

ರೂ.ಗೆ ಅಪ್ರೂವಲ್ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದೂವರೆ ಕೋಟಿ ರೂ.ಗಳ ಕಾಮಗಾರಿಗಳಿಗೆ ಕೊಟ್ಟಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಯಾರು ಹೇಳಿದ್ದು? ಬಿಜೆಪಿ ಎಂ.ಎಲ್.ಎ.ಗಳಿಗೆ ಕೊಟ್ಟಿರಬಹುದು, ನಮಗೆ ಕೊಟ್ಟಿಲ್ಲ ಸ್ವಾಮಿ. ಬಿಜೆಪಿ ಎಂ.ಎಲ್.ಎ.ಗಳಿಗೆ 1 ಕೋಟಿ ಕೊಟ್ಟಿರಬಹುದು, ನಮಗೆ ಕೊಟ್ಟಿರುವುದು ಬರೀ 50 ಲಕ್ಷ ರೂ.ಗಳು ಮಾತ್ರ.

ಶ್ರೀ ಸಿ.ಟಿ.ರವಿ : ಕೇಳಿಸಿಕೊಳ್ಳುವ ತಾಳ್ಮೆಯೂ ಇಲ್ಲದಿದ್ದರೆ, ಹೇಗೆ? ಕೇಳಿಸಿಕೊಳ್ಳುವುದಕ್ಕೆ ಕನಿಷ್ಠ ತಾಳ್ಮೆಯಾದರೂ ಬರಬೇಕಲ್ಲವೇ? ಆ ತಾಳ್ಮೆಯೂ ಇಲ್ಲದಿದ್ದರೆ ಹೇಗೆ? ಈಗ ನಮ್ಮ ಕ್ಷೇತ್ರದಲ್ಲಿ ಒಂದು ಕೋಟಿ ರೂ.ಗೆ ಅಪ್ರೂವಲ್ ಕೊಟ್ಟಿದ್ದಾರೆ. ನೀವು ನಿಮ್ಮ ಕ್ಷೇತ್ರದಲ್ಲಿ ನಿಮ್ಮ ಜಿಲ್ಲಾಧಿಕಾರಿಗಳನ್ನು ಕೇಳಿ.

ಡಾ:ಹೆಚ್.ಸಿ.ಮಹದೇವಪ್ಪ : ಈಗ ರವಿಯವರು ಕರೆಕ್ಟಾಗಿ ಹೇಳಲಿ. ಒಂದೂವರೆ ಕೋಟಿ ರೂ.ಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಲವೇ ಹೇಳಿದ್ದರು. ಆದರೆ, ನಿಜವಾಗಿಯೂ ಕೊಟ್ಟಿರುವುದು 50 ಲಕ್ಷ ಮಾತ್ರ. ಮತ್ತು ಉಳಿದ ಒಂದು ಕೋಟಿ ರೂ.ಗೆ ಪ್ರೋಗ್ರಾಂ ಕೊಡಿ ಎಂದು ಹೇಳಿದ್ದಾರೆ. 50 ಲಕ್ಷ ರೂ.ಗೆ ಮಂಜೂರಾತಿ ಕೊಟ್ಟಿದ್ದಾರೆ. ಒಂದು ಕೋಟಿ ರೂ.ಗೆ ಮಂಜೂರಾತಿ ಕೊಟ್ಟಿಲ್ಲ. ಅದುದರಿಂದ, ಮಾನ್ಯ ಶಾಸಕರು ಕರೆಕ್ಟಾಗಿ ಹೇಳಬೇಕು.

ಶ್ರೀ ಸಿ.ಟಿ.ರವಿ : ಆಗಿದೆ. ನಾವು ಮೊದಲನೇ ಬಾರಿಗೆ ಶಾಸಕರಾಗಿ ಬಂದಾಗ ಶಾಸಕರ ಅನುದಾನ ಎಷ್ಟು ಕೊಟ್ಟರು? ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲರೆ, ಎಷ್ಟು ಕೊಟ್ಟಿದ್ದರು?

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಮಣ್ಣು ತಿಂದಿದ್ದೀರಿ, ನಾವೂ ಮಣ್ಣು ತಿನ್ನುತ್ತೇವೆಂದು ಇವರು ಹೇಳುತ್ತಿದ್ದಾರೆ. ಹೋಗಲಿ, ನೀವಾದರೂ ಸರಿಯಾಗಿ ಅನ್ನ ತಿನ್ನಿ. ನಾವು ಮಣ್ಣು ತಿಂದೇ ಇಲ್ಲಿ ಕುಳಿತಿದ್ದೇವೆ. ನೀವು ಹಾಗೆ ಮಾಡಿದ್ದೀರಿ, ನಾವು ಹೀಗೆ ಮಾಡುತ್ತೇವೆಂದರೆ.....

ಶ್ರೀ ಸಿ.ಟಿ.ರವಿ : ಕೇಳಬೇಕಲ್ಲ. ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಬಂದ ನಂತರ ಎಷ್ಟು ಕೊಟ್ಟಿದ್ದರು? ಒಂದು ರೂಪಾಯಿ ಕೂಡ ಇಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಗೂ ಹಣವಿಲ್ಲ, ಶಾಸಕರ ಅನುದಾವೂ ಇಲ್ಲ. ನಾವು ಅಂದುಕೊಂಡೆವು. 'ಶಾಸಕಗಿರಿ' ಎಂದರೆ, ನಾವು ಆ ತರಹದ ಕೆಲಸ ಮಾಡಬಹುದು, ಈ ತರಹದ ಕೆಲಸ ಮಾಡಬಹುದು ಅನ್ನುವವರಿಗೆ ಊರಿನಲ್ಲಿ, ಬೀದಿಯಲ್ಲಿ ಬೈಸಿಕೊಳುವುದಷ್ಟೇ ಆಗಿತ್ತು. ನಾವು ಏನೂ ಮಾಡುವುದಕ್ಕೆ ಆಗದಿರುವ ಸ್ಥಿತಿಯಲ್ಲಿದ್ದೆವು. ಅವರು ಹೇಳುತ್ತಾರೆಯೇ? ಎದನ್ನು ಇವತ್ತು ಟೀಕೆ ಮಾಡುತ್ತಾರಲ್ಲ ಅದನ್ನೇಕೆ ಹೇಳುವುದಿಲ್ಲ ಹಾಗಾದರೆ ಅದು ಜಾಣ ಜಾಣ ಮರವೇ ಕಿವುಡೇ? ನಿಮಗೆ ಕೊಟ್ಟಿದ್ದರ ಬಗ್ಗೆ ಹೇಳಿ.

ಅಧ್ಯಕ್ಷರೆ, ಇವರು ಯಾರು ಏನೇ ಟೀಕೆಗಳನ್ನು ಮಾಡಲಿ, ಯಡಿಯೂರಪ್ಪನವರು ಮಂಡಿಸಿರುವ ಬಜೆಟ್ ಹೇಗಿದೆ ಎಂದರೆ, ಆಡು ಮುಟ್ಟದ

ಸೊಪ್ಪಿಲ್ಲ, ಯಡಿಯೂರಪ್ಪನವರು ತಲುಪದಿರುವ ಜನವರ್ಗ ಇಲ್ಲ. ಯಾವ ವರ್ಗಕ್ಕೆ ಕೊಟ್ಟಿಲ್ಲ ಹೇಳಿ? ಯಡಿಯೂರಪ್ಪನವರ ಮುಂಗಡ ಪತ್ರ ತಲುಪದಿರುವ ಜನವರ್ಗ ಇಲ್ಲ. ಇದು ವರ್ಗಕ್ಕೆ ಇದು ತಲುಪಿಲ್ಲ ಹೇಳಿ? ಇವತ್ತು ಮಠ–ಮಂದಿರಗಳಿಗೆ ಹಣ ಕೊಟ್ಟಿರುವುದಕ್ಕೆ ಟೀಕೆ ಮಾಡುತ್ತಾರೆ. ವೋಟು ಬ್ಯಾಂಕ್ ದೃಷ್ಟಿಯಿಟ್ಟುಕೊಂಡು ಮಾಡಿದ್ದು ಎಂದು ಹೇಳುತ್ತಾರೆ. ನಾನು ಅವರಿಗೆ ಪ್ರಶ್ನೆ ಕೇಳಲು ಬಯಸುತ್ತೇನೆ. ಹಜ್ ಯಾತ್ರೆಗೆ ಹಣಕೊಟ್ಟರಲ್ಲ, ಯಾವ ಬ್ಯಾಂಕ್‌ನ ದೃಷ್ಟಿಯಿಟ್ಟುಕೊಂಡು ಹಣ ಕೊಟ್ಟರು? ಅದರಲ್ಲಿ ಮೊದಲು ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ಎಂದು ಹಣ ಕೊಟ್ಟರೇ? ಏಕೆ ಕೊಟ್ಟಿರಿ? ಅವತ್ತು ನೀವು ಟೀಕೆ ಮಾಡಿದಿರಾ? ನೀವು ವೋಟು ಬ್ಯಾಂಕ್ ತಂದಿಟ್ಟುಕೊಂಡೇ ಆ ಕೆಲಸ ಮಾಡಿದ್ದು. ನಿಮಗೆ ಬೇಕಾದಂತಹ ವೋಟು ಬ್ಯಾಂಕ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವು ಮಾಡಿದಿರಿ, ನಮಗೆ ಬೇಕಾದಂತಹ ವೋಟು ಬ್ಯಾಂಕನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಮಾಡಿದ್ದೇವೆ. ಹಾಗೆ ಮಾಡಿರುವುದರಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದೇವೆ.

ದಲಿತರ ದೈವ ಬಬ್ರುಸ್ವಾಮಿ. ದಕ್ಷಿಣ ಕನ್ನಡದ ಚಿಕ್ಕಮಗಳೂರಿನ ಮಲೆನಾಡು ಭಾಗದ ಮುಂದಾಳು ಸಮಾಜದ ದಲಿತರ ದೈವ ಬಬ್ರುಸ್ವಾಮಿ. ಆ ಬಬ್ರುಸ್ವಾಮಿ ದೈವಸ್ಥಾನಕ್ಕೆ ಅಗತ್ಯ ಸೌಲಭ್ಯವಿರಲಿಲ್ಲ, ತಾಕತ್ತೂ ಇರಲಿಲ್ಲ. ಆದರೆ, ಆ ದಲಿತರ ದೈವಸ್ಥಾನದ ಅಭಿವೃದ್ಧಿಗೆ ಒಂದು ಕೋಟಿ ರೂ. ಕೊಟ್ಟಿದ್ದು ಅಪರಾಧ ಎನ್ನುವುದಾದರೆ, ನಾವು ಆ ಅಪರಾಧವನ್ನು ಹೊತ್ತುಕೊಳ್ಳುವುದಕ್ಕೆ ತಯಾರಿದ್ದೇವೆ. ಇಲ್ಲಿ ನೋಡಬೇಕಾಗಿರುವುದೇನೆಂದರೆ, ಆ ವರ್ಗವನ್ನು ಗುರ್ತಿಸುವ ದೃಷ್ಟಿ ಇದುವರೆಗೂ ಆ ವೋಟು ಬ್ಯಾಂಕಿನ ಮೇಲೆ ಕಣ್ಣಿಟ್ಟು, ಮೂಗಿಗೆ, ಮೊಣಕೈಗೆ ತುಪ್ಪ ಸವರಿ ವೋಟು ತೆಗೆದುಕೊಳ್ಳುತ್ತಿದ್ದ ಅವರಿಗೆ ಬರಲಿಲ್ಲ. ನಮ್ಮ ಯಡಿಯೂರಪ್ಪನವರಿಗೆ ಬಂತು. ಆದಕಾರಣ, ನಾವು ಅವರನ್ನು ಅಭಿಂದಿಸುತ್ತೇವೆ. ಈ ದೃಷ್ಟಿ ಇರಬೇಕು.

ವಾಲ್ಮೀಕಿ ಹೆಸರಿನಲ್ಲಿ ಹಣ ಕೊಡುವುದು ತಪ್ಪೇ? ಹಿಂದುಳಿದ ವರ್ಗದ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು, ಲಂಬಾಣಿ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು ಅಭಿವೃದ್ಧಿಗೆ ಹಣ ಕೊಡುವುದು ತಪ್ಪೇ? ಹಿಂದುಳಿದ ವರ್ಗದವರ ಬಗ್ಗೆ ಬರೀ ಮಾತನಾಡಿದರೆ ಆಗುವುದಿಲ್ಲ. ಅವರ ಪರವಾಗಿ ಕುರುಬ, ನೇಕಾರ, ಸವಿತಾ, ಮಡಿವಾಳ ಸಮಾಜ ಇರಬಹುದು, ಸಮಾಜದ ಎಲ್ಲ ಕಟ್ಟಕಡೆಯ ವರ್ಗಕ್ಕೆ ಬರೀ ಮಾತನಾಡುತ್ತಾ, ಘೋಷಣೆ ಕೂಗತ್ತಾ ಬಂದಿರಲ್ಲ. ನಮ್ಮ ಸರ್ಕಾರ ಘೋಷಣೆ ಹಾಕುವ ಕೆಲಸವನ್ನು ಮಾಡಲಿಲ್ಲ. ಬಜೆಟ್ನಲ್ಲಿ ಅನುದಾನ ಒದಗಿಸಿ ಅವರ ಅಭಿವೃದ್ಧಗೆ ಕಾಯಕಲ್ಪ ಕೊಡುವ ಕೆಲಸವನ್ನು ಮಾಡಿದ್ದಾರೆ. ಅದಕ್ಕೋಸ್ಕರ, ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಯಡಿಯೂರಪ್ಪನವರನ್ನು ಅಭಿನಂದಿಸಬಯಸುತ್ತೇನೆ.

ಶ್ರೀ ಆರ್.ಧ್ರುವನಾರಾಯಣ : ಅಧ್ಯಕ್ಷರೆ, ನಾನು ಅವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದಿಂದ ಸುಮಾರು 120 ಕೋಟಿ ರೂ.ಗಳಷ್ಟು ಏನು ಸಾಲ ತೆಗೆದುಕೊಂಡಿದ್ದಾರೆ, ಅದನ್ನು

ಮನ್ನಾ ಮಾಡಿಸುವುದಕ್ಕೆ ತಾವು ಹೇಳಬೇಕು. ಇದು ಒಂದು ವಿಷಯ. ಇನ್ನೊಂದು, ಶೇಕಡ 3ರ ಬಡ್ಡಿ ದರದಲ್ಲಿ ಸೊಸೈಟಿಗಳಲ್ಲಿ ಸಾಲ ಕೊಡುತ್ತಿದ್ದಾರಲ್ಲ, ಅದನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸಿ ಅಲ್ಲಿ ವಿಧಿಸುತ್ತಿರುವ ಶೇಕಡ 6ರ ಬದಲು ಶೇಕಡ 3ಕ್ಕೆ ಇಳಿಸುವಂತೆ ಕ್ರಮ ಕೈಗೊಳ್ಳಿ. ಒಂದು ಲಕ್ಷ ರೂಪಾಯಿಯನ್ನು ಯಾವುದೋ ದೇವಸ್ಥಾನಕ್ಕೆ ಕೊಟ್ಟರು, ದಲಿತ ದೈವದ ಅಭಿವೃದ್ಧಿಗೆ ಕೊಟ್ಟರು ಎಂದು ಬರೇ ಅವರ ಕಣ್ಣೊರೆಸುವ ಮಾತನಾಡಬಾರದು. ಒಂದು ಲಕ್ಷ ರೂಪಾಯಿಯನ್ನು ದೇವಸ್ಥಾನಕ್ಕೆ ಕೊಟ್ಟರೆ ಉದ್ಧಾರವಾಗುವುದಿಲ್ಲ. ನೀವು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡುತ್ತಿರುವ ಸಾಲಕ್ಕೆ ಅದನ್ನು ವಿಸ್ತರಿಸಿ ಮಾಡಿಸಬೇಕು.

ಶ್ರೀ ಸಿ.ಟಿ.ರವಿ : ಈ ಮೊದಲು 18 ಪರ್ಸೆಂಟ್ ಮತ್ತು ಅದು ಇದು ಸೇರಿಸಿ 21 ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದರು. ಬಡ್ಡಿಯನ್ನು ಕಟ್ಟದಿದ್ದರೆ ಸೈಕಲು, ಕುರ್ಚಿ, ರೇಡಿಯೊ, ಹಗೆಯಮೇಲಿದ್ದ ರಾಗಿ ಮೂಟೆಯನ್ನು ಬಿಡದೆ ಎಲ್ಲವನ್ನು ಜಪ್ತಿ ಮಾಡಿಕೊಂಡು ಹೋಗುತ್ತಿದ್ದರು. ಆ ರೀತಿ ಮಾಡುವಾಗ ಅಧಿಕಾರದಲ್ಲಿ ನಾವು ಇದ್ದೆವಾ? ಆವತ್ತು ಮನೆ ಹಾಳು ಬಡ್ಡಿಯನ್ನು ಹಾಕುತ್ತಿದ್ದಿರಲ್ಲ ಆಗ ನಾವು ಇದ್ದೆವಾ? ಅದರ ಬಗ್ಗೆ ಯಾರಾದರು ಪ್ರಶ್ನೆ ಎತ್ತಿದ್ದಿರಾ? ರೈತರ ಜಮೀನನ್ನು ಹರಾಜು ಹಾಕಿದಿರಿ. ಆವತ್ತು ಜಪ್ತಿ ಮಾಡಿಸಿದಿರಿ. ಎತ್ತಿನ ಗಾಡಿಯನ್ನೂ ಬಿಡುತ್ತಿರಲಿಲ್ಲ. ಕೊಟ್ಟಿಗೆಯಲ್ಲಿದ್ದ ಎತ್ತನ್ನೂ ಬಿಡುತ್ತಿರಲಿಲ್ಲಾ. ಆ ರೀತಿ ಮನೆ ಹಾಳು ಬಡ್ಡಿ ಹಾಕುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ತಾವು ಏನು ಮಾತನಾಡುತ್ತಿದ್ದೀರಿ? Land Reforms Actನ್ನು ನೀವು ತಂದಿದ್ದೀರಾ? ಋಣ ಮುಕ್ತ ಕಾಯ್ದೆಯನ್ನು ನೀವು ತಂದಿದ್ದೀರಾ? ಸುಮ್ಮನೆ ಏನೇನೊ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಎಲ್ಲರು ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ : ಆ ಎಲ್ಲಾ ಸುಧಾರಣೆ ತಂದು ಕೆಲಸ ಮಾಡಿದ್ದಕ್ಕೆಯೇ ಹಿರಿಯ ಶಾಸಕರಾದ ಮುನಿಯಪ್ಪನವರು ಆಕ್ರೋಶಭರಿತರಾಗಿ ಮಾತನಾಡುತ್ತಿದ್ದದ್ದು. ಅಂದರೆ, ಕಳೆದ 63 ವರ್ಷಗಳಿಂದ ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿದ್ದರಾ? ಬಿ.ಜೆ.ಪಿ.ಯೇ ಅಧಿಕಾರದಲ್ಲಿ ಇತ್ತಾ? ಏನೂ ಮಾಡಿಲ್ಲವೆಂದು ಈ ಸಭೆಯಲ್ಲಿ ಅವರು ಆಕ್ರೋಶಭರಿತರಾಗಿ ಮಾತನಾಡುತ್ತಿದ್ದರಲ್ಲಾ ಇವೆಲ್ಲಾ ತಂದಿದ್ದಕ್ಕೆಯೇ. ಅಧಿಕಾರದಲ್ಲಿದ್ದಾಗ ನೆಟ್ಟಗೆ ಕೆಲಸ ಮಾಡಿದ್ದರೆ ಈ ರೀತಿ ಆಕ್ರೋಶಭರಿತರಾಗಿ ಮಾತನಾಡುವ ದುಸ್ಥಿತಿ ಏಕೆ ಬರುತ್ತಿತ್ತು? ನೀವು ಏನೇನು ಮಾಡಿದ್ದೀರಿ ಎಂದು ಅವರೇ ಆಕ್ರೋಶಭರಿತರಾಗಿ ಹೇಳಿದರಲ್ಲಾ. ಈ ಪರಿಸ್ಥಿತಿ ಬರಬೇಕೇನು? ಅಜೀರ್ಣವಾಗುವಷ್ಟು ಬಹುಮತ ಕೊಟ್ಟಿದ್ದರಲ್ಲಾ ಏಕೆ ಮಾಡಲಿಲ್ಲ.

ಇವತ್ತು ನಮಗೆ ಪಾಠ ಹೇಳಿಕೊಡುತ್ತೀರಲ್ಲಾ, ನೀವು ಮಾಡಿದ್ದೇನು. ದಲಿತರ ಕಾಲೋನಿಗಳಿಗೆ ಬಜೆಟ್‌ನಲ್ಲಿ 10 ಕೋಟಿ ಹಣವನ್ನು ತೆಗೆದು ಇಟ್ಟಿದ್ದಾರೆ. ಹಿಂದಿನ 63 ವರ್ಷದಲ್ಲಿ ಯಾವುದಾದರು ಬಜೆಟ್‌ನಲ್ಲಿ ದಲಿತರ ಕಾಲೋನಿ ಅಭಿವೃದ್ಧಿಗೆ 10 ಕೋಟಿ ತೆಗೆದು ಇಟ್ಟಿರುವ ಉದಾಹರಣೆ ತೋರಿಸಿ? ಸಮಾಜ ಕಲ್ಯಾಣ ಇಲಾಖೆಯ ಮೂಲಕ ದಲಿತರಿಗಾಗಿಯೇ 114 ಹೊಸ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದಾರಲ್ಲಾ ಆ ರೀತಿ ಒಂದೇ ಬಜೆಟ್‌ನಲ್ಲಿ ಮಾಡಿರುವ ಒಂದು ಉದಾಹರಣೆಯನ್ನು ತೋರಿಸಿ?

ಶ್ರೀ ಆರ್.ಧ್ರುವನಾರಾಯಣ : ಅವರು ಸುಳ್ಳು ಸುಳ್ಳನ್ನೆ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಅವಕಾಶ ಇದೆ. ಆಗ ಎಲ್ಲವನ್ನು ಹೇಳಿ. ದಯಮಾಡಿ ಈಗ ಮಧ್ಯದಲ್ಲಿ ಮಾತನಾಡುವುದು ಬೇಡ.

ಶ್ರೀ ಸಿ.ಟಿ.ರವಿ : 114 ಹೊಸ ಹಾಸ್ಟೆಲ್ ಮಂಜೂರು ಮಾಡಿರುವುದನ್ನು ಓದಬೇಕು ಎಂದರೆ ಓದುತ್ತೇನೆ. ಏನೂ ಮಾಡಿಲ್ಲವೆಂದು ಹೇಳಿದಿರಲ್ಲಾ, ಅವರವರ ಕ್ಷೇತ್ರದಲ್ಲಿ ಭಾಗ್ಯ ಲಕ್ಷ್ಮಿ ಬಂಡ್‌ನ ವಿತರಣೆಯನ್ನು ಈ ಶಾಸಕರ್ಯಾರೂ ವಿತರಣೆ ಮಾಡಿಲ್ಲವೇ? ಕುಮಾರಸ್ವಾಮಿಯವರ ಕಾಲದಲ್ಲಿ ಯಡಿಯೂರಪ್ಪನವರು ಹಣಕಾಸು ಸಚಿವರಾಗಿ ಬಂದು ಅದನ್ನು ಮಾಡಬೇಕಾಗಿತ್ತೇ? ಅದಕ್ಕಿಂತ ಮೊದಲು ಜನತಾದಳ ಸರ್ಕಾರ ಇರಲಿಲ್ಲವೇ? ನೀವು ಕಾಂಗ್ರೇಸ್‌ನವರು ಇದ್ದಿರಲ್ಲ ಏಕೆ ಮಾಡಲಿಲ್ಲ?

ಶ್ರೀ ಎನ್.ಸಂಪಂಗಿ : ಸೈಕಲ್ ಏನಾಯಿತು?

ಶ್ರೀ ಸಿ.ಟಿ.ರವಿ : ಸಂಪಂಗಿಯವರು ಅವರ ಕ್ಷೇತ್ರಕ್ಕೆ ಹೋಗುವುದನ್ನು ಮರೆತುಬಿಟ್ಟಿದ್ದಾರೆ. ಅವರ ಕ್ಷೇತ್ರದಲ್ಲಿ ಸೈಕಲ್ ವಿತರಣೆಯಾಗುತ್ತಿರುವುದು ಅವರಿಗೆ ಗೊತ್ತಿಲ್ಲ. ಅಷ್ಟರಮಟ್ಟಿಗೆ ಅವರು ಅವರ ಕ್ಷೇತ್ರದಿಂದ ದೂರವಿದ್ದಾರೆ. ಅವರ ಕ್ಷೇತ್ರದಲ್ಲಿ ಸೈಕಲ್ ವಿತರಣೆಯಾಗುತ್ತಿರುವ ಮಾಹಿತಿಯೂ ಅವರಲ್ಲಿ ಇಲ್ಲ.

ಶ್ರೀ ಎನ್.ಸಂಪಂಗಿ : ವಿರೋಧ ಪಕ್ಷದಲ್ಲಿರುವವರಿಗೆ ಸೈಕಲ್ ಕೊಟ್ಟಿಲ್ಲ. ಯಾವುದೇ ಕನಿಷ್ಟ ಕಾರ್ಯಕ್ರಮವನ್ನು ಕೊಟ್ಟಿಲ್ಲ.

ಶ್ರೀ ಸಿ.ಟಿ.ರವಿ : ಅವರು ಇಡೀ ಯೋಜನೆಯ ಬಗ್ಗೆ ತಪ್ಪು ತಿಳಿದುಕೊಂಡಿದ್ದಾರೆ. ವಿರೋಧ ಪಕ್ಷ ಆಡಳಿತ ಪಕ್ಷದ ಶಾಸಕರಿಗೆ ಸೈಕಲ್ ಕೊಡತಕ್ಕ ಯೋಜನೆ ಅಲ್ಲ. 8ನೇ ತರಗತಿಯಲ್ಲಿ ಓದತಕ್ಕ ಶಾಲೆಯ ಎಲ್ಲಾ ಮಕ್ಕಳಿಗೆ ಸೈಕಲ್ ಕೊಡತಕ್ಕ ಯೋಜನೆ ಅದು. ಶಾಸಕರಿಗೆ ಸೈಕಲ್ ಕೊಡುವ ಪದ್ದತಿಯಲ್ಲ ಇದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ನಿಮಗೆ ಈಗ ಸೈಕಲ್ ಕೊಡಬೇಕಾಗುತ್ತದೆ. ನೀವು ಸೈಕಲ್ ಮೇಲೆ ಹೋಗಬೇಕಾತ್ತದೆ!

ಶ್ರೀ ಎನ್.ಸಂಪಂಗಿ : ಮಧ್ಯಾಹ್ನದ ಬಿಸಿ ಊಟದ ಯೋಜನೆಯನ್ನು ಮಾಡಿದವರು ಯಾರು? ಕಾಂಗ್ರೇಸ್‌ನವರು.

ಶ್ರೀ ಸಿ.ಟಿ.ರವಿ : ದೇವರಾಜ ಅರಸು ನಿಗಮದಿಂದ 5 ಸಾವಿರ ಸಬ್ಸಿಡಿ ಮತ್ತು 5 ಸಾವಿರ ರೂಪಾಯಿ ಸಾಲ ಒಟ್ಟು ಹತ್ತು ಸಾವಿರ ರೂಪಾಯಿಗಳನ್ನು ಹಿಂದುಳಿದ ವರ್ಗಳ ವೃತ್ತಿಪರ ಯೋಜನೆಗಳನ್ನು ಪ್ರೋತ್ಸಾಹ ಮಾಡಲು ನೀಡುತ್ತಿರುವುದು ಸಾಮಾಜಿಕ ನ್ಯಾಯವಲ್ಲವೇ? ಆ ವರ್ಗದ ಜನರನ್ನು ಮೇಲಕ್ಕೆ ಎತ್ತುವ ಕಾರ್ಯಕ್ರಮವಲ್ಲವೇ? 3096 ಕೋಟಿ ನೀರಾವರಿಗೆ ಇಟ್ಟ ನಂತರವೂ ಅವರು ಅದರ ಬಗ್ಗೆ ಟೀಕೆ ಮಾಡಿದರು. ಭದ್ರಾ ಮೇಲ್ದಂಡೆ ಯೋಜನೆ ಮಹುಶಃ ನಾನು ಹುಟ್ಟುವುದಕ್ಕಿಂತ ಮೊದಲಿನಿಂದಲು ಜನರ ಮೂಗಿಗೆ ತುಪ್ಪ ಸವರಿದ್ದೇ ಸವರಿದ್ದು. ಆ ಹೆಸರನ್ನು ಹೇಳಿಕೊಂಡೇ 4-5 ಚುನಾವಣೆಗಳನ್ನು ಗೆದ್ದುಬಿಟ್ಟಿದ್ದಾರೆ. ಈಗ ನೀರು ಕೊಡುತ್ತೇವೆ, ಈಗ ಯೋಜನೆಗೆ ಸರ್ವೇಯಾಗುತ್ತಿದೆ, ಈಗ ಡ್ಯಾಂ ಕಟ್ಟಲು ಪ್ರಾರಂಭ ಮಾಡಿಯಾಗಿದೆ ಎಂದು ಹೇಳಿಕೊಂಡೆ 4-5 ಚುನಾವಣೆಗಳನ್ನು ಗೆದ್ದಿದ್ದರು. ಅದರೆ, ಆ ಕೆಲಸವನ್ನು ಮಾಡಲಿಲ್ಲ.

ಶ್ರೀ ಆರ್.ಧ್ರುವನಾರಾಯಣ : ನೀವು ಕೇವಲ ಭಜನೆ ಮಾಡಿಕೊಂಡು ಕುಳಿತಿದ್ದೀರಿ.

ಶ್ರೀ ಸಿ.ಟಿ.ರವಿ : ಈಗ ಬಜೆಟ್‌ನಲ್ಲಿ 500 ಕೋಟಿ ಹಣವನ್ನು ಇದಕ್ಕಾಗಿ ಇಟ್ಟು ಶಂಕು ಸ್ಥಾಪನೆಯನ್ನು ಮಾಡಿದ್ದಾರೆ. ಅವರಂತೆ ಮೊಳಕೈಗೆ ತುಪ್ಪವನ್ನು ಸವರಿಲ್ಲ ನಾವು. ಮೂಗಿಗೆ ತುಪ್ಪ ಸವರಿದರಾದರು ಕೊನೆಯ ಪಕ್ಷ ಕಷ್ಟ ಪಟ್ಟರೆ ಯಾರೋ ಒಬ್ಬರಾದರೂ ಆ ತುಪ್ಪವನ್ನು ನೆಕ್ಕಬಹುದು. ಆದರೆ, ಮೊಣಕೈಗೆ ತುಪ್ಪವನ್ನು ಸವರಿದರೆ ಹೇಗೆ ನೆಕ್ಕುವುದು? ಆ ರೀತಿ ಇವರು ಚುನಾವಣೆಯ ಸಮಯದಲ್ಲೆಲ್ಲಾ ಮೊಣಕತಿಗೆ ತುಪ್ಪವನ್ನು ಸವರಿ ಕೊನೆಗೆ ಚುನಾವಣೆಯಾದಮೇಲೆ ಸವರಿದ್ದ ತುಪ್ಪವನ್ನು ನೆಕ್ಕಲು ಆಗುವುದಿಲ್ಲವೆಂದು ಅವರು ಕೇಳಿದರೆ ಮುಂದಿನ ಚುನಾವಣೆಯಲ್ಲಿ ಮತ್ತು ಒಳ್ಳೆಯ ತುಪ್ಪ ತಂದು ಹಾಕುತ್ತೇನೆಂದು ಇವರೇ ನೆಕ್ಕಿ ಬಂದುಬಿಡುವುದು. ಆ ಕೆಲಸವನ್ನೇನು ನಾವು ಮಾಡಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಜನರ ಮೊಣಕೈಗೆ ತುಪ್ಪವನ್ನು ಈಗ ಸವರಿರುವವರು ಇವರು. ಅದು ಯಾರಿಗೂ ಸಿಗುತ್ತಿಲ್ಲ.

ಶ್ರೀ ಎ.ಮಂಜು : ಹಾರಂಗಿ, ಹೇಮಾವತಿ ಡ್ಯಾಂನ್ನು ಮಾಡಿರುವವರು ಯಾರು ?

ಶ್ರೀ ಸಿ.ಟಿ.ರವಿ : ಮಾನ್ಯ ಉಪಾಧ್ಯಕ್ಷರೆ, ಎಷ್ಟು ಆತ್ಮವಿಶ್ವಾಸದ ಕೊರತೆಯಿಂದ ಮಾತನಾಡಿದ್ದಾರೆ ಎಂಬುದನ್ನು ತಾವು ನೋಡುತ್ತಿದ್ದೀರಿ. ಅದಕ್ಕೆ ಕಡಿಮೆ, ಇದಕ್ಕೆ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೀರಿ. ಅದರೆ, ಹೆಚ್ಚಿಗೆ ಯಾವುದಕ್ಕೆ ಕೊಟ್ಟಿದ್ದೀರಿ ಎಂದು ಹೇಳಲೇ ಇಲ್ಲವಲ್ಲಾ? ರೂಪಾಯಿಗೆ ರೂಪಾಯಿ ಖರ್ಚಾಗಿದೆ ತಾನೆ? ಯಾವುದಕ್ಕಾದರು ಕಡಿಮೆಯಾಗಿದ್ದರೆ ಇನ್ನು ಯಾವುದಕ್ಕಾದರು ಹೆಚ್ಚಾಗಿರಬೇಕಲ್ಲಾ? ಹೆಚ್ಚಾಗಿರುವುದನ್ನು ಹೇಳಲೇ ಇಲ್ಲ. ಗುಡಿಗುಂಡಾರಗಳಿಗೆ ಕೊಟ್ಟಿರುವುದನ್ನು ಜನರ ನಡುವೆ ವಿರೋಧ ಮಾಡಿದಿರಿ. ನಿಮ್ಮ ಹಣೆಯಬರಹ ಗೊತ್ತಾಗುತ್ತದೆ. ಜನರು

ಅಟ್ಟಾಡಿಸಿಕೊಂಡು ಹೊಡೆಯುತ್ತಾರೆ. ನೀವು ಜನರ ನಡುವೆ ಗುಡಿಗುಂಡಾರಗಳಿಗೆ ಹಣ ಕೊಟ್ಟಿರುವುದು ತಪ್ಪು ಎಂದು ವಿರೋಧ ಮಾಡಿ ನೋಡೋಣ? ಯಡಿಯೂರಪ್ಪನವರನ್ನು ಬಯ್ಯರಿ ನೋಡೋಣ? ಸನ್ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರ್.ಧ್ರುವನಾರಾಯಣ : ಅವರು ಬಜೆಟ್ ಬಗ್ಗೆ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು : ನೀವಿ ಏಕೆ ಮಧ್ಯೆ ಎದ್ದು ಮಾತನಾಡುತ್ತೀರಿ? ನೀವು ಮಾತನಾಡುವಾಗ ಹೇಳಿ. ಅವರಿಗೆ ಮಾತನಾಡಲು ಅವಕಾಶ ಕೊಡಿ. ಪ್ರತಿಸಲ ಏಕೆ ಎದ್ದೇಳುತ್ತೀರಿ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಅವರು ಮಾತನಾಡಬೇಕಾದರೆ ಸದನವನ್ನು ಕೆರಳಿಸುವ ರೀತಿಯಲ್ಲಿ ಮಾತನಾಡಬಾರದು. ಅದನ್ನು ತೆಗೆದುಕೊಂಡು, ಇದನ್ನು ತೆಗೆದುಕೊಂಡು ಹೊಡೆಯುತ್ತಾರೆಂದರೆ ಹೇಗೆ? ಅವರು ಬೇರೆ ಶಾಸಕರಿಗೆ ಕೆರಳಿಸುವ ರೀತಿಯಲ್ಲಿ ಮಾತನಾಡಬಾರದು.

ಉಪಾಧ್ಯಕ್ಷರು : ನೀವು ಮಾತನಾಡುವಾಗ ಹೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : I am on a point of order. ಅವರನ್ನು ಕುಳಿತುಕೊಳಗಳಲು ಹೇಳಿ. ಸನ್ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ. ಆ ರೀತಿ ಮಾತನಾಡದಂತೆ ಅವರಿಗೆ ನಿರ್ಬಂಧ ಹಾಕಿ. ಅವರು ನಿಯಮಾವಳಿ ಪ್ರಕಾರ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ. ಏಕೆ ಮಧ್ಯೆ ಮಧ್ಯೆ ಮಾತನಾಡುತ್ತೀರಿ. ಅವರು ಮಾತನಾಡಲಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : I am on a point of order. ಅವರು ಸಂಯಮದಿಂದ ಮಾತನಾಡಬೇಕು.

ಉಪಾಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ : ನಮ್ಮಲ್ಲಿ ಗಡಿ ಮಾರಮ್ಮ ಎಂದು ಹೇಳುತ್ತಾರೆ. ಆ ರೀತಿ ಗಡಿ ಮಾರಮ್ಮನನ್ನು ಕಳಿಸಿದಂತೆ ಗಡಿ ದಾಟಿಸಿ ಕಳಿಸಿಬಿಡುತ್ತಾರೆ. ಸತ್ಯ ಹರಿಶ್ಚಂದ್ರ ನಾಡಕದಲ್ಲಿ ನಕ್ಷತ್ರಿಕ ಎಂಬ ಒಂದು ಪಾತ್ರ ಇದೆ. ಆ ನಕ್ಷತ್ರಿಕನ ಪಾತ್ರ ಏನೆಂದರೆ ಸತ್ಯಹರಿಶ್ಚಂದ್ರನನ್ನು ಕಾಡುವುದು. ಇಲ್ಲಿ ಇವರೆಲ್ಲ ಏಕೆ ಆ ಪಾತ್ರವನ್ನು ವಹಿಸಲಿ ಹೊರಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇವರಿಗೆ ಕಾಡುವುದೇ ಕೆಲಸ. ಆ ಪಾತ್ರವನ್ನು ನೀವೀರೋ ಈಗ ವಹಿಸುತ್ತಿದ್ದೀರಿ.

ಶ್ರೀ ಎನ್.ಸಂಪಂಗಿ : ನಿಮಗೆ ಮಂತ್ರಿ ಮಾಡಲಿಲ್ಲ. ಈ ರೀತಿ ಮಾತನಾಡಿದರೆ ಮಂತ್ರಿ ಮಾಡುತ್ತಾರೆಯೇ?

ಶ್ರೀ ಸಿ.ಟಿ.ರವಿ : ನನಗೆ ಮಂತ್ರಿಯಾಗುವ ಅವಕಾಶ ಇದೆ. ಆದರೆ, ಅಲ್ಲಿ ಇರುವವರೆಗೆ ಆಗುವ ಅವಕಾಶವೇ ಇಲ್ಲ. ಏನಾದರೂ ಈ ಕಡೆ ಬಂದರೆ ಒಂದು

ಅವಕಾಶ ಮಾಡಿಕೊಡೋಣ! ಇವರು ಇಲ್ಲಿ ತೋರಿಸುವ ಪೌರುಷವನ್ನು ಇವರ ಪಕ್ಷ ಅಧಿಕಾರದಲ್ಲಿರುವ ಕೇಂದ್ರದಲ್ಲಾದರೂ ತೋರಿಸಿ ಆ ರೈತರಿಗೆ 3 ಪರ್ಸೆಂಟ್ ಬಡ್ಡಿಯ ದರದಲ್ಲಾದರೂ ಸಾಲ ಕೊಡಿಸುವ ಕೆಲಸವನ್ನಾದರೂ ಮಾಢಿದರೆ ಕೊನೆಯ ಪಕ್ಷ ಅವರು ಮಾಡಿರು ಪಾಪವಾದರೂ ಕಡಿಮೆಯಾಗಿ ಅದರ ಹೊರೆಯನ್ನು ಸ್ವಲ್ಪಇಳಿಸಿಕೊಳ್ಳುವ ಕೆಲಸವಾದರೂ ಆಗುತ್ತದೆ. ಇಲ್ಲಿ ಅವರು ತೋರಿಸುವ ಪೌರುಷವನ್ನು ಅವರ leader ಮುಂದಾದರೂ ಹೋಗಿ ತೋರಿಸ್ಸಿದರೆ ಒಳ್ಳೆಯದು ನಮಗೆ ಮುಖ ಎತ್ತಿಕೊಂಡು ತಿರುಗಲು ಆಗುತ್ತಿಲ್ಲ..

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಅದರ ಫಲಾನುಭವಿ ನೀವೂ ಆಗಿದ್ದೀರಿ. You are also beneficiary to that.

ಶ್ರೀ ಸಿ.ಟಿ.ರವಿ : ನಮಗೆ ಮುಖ ಎತ್ತಿಕೊಂಡು ತಿರುಗಲು ಆಗುತ್ತಿಲ್ಲ. ಇಲ್ಲಿ ಯಡಿಯೂರಪ್ಪನವರು 3 ಪರ್ಸೆಂಟ್ ಬಡ್ಡಿ ದರದಲ್ಲಿ ಕೊಟ್ಟು ಬಿಟ್ಟಿದ್ದಾರೆ. ನಮಗೇನಾದರೂ ಮಾನಮರ್ಯಾದೆ ಉಳಿಸಬೇಕೆಂದರೆ ನೀವೂ ಆ ರೀತಿ ಕೊಡಬೇಕೆಂದು ಅಲ್ಲಾದರೂ ಪೌರುಷ ತೋರಿಸಿದರೆ ಕನಿಷ್ಟ ಇವರು ಮಾಡಿದ ಪಾಪದ ಹೊರೆಯಾದರೂ ಕಡಿಮೆಯಾಗುತ್ತದೆ.

5.30 PM

[ಗೊಂದಲ]

ಶ್ರೀ ಕೆ.ಎಂ.ಶಿವಲಿಂಗೇಗೌಡ :– ... ಈಗ ನೀವು ಇದಕ್ಕಾಗಿ ಇಟ್ಟಿರುವ ದುಡ್ಡು ಎಷ್ಟು?

[ಗೊಂದಲ]

ಉಪಾಧ್ಯಕ್ಷರು :– ದಯವಿಟ್ಟು ಮಧ್ಯದಲ್ಲಿ ಯಾರೂ ಮಾತನಾಡಬೇಡಿ.

[ಗೊಂದಲ]

ಶ್ರೀ ಸಿ.ಟಿ.ರವಿ : ಮಾನ್ಯ ಉಪಾಧ್ಯಕ್ಷರೆ, ನಾವು ಏನೂ ಮಾಡಿಲ್ಲವೆಂದು ಹೇಳುತ್ತಾರೆ. ಕಳೆದ ಸಾರಿ ಹೇಳಿದಂತೆ, ಶೇಕಡ 3ರ ಬಡ್ಡಿ ದರದಲ್ಲಿ 2657 ಕೋಟಿ ರೂ.ಗಳ ಹಣವನ್ನು 10,40,717 ಜನ ರೈತರಿಗೆ ಕಳೆದ ಸಾರಿ ಸಂಘಗಳ ಮೂಲಕ ವಿತರಣೆ ಮಾಡಿಲ್ಲವೇ?

[ಗೊಂದಲ]

ಉಪಾಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ

[ಗೊಂದಲ]

ಶ್ರೀ ಎಂ.ಟಿ.ಕೃಷ್ಣಪ್ಪ :– ಸ್ವಾಮಿ, ತಾವು ಯಾವ ವರ್ಷದ್ದು ಹೇಳುತ್ತಿದ್ದೀರಿ?

[ಗೊಂದಲ]

ಶ್ರೀ ಸಿ.ಟಿ.ರವಿ : 2007–08ನೇ ಸಾಲಿನ ಬಜೆಟ್‌ದ್ದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ :– 2007–08ನೇ ಸಾಲಿನದ್ದು ನೀವು ಹೇಳುತ್ತಿದ್ದೀರಿ. ಆಗ ಮಾನ್ಯ ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾಗಿದ್ದರು.

[ಗೊಂದಲ]

ಶ್ರೀ ಸಿ.ಟಿ.ರವಿ : ಜಾಣ ಕುರುಡುತನಕ್ಕೆ ಯಾವುದೇ ಔಷಧಿ ಇಲ್ಲ. ನಿಜವಾಗಿ ಕುರುಡುತನ ಬಂದಿದ್ದರೆ, ಅದಕ್ಕೆ ಏನಾದರೂ ಮಾಡಿ ಔಷಧಿ ಕಂಡು ಹಿಡಿಯುವ ಕೆಲಸ ಮಾಡಬಹುದು. ಜಾಣ ಕುರುಡುತನಕ್ಕೆ ನಾನೆಲ್ಲಿ ಔಷಧಿ ಕೊಡಲಿ? ಇಡೀ ಜಗತ್ತಿನಲ್ಲೇ ಅದಕ್ಕೆ ಔಷಧಿ ಇಲ್ಲವೆಂದ ಮೇಲೆ, ಅದಕ್ಕೆ ನನ್ನ ಹತ್ತಿರ ಔಷಧಿ ಎಲ್ಲಿದೆ? ಜಾಣ ಕುರುಡುತನಕ್ಕೆ ಎಲ್ಲಿಯೂ ಔಷಧಿ ಇಲ್ಲ.

[ಗೊಂದಲ]

ಶ್ರೀ ಸಿ.ಟಿ.ರವಿ : ತಲಾ ಸಾವಿರ ರೂಪಾಯಿಗಳಂತೆ 22 ಲಕ್ಷ ಒಣ ಭೂಮಿ ಅವಲಂಬಿಸಿರತಕ್ಕಂಥ ರೈತರಿಗೆ 220 ಕೋಟಿ ರೂ.ಗಳನ್ನು ಚೆಕ್ ಮೂಲಕ ವಿತರಣೆ ಮಾಡಲಿಲ್ಲವೇ? ಮೊನ್ನೆ 3–5 ತಿಂಗಳ ಹಿಂದೆ ಅದನ್ನು ನಾವು ಮಾಡಿದ್ದೇವೆ. [ಗೊಂದಲ] ಬಜೆಟ್ ಜೂನ್–ಜುಲೈನಲ್ಲಿ ಪಾಸ್ ಆಗಿದೆ. ಅದಾದ ನಂತರವೇ 220 ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಆ ರೀತಿ ಕೊಟ್ಟಿದ್ದು ಇವರ್‍ಯಾರಿಗೂ ಕಣ್ಣಿಗೇ ಕಾಣಲಿಲ್ಲ ಎಂದರೆ, ನಾನು ಆಗಲೇ ಹೇಳಿದಂತೆ ಇದನ್ನು ಜಾಣ ಕುರುಡು ಎಂದೇ ಕರೆಯಬೇಕು. [ಗೊಂದಲ] ಇದಕ್ಕೇನೂ ಔಷಧಿ ಇಲ್ಲ. ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪ ವರದಿ ಅನುಷ್ಠಾನಕ್ಕೆ 2007–08ನೇ ಸಾಲಿನಲ್ಲಿ 1572 ಕೋಟಿ ರೂ.ಗಳನ್ನು, 2008–09ನೇ ಸಾಲಿನಲ್ಲಿ 2547 ಕೋಟಿ ರೂ.ಗಳನ್ನು ಇಟ್ಟಿದ್ದರು. ಆದರೆ ಈ ಬಾರಿ ಅದಕ್ಕಾಗಿ 2574 ಕೋಟಿ ರೂ.ಗಳನ್ನು ಇಡಲಾಗಿದೆ. ಇದು ಹೆಚ್ಚುವರಿಯಲ್ಲವೇ? ಹಿಂದುಳಿದ ವರ್ಗದ ತಾಲ್ಲೂಕುಗಳ ಅಭಿವೃದ್ಧಿಯಾಗಬೇಕೆಂದು ಈ ಹಣ ಇಟ್ಟಿರುವುದು ನಿಮಗೆ ಗೊತ್ತಿಲ್ಲವೇ? ನನ್ನದೊಂದು dispute ಇದೆ.

[ಗೊಂದಲ]

ಶ್ರೀ ಕೆ.ಎಂ.ಶಿವಲಿಂಗೇಗೌಡ :– ... ಪ್ರತ್ಯೇಕವಾಗಿ ಆ ಹಣ ಇಟ್ಟಿಲ್ಲ, ...

[ಗೊಂದಲ]

ಉಪಾಧ್ಯಕ್ಷರು :– ದಯವಿಟ್ಟು ಮಧ್ಯದಲ್ಲಿ ಮಾತನಾಡಬೇಡಿ. ಈ ಚರ್ಚೆ ಮುಗಿಯಬೇಕು.

[ಗೊಂದಲ]

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, 114 ತಾಲ್ಲೂಕುಗಳು ಹಿಂದುಳಿದಿರತಕ್ಕ ತಾಲ್ಲೂಕುಗಳಾಗಿವೆ. ನಂಜುಂಡಪ್ಪ ವರದಿಯ ಆಧಾರದಲ್ಲಿ 2574 ಕೋಟಿ ರೂ.ಗಳನ್ನು ಅವುಗಳ ಅಭಿವೃದ್ಧಿಗೆ ನಾವು ತೆಗೆದಿಟ್ಟಿದ್ದೇವೆ. ನನಗೆ doubt ಏನೆಂದರೆ, ಈಗೆಲ್ಲಾ ಮಾತನಾಡುತ್ತಿರುವವರು ಅಭಿವೃದ್ಧಿ ಪರ ಇರುವವರು. ನಂಜುಂಡಪ್ಪನವರ ವರದಿ ಪ್ರಕಾರ ಹೊಳೆನರಸೀಪುರ ಹಿಂದುಳಿದಿರತಕ್ಕ ತಾಲ್ಲೂಕಾಗಿದೆ. ಇಷ್ಟು ವರ್ಷಗಳ ಕಾಲ ಆ ಕ್ಷೇತ್ರವನ್ನು ಪ್ರತಿನಿಧಿಸಿದ್ದವರು ಮಾಡಿದ್ದೇನು? ಅದು ನಿಜವಾಗಿಯೂ ಹಿಂದುಳಿದ ವರ್ಗದ ತಾಲ್ಲೂಕು ಆಗಿದ್ದರೆ, ಅದನ್ನು ಪ್ರತಿನಿಧಿಸಿದಂತಹ ಜನ ಉತ್ತರ ಕೊಡಬೇಕಲ್ಲವೇ? ಅದನ್ನು ಅವರು ಏಕೆ ಆ ಸ್ಥಿತಿಯಲ್ಲಿಟ್ಟರು? ಅವರು ಅಭಿವೃದ್ಧಿ

ಮಾಡಿದ್ದರೆ, ಆ ವರದಿಯಲ್ಲಿ ಏನೋ ದೋಷ ಇರಬೇಕು ಅಥವಾ ಆ ವರದಿಯಲ್ಲಿ ತಮ್ಮದನ್ನೂ ತುರುಕಿರಬೇಕು.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನೀವು ನಂಜುಂಡಪ್ಪ ವರದಿಯನ್ನು ಓದಿದ್ದೀರಾ? ಹೊಳೆನರಸೀಪುರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿದೆಯೇ?

ಶ್ರೀ ಸಿ.ಟಿ.ರವಿ : ನಂಜುಂಡಪ್ಪ ವರದಿಯಲ್ಲಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಕ್ಷೇತ್ರದ ಅಭಿವೃದ್ಧಿ ಯಾವ ರೀತಿ ಮಾಡಬೇಕೆಂಬುದನ್ನು ನಿನ್ನಂತಹವರ ಹತ್ತಿರ ಕಲಿಯಬೇಕಾಗಿಲ್ಲ. ಮಾತನಾಡಬೇಕಾದರೆ, ಇಲ್ಲಿ ಸಂತೆ ಭಾಷಣ ಮಾಡಬೇಡ. ನಿನ್ನ ಹತ್ತಿರ ವಿಷಯಗಳು ಇದ್ದರೆ ಸರಿಯಾದ ರೀತಿಯಲ್ಲಿ ಭಾಷಣ ಮಾಡು. ಇಲ್ಲಿ ಸಂತೆ ಭಾಷಣ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಜನತಾ ದಳದ ಬಗ್ಗೆ ಟೀಕೆ ಮಾಡಲಿಕ್ಕೆ ಇವರಿಗೆ ಯಾವ ನೈತಿಕ ಹಕ್ಕೂ ಇಲ್ಲ. ಈ ರಾಜ್ಯದಲ್ಲಿ ಜನತಾ ದಳ ಸರ್ಕಾರ ಬಂದ ಮೇಲೆಯೇ ರೈತರ ಸಾಲ ಮನ್ನಾ ಮಾಡತಕ್ಕಂಥ ಯೋಜನೆ, ರೈತರಿಗೆ ಬಡ್ಡಿ ಮನ್ನಾ ಮಾಡತಕ್ಕಂಥ ಯೋಜನೆ ಜಾರಿಗೆ ತಂದಿದ್ದು. ಈಗ ನಿಮ್ಮ ಯಡಿಯೂರಪ್ಪನವರು ಆ ಜಾಗಕ್ಕೆ ಬಂದಿದ್ದೇ ನಮ್ಮಿಂದ. ಹೆಚ್ಚಿಗೆ ಮಾತನ್ನಾಡಬೇಡ.

[ಗೊಂದಲ]

ಶ್ರೀ ಸಿ.ಟಿ.ರವಿ : ಈಗ ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ಹಾಸನ ಜಿಲ್ಲೆಯ ಹೊಳೆನರಸೀಪುನ ತಾಲ್ಲೂಕು ನಂಜುಂಡಪ್ಪನವರ ವರದಿಯಲ್ಲಿದೆ. ಆ ವರದಿ ಹಿಂದುಳಿದ ವರ್ಗದ ತಾಲ್ಲೂಕುಗಳನ್ನು ಗುರುತಿಸಿ ಕೊಟ್ಟಿರತಕ್ಕಂಥವರದಿಯಾಗಿದೆ. ವರದಿಯಲ್ಲಿ ದೋಷ ಇದೆಯೋ? ಅಥವಾ ಕ್ಷೇತ್ರವೇ ನಿಜವಾಗಿಯೂ ಹಿಂದುಳಿದಿದೆಯೋ? ನನಗೆ ಗೊತ್ತಿಲ್ಲ. ಆ ತಾಲ್ಲೂಕು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿರುವುದು ನಿಜ. ಅಭಿವೃದ್ಧಿ ಹೊಂದಿದ ತಾಲ್ಲೂಕನ್ನೂ ಹಿಂದುಳಿದ ವರ್ಗದ ತಾಲ್ಲೂಕುಗಳ ಪಟ್ಟಿಗೆ ಸೇರಿಸಿದ್ದಲ್ಲಿ, ಅಲ್ಲೂ ಏನಾದರೂ ಮೋಸ-ಮಸಲತ್ತು ನಡೆದಿರಬೇಕು ಅಥವಾ ನಿಜವಾಗಿಯೂ ಹಿಂದುಳಿದಿರಬೇಕು. ಯಾವುದಾದರೂ ಒಂದು ಆಗಿರಬೇಕು. ಎರಡೂ ಆಗಲಿಕ್ಕೆ ಸಾಧ್ಯವಿಲ್ಲ. ಒಂದು ಗಂಡು ಅಥವಾ ಹೆಣ್ಣು. ಎರಡೂ ಆಗುವುದಕ್ಕಾಗುವುದಿಲ್ಲ, ಎರಡೂ ಹೇಗೆ ಆಗಲಿಕ್ಕಾಗುತ್ತದೆ?

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರು ಹೇಳುತ್ತಿರುವುದು....

ಉಪಾಧ್ಯಕ್ಷರು : ಅವರು ಯೀಲ್ಡ್ ಆಗುತ್ತಿಲ್ಲ.

[ಗೊಂದಲ]

ಶ್ರೀ ಸಿ.ಟಿ.ರವಿ : ನೀವು ದೊಡ್ಡವರು. ನಿಮಗೆ ಬೇಕಾದಾಗ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ. ನನ್ನ ಮೇಲೆ ಏಕೆ ನಿಮ್ಮ ಸವಾಲು? ನೀವು ಸವಾಲು ಹಾಕುವವರ ಜೊತೆಗೆ ಹಾಕಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಈ ಸದನದಲ್ಲಿ ಮಾನ್ಯ ರೇವಣ್ಣನವರ ಬಗ್ಗೆ ಯಾವಾಗಲೂ ಚರ್ಚೆ ನಡೆಯುವುದು...

ಶ್ರೀ ಸಿ.ಟಿ.ರವಿ : ನಾನು ಮಾನ್ಯ ರೇವಣ್ಣನವರ ಬಗ್ಗೆ ಚರ್ಚೆ ಮಾಡಿಲ್ಲ. ನಾನು ಹಿಂದುಳಿದ ವರ್ಗದ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ರೇವಣ್ಣನವರು ಹೊಳೆನರಸೀಪುರಕ್ಕೆ ಜಾಸ್ತಿ ಹಣವನ್ನು ತೆಗೆದುಕೊಂಡು ಹೋಗಿದ್ದಾರೆಂದು ಪದೇ ಪದೇ ಈ ಸದನದಲ್ಲಿ ಚರ್ಚೆ ನಡೆಯುತ್ತಿರುತ್ತದೆ. ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಎಂಬ ಉದ್ದೇಶದಿಂದ ಮಾನ್ಯ ರೇವಣ್ಣನವರು ಹಣವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ. ಅದರಲ್ಲಿ ಅವರು ತಪ್ಪೇನು ಮಾಡಿದ್ದಾರೆ? ನೀವ್ಯಾಕೆ ಅದರ ಬಗ್ಗೆ ಪದೇ ಪದೇ ಚರ್ಚೆ ಮಾಡುತ್ತೀರಿ?

ಶ್ರೀ ಸಿ.ಟಿ.ರವಿ : ನನ್ನ ಚರ್ಚೆ ವ್ಯಕ್ತಿ ಆಧಾರಿತವಾಗಿಲ್ಲ, ಪೂರ್ವಾಗ್ರಹ ಪೀಡಿತವಾಗಿಲ್ಲ. ನಂಜುಂಡಪ್ಪ ವರದಿಯನ್ನು ಆಧರಿಸಿ ನಾನು ಈ ಉಲ್ಲೇಖವನ್ನು ಮಾಡುತ್ತಿದ್ದೇನೆ.

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಎರಡರಲ್ಲಿ ಯಾವುದಾದರೂ ಒಂದು ಸತ್ಯ ಇರಬೇಕು. ಎರಡೂ ಸತ್ಯ ಆಗಿರಲಿಕ್ಕೆ ಸಾಧ್ಯವಿಲ್ಲ. ಆ ವರದಿಯಲ್ಲಿ ಇರುವುದು ಹಿಂದುಳಿದ ವರ್ಗದ ತಾಲ್ಲೂಕು ಎಂದು ಆಗಿದ್ದರೆ, ಅವರು ಹಿಂದುಳಿದ ವರ್ಗದ ತಾಲ್ಲೂಕನ್ನೇ ಗುರುತಿಸಿಬೇಕು. ಒಂದು ವೇಳೆ ಅಭಿವೃದ್ಧಿ ಹೊಂಧಿದ ತಾಲ್ಲೂಕನ್ನು ಗುರುತಿಸಿದ್ದಾರೆ ಎಂದರೆ, ವರದಿಯಲ್ಲಿ ದೋಷ ಇರಬೇಕು. ಯಾವುದಾದರೂ ಒಂದು ಆಗಲಿಕ್ಕೆ ಸಾಧ್ಯ. ಇದನ್ನೇ ಈ ಸಂದರ್ಭದಲ್ಲಿ ನಾನು ಎತ್ತಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರವನ್ನು ಇವರೆಲ್ಲರೂ ಮಾತನಾಢುತ್ತಾ ಹೇಳಿದ್ದೇನೆಂದರೆ, ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ. ಕರ್ನಾಟಕದಲ್ಲಿ ಯಶಸ್ವಿನಿ ನಂತರ ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುವ ಯೋಜನೆ ಇದಾಗಿದೆ. ಯಶಸ್ವಿನಿ ಯೋಜನೆಯಲ್ಲಿ ಯಾರು ನೋಂದಾವಣೆ ಮಾಡಿಕೊಂಡಿರುತ್ತಾರೋ ಅವರಿಗೆ ಮಾತ್ರ ಸೀಮಿತವಾಗಿದ್ದರೆ, BPL Cards ಹೊಂದಿರತಕ್ಕಂಥ ಎಲ್ಲರಿಗೂ ಈಗ ಉಚಿತ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೆ ತಂದಿರುವುದು ಅತ್ಯಂತ ಸ್ವಾಗತಾರ್ಹ. ಕನಿಷ್ಠ ಈಗಲಾದರೂ ನಮ್ಮ ಹತ್ತಿರ ಬಂದು, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡಿಸಿ ಎಂದು ನಮ್ಮ ಹತ್ತಿರ ದುಂಬಾಲು ಬಿದ್ದು, ನಾವು ಕೈ ಕಾಲು ಹಿಡಿದು, 10 ಸಾವಿರ-20 ಸಾವಿರ ಕೊಡಿಸಿದರೂ ಕೂಡ, ಬಡವರು ಅದರಿಂದ operation ಸಹ ಮಾಡಲಿಕ್ಕೆ ಸಾಧ್ಯವಾಗದೆ ಕೊರಗುತ್ತಿರತಕ್ಕಂಥ ಸ್ಥಿತಿ

ತಪ್ಪಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಆರೋಗ್ಯ ಖಾತೆ ಸಚಿವರನ್ನು ಅಭಿನಂದಿಸಲಿಕ್ಕೆ ಬಯಸುತ್ತೇನೆ. ಕಳೆದ ಬಾರಿ ಬಿ.ಜೆ.ಪಿ. ಮತ್ತು ಜೆ.ಡಿ. [ಎಸ್.]ನ ಸಮ್ಮಿಶ್ರ ಸರ್ಕಾರವಿದ್ದಾಗ, ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಬಜೆಟ್‌ನಲ್ಲಿ ಜಿಲ್ಲಾ ಕೇಂದ್ರಗಳಲ್ಲಿನ ನಗರಸಭೆಗಳಿಗೆ 5 ಕೋಟಿ ರೂ.ಗಳನ್ನು ವಿಶೇಷ ಅನುದಾನವೆಂದು ಮಂಜೂರು ಮಾಡಿದರು. ಕನಿಷ್ಠ ಈಗಲಾದರೂ ನಮ್ಮ ನಗರಸಭೆಯ ವ್ಯಾಪ್ತಿಯ ನಗರದಲ್ಲಿ ಒಂದಷ್ಟು ಅಭಿವೃದ್ಧಿ ಕಾಣುತ್ತದೆಂದು ನಾವು ಸಂತೋಷದಲ್ಲಿದ್ದೆವು. ಆದರೆ ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತಹ ರೀತಿಯಲ್ಲಿ ಹಂಚಿಕೆ ಮಾಡಬೇಕಾದರೆ, ಜಿಲ್ಲಾ ಕೇಂದ್ರಗಳನ್ನು ತೆಗೆದು, ನನಗೆ ಬರೀ ಒಂದೂ ಕಾಲು ಕೋಟಿ ರೂ.ಗಳನ್ನು ಕೊಟ್ಟರು. ಹೇಳಿದ್ದು 5 ಕೋಟಿ ರೂ.ಗಳು, ಅದನ್ನು ಇಡೀ ಜಿಲ್ಲೆಗೆ ಹಂಚಿದ್ದರು. ಅದರೆ ಈ ಬಾರಿ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಜಿಲ್ಲಾ ಕೇಂದ್ರಗಳಿಗೆ 15 ಕೋಟಿ ರೂ. ಮತ್ತು ತಾಲ್ಲೂಕು ಕೇಂದ್ರಗಳಿಗೆ 5 ಕೋಟಿ ರೂ.ಗಳನ್ನು ನಗರದ ಅಭಿವೃದ್ಧಿಗೆ ವಿಶೇಷವಾದ ಅನುದಾನವನ್ನು ನೀಡಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲಿಕ್ಕೆ ಬಯಸುತ್ತೇನೆ. ನಗರವನ್ನು ಪ್ರತಿನಿಧಿಸತಕ್ಕಂಥ ಶಾಸಕರಾದರೂ ಕನಿಷ್ಠ ಇದನ್ನಾದರೂ ಸ್ವಾಗತ ಮಾಡಲಿಲ್ಲ ಎನ್ನುವುದಾದರೆ, ದೇವರೂ ಅದನ್ನು ಮೆಚ್ಚುವುದಿಲ್ಲ. ನಿಮ್ಮ ಪೂರ್ವಾಗ್ರಹ ಪೀಡಿತ ವರ್ತನೆಯನ್ನು ಜನರೂ ಸಹ ಮೆಚ್ಚುವುದಿಲ್ಲ. ಕನಿಷ್ಠ ಒಳ್ಳೆಯದನ್ನು ಮಾಡಿದ್ದನ್ನಾದರೂ ಕೂಡ ಬೆನ್ನು ತಟ್ಟಿ, ನೀವು ಮಾಡಿದ್ದು ಒಳ್ಳೆಯದು ಎಂದು ಹೇಳಿ. ಇಲ್ಲದಿದ್ದರೆ, ನಿಮ್ಮನ್ನು ನೀವು ವಂಚನೆ ಮಾಡಿಕೊಂಡಂತಾಗುತ್ತದೆ. ಆ ರೀತಿ ಹೇಳತಕ್ಕಂಥ ಕೆಲಸವನ್ನಾದರೂ ಮಾಡಬೇಕೆಂದು ನಾನು ಹೇಳುತ್ತೇನೆ. [ಗೊಂದಲ] ಮೂಲ ಸೌಕರ್ಯ ಎಂದರೆ ಏನು? ರಸ್ತೆ, ವಿದ್ಯುಚ್ಛಕ್ತಿ, ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕಂಥದ್ದು ಮೂಲ ಸೌಕರ್ಯ ಎನ್ನುತ್ತೇವೆ. 22300 ಕಿ.ಮೀ. ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ಮೂಲ ಸೌಕರ್ಯವೆಂಬುದು ನಮ್ಮ ವಿಪಕ್ಷದ ಸ್ನೇಹಿತರಿಗೆ ಅರ್ಥವಾಗದಿದ್ದರೆ, ಅದನ್ನು ಅರ್ಥ ಮಾಡಿಸತಕ್ಕಂಥ ಭಾಷೆ ಯಾವುರಾದರೂ ಇದ್ದರೆ, ಅದನ್ನು ಹೇಳಿ ಕೊಟ್ಟರೆ, ಆ ಭಾಷೆಯಲ್ಲೇ ಹೇಳಬಹುದು.

[ಗೊಂದಲ]

ನೋಡಿ, ನಾವು ನುಡಿದಂತೆ ನಡೆದವರು ನಾವು, ಈ ದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದಲ್ಲಿ ಸುವರ್ಣ ಚತುಷ್ಪಥ ರಸ್ತೆ ಹೆದ್ದಾರಿಯನ್ನು ನಿರ್ಮಾಣ ಮಾಡಿದ್ದು, ಇವತ್ತು continue ಮಾಡಲು ಯೋಗ್ಯತೆ ಇಲ್ಲದವರು ಮಾಥನಾಡುತ್ತಿದ್ದಾರೆ. ನಾವು ಏನು ಹೇಳುದ್ದೇವೆಯೋ ಅದನ್ನು ಮಾಡುತ್ತೇವೆ, ಹೇಳಿದ್ದನ್ನೇ ಮಾಡುವುದು, ಅದನ್ನು ಬಿಟ್ಟು ಮತ್ತೇನನ್ನು ಮಾಡುವುದಿಲ್ಲ, ನೀವು ಮಾಥಿಲ್ಲವೆಂದು 5 ವರ್ಷ ಬಿಟ್ಟು ಇವರು ಪ್ರಶ್ನೆ ಕೇಳಲಿ.

ಹೇಳಿದ್ದೇವೆಯೋ ಇಲ್ಲವೋ ಈಗ ಯೋಜನೆಯನ್ನು ಮಾಡಿದ್ದೇವೆಯೋ ಇಲ್ಲವೋ ನಮಗೆ ಈ ದೇಶದಲ್ಲಿ ಕನ್‌ಕ್ಟಿವಿಟಿಯನ್ನು ಬಲಪಡಿಸಿದಂಥ ಭಾರತೀಯ ಜನತಾ ಪಾರ್ಟಿ ಇವರಿಂದ ಹೇಳಿಸಿಕೊಳ್ಳುವಂಥ ಸ್ಥಿತಿಯಿಲ್ಲಿಲ್ಲ, ನಾವೇನು ಹೇಳಿದ್ದೇವೆಯೋ ಅದನ್ನು ಮಾಡಿದ್ದೇವೆ, ಮಾಡುತ್ತೇವೆ. ಇವತ್ತು ವಿದ್ಯುತ್ ಸಮಸ್ಯೆಯ ಬಗ್ಗೆ ಕಂಡ ಕಂಡಲ್ಲೆಲ್ಲಾ ಟೀಕೆ ಮಾಡುತ್ತಾರೆ, ವಿದ್ಯುತ್ ಅನ್ನು ಇವತ್ತು ದಿನಸಿ ಅಂಗಡಿಯಲ್ಲಿರುವ ವಸ್ತುವಿನ ರೀತಿಯಲ್ಲಿ ತೆಗೆದುಕೊಂಡು ಬರುವುದಕ್ಕಾಗುತ್ತದೆಯೇ? ಮಾನ್ಯ ಈಶ್ವರಪ್ಪನವರೆ ಮೆಗಾ ವ್ಯಾಚ್ ವಿದ್ಯುತ್ ಉತ್ಪಾದನೆಯಾಗುತ್ತಿರುವುದೆಂಬುದನ್ನು ಹೇಳಬೇಕು?

ಶ್ರೀ ಕೆ.ಎಸ್.ಈಶ್ವರಪ್ಪ :- ಈಗ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವುದು, 7000 ಮೆಗಾ ವ್ಯಾಟ್. ಕೇಂದ್ರ ಸರ್ಕಾರದಿಂದ ಬರಬೇಕಾಗಿರುವುದು 1532, ಒಟ್ಟು ಬೇಡಿಕೆ ಇರುವುದು 10,200, ಅಂಥರೆ, ಕೇಂದ್ರ ಸರ್ಕಾರದಿಂದ ಬರಬೇಕಾದ್ದು ಹೆಚ್ಚು ಕಡಿಮೆ 500–600 ಮೆಗಾ ವ್ಯಾಟ್ ಕಡಿಮೆಯೆ. ಸುಮಾರು 2000–2200 ಮೆಗಾ ವ್ಯಾಟ್ ವಿದ್ಯುತ್ ನಮಗೆ ಕೊರತೆ ಇದೆ.

ಶ್ರೀ ಸಿ.ಟಿ.ರವಿ : ಈಗ ವಿದ್ಯುತ್ ಉತ್ಪಾದನೆಗೆ ಯೋಜನೆ ಮಾಡಿರುವುದು 10,100 ಮೆಗಾ ವ್ಯಾಟ್ ಅಂಥರೆ ಘಟಾನುಗಟಿಗಳೆಲ್ಲಾ, ದೂರ ದೃಷ್ಟಿ ಇಲ್ಲದ ಬಜೆಟ್, ತಾತ್ಕಾಲಿಕವಾಗಿ ಖುಷಿಪಡಿಸುವ ಯೋಜನೆ, ತಪ್ಪುದಾರಿಯಲ್ಲಿ ಹೋಗುತ್ತಿದ್ದೀರಿ ಎಂದು ಟೀಕೆ ಮಾಡಿದ್ದನ್ನೆಲ್ಲಾ ಕೇಳಿದೆ. ಅಂದರೆ ಇದುವರೆವಿಗೂ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿತ್ತು, ಅದಕ್ಕಿಂತ ಜಾಸ್ತಿ ವಿದ್ಯುತ್ ಉತ್ಪಾದನೆ ಯೋಜನೆಗಳಿಗೆ ಪ್ಲಾನ್ ಮಾಡಿ ಅನುಷ್ಠಾನಗೊಳಿಸುವುದಕ್ಕೆ ಹೆಜ್ಜೆ ಹಾಕುತ್ತಿರುವುದು ದೂರದೃಷ್ಟಿ ಇಲ್ಲದ ಬಜೆಟಾ? ಮುಂದಿನ 20 ವರ್ಷಕ್ಕೆ ಪ್ಲಾನ್ ಮಾಡಿ ಹೆಜ್ಜೆ ಇಡುತ್ತಿದ್ದೇವೆ, ಈ ಕೆಲಸವನ್ನು 20 ವರ್ಷಗಳ ಹಿಂದೆ ಅಧಿಕಾರದಲ್ಲಿದ್ದವರು ಮಾಡಿದ್ದರೆ, ಇವತ್ತು ವಿದ್ಯುತ್‌ಗಾಗಿ ಪರಿತಪ್ಪಿಸುವಂಥ ದುಸ್ಥಿತಿ ಬರುತ್ತಿತ್ತೇ? ಶಿವಲಿಂಗೇ ಗೌಡರೆ, ಇವತ್ತು ಗುಜರಾತ್ ಗೆ ನನ್ನ ಖರ್ಚಿನಲ್ಲಿ ಕರೆದುಕೊಂಡು ಹೋಗುತ್ತೇನೆ ಬನ್ನಿ, 24 ಗಂಟೆ ಕರೆಂಟ್, ಅದೂ ದೂರದೃಷ್ಟಿ ವಿಷನ್ ಎಂದರೆ ಅದು. 4 ವರ್ಷ ಅಧಿಕಾರ ಪೂರ್ಣವಾಗುವ ಹಂತಕ್ಕೆ ದೇಶದ ಬೇರೆ ಬೇರೆ ಕಡೆಯಿಂದ ಅಭಿವೃದ್ಧಿ ಎಂದರೆ, ಗುಜರಾತ್ ನೋಡಲು ಹೋಗುತ್ತಾರೆಯೋ ಆ ರೀತಿ ಕರ್ನಾಟಕವನ್ನು ನೋಡುವುದಕ್ಕೆ ಬರಬೇಕು, ಆ ರೀತಿ ವಾತಾವರಣ ಬದಲಾಗುತ್ತದೆ, ಕಾಯಿರಿ ಸಮಾಧಾನದಿಂದಿರಿ, ಸಮಾಧಾನವೇ ಇಲ್ಲದಿದ್ದರೆ ಹೇಗೆ? ಸ್ವಲ್ಪವಾದರೂ ಸಮಾಧಾನವಿರಬೇಕು. ರಸ್ತೆಗೆ ಒತ್ತು ಕೊಟ್ಟಿರುವುದು, ನೀರಾವರಿ ಯೋಜನೆಗಳಿಗೆ ಒತ್ತು ಕೊಟ್ಟಿರುವುದು. ವಿದ್ಯುತ್ ಉತ್ಪಾದನೆಗೆ ಒತ್ತು ಕೊಟ್ಟಿರುವುದು, ಇದು ಮೂಲ ಸೌಕರ್ಯವಲ್ಲವೆನ್ನುವುದಾದರೆ, ದೂರದೃಷ್ಟಿ ಇಲ್ಲವೆನ್ನುವುದಾದರೆ, ಯಾವುದು ದೂರದೃಷ್ಟಿ ಎನ್ನುವುದಾದರು ಹೇಳಿ? ನಮ್ಮ ಬಿಜೆಪಿ ಸರ್ಕಾರ 8 ತಿಂಗಳ ಹಿಂದೆಯಷ್ಟೆ ಅಧಿಕಾರಕ್ಕೆ ಬಂದಿದೆ, ಅದಕ್ಕಿಂತ ಹಿಂದೆ 20 ತಿಂಗಳು ಆಡಳಿತದ

ಸಹವಾಸ ಮಾತ್ರವಾಗಿತ್ತಷ್ಟೆ, ಅದಕ್ಕಿಂತ ಹೆಚ್ಚು ಅನುಭವದ ಜ್ಞಾನ ನಮಗಿಲ್ಲ. ಈ 60 ವರ್ಷ ಆಳ್ವಿಕೆ ಮಾಡಿದವರು ಹೇಳಿಕೊಳ್ಳುವುದಕ್ಕಾದರೂ ಹೇಳಿಕೊಡಿ, ಅದನ್ನೂ ಹೇಳಿಕೊಡುವುದಿಲ್ಲವಲ್ಲ? ಸುಮ್ಮನೆ ಟೀಕೆ ಮಾಡಬೇಕೆಂದು ಟೀಕೆ ಮಾಡುವುದಕ್ಕೋಸ್ಕರ ಹೇಳದರೆ ಅರ್ಥಹೀನ ಟೀಕೆಯಾಗುತ್ತದೆ, ಅರ್ಥಹೀನ ಟೀಕೆಗಿಂತ ನೀವು ಸಲಹೆ ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ನನಗೊಂದು ಸಂತೋಷದ ವಿಚಾರ, ಇವರೆಲ್ಲರೂ ತೋಟದ ಕಾರ್ಮಿಕರ ಪರವಾಗಿ ಮಾತನಾಡುತ್ತಿದ್ದವರು, ಅವರ ಪರವಾಗಿ ಕೆಲಸ ಮಾಡುತ್ತಿದ್ದವರೆಲ್ಲ. ತೋಟದ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ನೀಡುವಂಥ ಐತಿಹಾಸಿಕ ತೀರ್ಮಾನವನ್ನು ನಮ್ಮ ಸರ್ಕಾರ ತೆಗೆದುಕೊಂಡು, ಅವರಿಗೆ ಬಿಪಿಎಲ್ ಕಾರ್ಡ್ ಕೊಟ್ಟಿದೆ. ಈ ರಾಜ್ಯದ ಎಲ್ಲಾ ತೋಟದ ಕಾರ್ಮಿಕರ ಪರವಾಗಿ ಈ ಸರ್ಕಾರವನ್ನು ಅಭಿನಂದಿಸುವುದಕ್ಕೆ ಬಯಸುತ್ತೇನೆ. ಇದುವರೆವಿಗೂ ಕೊಡಲಿಲ್ಲ, ಬರೀ ಮೂಗಿಗೆ ತುಪ್ಪವನ್ನು ಸವರುತ್ತಿದ್ದರು ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಿಪಿಎಲ್ ಕಾರ್ಡ್ ಕೊಟ್ಟಿದೆ. ಹಿರಿಯರಾದ ಹಾಗೂ ಹಣಕಾಸು ಖಾತೆಯನ್ನು ನಿರ್ವಹಿಸಿದಂಥ ಸಿದ್ದರಾಮಯ್ಯನವರು ಮಾತನಾಡುತ್ತಾ 65,000 ಕೋಟಿ ರೂಪಾಯಿಗಳ ಸಾಲವೆಂದು ಹೇಳಿದರು. ಇದುವರೆವಿಗಿನ ಸಾಲವನ್ನು ಏನು ಯಡಿಯೂರಪ್ಪನವರು ಮಾಡಿದ್ದಾರೆ? ಯಾರು ಮಾಡಿದ್ದು ಎಂದು ಕೇಳಬೇಕು ತಾನೆ? ಏಕೆ ಸಾಲ ಮಾಡಿದಿರಿ? ಈ ರಾಜ್ಯದಲ್ಲಿ ಸಂಪನ್ಮೂಲಕ್ಕೆ ಕೊರತೆ ಇತ್ತೇ? ಈ ರಾಜ್ಯದಲ್ಲಿ ನೆಲ,ಜಲ,ಭೌಗೋಳಿಕ ಸಂಪತ್ತಿಗೇನಾದರೂ ಕೊರತೆ ಇತ್ತಾ? ಸಾಲ ಮಾಡಿದವರು ತಾನೇ ಇದಕ್ಕೆ ಉತ್ತರವನ್ನು ಕೊಡಬೇಕು? ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದಂತೆ, ತಾವು ಮಾಡಿದ್ದನ್ನು ನಮ್ಮ ತಲೆಗೆ ಕಟ್ಟುವುದಕ್ಕೆ ಬಂದರೆ ಯಾರು ಮೆಚ್ಚುತ್ತಾರೆ ಸ್ವಾಮಿ? ಜನರು ಮೆಚ್ಚುವಂತಾದರೂ ಮಾತನಾಡಬೇಕಲ್ಲ? ಮಾಡಿದ್ದು ಯಾರೋ, ಆ ಪಾಪ ಹೊರೆಯನ್ನು ನಮ್ಮ ತಲೆಗೆ ಕಟ್ಟುವುದಕ್ಕೆ ಬಂದರೆ ಅದಕ್ಕೆ ನಾವು ಆ ಹೊಣೆಯನ್ನು ಹೊತ್ತಿಕೊಳ್ಳಬೇಕಾಗುತ್ತದೆಯೇ? ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತದೆ? ನೋಟ್ ಪ್ರಿಂಟ್ ಮಾಡುವುದಕ್ಕೆ ಬರುತ್ತದೆಯೇ? ಶಿವಾನಂದ ಸರ್ಕಲ್‌ನಿಂದ ಚಾಲುಕ್ಯ ಸರ್ಕಲ್‌ಗೆ ಬರುವ ರಸ್ತೆಯನ್ನು ಅಗೆದು 30 ತಿಂಗಳು ಏನೂ ಮಾಡಿರಲಿಲ್ಲ, ಈಗ ರಸ್ತೆ ಅಭಿವೃದ್ಧಿಯಾಗಿದೆಯೋ ಇಲ್ಲವೋ ಒಂದು ಸ್ಯಾಂಪಲ್. [ಗೊಂದಲ]

ಶ್ರೀ ಎಂ.ಟಿ.ಕೃಷ್ಣಪ್ಪ :- ಯಾವಾಗ ಬಜೆಟ್ ಹಣವನ್ನು ಪ್ರೊವೈಡ್ ಮಾಡಿದರೆಂಬುದು ಮುಖ್ಯ, ಅದನ್ನು ರವಿಯವರು ಹೇಳಬೇಕಲ್ಲ? [ಗೊಂದಲ]

ಅಧ್ಯಕ್ಷರೆ :- ತಾವು ನೇರವಾಗಿ ನನಗೆ ಅಡ್ರೆಸ್ ಮಾಡಿ ಹೇಳಿ, ಆ ಕಡೆ ನೋಡಿ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಸಿ.ಟಿ.ರವಿ : ಕಳೆದ ಸಾರಿ ಒಂದು ಮಾತನ್ನು ಹೇಳಿದ್ದೆ, ಪದೇ ಪದೇ ಎದ್ದೆದ್ದು ಕುಣಿಯುವವರಿಗೆ ನಮ್ಮಲ್ಲಿ ತುರಿಕೆ ಪುಡಿ ಹಾಕಿದಂತೆ ತುರಿಕೆ ಬಂದಿದೆಯಾ

ಎಂದು ಕೇಳುತ್ತಾರೆ, ನಾನು ಕೇಳುವುದಕ್ಕೆ ಹೋಗುವುದಿಲ್ಲ, ಮತ್ತೆ ನೆನಪು ಮಾಡುವುದಕ್ಕೆ ಹೋಗುವುದಿಲ್ಲ. ಈ ತುರಿಕೆ ಪುಡಿ ಮೈಮೇಲೆ ಬಿದ್ದಿದ್ದರೆ ಪದೇ ಪದೇ ಹೀಗೆ ಪರಚಿಕೊಳ್ಳುತ್ತಿರುತ್ತಾರೆ, ಏಕೆ ಪದೇ ಪದೇ ಆ ರೀತಿ ಪರಚಿಕೊಳ್ಳುತ್ತಾರೆಂದು ಅವರು ಯೋಚನೆ ಮಾಡಬೇಕು, ಇಲ್ಲದಿದ್ದರೆ, ಮಾಧ್ಯಮದ ತುರಿಕೆ ಪುಡಿ ಏನಾದರೂ ಬಿದ್ದಿದೆಯಾ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ಬೆಂಗಳೂರು ಮಹಾನಗರದ ಒಂದರಲ್ಲೇ ಯಾವುದೇ ಕ್ಷೇತ್ರದಲ್ಲಿ ಕನಿಷ್ಟ 400 ಕೋಟಿ ರೂಪಾಯಿಗಳವರೆಗೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಕೃಷ್ಣಬೈರೇಗೌಡರು ಇವತ್ತು ಸದನಕ್ಕೆ ಬಂದಿಲ್ಲ, ಬ್ಯಾಟರಾಯನಪುರ ಕ್ಷೇತ್ರ ಬಿಜೆಪಿ ಕ್ಷೇತ್ರವೇ?

ಶ್ರೀ ಎನ್.ಸಂಪಗಿ :– ಬೆಂಗಳೂರು ಬಿಟ್ಟು ಬೇರೆ ಕಡೆ ಅದೇ ರೀತಿ ಹಣ ಕೊಟ್ಟಿದ್ದಾರೆಯೇ?

[ಗೊಂದಲ]

ಅಧ್ಯಕ್ಷರು :– ಏನೇ ವಿಷಯವಿದ್ದರೂ ನನಗೆ ಅಡ್ರೆಸ್ ಮಾಡಿ ಹೇಳಿ, ಅಲ್ಲಿ ನೋಡಿ ಏಕೆ ಮಾತನಾಡುತ್ತೀರಿ?

ಶ್ರೀ ಸಿ.ಟಿ.ರವಿ : ಕಾರ್ಪೊರೇಷನ್ ಏರಿಯಾಗಳಲ್ಲು ಕೂಡ 50–100 ಕೋಟಿ ಅಭಿವೃದ್ಧಿ ಕೆಲಸ, ಮಾಡುತ್ತಿದ್ದಾರೆ. ಬೇರೆ ಬೇರೆ, ಮೈಸೂರು, ಬಳ್ಳಾರಿ, ಮಂಗಳೂರು, ಈ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾಗುತ್ತಿರುವುದನ್ನು ಜನರು ನೋಡಿ ಸಂತೋಷಪಡುತ್ತಿದ್ದಾರೆ. ನೋಟ್ ಪ್ರಿಂಟ್ ಮಾಡುತ್ತೀರಾ ಎಂದು ಹೇಳಿದರೆ, ನೋಟ್ ಅನ್ನು ನಾವು ಪ್ರಿಂಟ್ ಮಾಡುವುದಿಲ್ಲ, ಕೇಂದ್ರ ಸರ್ಕಾರವೇ ಪ್ರಿಂಟ್ ಮಾಡುವುದು, ರಿಸರ್ವ ಬ್ಯಾಂಕೇ ಪ್ರಿಂಟ್ ಮಾಡುವುದು.

ನಮ್ಮ ಪಾಲಿನ ಅನುದಾನವನ್ನು ಹೇಗೆ ಬಳಸಬೇಕು ಎನ್ನತಕ್ಕಂತಹ ವಿಷನ್ ಇಲ್ಲದೆ ಇರುವವರ ಕೈಯಲ್ಲಿ ಇಷ್ಟು ದಿನ ಅಧಿಕಾರ ಇತ್ತು. ಈಗ ವಿಷನ್ ಇರುವವರ ಕೈಯಲ್ಲಿ ಅಧಿಕಾರ ಇದೆ. ಐದು ವರ್ಷದ ನಂತರ ಏನು ಅಭಿವೃದ್ಧಿ ಆಗಿರುತ್ತದೆ ಎಂದು ಅವರು ನೋಡಲಿ. ಆ ರೀತಿ ಅಭಿವೃದ್ಧಿ ಕಾರ್ಯವನ್ನು ಮಾಡತಕ್ಕಂತಹ ಕೆಲಸವನ್ನು ನಾವು ಮಾಡುತ್ತೇವೆ. ಖೋತಾ ನಡುವೆ ಇಷ್ಟು ಒಳ್ಳೆಯ ಕೆಲಸ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತನ್ನು ನಾನು ಹೇಳಬೇಕಾಗಿದೆ. ಮೊನ್ನೆ ಸಾವಯವ ಕೃಷಿ ಮಿಷನ್‌ನವರದು ಜನವರಿ 26ನೇ ತಾರೀಖು ರೈತರ ಸಭೆ ಸೇರಿತ್ತು. ಆ ಸಭೆಯಲ್ಲಿ ನಮ್ಮ ಹಿಂದಿನ ರಾಷ್ಟ್ರಪತಿಗಳಾಗಿದ್ದಂತಹ ಡಾ:ಎ.ಪಿ.ಜೆ.ಅಬ್ದುಲ್ ಕಲಾಂ ರವರು ಭಾಗವಹಿಸಿದ್ದರು. ಅಲ್ಲಿ ಅವರು ಒಂದು ಮಾತನ್ನು ಹೇಳಿದರು. “ಮನುಷ್ಯ ಸತ್ತರೆ ಮಣ್ಣಿ, ಮಣ್ಣೇ ಸತ್ತರೆ ಮತ್ತೆಲ್ಲಿಗೆ” ಎಂದು ಹೇಳಿದ್ದರು. ಇವತ್ತು ರೈತರ ಬಗ್ಗೆ ಏಕೆ ಈ ಮಾತನ್ನು ಹೇಳಬೇಕಾಗಿ ಬಂದಿತು ಎಂದರೆ, ತಪ್ಪು ಕೃಷಿ ನೀತಿಯ ಪರಿಣಾಮವಾಗಿ ರಾಜರ ಕಾಲದ Special Economic Zone ಏನಿತ್ತು? SEZ ಕೈಗಾರಿಕೆ, ಉದ್ದಿಮೆಗಳನ್ನು ಆರ್ಥಿಕತೆಯ ಬಲವಾದ ಕೇಂದ್ರಗಳು ಎಂದು ಏನು ಹೇಳುತ್ತೇವೆ, ಅವತ್ತು ರಾಜರ ಕಾಲದ

SEZಗಳು ಎಂದರೆ ಗೋಮಾಳಗಳು, ಅಮೃತಮಹಲ್ ಕಾವಲು. ಆ ಗೋಮಾಳ ಅಮೃತ ಮಹಲ್ ಕಾವಲನ್ನು ಸಂಪೂರ್ಣವಾಗಿ ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿ ಕೊಟ್ಟ ಪರಿಣಾಮ ಇವತ್ತು ರೈತ ಸಂಕಷ್ಟಕ್ಕೆ ಸಿಕ್ಕಿದ್ದಾನೆ. ಕೃಷಿ ವೆಚ್ಚ ಉತ್ಪಾದನೆಯ ಲಾಭಕ್ಕಿಂತ ಹೆಚ್ಚಾಗಿದೆ. ಇವತ್ತು ಕೃಷಿಕ ಸಂಕಷ್ಟದಲ್ಲಿದ್ದಾನೆ. ಕೃಷಿಕ ಸಂಕಷ್ಟದಲ್ಲಿದ್ದು ಕೃಷಿ ಮೇಲೆ ಅವಲಂಬಿತರಾದರೆ ನಮ್ಮ ಬದುಕು ಕಷ್ಟ ಎನ್ನುವಂತಹ ಸ್ಥಿತಿಯಲ್ಲಿ ಇವತ್ತು ಕೃಷಿಕ ಇದ್ದಾನೆ. ನಾನು ನೋವಿನಿಂದ ಒಂಧು ಸಂಗತಿಯನ್ನು ಹಂಚಿಕೆಕೊಳ್ಳುವುದಕ್ಕೆ ಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು NSS ಕ್ಯಾಂಪ್‌ನ ಉದ್ಘಾಟನೆಗೆ ಹೋಗಿದ್ದೆ. 75ವಿದ್ಯಾರ್ಥಿಗಳಿದ್ದರು. ಅದರಲ್ಲಿ 16 ಜನ ನಗರ ಪ್ರದೇಶದವರು. 59 ಜನ ಗ್ರಾಮಂತರ ಪ್ರದೇಶದವರು. ನಾನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದೆ. ನೀವು ವಿದ್ಯಾಭ್ಯಾಸ ಮುಗಿಸಿದ ನಂತರ ಕೃಷಿಯನ್ನು ಆಧರಿಸಿ ಗ್ರಾಮೀಣ ಪ್ರದೇಶದಲ್ಲಿ ಬದುಕು ಕಟ್ಟಿಕೊಳ್ಳುವುದಕ್ಕೆ ಬಯಸುವವರು ಎಷ್ಟು ಜನ ಕೈ ಮೇಲೆ ಮಾಡಿ ಎಂದು ಹೇಳಿದೆ. 59 ಜನ ಕೃಷಿ ಆಧಾರಿತ ಕುಟುಂಬದಿಂದ ಬಂದವರಿದ್ದು 16 ಜನ ನಗರ ಪ್ರದೇಶದಿಂದ ಬಂದವರಿದ್ದರೂ ಕೂಡ ನಾನು ಕೃಷಿ ಅವಲಂಬಿಸಿ ಬದುಕುತ್ತೇನೆಂದು ಕೈ ಎತ್ತಿದವರು ಕೇವಲ ನಾಲ್ಕೇ ಜನ. ಆ ನಾಲ್ಕು ಜನರಿಗೆ ಮತ್ತೆ ಪ್ರಶ್ನೆ ಕೇಳಿದೆ. ಏಕೆ ನೀವು ಕೃಷಿ ಆರಿಸಿಕೊಳ್ಳುತ್ತೀರಿ ಎಂದು ಕೇಳಿದೆ. ಅವರಲ್ಲೂ ಕೂಡ ಗಟ್ಟಿಯಾದ ಆತ್ಮವಿಶ್ವಾಸದ ಉತ್ತರ ಇರಲಿಲ್ಲ. ಮಹಾತ್ಮ ಗಾಂಧಿ ಇನ್ನು ಯಾವ್ಯಾವುದೋ ವಿಷಯಗಳನ್ನು ಹೇಳಿದ. ಆದರೆ ಇವತ್ತು ಯುವ ಪೀಳಿಗೆ ಕೃಷಿಯನ್ನು ಅವಲಂಬಿಸಿ ಬದುಕುವುದಕ್ಕೆ ಇಷ್ಟ ಪಡುತ್ತಿಲ್ಲ. ಬದುಕು ಕಟ್ಟಿಕೊಳ್ಳುವುದು ಕಷ್ಟ ಎಂದು ಅನ್ನಿಸಿದೆ. ಆದರೆ ಒಂದು ಕಾಲದಲ್ಲಿ ವ್ಯವಸಾಯ ಎಂದರೆ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಎಂದರೆ ಅಧಮ ಎಂದು ಹೇಳಿ ನೋಡುತ್ತಿದ್ದ ಕಾಲ ಇತ್ತು. ಇವತ್ತು ಒಂದು ಅಂಗನವಾಡಿ ಟೀಚರ್ ಕೆಲಸ ಅಥವಾ ಒಂದು ಕುಕ್ ಪೋಸ್ಟ್‌ಗೆ ಸೇರಿಕೊಳ್ಳುವುದಕ್ಕಾಗಿ ಅಣ್ಣ ಒಂದು ಕುಕ್ ಪೋಸ್ಟ್ ಕೊಡಿಸಿ ಎಂದು ಹೇಳುತ್ತಾರೆ. ಅಣ್ಣಾ ಎರಡು ಲಕ್ಷ ರೂಪಾಯಿ ಆದರೂ ಕೊಡುತ್ತೇನೆ ಒಂದು ಕುಕ್ಕರ್ ಪೋಸ್ಟ್ ಕೊಡಿಸಣ್ಣ ಎಂದು ಹೇಳುತ್ತಾರೆ. ಎರಡು ಲಕ್ಷ ರೂಪಾಯಿ ಎಲ್ಲಿಂದ ತರುತ್ತೀಯ ಎಂದರೆ ನನ್ನ ಪಾಲಿಗೆ ಮೂರು ಎಕರೆ ಜಮೀನು ಬರುತ್ತದೆ ಅದನ್ನು ಮಾರಿ ಕೊಡುತ್ತೇನೆಂದು ಹೇಳುತ್ತಾನೆ. ಅವನಿಗೆ ಕುಕ್ ಪೋಸ್ಟ್ ಎಂದು ಕೂಡ ಹೇಳುವುದಕ್ಕೆ ಬರುವುದಿಲ್ಲ. ಕುಕ್ ಪೋಸ್ಟ್ ಕೊಡಿಸಿ ಎಂದು ಹೇಳುತ್ತಾನೆ. ಆ ಸ್ಥಿತಿಗೆ ಇವತ್ತು ಬಂದಿದೆ. ಅದಕ್ಕೆ ಕಾಯಕಲ್ಪ ನೀಡಬೇಕು. ಅದಕ್ಕೆ ಕಾಯಕಲ್ಪ ನೀಡಬೇಕೆಂದರೆ ಕೃಷಿಯ ಉತ್ಪಾದನಾ ವೆಚ್ಚ ಕಡಿಮೆ ಆಗಬೇಕು. ಇವತ್ತಿನ ರಾಸಾಯನಿಕ ಗೊಬ್ಬರ, ಒಂದು ಸಾರಿ ಮಾತ್ರ ಬಳಸತಕ್ಕಂತಹ ಬೀಜಗಳು, ಹೈಬ್ರಿಡ್ ಹಾಗೂ ಹೈಟೆಕ್ ಬೇಜಗಳಿಂದ ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಿದ್ದರೆ ಏನು ಮಾಡಬೇಕು? ಅದಕ್ಕೇ ದೂರದೃಷ್ಟಿ ಬೇಕೆಂದು ಹೇಳುವುದು. ನಮ್ಮ ಪರಂಪರೆಯ ಕೃಷಿ ಜ್ಞಾನವನ್ನು ನಾವು ಇನ್ಯಾವುದೋ

ಅನುಕರಣೆಯ ಪರಿಣಾಮವಾಗಿ ರೈತನನ್ನೂ ದಿಕ್ಕು ತಪ್ಪಿಸಿ ದೇಶವನ್ನೂ ದಿಕ್ಕು ತಪ್ಪಿಸತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಅವನು ಪರಂಪರಾಗತ ಕೃಷಿ ವ್ಯವಸ್ಥೆಗೆ ಹೋಗಬೇಕು. ಮತ್ತೆ ರೈತನ ಬದುಕು ಉತ್ತಮ ಎಂದು ಅನ್ನಿಸಬೇಕು. ರೈತನ ಬದುಕು ಉತ್ತಮವೆಂದು ಅನ್ನಿಸಬೇಕಾದರೆ ಮತ್ತೆ ಆ ಸಹಜ ಕೃಷಿಗೆ ಸಾವಯವ ಕೃಷಿಗೆಗೋ ಆಧಾರಿತ ಕೃಷಿಗೆ ಹೋಗಬೇಕಾದಂತಹ ಅನಿವಾರ್ಯತೆ ಇದೆ. ಗೋ ಆಧಾರಿತ ಕೃಷಿಗೆ ಹೋಗದೇ ಇದ್ದರೆ ರೈತ ಬದುಕುವುದಿಲ್ಲ. ರೈತ ಬದುಕಲಿಲ್ಲವೆಂದರೆ ಈ ದೇಶ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ದೇಶದ ಬೆನ್ನೆಲುಬು ರೈತ. ನಾವೆಲ್ಲಾ ಗಂಟಾಘೋಷವಾಗಿ ಸಾವಿರಾರು ಬಾರಿ ನಮ್ಮ ಭಾಷಣಗಳಲ್ಲಿ ಹೇಳುತ್ತೇವೆ. ಈ ದೇಶದ ಬೆನ್ನೆಲುಬು ರೈತ. ರೈತನ ಬೆನ್ನೆಲುಬು ಗೋವು. ಆ ಗೋವನ್ನು ನಾಶ ಮಾಡಿ ರೈತ ಬದುವುದಕ್ಕೆ ಸಾಧ್ಯವಿಲ್ಲ. ಒಂದಕ್ಕೊಂದು ಪರಸ್ಪರ ಪೂರಕ. ಅದಕ್ಕಾಗಿ ಗೋ ಆದಾರಿತ ಕೃಷಿ ವ್ಯವಸ್ಥೆಗೆ ಮತ್ತೆ ಜೀವ ಕೊಡಲಿಕ್ಕೆ ಸಾವಯವ ಕೃಷಿ ಮಿಷನ್ ಸ್ಥಾಪನೆ ಮಾಡಿ ಅದಕ್ಕಾಗಿ ಬಜೆಟ್‌ನಲ್ಲಿ ಹಣ ಇಟ್ಟು, ಒಂದು ಐತಿಹಾಸಿಕ ಕ್ರಮವನ್ನು ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಬಿನಂದಿಸಲಿಕ್ಕೆ ಬಯಸುತ್ತೇನೆ. ಗೋವು ಪೂಜನೀಯ ಎಂದು ಅಗಿದ್ದು ಏಕೆಂದರೆ, ನಮ್ಮ ದೇಶದ ಪರಂಪರೆಯ ವ್ಯವಸ್ಥೆಯಲ್ಲಿ ಬರೀ ಸೃಷ್ಟಿಕರ್ತನನ್ನು ಮಾತ್ರ ಪೂಜಿಸಲಿಲ್ಲ. ಸೃಷ್ಟಿಯನ್ನು ಪೂಜಿಸಿದೆವು. ಯಾವ್ಯಾವುದು ಉಪಕಾರಿಯಾಯಿತು ಅವೆಲ್ಲವಕ್ಕೂ ದೈವತ್ವದ ಕಲ್ಪನೆ ಕೊಟ್ಟೆವು. ದೈವ ಎಂಥರೆ ಬರೀ ಸೃಷ್ಟಿಕರ್ತ ಮಾತ್ರವಲ್ಲ. ಯಾವ ಸೃಷಿ ಮನುಷ್ಯನಿಗೆ ಹಾಗೂ ಸಕಲ ಜೀವಿಗಳಿಗೆ ಅನುಕೂಲ ಇದೆ, ಅವೆಲ್ಲವಕ್ಕೂ ದೈವತ್ವವನ್ನು ಕೊಟ್ಟೆವು. ಅದಕ್ಕೆ ನಮ್ಮ ಪರಂಪರೆಯಲ್ಲಿ ದೇವರನ್ನು ಸೂರ್ಯ ಎಂದು ಆರಾಧಿಸುತ್ತೇವೆ. ನೀರನ್ನು ಗಂಗೆ ಎಂದು ಆರಾಧಿಸುತ್ತೇವೆ. ಅಗ್ನಿಯನ್ನು ದೇವರು ಎಂದು ಆರಾಧಿಸುತ್ತೇವೆ. ಗಾಳಿಯನ್ನು ದೇವರು ಎಂದು ಅರಾಧಿಸುತ್ತೇವೆ. ಹಾಗೆಯೇ ಗೋವನ್ನು ದೇವರು ದೇವರು ಎಂದು ಅರಾಧಿಸಿದ್ದು ತಾನು ಕಸ ತಿಂದು ಅಮೃತವನ್ನು ಕೊಡತಕ್ಕಂತಹ ಸಾಮರ್ಥ್ಯ ಅದಕ್ಕೆ ಇದ್ದಿದ್ದರಿಂದ. ತಾನು ಕಸವನ್ನು ತಿಂದು ಕೂಡ ಈ ಭೂಮಿಯನ್ನು ಹಸನು ಮಾಡತಕ್ಕಂಹ ಸಾಮರ್ಥ್ಯ ಇದ್ದಿದ್ದರಿಂದ ಗೋವಿಗೆ ದೈವತ್ವದ ಪಟ್ಟವನ್ನು ನಮ್ಮ ಹಿರಿಯರು ಕೊಟ್ಟರೇ ಹೊರತು ಕೇವಲ ಭಾವನಾತ್ಮಕ ವಿಚಾರದ ಆಧಾರದಲ್ಲಿ ಮಾತ್ರವಲ್ಲ. ಇಷ್ಟೊಂದು ಉಪಕಾರ ಮಾಡತಕ್ಕಂತಹ ಆ ಪ್ರಾಣಿಯ ಪ್ರಾಣಿ ವಧೆಯನ್ನು ತಪ್ಪಿಸಬೇಕು ಎನ್ನತಕ್ಕಂತಹ ಐತಿಹಾಸಿಕ ಕ್ರಮವನ್ನು ತೆಗೆದುಕೊಂಡಿರತಕ್ಕಂಥದ್ದು ಸ್ವಾಗತಾರ್ಹ. ಅದನ್ನು ಉಳಿಸಲಿಕ್ಕೆ ತೆಗೆದುಕೊಂಡಿರತಕ್ಕಂತಹ ಕ್ರಮಗಳನ್ನು ಸ್ವಾಗತಿಸುತ್ತಾ, ಗೋಶಾಲೆಯನ್ನು ಪ್ರತಿ ತಾಲ್ಲೂಕಿನಲ್ಲಿ ಸ್ಥಾಪನೆ ಮಾಡಲಿಕ್ಕೆ ಹಣ ಕೊಡುವುದಕ್ಕಾಗಿ ಕ್ರಮ ತೆಗೆದುಕೊಂಡಿರತಕ್ಕಂತಹ ಮಾನ್ಯ ಮುಖ್ಯ ಮಂತ್ರಿಗಳ ನಿರ್ಧಾರವನ್ನು ಸ್ವಾಗತಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರವಿ ಅವರೇ ಮುಗಿಸಿ.

ಶ್ರೀ ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಟಿ.ರವಿರವರು ಮೊನ್ನೆ ತಾನೆ ಎಂಟು ದಿವಸಗಳ ಹಿಂದೆ 100 ಕುರಿ ಹಾಗೂ 25 ಹಂದಿ ಹರಕೆಗಾಗಿ ಕೊಟ್ಟಿದ್ದಾರೆ. ಕಾರ್ಯಕರ್ತರಿಗೆಲ್ಲಾ ಊಟ ಹಾಕಿಸಿದ್ದಾರೆ. ಬೇಲೂರಿನ ಪುರದಮ್ಮನ ದೇವಸ್ಥಾನದಲ್ಲಿ 100 ಕುರಿ ಹಾಗೂ 25 ಹಂದಿಯನ್ನು ಬಲಿ ಕೊಟಿರುವ ಬಗ್ಗೆ ಪೇಪರ್‌ನಲ್ಲಿ ಹೆಡ್‌ಲೈನ್‌ನಲ್ಲಿ ಬಂದಿದೆ. ಬೇರೆಯವರ ವಿಚಾರ ಮಾತನಾಡುತ್ತಾರೆ ಅವರೇ ಹಿಂಸೆ ಮಾಡುತ್ತಿದ್ದಾರೆ.

: ಗೊಂದಲ:

ಶ್ರೀ ಸಿ.ಟಿ.ರವಿ : ಅವರು ನನ್ನನ್ನು ಏಕೆ ಕರೆಯಲಿಲ್ಲ ಎಂದು ಹೇಳಿದರು. ನಾನು ನಿಮಗೆ ಪ್ರತ್ಯೇಕವಾಗಿ ಕರೆಯುತ್ತೇನೆಂದು ಹೇಳಿದ್ದೇನೆ. ಅವರಿಗೆ ಕರೆದಿಲ್ಲವೆಂದು ಬೇಜಾರು ಮಾಡಿಕೊಂಡಿದ್ದಾರೆ. ಮುಂದಿನ ಸಾರಿ ಕರೆಯುತ್ತೇನೆ.

ಶ್ರೀ ರುದ್ರೇಶ್‌ಗೌಡ : ಬೇರೆ ಪಾಡಿಯವರ ಹಿಂಸೆ ಬಗ್ಗೆ ಮಾತನಾಡುತ್ತೀರಿ, ಇದು ಹಿಂಸೆ ಅಲ್ಲವಾ? 100 ಕುರಿ ಹಾಗೂ 25 ಹಂದಿ ಕೊಡುವುದು ಹಿಂಸೆ ಅಲ್ಲವಾ?

ಶ್ರೀ ಸಿ.ಟಿ.ರವಿ : ಮುಳ್ಳು ಮುಳ್ಳಿನಿಂದಲೇ ತೆಗೆಯಬೇಕು. ನನ್ನ ರಾಜಕೀಯ ವಿರೋಧಿ ಅಲ್ಲಿ ಹರಕ್ಕೆ ಕಟ್ಟಿಕೊಂಡಿದ್ದ. ಅವನು ಕಟ್ಟಿದ ಮೇಲೆ ನಾನೂ ಹರಕೆ ಕಟ್ಟಿಕೊಳ್ಳಬೇಕಾಯಿತು. ಸಂಪೂರ್ಣ ಪ್ರಾಣಿ ವಧೆ ಆಗಬೇಕೆಂದು ಬಯಸುವುದಾದರೆ, ನಾನು ಸಂಪೂರ್ಣವಾಗಿ ತಯಾರಾಗಿದ್ದೇನೆ, ಅದಕ್ಕೆ ನನ್ನ ಪೂರ್ಣ ಸಹಮತ ಇದೆ. ಆದರೆ ಗೂ ವಧೆ ಆಗುವುದಕ್ಕೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಮಾನ್ಯ ರಮಾನಾಥರೈ ರವರೇ ನೀವು ಗೋವಧೆ ಪರ ಇರಬಹುದು. ನಾವಂತೂ ಯಾವುದೇ ಕಾರಣಕ್ಕೂ ಬಿಡುವುದಿಲ್ಲ.

ಶ್ರೀ ಬಿ.ರಮಾನಾಥರೈ : ಪ್ರಾಣಿವಧೆ ನಿಲ್ಲಿಸುವುದಕ್ಕೆ ನಮ್ಮ ಪೂರ್ಣ ಸಹಕಾರ ಇದೆ.

: ಗೊಂದಲ :

ಶ್ರೀ ಸಿ.ಟಿ.ರವಿ : ಮಾನ್ಯ ಮಾಜಿ ಶಾಸಕರಾದ ನಾಗರಾಜ ಶೆಟ್ಟರು ನನಗೆ ಒಂದು ಮಾತು ಹೇಳಿದ್ದರು. ಅವರ ದೈವಕ್ಕೆ ಹರಕೆ ಕಟ್ಟಿಕೊಂಡ ಮೇಲೆ ರಮಾನಾಥರೈಗೆ ಸೋಲಿಸಿದ್ದು ಎಂದು ನಾಗರಾಜ ಶೆಟ್ಟರವರು ಹೇಳಿದ್ದರು. ಈಗ ನೀವು ಅವರ ದೈವಕ್ಕೆ ಹರಕೆ ಕಟ್ಟಿಕೊಂಡಿರಬಹುದು.

ಶ್ರೀ ಬಿ.ರಮಾನಾಥರೈ : ಅವರು ಸೋತದ್ದು ಹೇಗೆ? ನಾವು ಅವರಿಗೆ ಮತ್ತೆ ಸೋಲಿಸುತ್ತೇವೆ ಗೊತ್ತಾ? ಸೋತ ಮೇಲೆ ಅವರಿಗೆ ಗೂಟದ ಕಾರು ಕೊಟ್ಟಿದ್ದಾರೆ. ಶಿಷ್ಟಾಚಾರ ಪ್ರಕರಣದಲ್ಲಿ ಎಲ್ಲರಿಗೂ ಜೋರು ಮಾಡಿ ಕಳುಹಿಸುತ್ತಿದ್ದಾರೆ. ಅವರು ಪ್ರೋಟೋಕಾಲ್ ಬಗ್ಗೆ ಹೇಳುತ್ತಾರೆ. ಕ್ಯಾಬಿನೆಟ್ ದರ್ಜೆ ಸ್ಥಾನಮಾನ ಕೊಟ್ಟಿದ್ದಾರೆ.

ಮಾನ್ಯ ಯೋಗೀಶ್ ಭಟ್‌ರವರು ಪ್ರೋಟೋಕಾಲ್ ಬಗ್ಗೆ ಹೇಳಬಹುದು. ಅವರು ಅದನ್ನು ಹೇಳುವುದಿಲ್ಲ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ಹಿರಿಯ ಸದಸ್ಯರಾದ ಮಾನ್ಯ ಶ್ರೀನಿವಾಸಪ್ರಸಾದ್‌ರವರು ಬಹಳ ಜನ ಚರ್ಚೆ ಮಾಡಿದ್ದು ಏನೆಂದರೆ. ಚರ್ಚ್ ಮೇಲಿನ ದಾಳಿ, ಪಬ್ ಮೇಲಿನ ದಾಳಿ, ಕಾನೂನು ಸುವ್ಯವಸ್ಥೆ, ವ್ಯಾಲೆಂಟನ್ ಡೇ, ಹೀಗೆ ಇತ್ಯಾದಿ ಎಲ್ಲ ಸಂಗತಿಗಳ ಬಗ್ಗೆ ಚರ್ಚೆ ಮಾಡಿದರು. ಹಿರಿಯ ಸದಸ್ಯರಾದ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಬಜೆಟ್ ಮೇಲೆ ಮಾತನಾಡುವಾಗಲೇ ಈ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಚರ್ಚ್ ಮೇಲಿನ ದಾಳಿಯನ್ನು ಸರ್ಕಾರ ಸಮರ್ಥಿಸಲಿಲ್ಲ. ಚರ್ಚ್ ಮೇಲೆ ದಾಳಿ ಮಾಡಿದವರ ಮೇಲೆ ಕೇಸ್ ಹಾಕಿ, ಬಂದಿಸಿ ಅವರನ್ನು ಜೈಲಿಗೆ ಕಳುಹಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಿತು. 2000ನೇ ಇಸವಿಯಲ್ಲಿ ಚರ್ಚ್‌ಗಳ ಮೇಲೆ ಬಾಂಬ್ ದಾಳಿ ನಡೆದಿತ್ತು.

(ಗೊಂದಲ)

ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಭಯೋತ್ಪಾದನೆ ಮೇಲಿನ ಚರ್ಚೆ ನಡೆಯುವಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು :– ಸಿ.ಟಿ.ರವಿಯವರೆ, ಬಜೆಟ್ ಮೇಲೆ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಶ್ರೀನಿವಾಸಪ್ರಸಾದ್‌ರವರು ಬಜೆಟ್ ಮೇಲೆ ಭಾಷಣ ಮಾಡುವಾಗಲೇ ಈ ವಿಷಯವನ್ನು ಪ್ರಾಸ್ತಾಪ ಮಾಢಿದ್ದರು. ಅದಕ್ಕೋಸ್ಕರವೇ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು :– ಚರ್ಚ್ ವಿಷಯ ಬಿಟ್ಟು ಬಜೆಟ್ ಮೇಲೆ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆಯೇ ಹೇಳುತ್ತಿದ್ದೇನೆ. 2000ನೇ ಇಸಸಿಯಲ್ಲಿ ಚರ್ಚ್ ಮೇಲೆ ಬಾಂಬ್ ದಾಳಿ ನಡೆದಿತ್ತು.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುವಾಗ ನೀವೆಲ್ಲರೂ ಸುಮ್ಮನೆ ಇದ್ದಿರಿ. ನಾನು ಈಗ ಉತ್ತರ ಕೊಡುತ್ತಿಲ್ಲ. ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನೀವೂ ಕೂಡ ಮಾತನಾಡುವಾಗ ಮಾತನಾಡಿ. ನನಗೆ ಮಾತನಾಡಲು ಅಡ್ಡಿಪಡಿಸಬೇಡಿ. ಮಾನ್ಯ ಅಧ್ಯಕ್ಷರೆ, 2000ನೇ ಇಸವಿಯಲ್ಲಿ ಚರ್ಚ್ ಮೇಲೆ ಬಾಂಬ್ ದಾಳಿ ನಡೆದಿತ್ತು.

ಅಧ್ಯಕ್ಷರು :– ಸಿ.ಟಿ.ರವಿಯವರೆ, ಬಜೆಟ್‌ಗೆ ಸೀಮಿತವಾಗಿ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಇವೊತ್ತು ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅವೊತ್ತು ಗೃಹ ಸಚಿವರಾಗಿದ್ದರು. ಬಾಂಬ್ ದಾಳಿಯ ತನಿಖೆ ನಡೆಸಲಿಲ್ಲ.

ಅಧ್ಯಕ್ಷರು :- ಸಿ.ಟಿ.ರವಿಯವರೆ, ನೀವು ಬಜೆಟ್‌ಗೆ ಮಾತ್ರ ಸೀಮಿತವಾಗಿ ಮಾತನಾಡಿ. ಅದನ್ನು ಬಿಟ್ಟು ಬೇರೆ ಮಾತನಾಡಿದರೆ ಅದು ಬೇರೆ ಎಲ್ಲೆಲ್ಲೋ ಚರ್ಚೆ ಡೈವರ್ಟ್ ಆಗಿ ಹೋಗುತ್ತದೆ. ಆದುದರಿಂದ ಬೇಗ ಮುಕ್ತಾಯ ಮಾಡಿ. ಏಕೆಂದರೆ ಇನ್ನೂ ಮಾತನಾಡುವವರು ಬಹಳ ಸದಸ್ಯರು ಇದ್ದಾರೆ. ಇನ್ನೂ 15 ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನಾನು ಏಕೆ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆಂದರೆ, ಶ್ರೀನಿವಾಸಪ್ರಸಾದ್‌ರವರು ಈ ವಿಷಯವನ್ನು ಮಾತನಾಡಿದ್ದರು. ಅವರು ಬಜೆಟ್ ಮೇಲೆ ಮಾತನಾಡುವಾಗಲೇ ಈ ವಿಷಯವನ್ನು ಮಾತನಾಡಡಿದ್ದರು.

ಅಧ್ಯಕ್ಷರು :- ಈಗ ಆ ವಿಷಯ ಬಿಡಿ. ಬಜೆಟ್ ಮೇಲೆ ಮಾತನಾಡಿ. ಇನ್ನೂ 15 ಜನ ಮಾತನಾಡುವವರು ಇದ್ದಾರೆ. ಇವೊತ್ತು ಎಷ್ಟೊತ್ತಾದರೂ ಬಜೆಟ್ ಮೇಲಿನ ಚರ್ಚೆಯನ್ನು ಮುಗಿಸಬೇಕು.

ಶ್ರೀ ಸಿ.ಟಿ.ರವಿ : ನಾನು ಒಂದೇ ಪಾಯಿಂಟ್ ಹೇಳುವುದೇನೆಂದರೆ, ತನಿಖೆ ನಡೆಸಿ ಆರೋಪಿಗಳು ಪತ್ತೆಯಾಗುವುದಕ್ಕೆ ಮುಂಚೆಯೇ ಆರ್.ಎಸ್.ಎಸ್. ತಲೆ ಮೇಲೆ ಆ ಬಾಂಬ್ ದಾಳಿಯ ಪ್ರಕರಣವನ್ನು ಕಟ್ಟಿದರು. ಆಮೇಲೆ ಆ ಬಾಂಬ್ ದಾಳಿಯ ಆರೋಪಿಗಳು ಯಾರು ಎಂದು ಪತ್ತೆಯಾದರು. ಆಗ ಬಾಯಿ ಮುಚ್ಚಿಕೊಂಡರು. ನಿಜವಾದ ಆರೋಪಿಗಳು ಪತ್ತೆಯಾದಾಗ ಬಾಯಿ ಮುಚ್ಚಿಕೊಂಡರು. ಈಗಲೂ ಕೂಡ ಸಂಘ, ಪರಿವಾರ ಎನ್ನವಂಥ ಆರೋಪವನ್ನು ಮಾಡುತ್ತಿದ್ದಾರೆ. ಇವರಿಗೆ ರಾಜಕೀಯ ಪರಿಜ್ಞಾನ ಇರಬೇಕು ತಾನೆ. ಶ್ರೀ ರಾಮಸೇನೆ ನನ್ನ ವಿರುದ್ಧ contest ಮಾಡಿತ್ತು. ಈ ರೀತಿಯಲ್ಲಿ ರಾಜ್ಯದಲ್ಲಿ ಒಟ್ಟು 86 ಕಡೆ ಶ್ರೀರಾಮ ಸೇನೆಯವರು contest ಮಾಡಿದ್ದರು. ಹೇಗೆ ಅವರು ನಮ್ಮ ಪರಿವಾರದವರಾಗುತ್ತಾರೆ? ಆ ಆರೋಪವನ್ನು ನಮ್ಮ ತಲೆಯ ಮೇಲೆ ಕಟ್ಟುತ್ತಾರೆ ನಮ್ಮ ವಿರುದ್ಧ ಸ್ಪರ್ಧೆ ಮಾಡಿತ್ತು ಎಂದರೆ ಅವರನ್ನು ಎತ್ತಿಕಟ್ಟುವಂಥ ಕಾಣದ ಕೈಗಳು ಬೇರೆ ಇವೆ. ಸತ್ಯ ತನಿಖೆಯ ನಂತರ ಹೊರಗೆ ಬರುತ್ತದೆ. ಎತ್ತಿಕಟ್ಟಿ ಯಾರು ರಾಜಕಾರಣ ಮಾಡಿದರು? ಯಾರು ಯಾರು ಯಾರ್‍ಯಾರಿಗೆ ಪುಸಲಾವಣೆ ಮಾಡಿದರು? ಇದನ್ನು ಬಿ.ಜೆ.ಪಿ. ಸರ್ಕಾರದ ತಲೆಗೆ ತರತಕ್ಕಂಥ ಷಡ್ಯಂತ್ರವನ್ನು ಯಾರು ರೂಪಿಸಿದರು? ಅವೊತ್ತು ಮುಖ್ಯಮಂತ್ರಿಗಳಾಗಿದ್ದಂಥ ಕುಮಾರಸ್ವಾಮಿಯವರು ಒಂದು ಮಾತನ್ನು ಹೇಳಿದ್ದರು. ಡಾ:ರಾಜ್‌ಕುಮಾರ್ ಸಾವಿನ ಸಂದರ್ಭದಲ್ಲಿ ಗಲಭೆಯನ್ನು ಎಬ್ಬಿಸಿ ಯಾರು ನಮ್ಮ ಸರ್ಕಾರವನ್ನು ಬೀಳಿಸತಕ್ಕಂಥ ಷಡ್ಯಂತ್ರವನ್ನು ಮಾಡಿದ್ದಾರೆ ಅದು ಗೊತ್ತಿದೆಯೆಂದು ಹೇಳಿದ್ದರು. ಆದೇ ರೀತಿ ಷಡ್ಯಂತ್ರವನ್ನು ಮಾಡುವಚಿಥ ಜನ ಇವೊತ್ತು ರಾಮಸೇನೆಯಂಥ ಸಂಘಟನೆಗೆ ಕುಮ್ಮಕ್ಕು ಕೊಟ್ಟಿರತಕ್ಕಂಥ ಜನ ಯಾರಿದ್ದಾರೆ ಎನ್ನತಕ್ಕಂಥ ಸತ್ಯ ಕೆಲವೇ ದಿನಗಳಲ್ಲಿ ಹೊರಬರುತ್ತದೆ.

ಶ್ರೀ ಬಿ.ರಮಾನಾಥರೈ : ಹಾಗಾದರೆ ಶ್ರೀರಾಮಸೇನೆಯನ್ನು ಸರ್ಕಾರ ಬಂದ್ ಮಾಡಲಿ.

ಅಧ್ಯಕ್ಷರು :– ಸಿ.ಟಿ.ರವಿರವರೆ, ಬೇಗ conclude ಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಬಜೆಟ್ ಮೇಲೆ ಮಾತನಾಡಿಯೆಂದು ನೀವು ಅವರಿಗೆ ಹೇಳಿ, ಇಲ್ಲಾ conclude ಮಾಡಿ ಎಂದು ಹೇಳಿ.

ಶ್ರೀ ಸಿ.ಟಿ.ರವಿ : ನಾನು ಮಾತನಾಡುವಾಗ ನಿಮಗೆ ಗುಂಡುಪಿನ್ನು ಚುಚ್ಚಿದಂತಾಗುತ್ತಿತ್ತೆ? ನಾನು ಒಂದೊಂದು ಮಾತನ್ನು ಆಡಿದಾಗಲೂ ನೀವುಗಳು ಎಗರಿ ಎಗರಿ ಬೀಳುತ್ತಿದ್ದಿರಲ್ಲ. ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಗರ್ಭಸ್ಥ ಶಿಶುವಿನಿಂದ ಹಿಡಿದು ಜನರ ಬದುಕಿನ ಜೊತೆಗೆ ತದನಂತರದಲ್ಲಿ ಸಾವಿನ ತನಕವೂ ಕೂಡ ಜನರ ಜೊತೆ ಇರತಕ್ಕಂಥ ಸರ್ಕಾರ ನಮ್ಮದು. 3 ರಿಂದ 6 ನೇ ತಿಂಗಳ ಗರ್ಭಿಣಿ ತಾಯಿಗೆ 1 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. 6 ರಿಂದ 9 ನೇ ತಿಂಗಳಿಗೆ ಮತ್ತೊಂದು ಸಾವಿರ ರೂ.ಗಳನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ರಮಾನಾಥರೈ : ರಾಷ್ಟ್ರೀಯ ಅಭಿಯಾನದಿಂದ ಕೋಟ್ಯಾಂತರ ರೂಪಾಯಿ ಬರುತ್ತಿದೆಯಲ್ಲಾ ಅದರಿಂದ ಕೊಡುವುದು.

ಅಧ್ಯಕ್ಷರು :– ರವಿಯವರೆ, ಇನ್ನೂ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ, ಪ್ಲೀಸ್ ಕನ್‌ಕ್ಲೂಡ್ ಮಾಡಿ.

ಶ್ರೀ ಸಿ.ಟಿ.ರವಿ : ಮನೆಯಲ್ಲಿ ಹೆರಿಗೆಯಾದರೆ 500 ರೂಪಾಯಿ ಕೊಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಒಂದು ಸಾವಿರ ರೂಪಾಯಿ. ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಒಂದೂವರೆ ಸಾವಿರ ರೂಪಾಯಿ. ಮಡಿಲು ಕಿಟ್ ಕೂಡ ಕೊಡುತ್ತೇವೆ. ಅವರಿಗೆ ನಿಮ್ಮ ಸರ್ಕಾರ ಏನು ಮಾಡಿದೆಯೆಂದು ಇವರು ಕೇಳುತ್ತಾರಲ್ಲ ಅದಕ್ಕೇ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :– ಈಗಾಗಲೇ ಒಂದು ತಾಸಾಗಿದೆ. ಬೇಗ ಮುಗಿಸಿ.

ಶ್ರೀ ಸಿ.ಟಿ.ರವಿ : ಇನ್ನು ಮೂರು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಆದರೇ ಅವರುಗಳು ಹೀಗೆ ಅಡ್ಡಿಪಡಿಸುತ್ತಿದ್ದರೆ ಮೂವತ್ತು ನಿಮಿಷ ತೆಗೆದುಕೊಳ್ಳತ್ತೇನೆ. ಅವರುಗಳು ಸುಮ್ಮನೇ ಇದ್ದರೆ ಮೂರು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಹೆಣ್ಣು ಮಗುವಾದರೆ 20 ಸಾವಿರ ರೂ.ಗಳನ್ನು ಇಟ್ಟು 1 ಲಕ್ಷ ರೂಪಾಯಿ ಬಾಂಡ್ ಕೊಡಲಾಗುತ್ತದೆ. ಒಂದನೇ ತರಗತಿಗೆ ನೂರು, ಎರಡನೆಯ ತರಗತಿಗೆ ಇನ್ನೂರು, ಮೂರನೇ ತರಗತಿಗೆ ಮುನ್ನೂರು, ಎಸ್.ಎಸ್.ಎ.ಸಿ.ಗೆ ಒಂದು ಸಾವಿರ, 8ನೇ ತರಗತಿಗೆ ಬರಬೇಕಾದರೆ ಸೈಕಲ್ ಕೊಡತ್ತೇವೆ. ಪಿ.ಯು.ಸಿ. ಗೆ ಬರಬೇಕಾದರೆ ಒಂದು ಸಾವಿರದ ಇನ್ನೂರು ರೂಪಾಯಿ. ಉನ್ನತ ವ್ಯಾಸಾಂಗಕ್ಕೆ ಸಾಲ. ಇಷ್ಟೆಲ್ಲಾ ಕೊಟ್ಟು ಆದರ್ಶ ವಿವಾಹಕ್ಕೂ ಹಣವನ್ನು ಕೊಡುತ್ತೇವೆ. ಸಾಮೂಹಿಕ ಮದುವೆಯಾದರೆ

ಕೊಡುತ್ತೇವೆ. ಮದುವೆಯಾದರೂ ಸರ್ಕಾರದಿಂದ ಹಣ ಉಂಟು. ಆಮೇಲೆ ವಿಧವಾ ವೇತನ ನಾನೂರು ರೂಪಾಯಿ, 65 ವರ್ಷ ವಯಸ್ಸಾಯಿತೆಂದರೆ ಅದಕ್ಕೆ ನಾನೂರು ರೂಪಾಯಿ, ಇಬ್ಬರಿದ್ದರೆ ಎಂಟುನೂರು ರೂಪಾಯಿ, ವರ್ಷಕ್ಕೆ 9600 ರೂಪಾಯಿ ಆಗುತ್ತದೆ. ಯಾವ ಮಗನೂ 5 ಸಾವಿರ ರೂಪಾಯಿ ತೆಗೆದುಕೋ ಅಪ್ಪ ಎಂದು ಕೊಡುವುದಿಲ್ಲ. ಆಮೇಲೆ ಮಧ್ಯಾಹ್ನದ ಬಿಸಿಯೂಟ, ಒಂದು ಲೀಟರ್ ಹಾಲು ಹಾಕುತ್ತಿದ್ದರೆ ಎರಡು ರೂಪಾಯಿ ಹೆಚ್ಚುವರಿ ಹಣ, ಹತ್ತು ಲೀಟರ್ ಹಾಲು ಹಾಕುತ್ತಿದ್ದರೆ ಒಂದು ದಿನಕ್ಕೆ ಇಪ್ಪತ್ತು ರೂಪಾಯಿ, ತಿಂಗಳಿಗೆ ಆರುನೂರು ರೂಪಾಯಿ, ಒಂದು ವರ್ಷಕ್ಕೆ ಏಳು ಸಾವಿರದ ಇನ್ನೂರು ರೂಪಾಯಿಗಳನ್ನು ನಮ್ಮ ಯಡಿಯೂರಪ್ಪನವರು ಕೊಡುತ್ತಿರುವುದು, ನಮ್ಮ ಸರ್ಕಾರ ಕೊಡುತ್ತಿರುವುದು.

ಅಧ್ಯಕ್ಷರು :- ಸಿ.ಟಿ.ರವಿಯವರೆ ಬೇಗ ಮುಗಿಸಿ. ನಾನು ನೆಕ್ಸ್ಟ್ ಮಾತನಾಡುವವರನ್ನು ಕರೆಯುತ್ತೇನೆ. ಪ್ಲೀಸ್ ಬೇಗ ಮುಗಿಸಿ.

ಶ್ರೀ ಸಿ.ಟಿ.ರವಿ : ಇನ್ನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ.

ಇಷ್ಟೆಲ್ಲ ಕೊಟ್ಟು, ಶೇಕಡ 3ರ ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟು, ಬಿಜಕ್ಕೂ ಹಣ ಕೂಟ್ಟು, ಅಂತ್ಯ ಸಂಸ್ಕಾರಕ್ಕೆ ಒಂದು ಸಾವಿರ ರೂಪಾಯಿ ಕೊಡುವಂತಹ ಸರ್ಕಾರ, ಜನರ ಹುಟ್ಟಿನಿಂದ, ಜನರ ಬದುಕಿನ ಜೊತೆಗೆ, ಜನರ ಸಾವಿನವರೆಗೆ ಇರುವಂತಹ ಸರ್ಕಾರ ನಮ್ಮದು. ಅಂತಹ ಒಳ್ಳೆಯ ಬಜೆಟ್ ಕೊಟ್ಟಿರುವಂತಹ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಸಂಪಗಿ :- ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ರವಿಯವರು ಯುವಕರು, ಇಷ್ಟೊತ್ತು ಎಲ್ಲಾ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು. ಅದರೆ ಇವತ್ತು ಯುವಕರಾಗಿರತಕ್ಕಂಥ ರವಿಯವರು, ಯುವಕರನ್ನೇ ಕಡೆಗಾಣಿಸುತ್ತಿದ್ದಾರೆ. ಒಂದು ಕಡೆ ರೈತರನ್ನು ಬೆನ್ನೆಲುಬು ಎಂದು ಹೇಳುತ್ತಾರೆ, ಇನ್ನೊಂದು ಯುವಕರನ್ನು ಬೆನ್ನೆಲುಬು ಎಂದು ಹೇಳುತ್ತಾರೆ, ಇನ್ನೊಂದು ಕಡೆ ಭಯೋತ್ಪಾದನೆ ವಿರುದ್ಧವಾಗಿ ಹಣವನ್ನು ಕೊಡಿಸುತ್ತಾರೆ. ಆದರೆ ಇವತ್ತು ಕರ್ನಾಟಕದಲ್ಲಿ ಕ್ರೀಡೆಗಳು, ಕ್ರೀಡಾಪಟುಗಳು ಸಾಯುವಂತಹ ಪರಿಸ್ಥಿತಿ ಬಂದಿದೆ.

ಶ್ರೀ ಬೆಚ್.ಸಿ. ಬಾಲಕೃಷ್ಣ :- ಅದಕ್ಕೂ ಕೂಡ ದುಡ್ಡು ಕೊಟ್ಟಿದ್ದಾರೆ. ಅದಕ್ಕೂ ದುಡ್ಡು ಕೊಟ್ಟಿದ್ದೇವೆಂದು ಹೇಳಪ್ಪ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೇ, ಇವರು ಬಜೆಟ್ ಪುಸ್ತಕ ಓದಿಲ್ಲ. ಇವರ ಕಾಲಗಲದಲಿ 6–8ಕೋಟಿ ರೂಪಾಯಿ, ಸಂಬಳಕ್ಕೆ ದುಡ್ಡು ಕೊಡುತ್ತಿರಲಿಲ್ಲ.

ಅಧ್ಯಕ್ಷರು :- ಸಂಪಂಗಿಯವರೇ ತಾವು ಮಾತನಾಡುವಾಗ ಹೇಳುವಿರಂತೆ ಬಿಡಿ.

(ಗೊಂದಲ)

ಅಧ್ಯಕ್ಷರು :- ಬಾಲಕೃಷ್ಣರವರೇ, ತಾವು ಮಾತನಾಡಿ. ಇನ್ನು 10 ರಿಂದ 12 ಜನ ಶಾಸಕರು ಮಾತನಾಡುವವರಿದ್ದಾರೆ. ನೀವು ಎಲ್ಲರೂ ಕೂಡ time limit ಮಾಡಿಕೊಂಡರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ಕೆಲವರಿಗೆ ಅವಕಾಶ ಸಿಗುವುದಿಲ್ಲ. ಅದು ನಿಮಗೆ ಬಿಟ್ಟಿದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಅಧ್ಯಕ್ಷರೇ, ನೀವು ಹೇಳಿದ ಸಮಯದಲ್ಲಿ ಮುಗಿಸುತ್ತೇನೆ. ತಾವು ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ರವಿಯವರನ್ನು ಭಾರತೀಯ ಜನತಾ ಪಕ್ಷದವರು ಏಕೆ ಇಟ್ಟುಕೊಂಡಿದ್ದಾರೆ ಎಂದರೆ ಸುಳ್ಳು ಹೇಳುವುದಕ್ಕೆ, defend ಮಾಡಿಕೊಳ್ಳುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಪಾಪ, ಅವರ ಕರ್ತವ್ಯ, defend ಮಾಡಿಕೊಳ್ಳಲೇಬೇಕು. ಇಲ್ಲದೇ ಇರುವ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಅನೇಕ ಚರ್ಚೆಗಳಲ್ಲಿ ಭಾಗವಿಹಿಸಿದಾಗ ಹೇಳಿದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರಗಳನ್ನು ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ಏನೇನು ಬಜೆಟ್ನಲ್ಲಿ ಬಂದಿದೆ ಎಂದು ಹೇಳುತ್ತೇವೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೇ, particular ಆಗಿ ಇಂತಾದ್ದೇ ಸುಳ್ಳು ಹೇಳಿದ್ದೇನೆಂಥರೆ ಅದನ್ನು ಕಡತದಿಂದ ತೆಗೆಯಿರಿ. ಅದರೆ ನಾನು privilege move ಮಾಡಬೇಕಾಗುತ್ತದೆ. ನೀವು ನನ್ನ ರಕ್ಷಣೆಗೆ ಬರಬೇಕು. ನಾನು ಮಾತನಾಡಿರುವುದು ಯಾವುದು ಸುಳ್ಳು ಎಂದು ಹೇಳಲಿ. ನಾನು ಮಾತನಾಡಿರುವುದು ಸುಳ್ಳು ಎಂದು ಹೇಳಿದ್ದಾರೆ, privilege move ಮಾಡಬೇಕಾಗುತ್ತದೆ. ಯಾವುದು ಸುಳ್ಳು ಎಂದು ಹೇಳಲಿ. ಕಡತದಿಂದ ತೆಗೆಯಿರಿ.

ಶ್ರೀ ಬೆಚ್.ಸಿ. ಬಾಲಕೃಷ್ಣ :- ನನಗೆ ಅವಕಾಶ ಕೊಟ್ಟರೆ ಹೇಳುತ್ತೇನೆ. ಕುಳಿತುಕೊಳ್ಳಿ

ಶ್ರೀ ಸಿ.ಟಿ.ರವಿ : ಹೇಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಯಾವುದು ಎಂದು ಹೇಳುತ್ತೇವೆ. ಕನ್ನಡ ಪ್ರಭ ದಿನಪತ್ರಿಕೆಯಲ್ಲಿ quote ಮಾಡಿದ್ದಾರೆ.

ಶ್ರೀ ಆರ್.ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ರವಿಯವರು ಎರಡನೇ ಬಾರಿ ಅಯ್ಕೆಯಾಗಿ ಬಂದಿದ್ದಾರೆ. ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನು ಅವರು ಹೊಗಳಲಿ, ಆದರೆ ಒಂದಾದರೂ ಸಲಹೆ ಅವರು ಕೊಡಬಹುದಿತ್ತು. ಆ ರೀತಿ ಸಲಹೆ ಕೊಡಲಿಲ್ಲ ಅವರು ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೊಡಬಹುದಿತ್ತು. ಆದರೆ ಒಂದು ಸಲಹೆಯನ್ನು ಸಹ ಅವರು ಕೊಡಲಿಲ್ಲ. ತಾವು ಹಿರಿಯ ಸದಸ್ಯರಿದ್ದೀರಿ.

ಶ್ರೀ ಸಿ.ಟಿ.ರವಿ : ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ, ಆದರೆ ಅದನ್ನು ನಿಮಗೆ ಕೇಳಿಸಿಕೊಳ್ಳುವ ತಾಳ್ಮೆ ಇಲ್ಲವಲ್ಲ. ಎಷ್ಟು ಬಾರಿ ನೀವು ಸೀಟಿನಿಂದ ಎದ್ದು ನಿಂತುಕೊಂಡಿದ್ದೀರಿ ಎಂದು ನೋಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಸಿ.ಟಿ.ರವಿಯವರನ್ನು ಬಿಟ್ಟುಬಿಡಿ ಸಾಕು. ಅವರನ್ನು ಏಕೆ ಮತ್ತೆ ಮತ್ತೆ ಎಬ್ಬಿಸುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೇ, ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಇಲ್ಲಿ ಒಂದೆರಡು ಲೈನ್ ಹೇಳುತ್ತೇನೆ.

'ಹಣದ ಮೂಲವ ಕೇಳಬೇಡಿ, ದೂರದೃಷ್ಟಿಯ ಹುಡುಕಬೇಡಿ,
ಯಾವ ವರ ಬೇಕೆಂದು ಕೇಳಿರಿ, ಕೊಡುವ ಕೆಲಸವು ನಮ್ಮದು.
ದಾನವಿದಕೋ, ಅನುದಾನವಿದಕೋ, ರೈತರಿಗೆ ಕೋಟಿ ಸಾಲವಿದಕೋ,
ಸರ್ವರಿಗೂ ಸಮಪಾಲು ತೆಗೆದುಕೋ, ಉಂಡು ಸಂತಸದಿಂದಿರಿ.
ಮೆಟ್ರೋ ರೈಲು, ನೀರು, ಸೂರು, ಬಸ್ಸು, ರಸ್ತೆ, ಒಳಚರಂಡಿ,
ಉದ್ಯಮಗಳು, ಮಾಧ್ಯಮಗಳು ಓದಿ ಸಂತಸದಿಂದಿರಿ.
ಒಮ್ಮೆ ಒಡ ಹುಟ್ಟಿದವರು ನೀವು, ನಿಮ್ಮ ಸೇವೆಯು ನಮ್ಮ ಗುರಿಯು,
ಯೋಜನೆಗಳ ಸಾಗರದಲಿ, ಮಿಂದು ನೆಮ್ಮದಿಯಿಂದಿರಿ.
ಭರವಸೆಗಳ ಸಾಗರದಲ್ಲಿ ಮಿಂದು ನೆಮ್ಮದಿಯಿಂದಿರಿ.
ಭರವಸೆಯ ಭರಪೂರವಿಹುದು, ನೆರವೇರುವ ನಂಬಿಕೆಯು ಇರದು

ಅದೇ ಕನ್ನಡಪ್ರಭ ಪತ್ರಿಕೆ ಸ್ವಾಮಿ ಇದು. ನೀವು quote ಮಾಡಿರುವಂತಹ ಕನ್ನಡಪ್ರಭ ಪತ್ರಿಕೆ ಇದು.

ಮರೆಯುವುದು ಮನುಕುಲದ ಗುಣವು,
ಸತ್ಯವಾಕ್ಯಕ್ಕೆ ತಪ್ಪಿ ನಡೆದರೆ, ಕ್ಷಮಿಸಿ ಹರಸಿರಿ ನಮ್ಮನ್ನು.
ಪಂಚಕೋಟಿಗೆ ಕೋಟಿ ಹಂಚುವ ಪುಣ್ಯಕೋಟಿಯ ಕಥೆಯಿದು.

ನಿಮ್ಮ ಬಜೆಟ್ ಇಷ್ಟೇ ಸ್ವಾಮಿ, ಇಲ್ಲಿಯವರೆಗೆ ನೀವು ಹೇಳಿದ್ದು ಸುಳ್ಳಲ್ಲವೇ? ಇಲ್ಲಿ ಸಂಯುಕ್ತ ಕರ್ನಾಟಕದಲ್ಲಿ ಹೇಳಿದ್ದಾರೆ. ಯಡಿಯೂರಪ್ಪನವರ ಅದ್ಭುತ ದೀಪ.

ಹಿತಾನುಭವದ ಸೂತ್ರ.
ಚುನಾವಣೆಯ ಸ್ತೋತ್ರ.

ಅದ್ಭುತ ದೀಪ ಎಂದರೆ ಏನು ಹೇಳುತ್ತಾರೆ. ಮಾಡುವುದಕ್ಕಾಗದೆ ಇರುವುದನ್ನು ಸೃಷ್ಟಿ ಮಾಡುವುದು. ಅಲ್ಲಾವುದ್ದೀನ್ ಅದ್ಭುತ ದೀಪ ಕೊನೆಗೆ ಏನಾಯಿತು? ವಿಜಯ ಕರ್ನಾಟಕದಲ್ಲಿ ಬಂದಿರುವುದು, ಜಾತಿ ಮತ ಹಿತಚಿಂತನೆ, ಮಹಾಚುನಮಾವಣೆಗೆ ಮುನ್ನ ಮಹಾಪ್ರಸಾದ. ಇವೆಲ್ಲ ಕನ್ನಡ ಮಾಧ್ಯಮ ದಿನಪತ್ರಿಕೆಗಳು, ಇಂಗ್ಲೀಷ್ ಪತ್ರಿಕೆಗಳಲ್ಲಿ ನಮಗೆ ಇಂಗ್ಲೀಷ್ ಗೊತ್ತಿಲ್ಲ. ಕನ್ನಡ ಒಂದೇ ಗೊತ್ತಿರುವುದು. ಇವೆಲ್ಲ ನೀವು ಹೇಳಿರತಕ್ಕಂಥಾದ್ದು. ಇಲ್ಲಿ ಒಂದು ಮಾತು ಹೇಳಿದ್ದಾರೆ, ನಮ್ಮ ಸರ್ಕಾರದ

ನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆ ಒಪ್ಪಿಕೊಂಡಿದ್ದಾರೆ ಎನ್ನುವುದಕ್ಕೆ ಸ್ಥಿರ ಸರ್ಕಾರವನ್ನು ತಂದುಕೊಟ್ಟಿದ್ದಾರೆ, ಇದರಿಂದ ದೃಢಪಟ್ಟಿದ್ದೆ. ಸ್ಥಿರತೆ ಮತ್ತು ಅಭಿವೃದ್ಧಿಗಾಗಿ ಬೈ ಎಲೆಕ್ಷನ್‌ನಲ್ಲಿ ಜನಾದೇಶ ದೊರೆತಿದೆ. ಅಪರೇಷನ್ ಕಮಲ, 5 ಜನ ಗೆದ್ದಿದ್ದಾರೆ. ಯಾರು ಸ್ವಾಮಿ ಗೆದ್ದಿರುವುದು? ನಿಮ್ಮ ಪಕ್ಷದವರು ಗೆದ್ದಿದ್ದಾರೆ? ಗುರುತು ಯಾರದ್ದಿರಬಹುದು? ಮಾನ್ಯ ಉಮೇಶ್ ಕತ್ತಿಯವರು ಒಂದು ಮಾತನ್ನು ಹೇಳಿದ್ದಾರೆ.

ಶ್ರೀ ಸಿ.ಟಿ. ರವಿ: ಇವರೂ ನಮ್ಮ ಪಕ್ಷದಲ್ಲಿದ್ದರು. ಈಗ ನೀವು ಗೆದ್ದಿದ್ದು ಯಾವ ಪಕ್ಷದಲ್ಲಿ? ನೀವು ನಮ್ಮ ಪಕ್ಷದಲ್ಲಿದ್ದಿರಿ. ನೀವೇನು original ಜನತಾದಳ ಪಕ್ಷದವರೇ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಉಮೇಶ್ ಕತ್ತಿಯವರು ಒಂದು ಮಾತನ್ನು ಹೇಳಿದ್ದಾರೆ. ನನಗೆ ಗೆಲ್ಲುವುದಕ್ಕೆ ಯಾವ ಪಕ್ಷದ ಅವಶ್ಯಕತೆಯಿಲ್ಲ. ನಾನು ಒಂದೊಂದು ಚುನಾವಣೆಯಲ್ಲಿ, ಒಂದೊಂದು ಚಿಹ್ನೆಯಿಂದ ಗೆದ್ದಿದ್ದೇನೆ. ಹಾಗಿದ್ದಾಗ ಇಂತಹವರನ್ನು ಕರೆದುಕೊಂಡು ಹೋಗಿ ಯಾರು ಬೇಕಾದರೂ ಗೆಲ್ಲಿಸಬಹುದಲ್ಲವೇ? ಮಂತ್ರಿಯನ್ನು ಮಾಡಿ ಚುನಾವಣೆಗೆ ಬಿಟ್ಟರೆ ಯಾರು ಗೆಲ್ಲಿಸುವುದಿಲ್ಲ ಸ್ವಾಮಿ. ಇವರು ಪಕ್ಷದಲ್ಲಿ ಠೇವಣಿ ಕಳೆದುಕೊಂಡಂತಹ ಜನರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದರೆ, ಆಗ ಇವರ ಆರು ತಿಂಗಳ ಸಾಧನೆ, ಇವರು ಬಡರೈತರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿರತಕ್ಕಂಥಾದ್ದು, ಎರಡು ರೂಪಾಯಿಗೆ ಕೆಜಿ ಅಕ್ಕಿಯನ್ನು ಕೊಟ್ಟಿರತಕ್ಕಂಥಾದ್ದು, ಈ ಸಾಧನೆಯನ್ನು ನೋಡಿ ಜನ ಓಟು ಹಾಕಿದ್ದಾರೆ ಎಂದು ತಿಳಿದುಕೊಳ್ಳುತ್ತಿದ್ದೆವು. ದಯವಿಟ್ಟು ಮಾನ್ಯ ರವಿಯವರು ಏಕೆ ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆಂದು ಅರ್ಥ ಮಾಡಿಕೊಳ್ಳಬೇಕು. ದೇಶದ ಮತ್ತು ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆರ್ಥಿಕ ಸ್ಥಿತಿ ಯಾವಾಗ ಉತ್ತಮವಾಗುತ್ತದೆ. ಖಜಾನೆ ಕಾಯುವಂತಹ ವ್ಯಕ್ತಿಗಳು ಸರಿಯಾಗಿದ್ದರೆ, ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಖಜಾನೆ ಕಾಯುವವರೆ ಕಳ್ಳರಾದರೆ, ಏತಕ್ಕೋಸ್ಕರ ಈ ಪ್ರಶ್ನೆ ಹೇಳುತ್ತಿದ್ದೇನೆ ಎಂದರೆ transferಗಳಲ್ಲಿ, ಎಲ್ಲದರಲ್ಲೂ ಭ್ರಷ್ಟಾಚಾರ. ಎಲ್ಲಾ ಕಡೆ ದುಡ್ಡು ತೆಗೆದುಕೊಂಡು ಅಧಿಕಾರಿಗಳನ್ನು ಹಾಕತಕ್ಕಂಥಾದ್ದು. ನಾನು ಒಂದು ಉದಾಹರಣೆ ಕೊಡುತ್ತೇನೆ. RTO check postನಲ್ಲಿ ಮಾನ್ಯ ಮುಜರಾಯಿ ಮಂತ್ರಿಗಳು ಅವರ ಕ್ಷೇತ್ರಕ್ಕೆ tour ಹೋಗಿದ್ದರು ಅಲ್ಲಿ ಅವರಿಗೆ ಯಾರೋ ಒಬ್ಬರು ಇಲ್ಲಿ ಬಹಳಷ್ಟು ಲೂಟಿ ನಡೆಯುತ್ತಿದೆ, ವಾಹನಗಳನ್ನು ಸರಿಯಾಗಿ ಚೆಕ್ ಮಾಡುತ್ತಿಲ್ಲವೆಂದು ದೂರು ಹೇಳಿದರು. ಮಾನ್ಯ ಮುಜರಾಯಿ ಮಂತ್ರಿಗಳು ಆ ಚೆಕ್ ಪೋಸ್ಟ್ ಸ್ಥಳಕ್ಕೆ ಹೋದರು. ಇದನ್ನು ನಾನು ಮಾಧ್ಯಮದಲ್ಲಿ ಓದಿದ್ದು. ಅಲ್ಲಿ ಅಧಿಕಾರಿ ಇರುವುದಿಲ್ಲ. ಆ ಅಧಿಕಾರಿ ಅಲ್ಲಿಗೆ ಬಂದು ಮಾನ್ಯ ಮಂತ್ರಿಗಳನ್ನು ನೋಡಿದ ತಕ್ಷಣ ಓಡಿ ಹೋಗುತ್ತಾನೆ. ಅವರ ಹಿಂದೆ ಇವರು ಗಾಡಿ ಓಡಿಸಿಕೊಂಡು

ಓಡುತ್ತಾರೆ. ಅವನು ಇವರ ಕೈಗೆ ಸಿಗುವುದಿಲ್ಲ. ಇನ್ನೊಬ್ಬ ಅಧಿಕಾರಿ ಡೂಟಿ ರಿಪೋರ್ಟ್ ಮಾಡಿಕೊಳ್ಳಬೇಕು. ಮಾನ್ಯಮಂತ್ರಿಗಳು ಅಲ್ಲಿಯೇ ಕುಳಿತಿದ್ದರೆ ಅಧಿಕಾರಿ ಕೂಡ ಬರುವುದಿಲ್ಲ. ಲಾರಿಗಳವರು ಬರುತ್ತಾರೆ. ಸ್ವಾಮಿ ಇದಕ್ಕೆ 500 ರೂಪಾಯಿ ತೆಗೆದುಕೊಳ್ಳಿ ಎಂದು ಕೊಡುತ್ತಾರೆ. ಅವನಿಗೆ ಮಂತ್ರಿಗಳು ಎಂದು ಗೊತ್ತಿಲ್ಲ, ಅವರನ್ನೇ ಅಧಿಕಾರಿ ಎಂದು ತಿಳಿದುಕೊಂಡು ಬಿಟ್ಟಿದ್ದಾನೆ. ಇದು ಮಾಧ್ಯಮಗಳ ಮುಖಪುಟದಲ್ಲಿ ಬಂತು. ಮಾರನೇ ದಿವಸ ಎಲ್ಲರೂ suspend ಆಗಿ ಬಿಡುತ್ತಾರೆ, ಅಧಿಕಾರಿಗಳನ್ನೆಲ್ಲ ಮನೆಗೆ ಕಳುಹಿಸಿಬಿಡುತ್ತಾರೆ, ಏನೋ ದೊಡ್ಡ ಅನಾಹುತ ಆಗುತ್ತದೆಂದು ನಾನು ತಿಳಿದುಕೊಂಡರೆ, ಮಾರನೇ ದಿವಸ ಮಾಧ್ಯಮದಲ್ಲಿ ಯಾವುದೇ ವರದಿ ಇಲ್ಲ. ನಾನು ಒಂದು ಸಾರಿ ಮಾನ್ಯ ಮಂತ್ರಿಗಳನ್ನು, ಏನು ಸ್ವಾಮಿ ನೀವು ಈ ರೀತಿ ಮಾಡಿದಿರಲ್ಲ, ಅಧಿಕಾರಿಗಳನ್ನು ಏನು ಮಾಡಿದಿರಿ ಎಂದು ಕೇಳಿದೆ. ಅದಕ್ಕೆ ಅದು ನಿಮ್ಮ ಇಲಾಖೆಯಲ್ಲ, ನೀನು ಏಕೆ ಹೋಗಿದ್ದೆ ಎಂದು ನನ್ನನ್ನೇ ಬೈಯ್ದರು ಎಂದು ಹೇಳಿದರು. ಸ್ವಾಮಿ ಎಲ್ಲಿ ತೆರಿಗೆ ಬರುತ್ತದೆ? ಸೋರಿ ಹೋಗುತ್ತಿರುವ ತೆರಿಗೆಯನ್ನು ಸರ್ಕಾರಕ್ಕೆ ಹಿಡಿದುಕೊಳ್ಳುವುದಕ್ಕೆ ಆಗದಿದ್ದರೆ ಭ್ರಷ್ಟಚಾರವಲ್ಲವೇ ಅದು? ತೆರಿಗೆ ಎಲ್ಲಿ ಬರುತ್ತದೆ? ಆರ್ಥಿಕ ಸ್ಥಿತಿ ಎಲ್ಲಿ ಉತ್ತಮವಾಗುತ್ತದೆ? ನೀವು ಯಾವ ರೀತಿ ಉತ್ತಮವಾದ ಬಜೆಟ್‌ನ್ನು ಕೊಡುತ್ತೀರಿ? ಯಾವ ರೀತಿ ನೀವು ಸಾಮಾಜಿಕ ನ್ಯಾಯ ಕೊಡುತ್ತೀರಿ?

ಶ್ರೀ ಸಿ.ಟಿ. ರವಿ: ಮಾಮೂಲಿ ಗೇಟ್‌ನಿಂದ ಕೊಡುವುದು ಯಾವಾಗಿನಿಂದ ಪ್ರಾರಂಭವಾಯಿತು ಎಂದು ಹೇಳಿ. ಅದನ್ನು ನಿಲ್ಲಿಸುವುದಕ್ಕೆ ಏನು ಮಾಡಬೇಕು ಎಂದು ಸಹ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ಇಲ್ಲಿ ನಾವು ಕುಳಿತಿರುವವರೆಲ್ಲಾ ಸರಿ ಇಲ್ಲವೆಂದೇ ನಿಮ್ಮನ್ನು ಗೆಲ್ಲಿಸಿರುವಂಥಾದ್ದು. ನೀವು ಸರಿಮಾಡಬೇಕಲ್ಲಾ, ನೀವೂ ಅದೇ ಕೆಲಸವನ್ನು ಮಾಡಿದರೆ, ನಮಗೂ ನಿಮಗೂ ಏನು ವ್ಯತ್ಯಾಸವಿದೆ? ಮಾನ್ಯ ಅಧ್ಯಕ್ಷರೆ, ನಡೆದು ಬಂದ ದಾರಿ ಎಂದು ಈ ಸರ್ಕಾರದ ಬಗ್ಗೆ ಹೇಳಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಾವು ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತೇವೆ. ಈಗ 1,40,000 ರೂಪಾಯಿಗಳನ್ನು fixed ಇಟ್ಟು ಒಂದು ಲಕ್ಷ ರೂಪಾಯಿಗಳನ್ನು ಹೆಣ್ಣು ಮಕ್ಕಳಿಗೆ ಕೊಡುವಂಥಾದ್ದು. ಆದರೆ ಈ ಭಾಗ್ಯಲಕ್ಷ್ಮಿ ಯೋಜನೆ ಪ್ರಾರಂಭವಾಗಿದ್ದು ಯಾವಾಗ? ಅದು ಸಮ್ಮಿಶ್ರ ಸರ್ಕಾರದಲ್ಲಿ ಎಂಬುದನ್ನು ನೀವು ಹೇಳಬೇಕಲ್ಲಾ, ಅದರ ನೇತೃತ್ವವನ್ನು ಯಾರು ವಹಿಸಿದ್ದರು? ಅದನ್ನು ಹೇಳಬೇಕಲ್ಲಾ, ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 400 ರೂಪಾಯಿಗಳನ್ನು ಕೊಡುವಂಥಾದ್ದು. ಇದರಲ್ಲಿ ಎಲ್ಲರಿಗೂ 65 ವರ್ಷವಾಗಿಯೆಂದು certificateಗಳನ್ನು ಕೊಟ್ಟಿದ್ದಾರೆ. ಒಬ್ಬರಿಗೂ ಇದುವರೆಗೂ ಹಣ ಬಿಡುಗಡೆಯಾಗಿಲ್ಲ, treasuryಯಲ್ಲಿ ದುಡ್ಡೇ ಇಲ್ಲ. ನಾವು ಏನಾದರೂ ಹಳ್ಳಿಗಳಿಗೆ ಹೋದರೆ ಎಲ್ಲರೂ certificate ಅನ್ನು ತೆಗೆದುಕೊಂಡು

ನಮ್ಮ ಹತ್ತಿರ ಬರುತ್ತಾರೆ. ಈ ಸಂಧ್ಯಾ ಸುರಕ್ಷಾ ಯೋಜನೆಗೆ ದುಡ್ಡು ಎಲ್ಲಿ? ಇನ್ನು ಜನ ಸ್ಪಂದನ ಕಾರ್ಯಕ್ರಮದ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಹೇಳಿದರು. ಜನ ಸ್ಪಂದನ ಕಾರ್ಯಕ್ರಮದಲ್ಲಿ ಬಂದಿರುವಂಥ ಅರ್ಜಿಗಳು ration cardಗೆ, ಮನೆಗಳಿಗೆ 90 ಭಾಗ ರೇಷನ್ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ಅವರಿಗೆ permanent ration card ಅನ್ನು ನೀವು ಕೊಟ್ಟಿದ್ದೀರಾ? ಅವರ ಹತ್ತಿರ affidavit ತೆಗೆದುಕೊಂಡ ಮೇಲೆ ಅವರಿಗೆ permanent ration card ಅನ್ನು ಕೊಡಬೇಕಲ್ಲಾ, ಅವರಿಂದ affidavit ಅನ್ನು ತೆಗೆದುಕೊಂದ ಮೇಲೆ ಅವರು ಕಳ್ಳರಲ್ಲವೆಂದು ತೀರ್ಮಾನವಾಯಿತಲ್ಲಾ, ಈ temporary card ಎಷ್ಟು ದಿವಸ? ಅದು ಎರಡು ತಿಂಗಳುಗಳ ಕಾಲ, ಅದನ್ನು ಚುನಾವಣೆಯಾದ ಮೇಲೆ ಮುಂದುವರೆಸುತ್ತೀರಾ, ಇದು ಬಡವರ ಪರವಾಗಿ ಇರುವಂಥ ಸರ್ಕಾರವಾ? ನೀವು ಇದನ್ನು ಮುಂದುವರೆಸುತ್ತೀರಾ? ನೀವು ಬರೀ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಬಡವರನ್ನು ಅಳತೆ ಮಾಡುವುದಾದರೆ ಸರ್ಕಾರ ಯಾವ ರೀತಿ ಅಭಿವೃದ್ಧಿ ಮಾಡುತ್ತದೆಂಬ ಬಗ್ಗೆ ಚಿಂತನೆ ಮಾಡಬೇಕು. ಬಡವರೇ ಅಗದೇ ಇದ್ದ ಮೇಲೆ affidavit ಏಕೆ ಕೇಳಿದಿರಿ? ಯಾರ‍್ಯಾರ ಅರ್ಜಿಗಳನ್ನು ಕೊಡುತ್ತಾರೆ ಅವೆಲ್ಲರಿಗೂ ಸಾರಸಗಟಾಗ ಕೊಡಬೇಕಾಗಿತ್ತು. ನೀವು affidavit ಅನ್ನು ಏಕೆ ತೆಗೆದುಕೊಂಡಿದ್ದೀರಿ?

ಶ್ರೀ ಎಂ.ಪಿ. ರೇಣುಕಾ ಚಾರ್ಯ: ಮಾನ್ಯ ಅಧ್ಯಕ್ಷರೆ, ಗ್ರಾಮ ವಾಸ್ತವ್ಯ ಮಾಡಿದಾಗ ಎಷ್ಟು ಸಾವಿರ ಅರ್ಜಿಗಳು ಬಂದವು? ಗ್ರಾಮ ವಾಸ್ತವ್ಯ ಮಾಡಿದ್ದು ಕೇವಲ ಪ್ರಚಾರಕ್ಕಾಗಿ.

ಶ್ರೀ ಹೆಚ್. ಸಿ. ಬಾಲಕೃಷ್ಣ: ನೀವು ಏನೂ ಕೆಲಸ ಮಾಡಿಲ್ಲವೆಂದು ಇಲ್ಲಿ ಕೂರಿಸಿದ್ದಾರೆ, ನಾವುಅದನ್ನು ಒಪ್ಪಿಕೊಳ್ಳುತ್ತಾ ಇದ್ದೇವೆ. ನೀವೆಲ್ಲಾ ಈ ರಾಜ್ಯವನ್ನು ಉದ್ಧಾರ ಮಾಡಲಿಯೆಂದು ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆ. ನಾವು ಏನೂ ಮಾಡಿಲ್ಲ, ಅದಕ್ಕೆ ನಾವೆಲ್ಲಾ ಇಲ್ಲಿ ಕುಳಿತಿರುವುದು. ನೀವು ರಾಜ್ಯವನ್ನು ಉದ್ದಾರ ಮಾಡುವುದಕ್ಕೆ ಬಂದಿದ್ದೀರಿ. ನೀವು ಏನು ಮಾಡುತ್ತಿದ್ದೀರೆಂಬುದನ್ನು ಹೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇಣುಕಾ ಚಾರ್ಯರವರು ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಇದನ್ನು ಚರ್ಚೆ ಮಾಡುವುದಕ್ಕೆ ಒಂದು ದಿವಸ ಪೂರ್ತಿ ಅವಕಾಶವನ್ನು ಕೊಟ್ಟುಬಿಡಿ, ಈ ವಿಷಯವನ್ನು ಚರ್ಚೆ ಮಾಡೋಣ. ನಾನು ಮುಖ್ಯಮಂತ್ರಿಯಾಗಿದ್ದಾಗ ಕಂತೆಗಟ್ಟಲೆ ಮುಖ್ಯಮಂತ್ರಿ ಪರಿಹಾರ ನಿಧಿಗೆ ಅರ್ಜಿಗಳನ್ನು ತರುತ್ತಿದ್ದರಲ್ಲಾ, ಇವತ್ತು ಈ ಸರ್ಕಾರದಲ್ಲಿ ಎಷ್ಟು ಹಣವನ್ನು ಇದಕ್ಕೆ ಕೊಡುತ್ತಿದ್ದೀರಿ. ಈಗ 6 ತಿಂಗಳುಗಳಾದರೂ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಹಣವನ್ನು ಕೊಡುತ್ತಿಲ್ಲ. ರೋಗಿಗಳು

ಸಾಯುತ್ತಿದ್ದಾರೆ, ತಾವು ನನ್ನ ಬಗ್ಗೆ ಚರ್ಚೆ ಮಾಡಬೇಡಿ, ದಯವಿಟ್ಟು ಕುಳಿತುಕೊಳ್ಳಿ, ನನಗೆ ಕೆಲಸ ಗೊತ್ತಿದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ: ಜನ ಸ್ಪಂದನ ಕಾರ್ಯಕ್ರಮ ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿದ್ದು, ಅದನ್ನು ತಮಗೆ ಸಹಿಸುವುದಕ್ಕೆ ಆಗುತ್ತಿಲ್ಲ,

ಶ್ರೀ ಹೆಚ್.ಸಿ.ಬಾಲಕೃಷ್ಣ: ಶೇ. 3ರ ಬಡ್ಡಿದರದಲ್ಲಿ ಸಾಲ

ಶ್ರೀ ಸಿ.ಟಿ. ರವಿ: ಮಾನ್ಯ ಬಾಲಕೃಷ್ಣರವರೆ, ಒಂದು ನಿಮಿಷ ಇರಿ, ಮಾಗಡಿ ತಾಲ್ಲೂಕಿನ ಸಂಧ್ಯಾ ಸುರಕ್ಷಾ ಯೋಜನೆ ವಿವರವನ್ನು ತರಿಸಿಕೊಳ್ಳಬೇಕು. ಅವರು ಒಬ್ಬರಿಗೂ ಕೊಟ್ಟಿಲ್ಲವೆಂದು ಹೇಳಿದರು. ತಾವು ಎಷ್ಟು ಜನರಿಗೆ ಕೊಡುತ್ತಿದ್ದಾರೆಂಬ ಮಾಹಿತಿಯನ್ನು ದಯಮಾಡಿ ತರಿಸಿಕೊಳ್ಳಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ಹೇಳಲಿ. ಈ ಸಂಧ್ಯಾ ಸುರಕ್ಷಾ ಯೋಜನೆ ಪ್ರಾರಂಭವಾಗಿದ್ದು ಯಾರ ಕಾಲದಲ್ಲಿ ಎಂದು ಹೇಳಿ. ರೈತರಿಗೆ ಶೇ.3ರ ಬಡ್ಡದರದಲ್ಲಿ ಸಾಲ.. ..

ಅಧ್ಯಕ್ಷರು: ತಾವು ಸಭಾಧ್ಯಕ್ಷರ ಕಡೆ address ಮಾಡಿ ಮಾತನಾಡಿ, ಈ ರೀತಿ ಮಾತನಾಡಿದರೆ ಇದೇ ರೀತಿಯಲ್ಲಿ ವಾಗ್ವಾದ ಬೆಳೆದುಕೊಂಡು ಹೋಗುತ್ತದೆ, ಕೊನೆಗೆ ಏನೂ ಆಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರೈತರಿಗೆ ಶೇ. 3ರ ಬಡ್ಡಿದರದಲ್ಲಿ ಸಾಲ, ನಾವು ಇದನ್ನು Nationalized Bankಗೆ ವಿಸ್ತರಣೆ ಮಾಡುವುದನ್ನು ಸ್ವಾಗತ ಮಾಡುತ್ತೇವೆ. ಅದರೆ ಇದರ ಬಡ್ಡಿಯನ್ನು ಮೊದಲು ಕಡಿಮೆ ಮಾಡಿರುವುದು ಯಾರ ಕಾಲದಲ್ಲಿ ಪ್ರಾರಂಭವಾಯಿತು? ಬಡ್ಡಿಯನ್ನು ಕಡಿಮೆ ಮಾಡುವುದು ಬೇಡ, ಸಾಲವನ್ನೇ ಮನ್ನಾ ಮಾಡಿಯೆಂದು ಅವತ್ತಿನ ಮುಖ್ಯಮಂತ್ರಿಯವರು ಹೇಳಿದರು, ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಗಲಾಟೆ ಮಾಡಿ 25,000 ರೂಪಾಯಿಗಳವರೆಗೂ ಸಾಲ ಮನ್ನಾ ಮಾಡಿಸಿದೆವು. ಇದು ಏನು ದೊಡ್ಡ ಸಾಧನೆಯೇ? ಹಿಂದೆ ನಾವು ಮಾಡಿರುವಂಥಾದ್ದನ್ನು ಮುಂದುವರೆಸುತ್ತಿದ್ದಾರೆ. ಸುವರ್ಣ ಗ್ರಾಮೋದಯ ಯೋಜನೆ, ಇದು ಯಾರ ಕನಸಿನ ಕೂಸು? ಇದನ್ನು ಮಾನ್ಯ ಕುಮಾರಸ್ವಾಮಿಯವರು ಪ್ರಾರಂಭ ಮಾಡಿದ್ದು. ನೀವು ಹೋದ ವರ್ಷ ಒಂದೇ ಒಂದು ಗ್ರಾಮವನ್ನು ಈ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈಗ ಕೊಟ್ಟಿರುವಂಥ ಹಣವನ್ನು ಬಹುಶ: ಮುಂದೆ ನಾವು ಏನು ಪಟ್ಟಿಯನ್ನು ಕೊಟ್ಟಿದ್ದೇವೆ. ಅದನ್ನು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುತ್ತಾರೆ. ಈ ಯೋಜನೆಗೆ ಹಿಂದಿನ ವರ್ಷ ಒಂದೇ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ತಾವು ದಯಮಾಡಿ ಅದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಹಳೆಯ ಕೆಲಸವಾಗಿರುವಂಥದ್ದಕ್ಕೆ ದುಡ್ಡು ಕೊಟ್ಟಿರುವಂಥದ್ದು.

ಶ್ರೀ ಸಿದ್ದುಸವದಿ: ಮಾನ್ಯ ಬಾಲಕೃಷ್ಣರವರೆ, ತಮ್ಮ ಸರ್ಕಾರ 20 ತಿಂಗಳು ಇತ್ತಲ್ಲಾ, ಆಗ ಏಕೆ ಹೊಸ ಯೋಜನೆ ಬಂದಿಲ್ಲ.

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ, ಕುಳಿತುಕೊಳ್ಳಿ, ಅವರು ಮಾತನಾಡಲಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ Independent ಸರ್ಕಾರ ಇದೆಯಲ್ಲಾ, ಹೊಸ ಯೋಜನೆಯನ್ನು ಪ್ರಕಟಿಸಿ. ನಾವು ಮಾಡಿರುವ ಯೋಜನೆಯನ್ನೇ ಇಟ್ಟುಕೊಂಡಿದ್ದೀರಲ್ಲಾ, ಈಗ ನೀವು independent ಆಗಿ ಹೊಸ ಯೋಜನೆಯನ್ನು ಹೇಳಿ. ಅದನ್ನು ಬಿಟ್ಟು ನಮ್ಮ ಕಾಲದಲ್ಲಿ ಆಗಿರುವುದನ್ನೇ ಹೇಳುತ್ತಿರಲ್ಲಾ, ನಿಮ್ಮದು ಹೊಸ ಯೋಜನೆ ಯಾವುದೆಂದು ಹೇಳಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಈಗ 1,200 ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. 1,200 ಗ್ರಾಮಗಳೆಂದರೆ ಒಂದು ಗ್ರಾಮಕ್ಕೆ ಒಂದು ಕೋಟಿ ರೂಪಾಯಿಗಳಂತೆ ಲೆಕ್ಕ. ಅಂದ ಮೇಲೆ 1,200 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದರೆ ಆಗ ಈ 1,200 ಗ್ರಾಮಗಳ ಗ್ರಾಮೋದಯವಾಗುತ್ತದೆ, ಸುವರ್ಣ ಗ್ರಾಮಗಳಾಗುತ್ತದೆಂದು ನಿರೀಕ್ಷೆ ಮಾಡಬಹುದಾಗಿತ್ತು. ತಾವು 300 ಕೋಟಿ ರೂಪಾಯಿಗಳನ್ನು budget ನಲ್ಲಿ provision ಮಾಡಿದ್ದೀರಿ. ನನಗೆ ತಿಳಿದ ಪ್ರಕಾರ ಕಳೆದ ವರ್ಷ ತೆಗೆದುಕೊಂಡಿರುವ 1,200 ಗ್ರಾಮಗಳನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ 400, 500 ಕೋಟಿ ರೂಪಾಯಿಗಳ ಕೊರತೆ ಇದೆ. ಅಂದ ಮೇಲೆ ಹೊಸ ಗ್ರಾಮಗಳಿಗೆ ಹಣವನ್ನು ಎಲ್ಲಿಂದ ನೀವು ಒದಗಿಸುತ್ತೀರೆಂಬುದನ್ನು ಶಾಸಕರು ಕೇಳುವುದು ತಪ್ಪಾ?

ಒಬ್ಬ ಮಾನ್ಯ ಸದಸ್ಯರು: ಹಣಕಾಸಿನ ಹೊಂದಾಣಿಕೆ ಮಾಡಿಕೊಂಡು ಅದನ್ನು ಮುಂದುವರೆಸುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ಅವರು ಹೊಳೆನರಸಿಪುರ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಹೇಳಿದರು. ಹಿಂದುಳಿದ ತಾಲ್ಲೂಕುಗಳ listನಲ್ಲಿ ಶಿಕಾರಿಪುರವನ್ನು ಕೊಟ್ಟಿಲ್ಲವೇ? ಮಾನ್ಯ ರವಿಯವರು ಶಿಕಾರಿಪುರವನ್ನು ಹೇಳಲಿಲ್ಲವೇ? ಅದು ಹಿಂದುಳಿದ ತಾಲ್ಲೂಕು, ಅದರೂ ಕೆಲಸ ಮಾಡೇ ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿ ಕೆಲಸವಾಗಿದೆ, ಅದು ಅತ್ಯಂತ ಹಿಂದುಳಿದ ತಾಲ್ಲೂಕು ಅಲ್ಲ. ನಮ್ಮ ಮಾನ್ಯ ಉದಾಸಿಯವರ ಹಾನಗಲ್ಲು, ಬಚ್ಚೇಗೌಡರದು ಹೊಸಕೋಟೆ ಅಂದರೆ ಅವರು ಯಾರು ಕೆಲಸವನ್ನು ಮಾಡಿಲ್ಲವೆಂದು ಮಾನ್ಯ ರವಿಯವರು ಹೇಳುವುದು. ಯಾರು ಕೆಲಸ ಮಾಡೇ ಇಲ್ಲ, ನಾವೇ ಕೆಲಸ ಮಾಡುತ್ತಿದ್ದೇವೆ. ಕಳೆದ ಬಾರಿ ಡಾ: ನಂಜುಂಡಪ್ಪನವರ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಅದಕ್ಕೆ ಕೊಟ್ಟಿರುವಚಿಥ ಹಣವನ್ನು ಕಿತ್ತುಕೊಂಡಿದ್ದೀರಿ. ನಾವು P.W.D. ಕಾಮಗಾರಿಗಳಿಗೆ ಸೂಚನೆ ಮಾಡಿದ್ದರೆ, ಅದನ್ನು ಕಿತ್ತುಕೊಂಡು RDPRಗೆ ಹಾಕಿ ಎಲ್ಲರಿಗೂ ಕೊಟ್ಟಿದ್ದಾರೆ. ಡಾ: ನಚಿಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಒಂದು ರೂಪಾಯಿಯನ್ನು

ಕೊಟ್ಟಿಲ್ಲ. ಯಾವುದೇ ಇಲಾಖೆಗೂ ಕೊಟ್ಟಿಲ್ಲ, ಅಂದ ಮೇಲೆ ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಉದ್ಧಾರ ಮಾಡುತ್ತಿರಾ? ಇವುಗಳನ್ನು ಸರಿಸಮನಾಗಿ ಅಭಿವೃದ್ಧಿ ಮಾಡುವಂಥ ಕೆಲಸವನ್ನು ನೀವು ಮಾಡುತ್ತೀರಾ? ಇವುಗಳಿಗೆ ಹಣವನ್ನು ಎಲ್ಲಿ ಕೊಟ್ಟಿದ್ದೀರಿ? ತಾವು ಸುಮ್ಮನೆ ಘೋಷಣೆ ಮಾಡಿದರೆ ಆಗುವುದಿಲ್ಲ, ಅದು ಕಾರ್ಯಗತವಾಗಬೇಕು. ಇನ್ನು ಕಳೆದ ಸಾರಿ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮಿಷನ್ ಪ್ರಾರಂಭ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೃಷಿ ವಿಜ್ಞಾನಿಗಳು, ಪ್ರಗತಿಪರ ರೈತರು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರ ನೇತೃತ್ವದಲ್ಲಿ ಎಂದು ಹೇಳಿದ್ದಾರೆ. ಈ ರಾಜ್ಯದ ರೈತರಿಗೆ ಮಾನ್ಯ ಯಡಿಯೂರಪ್ಪನವರು ಕೃಷಿ ಮಿಷನ್ ಸ್ಥಾಪನೆ ಮಾಡಿ ಏನೋ ಮಾಡಿ ಬಿಡುತ್ತಾರೆಂದು ಕೃಷಿಯಲ್ಲಿ ಬಾರಿ ಬದಲಾವಣೆಯಾಗುತ್ತದೆಂದು ನಾವು ಅಂದು ಕೊಂಡಿದ್ದೆವು. ಈ ಕೃಷಿ ಮಿಷನ್ ಎಲ್ಲಿ? ಕಳೆದ ಬಜೆಟ್‌ನಲ್ಲಿ ಇದನ್ನು ತೋರಿಸಿದ್ದೀರಿ. ತಾವು ಈ ಬಗ್ಗೆ ಮಾತನಾಡಿದ ಮೇಲೆ ಅನುಷ್ಠಾನ ಮಾಡಬೇಕಲ್ಲಾ, ಬರೀ ಜನರ ಹೊಗಳಿಕೆಗೆ, ಜನರ ಓಟಿನ ಆಸೆಗೋಸ್ಕರ ಇಂಥ ಸುಳ್ಳು ಭರವಸೆಗಳನ್ನು ಏಕೆ ಕೊಡುತ್ತೀರಾ? ಎಲ್ಲಿ ಈ ಕೃಷಿ ಮಿಷನ್? ಸಾವಯವ ಕೃಷಿಗೆ 3 ಕೋಟಿ ರೂ.ಗಳು, ಪ್ರತಿ ಕುಟುಂಬಕ್ಕೂ 2 ಸಾವಿರ ರೂಪಾಯಿಗಳ ಸಹಾಯಧನವೆಂದು ಹೇಳಿದ್ದೀರಿ. ಇದನ್ನು ಎಲ್ಲಿ ಕೊಟ್ಟಿದ್ದೀರಿ? ನಮ್ಮ ತಾಲ್ಲೂಕಿನಲ್ಲಿ ಕೊಟ್ಟಿಲ್ಲ, ಬೇರೆ ಎಲ್ಲಿ ಕೊಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ರವಿಯವರಿಗೆ ಏನಾದರೂ ಕೊಟ್ಟಿರಬಹುದು.

ಶ್ರೀ ಎಂ.ಪಿ.ರೇಣುಕಾಚಾರ್ಯ: ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು: ಅವರು ಮಾತನಾಡಲಿ, ಅವರು ಕೇಳುವ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನೀವು ಏಕೆ ಪ್ರತಿಯೊಂದಕ್ಕೂ ಪದೇ ಪದೇ ಎದ್ದು ನಿಲ್ಲುತ್ತೀರಿ ಅವರು ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ ಬಿಡಲಿ. ಅಮೇಲೆ ಉತ್ತರವನ್ನು ಹೇಳುವುದಕ್ಕೆ ಮಂತ್ರಿಗಳು ಇರುತ್ತಾರೆ. ಮಾನ್ಯ ಬಾಲಕೃಷ್ಣರವರೆ, ನೀವು ನನ್ನ ಕಡೆ ನೋಡಿಕೊಂಡು address ಮಾಡಿ. ನೀವು ಅಲ್ಲಿ ಅವರನ್ನು ಪ್ರಶ್ನೆ ಕೇಳಿದರೆ, ಅವರು ನಿಮಗೆ ಉತ್ತರವನ್ನು ಹೇಳುತ್ತಾರೆ. ಅದು ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾನು ಅವರ ಬಳಿ ಮಾತನಾಡುತ್ತಿಲ್ಲ, ನಿಮ್ಮ ಬಳಿ ಮಾತನಾಡುತ್ತಿದ್ದೇನೆ. ಕೃಷಿ ಬಗ್ಗೆ ರೈತರೇ ಈ ದೇಶದ ಬೆನ್ನೆಲುಬು ನಾವು ಕೃಷಿಯ ಬಗ್ಗೆ ಬಹಳಷ್ಟು ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಈ ಬಾರಿ ಬಜೆಟ್‌ನಲ್ಲಿ 7.19% ಕೊಟ್ಟಿದ್ದಾರೆ. ಕಳೆದ ಬಾರಿ 9.6% ಇದು 9 ತಿಂಗಳಿಗೆ ಕೊಟ್ಟಿರುವಂಥಾದ್ದು. ಈ ರಾಜ್ಯದ ರೈತನಿಗೆ ಕೃಷಿಗೆ ಬಹಳಷ್ಟು ಕೊಟ್ಟಿದ್ದೇವೆ, ಅದರಿಂದ ಪ್ರಗತಿಯಾಗುತ್ತದೆ, ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುತ್ತಾರೆಂದು ಹೇಳಿದ್ದಾರೆ. ತಾವು ಸತ್ಯವನ್ನು ಹೇಳುವುದನ್ನು ಕಲಿತುಕೊಳ್ಳಬೇಕೆಂದು ನಾನು ತಮ್ಮ

ಮುಖಾಂತರ ಮಾನ್ಯ ರವಿಯವರಿಗೆ ಹೇಳಲಿಚ್ಛಿಸುತ್ತೇನೆ. ಕಳೆದ ಬಾರಿ ಹನಿ ನೀರಾವರಿಗೆ 175 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಸಾರಿ ಹನಿ ನೀರಾವರಿಯ ಬಗ್ಗೆ ಪ್ರಸ್ತಾಪವೇ ಇಲ್ಲ. ಶೇ.75ರಷ್ಟು ಸಹಾಯಧನದಲ್ಲಿ 175 ಕೋಟಿ ರೂಪಾಯಿಗಳೆಂದು ಇದ್ದರೆ, ಒಂದು ರೂಪಾಯಿಯನ್ನು ಯಾರಿಗಾದರೂ ಕೊಟ್ಟಿದ್ದಾರೆ? ನನ್ನ ಕ್ಷೇತ್ರಕ್ಕಂತೂ ಕೊಟ್ಟಿಲ್ಲ, ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಈ ಸಾರಿ ಆ ಪ್ರಸ್ತಾಪವೇ ಇಲ್ಲ. ರವಿಯವರಿಗೇನಾದರೂ ಕೊಟ್ಟಿದ್ದಾರೇನೋ ಎಂದು ದಯಮಾಡಿ ಕೇಳಿ ಅಧ್ಯಕ್ಷರೆ. ಸುಳ್ಳು ಏಕೆ ಹೇಳಬೇಕು? ಇನ್ನೂಗೋದಾಮು ಮತ್ತು ಶೈತ್ಯಾಗರಗಳನ್ನು ಸ್ಥಾಪಿಸಲಿಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಉತ್ಪನ್ನ ಶೇಖರಣೆಗೆ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ಗೋದಾಮುಗಳನ್ನು ಎಲ್ಲಿ ಸ್ಥಾಪನೆ ಮಾಡಿದ್ದೀರಿ? ಎಲ್ಲಿ ಪ್ರಾರಂಭ ಮಾಡಿದ್ದೀರಿ? "ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಮತ್ತು ಬಾಗಲಕೋಟಿ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಿದ್ದು,...." ಎಂದು ಹೇಳಿದ್ದೀರಿ. ಇದನ್ನು ಕಳೆದ ಬಜೆಟ್‌ನಲ್ಲಿಯೂ ತೋರಿಸಿದ್ದೀರಿ. ಕಳೆದ ಬಜೆಟ್‌ನಲ್ಲಿ ಇದು ಅನುಷ್ಠಾನವಾಗಲಿಲ್ಲ. ಇದನ್ನು ನಾವು ಮಾಡುತ್ತೇವೆ ಎಂದು ಕಳೆದ ಬಜೆಟ್‌ನಲ್ಲಿ ತೋರಿಸಿದ್ದಿರಿ. ಸುಳ್ಳು ಏಕೆ ಹೇಳಿದಿರಿ? ಬಜೆಟ್‌ನಲ್ಲಿ ಹೇಳಿರುವುದನ್ನು ನೀವು ಮಾಡಿ ತೋರಿಸಬೇಕಲ್ಲವೇ? ಇದಕ್ಕೆ 20 ಕೋಟಿ ರೂಪಾಯಿ ಹಣಕಾಸು ಸೌಲಭ್ಯವನ್ನು ಈ ಬಾರಿ ಒದಗಿಸಿದ್ದೇವೆ ಎಂದು ಹೇಳಿದ್ದೀರಿ.

ರೈತರ ವಿದ್ಯುತ್ ಸರಬರಾಜಿಗಾಗಿ 2,100 ಕೋಟಿ ಎಂದು ಹೇಳಿದ್ದೀರಿ, ಸಂತೋಷ. ಆದರೆ ರೈತರ ವಿದ್ಯುತ್ತಿನ ಸ್ಥಿತಿಯನ್ನು ಮುನಿಯಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ರೈತರ ಸ್ಥಿತಿ ಯಾವ ರೀತಿ ಆಗಿದೆ ಎಂದು ಸ್ವಲ್ಪ ಹೇಳಲು ಇಚ್ಛೆಪಡುತ್ತೇನೆ. 'ವಿದ್ಯುತ್ ಖರೀದಿಗೆ ಹಣ ಇಲ್ಲ' – ಇದು ದಿನಾಂಕ 04–08–2008ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಬಂದಿದ್ದು, ಇದು ಮಾನ್ಯ ಮಂತ್ರಿಗಳು ಹೇಳಿರತಕ್ಕಂಥಾದ್ದು. 'ಮೀಟರ್ ಅಳವಡಿಸಿದಿದ್ದರೆ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಪೂರೈಕೆ ಇಲ್ಲ '– ಇದು ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದು. 'ಬೇಸಿಗೆಯಲ್ಲಿ ವಿದ್ಯುತ್ ಕಡಿತ ಇಲ್ಲ '–ಇದು ಈಶ್ವರಪ್ಪನವರ ಭರವಸೆ. 'ಮುನ್ಸೂಚನೆ ನೀಡದೇ ಲೋಡ್ ಷೆಡ್ಡಿಂಗ' – ಇದು ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು. ವಿದ್ಯುತ್ ನೀಡಲು ಏನು ಮಾಡಿದ್ದೀರಿ ಸ್ವಾಮಿ? ಕೃಷಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಅಸಾಧ್ಯ, 'ಕೇವಲ 10 ಹೆಚ್.ಪಿ.ಯವರೆಗೆ ಮಾತ್ರ ಉಚಿತ ವಿದ್ಯುತ್ತನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಹಾಗದರೆ ಕೋಲಾರದವರು ಮನುಷ್ಯರಲ್ಲವೇ? ಏಕೆಂದರೆ, ಅಲ್ಲಿರುವವರ್‍ಯಾರೂ 10 ಹೆಚ್.ಪಿ. ಪಂಪುಸೆಟ್ಟನ್ನು ಉಪಯೋಗಿಸಿ ನೀರನ್ನು ತೆಗೆಯಲು ಆಗುವುದಿಲ್ಲ. ಎಲ್ಲರೂ 15 ಹೆಚ್.ಪಿ., 20 ಹೆಚ್.ಪಿ. ಉಪಯೋಗಿಸುತ್ತಿದ್ದಾರೆ. ಹಾಗಾದರೆ, ಅಲ್ಲಿರುವವರ್‍ಯಾರೂ ರೈತರಲ್ಲವೇ ಅವರ ಬಗ್ಗೆ

ಸರ್ಕಾರಕ್ಕೆ ಕಾಳಜಿ ಇಲ್ಲವೇ? ಅದನ್ನು ಏಕೆ ವಿಸ್ತರಣೆ ಮಾಡಲಿಲ್ಲ? ದಯಮಾಡಿ ಸರ್ಕಾರ ಇದಕ್ಕೆ ಸ್ಪಷ್ಟೀಕರಣ ಕೊಡಬೇಕು. 'ವಿದ್ಯುತ್ ಖರೀದಿಗೆ ಸರ್ಕಾರದ ಬಳಿ ಹಣ ಎಲ್ಲ; '15 ದಿನಗಳಲ್ಲಿ ಲೋಡ್ ಷೆಡ್ಡಿಂಗ್ ಅಂತ್ '-ಇವುಗಳನ್ನೆಲ್ಲಾ ನೋಡಿದಾಗ, ಇವತ್ತು ವಿದ್ಯುತ್ತಿನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಕನಿಷ್ಟ 2 ಗಂಟೆಯೂ ವಿದ್ಯುತ್ತನ್ನು ಸರಿಯಾಗಿ ಸರಬರಾಜು ಮಾಡದೇ ಇರತಕ್ಕಂಥ ಪರಿಸ್ಥಿತಿಗೆ ಇವತ್ತು ಸರ್ಕಾರ ತಲುಪಿದೆ. ಮುಂದಿನ ದಿನಗಳಲ್ಲಿ ಇದು ಕತ್ತಲ ರಾಜ್ಯ ಆದರೂ ಕೂಡ ಆಶ್ಚರ್ಯಪಡಬೇಕಾಗಿಲ್ಲ. ಇವರ ಗುರಿ, ಇವರು ಹಾಕಿಕೊಂಡಿರತಕ್ಕಂಥ ಯೋಜನೆ 2013ನೇ ಇಸವಿಗೆ ಮುಟ್ಟುತ್ತದೆ. 2013ನೇ ಇಸವಿಯ ಹೊತ್ತಿಗೆ ಇಲ್ಲಿ ಯಾರೂ ಇರುತ್ತಾರೋ, ಯಾರೂ ಇರುವುದಿಲ್ಲವೋ, ಯಾರು ಮುಖ್ಯಮಂತ್ರಿಯಾಗಿರುತ್ತಾರೋ, ಯಾರಿಗೆ ಗೊತ್ತು? ಇವತ್ತು ಏನಾದರೂ ಮಾಡಬೇಕಲ್ಲವೇ? ಇವತ್ತು ಯಾವ ರೀತಿ ವಿದ್ಯುತ್ತನ್ನು ಖರೀದಿ ಮಾಡಬೇಕು, ರೈತರಿಗೆ ಯಾವ ರೀತಿ ವಿದ್ಯುತ್ತನ್ನು ಕೊಡಬೇಕು ಎನ್ನುವ ಬಗ್ಗೆ ಚಿಂತನೆ ಇಲ್ಲ. ವಿದ್ಯುತ್ತಿನ ಸ್ಥಿತಿ ಬಹಳಷ್ಟು ಚಿಂತಾಜನಕವಾಗಿದೆ.

ಇನ್ನೂ ಪಶುಸಂಗೋಪನೆ ಮತ್ತು ಹೈನುಗಾರಿಕೆ. ವಿಮಾ ಸೌಲಭ್ಯಕ್ಕೋಸ್ಕರ ಕುರಿ ಮೇಕೆ ಸಾಕಾಣಿಕೆಗೆ 5 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಸಂತೋಷ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 2 ರೂಪಾಯಿಗಳನ್ನು ಕೊಡುತ್ತೇವೆ ಎಂದು ಹಿಂದೆ ಸರ್ಕಾರ ಘೋಷಣೆ ಮಾಡಿತ್ತು, ಅದನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. 2 ರೂಪಾಯಿ ಸಾಲುವುದಿಲ್ಲ, ಇನ್ನೂ 2 ರೂಪಾಯಿಗಳನ್ನುಸೇರಿಸಿ ರೈತರಿಗೆ ಕೊಡುತ್ತೇವೆ ಎಂದು ರೇವಣ್ಣನವರು ಹೇಳಿದರೆ, ರೇವಣ್ಣನವರಿಗೆ ಅದನ್ನು ಕೊಡಲಿಕ್ಕೆ ಬಿಡಲಿಲ್ಲ. ಓಟಿನಾಸೆಗೋಸ್ಕರ ಅದನ್ನು ಕೊಟ್ಟಿರತಕ್ಕಂಥಾದ್ದು. ಇವರಿಗೆಲ್ಲಿ ಓಟು ಜಾಸ್ತಿಯಾಗಿ ಬಿಡುತ್ತದೋ ಎನ್ನುವ ಉದ್ದೇಶದಿಂದ ಅವರು ಕೊಡತಕ್ಕಂಥದ್ದನ್ನು ತಡೆಹಿಡಿದರು. ರೇವಣ್ಣನವರು ಕೊಡುವುದು ಬೇಡ. ರೈತರಿಗೆ ಇವರೇ ಇನ್ನೂ 2 ರೂಪಾಯಿ ಕೊಡಲಿ. ಇವತ್ತು ರೈತ ಯಾವ ರೀತಿ ಕಷ್ಟದಲ್ಲಿ ಹಳ್ಳಿಗಳಲ್ಲಿ ಹೈನುಗಾರಿಕೆಯನ್ನು ಮಾಡುತ್ತಿದ್ದಾನೆ ಎನ್ನುವುದು ತಮಗೆಲ್ಲ ಗೊತ್ತಿದೆ. ಹೈನುಗಾರಿಕೆ ಎಷ್ಟು ಕಷ್ಟದಲ್ಲಿದೆ ಎಂದು ನಮ್ಮ ಮಿತ್ರರಾಗಿರತಕ್ಕಂಥ ರವಿಯವರಿಗೂ ಗೊತ್ತಿದೆ. ಒಂದು ಲೀಟರ್ ನೀರಿಗೆ ಎಷ್ಟು ಹಣವನ್ನು ಕೊಡುತ್ತಿದ್ದಾರೆ. ಒಂದು ಲೀಟರ್ ಹಾಲಿಗೆ ಎಷ್ಟು ಹಣ ಸಿಗುತ್ತಿದೆ ಎನ್ನುವುದನ್ನು ದಯಮಾಡಿ ರವಿಯವರು ನಮಗೆ ಹೇಳಬೇಕು. ನೀವೇ ರೈತರಿಗೆ ಇನ್ನೆರಡು ರೂಪಾಯಿಗಳನ್ನು ಕೊಡಿ. ಇಲ್ಲವೆಂದರೆ, ಅವರು ಮಾಡುವುದಕ್ಕಾದರೂ ಬಿಡಿ. ರೈತರ ಪರವಾಗಿರತಕ್ಕಂಥ ನಿಮ್ಮ ಸರ್ಕಾರ, ರೈತರಿಗೋಸ್ಕರ ಬಂದಿರತಕ್ಕಂಥ ಸರ್ಕಾರ, ರೈತರ ಹೆಸರಿನಲ್ಲಿ ಅಧಿಕಾರವನ್ನು ತೆಗೆದುಕೊಂಡಂತ ಸರ್ಕಾರದವರಾದ ನೀವೇ ಇನ್ನೂ ಎರಡು ರೂಪಾಯಿಗಳನ್ನು

ಕೊಡಿ. ಅದನ್ನು ಏಕೆ ತಡೆಹಿಡಿಯುತ್ತೀರಿ? ಅಂದರೆ, ನೀವು ಮಾಡತಕ್ಕಂಥದ್ದೆಲ್ಲ ಚುನಾವಣೆ ದೃಷ್ಟಿಯಿಂದಲೇ? ಓಟಿನಾಸೆಗೋಸ್ಕರ ನೀವು ಮಾಡುವಿರೇ?

ಹೋದ ಸಾರಿ ಬಜೆಟ್‌ನಲ್ಲಿ ಪ್ರತಿ ತಾಲ್ಲೂಕಿನ ಸಣ್ಣ ರೈತರಿಗೆ ಮತ್ತು ಯುವಕರಿಗೆ 50 ಕೋಳಿ ಫಾರಂ ಸ್ಥಾಪನೆಗೆ ಸಹಾಯಧನ ನೀಡಲಾಗುವುದು ಎಂದು ಹೇಳಿದ್ದರು. ಇದನ್ನು ರವಿಯವರಿಗೇನಾದರೂ ಕೊಟ್ಟಿದ್ದಾರೆಯೇ ಎನ್ನುವುದನ್ನು ಅವರು ದಯಮಾಡಿ ಹೇಳಬೇಕು.

ಅಧ್ಯಕ್ಷರು: ನಿಮಗೆ ರವಿಯವರು ಉತ್ತರ ಕೊಡಬೇಕೇನು?

ಶ್ರೀ ಹೆಚ್.ಸಿ.ಬಾಲಕೃಷ್ಣ: ಮುಖ್ಯಮಂತ್ರಿಗಳಿಗಿಂತ ಹೆಚ್ಚಾಗಿ defend ಮಾಡಿಕೊಳ್ಳುತ್ತಿದ್ದವರು ಅವರೇ ಅಲ್ಲವೇ?

ಅಧ್ಯಕ್ಷರು: ಹಾಗಿದ್ದರೆ ರವಿಯವರು ಎಲ್ಲದಕ್ಕೂ ಉತ್ತರ ಕೊಡಲು ಪ್ರಾರಂಭ ಮಾಡುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೇ, ನಿಮ್ಮ ಕ್ಷೇತ್ರದಲ್ಲಿ ಸ್ವಲ್ಪ ಹೆಚ್ಚಿಗೆ ನಗರ ಪ್ರದೇಶವಿದೆ. ಅವರದ್ದು ನಮ್ಮ ತರಹ ಹಳ್ಳಿಗಾಡಿನ ಪ್ರದೇಶ. ಅಲ್ಲಿಗೇನಾದರೂ ಕೊಟ್ಟಿದ್ದಾರೆಯೇ ಎಂದು ಕೇಳಬೇಕಾಗಿದೆ. ಪಶು ಸಂಗೋಪನೆಯಲ್ಲಿ ಕೊಡುತ್ತೇವೆ ಎಂದು ಹೇಳಿದ್ದರು. ಎಲ್ಲಿ ಅದನ್ನು ಕೊಟ್ಟಿದ್ದಾರೆ? ಬಜೆಟ್‌ನಲ್ಲಿ ಸುಳ್ಳು ಏಕೆ ಹೇಳಬೇಕು? ನುಡಿದಂತೆ ನಡೆಯಬೇಕಲ್ಲವೇ?

ಇನ್ನು, ಜಲ ಸಂಪನ್ಮೂಲ ಮತ್ತು ನೀರಾವರಿಗೆ ಬಹಳಷ್ಟು ದುಡ್ಡನ್ನು ಕೊಟ್ಟಿದ್ದಾರೆ. ಆದರೆ ಬಹಳ ವರ್ಷಗಳ ಹಿಂದೆ ಕೊಟ್ಟಿರುವಷ್ಟು ದುಡ್ಡನ್ನು ಕೊಟ್ಟಿಲ್ಲ. ಜಲ ಸಂಪನ್ಮೂಲ ಮತ್ತು ನೀರಾವರಿಯಲ್ಲಿ, ಕಳಸಾ ಬಂಡೂರಿ ನಾಲೆಗಳನ್ನು ನಿರ್ಮಿಸಿ ಹುಬ್ಬಳ್ಳಿ ಧಾರವಾಢ ಪ್ರದೇಶಗಳಿಗೆ ಕುಡಿಯುವ ನೀರು ಕೊಡಲಾಗುವುದು ಎಂದು ಹೋದ ಸಾರಿ ಹೇಳಿದ್ದಾರೆ. ಆ ಯೋಜನೆ ಏನಾಯಿತು ಸ್ವಾಮಿ? ಇದು ನಿಮ್ಮ ಬಜೆಟ್ ಬುಕ್‌ನಲ್ಲೇ ಕೊಟ್ಟಿರತಕ್ಕಂಥಾದ್ದು. ಆ ಯೋಜನೆಯನ್ನು ಬಿಟ್ಟಾಯಿತೇ? ಇದಕ್ಕೆ ಕೈ ಹಾಕಬೇಡಿ ಇದು ಆಗುವುದಿಲ್ಲ ಕೋರ್ಟ್‌ನಲ್ಲಿದೆ, ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು ಎಂದು ಆವತ್ತಿನ ನಮ್ಮ ಮುಖ್ಯಮಂತ್ರಿಗಳು ಹೇಳಿದರು. ಆದರೂ ಸಹ ಭಾರಿ ವೀರಾವೇಶದಲ್ಲಿ ಹೋಗಿ ಪೂಜೆಯನ್ನೆಲ್ಲಾ ಮಾಡಿದರು. ಇದು ಏನಾಯಿತು ಸ್ವಾಮಿ? ನಮ್ಮ ಅಧ್ಯಕ್ಷರು ಪ್ರತಿನಿಧಿಸತಕ್ಕಂಥ ಕ್ಷೇತ್ರಕ್ಕೆ ನೀರು ಕೊಡತಕ್ಕಂಥ ಕೆಲಸವಿದು. ಇದು ಏನಾಯಿತು? ಕೋಲಾರ ಜಿಲ್ಲೆಗೆ ಎರಗೋಡು ನೀರಾವರಿ ಯೋಜನೆ ಮೂಲಕ ಕುಡಿಯುವ ನೀರು ಕೊಡಲು 50 ಕೋಟಿ ಮೀಸಲಿಟ್ಟಿದ್ದೇನೆ ಎಂದು ಹೇಳಿದ್ದರು. ಈ ಯೋಜನೆ ಏನಾಯಿತು? ಎಷ್ಟು ಕೋಟಿ ಕೋಲಾರಕ್ಕೆ ಖರ್ಚು ಮಾಡಿದ್ದಾರೆ? ಇನ್ನು ಎಷ್ಟು ಕೋಟಿ ಬಿಡುಗಡೆ ಮಾಡಬೇಕು? ಹೋದ ಸಾರಿ ಬಜೆಟ್‌ನಲ್ಲಿ ಹೇಳಿದ ಈ ಯೋಜನೆ ಏನಾಯಿತು ಸ್ವಾಮಿ? ರವಿಯವರು ಹೇಳುತ್ತಿದ್ದರು, ಕೊಟ್ಟಿದ್ದು ತಪ್ಪೇ? ನೀವು ಮಾಡಲಿಲ್ಲ, ನಾವು ಮಾಡಿದ್ದೇವೆ ಎಂದು ಹೇಳುತ್ತಿದ್ದರು. ನೀವು ಮಾಡಿರುವುದು ಇದನ್ನೇ. ಬಜೆಟ್‌ನಲ್ಲಿ

ತೋರಿಸತಕ್ಕಂಥಾದ್ದು ಮುಖ್ಯವಲ್ಲ, ಅದನ್ನು ಅನುಷ್ಠಾನ ಮಾಡಿ ತೋರಿಸಬೇಕು. ಬಜೆಟ್‌ನಲ್ಲಿ ಇಟ್ಟುಬಿಟ್ಟರೆ ಆಯಿತೇ? ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕಲ್ಲವೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಈ ರೀತಿ ಸರ್ಕಾರವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿಯೇ ಅವರನ್ನು ಕ್ಯಾಬಿನೆಟ್‌ನಿಂದ ಹೊರಗಿಟ್ಟು ಸದನದಲ್ಲಿ ಕೂರಿಸಿದ್ದಾರೆ.

ಶ್ರೀ ಎನ್.ವೈ.ರುದ್ರೇಶ್‌ಗೌಡ: ಇವತ್ತಿನ ಪೇಪರ್‌ನಲ್ಲಿ ಬಂದಿದೆ. ಎಲ್ಲ ರೈತರಿಗೆ ಹಸಿರು ಶಾಲು ಹಾಕಿದ್ದಾರೆ. ಆದರೆ ಜಮೀನು ಮಾತ್ರ ಹಸಿರಾಗಿಲ್ಲ ಎಂದು ಬಂದಿದೆ.

ಶ್ರೀ ಹೆಚ್.ಎಸ್.ಬಾಲಕೃಷ್ಣ: ಕರಾವಳಿ ಪ್ರದೇಶದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳ ನೀರಿನ ಅಧ್ಯಯನಕ್ಕೆ ಒಂದು ಕೋಟಿ ಮೀಸಲಿಡಲಾಗಿತ್ತು. ಅದು ಏನಾಯಿತು ಸ್ವಾಮಿ? ಕಳೆದ ಬಜೆಟ್‌ನಲ್ಲಿ ಕೊಟ್ಟಂಥದ್ದು ಇದು. ಇದಕ್ಕೆ ಒಂದು ಕೋಟಿ ಕೊಟ್ಟಿರುವಿರಾ? ಅಧ್ಯಯನ ಮಾಡಿದ್ದೀರಾ? ರಾಜ್ಯ ಸರ್ಕಾರಕ್ಕೆ ಅನುಕೂಲ ಆಯಿತೇ? ರವಿಯವರು ಇದನ್ನೆಲ್ಲಾ ಕೇಳಬೇಕು. ಏಕೆಂದರೆ ನೀವು ಭಾರಿ ವೀರಾವೇಶದಲ್ಲಿ ಮಾತನಾಡುತ್ತಿದ್ದೀರಿ. 'ನೀರು ಬಳಕೆದಾರರ ಸಂಘ ಸ್ಥಾಪಿಸಿ ಅದರ ನಿರ್ವಹಣೆ ಮತ್ತು ನಿರ್ವಹಣಾ ಜವಾಬ್ದಾರಿಯನ್ನು ಅವರಿಗೇ ವಹಿಸಲಾಗುವುದು' ಎಂದು ಹೇಳಿದ್ದಿರಿ. ಇದು ಎಲ್ಲಿ ಆಯಿತು ಸ್ವಾಮಿ? ಯಾವ ಸಂಘವನ್ನು ಸ್ಥಾಪನೆ ಮಾಡಿದ್ದಾರೆ, ಎಲ್ಲಿ ವಹಿಸಿದ್ದಾರೆ, ಯಾರಿಗೆ ವಹಿಸಿದ್ದಾರೆ ಎನ್ನುವುದನ್ನು ಹೇಳಬೇಕು. ಇದೆಲ್ಲಾ ಬಜೆಟ್‌ನಲ್ಲಿ ಹೇಳಿರತಕ್ಕಂಥದ್ದು. 'ಅಂತರ್ಜಲ ಬಳಕೆ ಕುರಿತಂತೆ ಕಾನೂನು ರೂಪಿಸಿ ನೀರು ಬಳಕೆ ಪ್ರಮಾಣವನ್ನು ಹೆಚ್ಚಿಸುವುದು ಎಂದು ತಿಳಿಸಿರುತ್ತಾರೆ. ಇದು ಎಲ್ಲಿ ಆಗಿದೆ? ಬಹಳ ಬಹಳ ಉದ್ದದ ಭಾಷಣಗಳನ್ನು ಮಾಡುತ್ತಾರೆ. ಪೊಳ್ಳು ಆಶ್ವಾಸನೆಗಳನ್ನು ಕೊಡತಕ್ಕಂಥದ್ದನ್ನು ಮಾಡುತ್ತಾರೆ. ಚುನಾವಣೆಯಲ್ಲಿ ಯಾವ ರೀತಿಯ ಆಶ್ವಾಸನೆಗಳನ್ನು ಕೊಟ್ಟಿದ್ದಾರೋ ಅದೇ ರೀತಿ ಕಳೆದ ಬಜೆಟ್‌ನಲ್ಲಿ ಕೂಡ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಅದೇ ಕ್ರಮವನ್ನು ಈ ಬಜೆಟ್‌ನಲ್ಲಿ ಕೂಡ ಮುಂದುವರೆಸಿದ್ದಾರೆ. 'ಭದ್ರಾ ಮೇಲ್ದಂಡ ಯೋಜನೆ ಚಾಲನೆ' – ಇದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇವೆ. ಇದನ್ನು ದಯಮಾಡಿ ಕೈಬಿಡುವುದಕ್ಕೆ ಹೋಗಬೇಡಿ. ಇದನ್ನು ಮುಂದಿನ ವರ್ಷಕ್ಕಾದರೂ ಮುಂದುವರೆಸಿ, ಬರೀ ಬಜೆಟ್ ಪುಸ್ತಕದಲ್ಲೇ ಇಡಬೇಡಿ. ಕೆರೆಗಳ ಅಭಿವೃದ್ಧಿಗೆ ವ್ಯವಸ್ಥಿತ ಯೋಜನೆ ಎಂದು ಹೇಳಿದ್ದಾರೆ. ನಾವು ಬಯಲುಸೀಮೆ ಪ್ರದೇಶದಿಂದ ಬಂದಿರತಕ್ಕಂಥ ಜನ. ನಾವು ಕೆರೆಗಳನ್ನೇ ನಂಬಿಕೊಂಡು ಜೀವನ ಮಾಡತಕ್ಕಂಥದವರು. ಕೆರೆಗಳ ಅಭಿವೃದ್ಧಿಗೆ ಹಣವನ್ನು ಕೊಡುತ್ತೇವೆ ಎಂದು ಇಲ್ಲಿ ಹೇಳಿದ್ದೀರಿ. ದಯಮಾಡಿ ಆ ಕಾರ್ಯಕ್ರಮಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ಕೋಲಾರ ರಾಮನಗರ, ಬೆಂಗಳೂರು ಗ್ರಾಮಾಂತರ ಈ ಭಾಗಗಳಲ್ಲೆಲ್ಲ ಕುಡಿಯುವ ನೀರಿಗೋಸ್ಕರ ಹೆಚ್ಚು ನದಿಮೂಲಗಳಿಲ್ಲ. ಇಲ್ಲಿರುವವರು ಬೋರ್‌ವೆಲ್‌ಗಳನ್ನೇ ನಂಬಿ ಜೀವನ ಮಾಡತಕ್ಕಂಥವರು. ಹೆಚ್ಚಿನ ಅನುದಾನವನ್ನು

ಬಯಲುಸೀಮೆ ಅಭಿವೃದ್ದಿಗೆ ಈ ದಿಕ್ಕಿನಲ್ಲಿ ಕೊಡಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಅದೇ ರೀತಿ, ಇನ್ನೊಂದು ಯೋಜನೆಯನ್ನು ಪ್ರಕಟಿಸಿದ್ದೀರಿ. 'ಕಾವೇರಿ ನದಿಯ ಉಪನದಿಯಾದ ಅರ್ಕಾವತಿ ಪುನಶ್ಚೇತನಕ್ಕಾಗಿ ವಿವರವಾದ ಯೋಜನೆಗೆ 2 ಕೋಟಿ ಒದಗಿಸಲಾಗುವುದ' ಎಂದು ಹೇಳಿದ್ದೀರಿ. ಇದಕ್ಕಾಗಿ ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತೇನೆ. ಇವತ್ತು ಆದರಿಂದ ಬೆಂಗಳೂರಿಗೆ ಪ್ರಯೋಜನವಾಗುತ್ತದೆ. ತಿಪ್ಪಗೊಂಡನಹಳ್ಳಿಗೆ ನೀರು ಬಂದರೆ ಬಹಳಷ್ಟು ಸಮಸ್ಯೆ ಬಗೆಹರಿಯುತ್ತದೆ. ಈ ಯೋಜನೆಯಿಂದ ಬೆಂಗಳೂರಿಗೆ ಅನುಕೂಲವಾಗುತ್ತದೆ. ಆದರೆ, ಬೇರೆ ಯೋಜನೆಗಳನ್ನು ಇಟ್ಟ ಹಾಗೆ ಇದನ್ನು ಕೇವಲ ಬಜೆಟ್ ಪುಸ್ತಕದಲ್ಲಿ ಮಾತ್ರ ಇರಬೇಡಿ, ಇದನ್ನು ದಯಮಾಡಿ ಅನುಷ್ಠಾನ ಮಾಡಿ ಯಲಹಂಕ ಶಾಸಕರಾದ ವಿಶ್ವನಾಥ್‌ರವರು ಭಾರಿ ಹೋರಾಟ ಮಾಡಿ ಇದನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಅದನ್ನು ಕೇವಲ ಬಜೆಟ್ ಪುಸ್ತಕದಲ್ಲಿ ತೋರಿಸದೆ ಅದು ಅನುಷ್ಠಾನಕ್ಕೆ ಬರುವ ರೀತಿಯಲ್ಲಿ ಸರ್ಕಾರ ದಯಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಈ ಮೂಲಕ ಒತ್ತಾಯಿಸುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಕಳೆದ ಬಾರಿ ಇದಕ್ಕೆ 6.14% ಹಣವನ್ನು ಕೊಟ್ಟಿದ್ದಿರಿ. ಈ ಬಾರಿ 5.9% ಕೊಟ್ಟಿದ್ದೀರಿ. ರಸ್ತೆಗಳ ಅಭಿವೃದ್ಧಿಯಲ್ಲೂ ಕೂಡ ತಾರತಮ್ಯವಾಗಿದೆ. ಆದರೆ ಇದನ್ನು ಖಾಸಗಿ ಸಹಭಾಗಿತ್ವದ ಯೋಜನೆಯಲ್ಲಿ ನಾವು ಮಾಡುತ್ತೇವೆ ಎಂದೆಲ್ಲಾ ಹೇಳಿದ್ದಾರೆ. ಅದು ಎಷ್ಟರಮಟ್ಟಿಗೆ ಊರ್ಜಿತವಾಗುತ್ತದೆ ಎನ್ನುವುದು ನನಗಂತೂ ಗೊತ್ತಿಲ್ಲ. ರಸ್ತೆಗಳ ಅಭಿವೃದ್ಧಿಗೆ ಇವರು ಗುಜರಾತ್ ಮಾದರಿಯನ್ನು ಅನುಸರಿಸಲು ಹೊರಟಿದ್ದಾರೆ. ಗುಜರಾತ್‌ನಲ್ಲಿ ಏನು ಮಾಡಿದ್ದಾರೋ ಅದೇ ರೀತಿ ಇಲ್ಲೂ ಮಾಡಬೇಕೆಂದು ಹೊರಟಿದ್ದಾರೆ. ಅದರಲ್ಲಿ ಎಷ್ಟರ ಮಟ್ಟಿನ ಯಶಸ್ಸನ್ನು ಕಾಣುತ್ತಾರೆ ಎನ್ನುವುದು ನನಗಂತೂ ಗೊತ್ತಿಲ್ಲ. ಆದರೆ ಕಳೆದ ಬಾರಿಗಿಂತ ಈ ಬಾರಿ ಗ್ರಾಮೀಣಾಭಿವೃದ್ಧಿಗೆ, ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ – ಕಳೆದ ಸರ್ಕಾರದಲ್ಲಿ ಹೊಸದಾಗಿ High School ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡತಕ್ಕ ಕೆಲಸವನ್ನು ಇದುವರೆಗೂ ಮಾಡಿಲ್ಲ. ನಾವು ಹೋಗಿ ಮಂತ್ರಿಗಳ ಹತ್ತಿರ ಕೇಳಿದರೆ ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ.

[ಈ ಹಂತದಲ್ಲಿ ಉಪಾಧ್ಯಕರು ಅಧ್ಯಕ್ಷ ಪೀಠವನ್ನಲಂಕರಿಸಿದರು]

'ರಾಜ್ಯದಲ್ಲಿ ಜನರ ಸಾಕ್ಷರತಾ ಪ್ರಮಾಣವು ಈಗ ಶೇ.67ರಷ್ಟಿದ್ದು ಇದನ್ನು ತೀವ್ರಗತಿಯಲ್ಲಿ ಹೆಚ್ಚಿಸಲು ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಬೇಕಾಗಿದೆ' ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಆದರೆ, ಹಿಂದೆ ಮಂಜೂರಾಗಿರತಕ್ಕಂಥ ಪದವಿ ಪೂರ್ವ

ಕಾಲೇಜುಗಳು ಮತ್ತು ಹೈಸ್ಕೂಲುಗಳಿಗೆ ಇವತ್ತಿನವರೆಗೆ building ಅನ್ನು ಒದಗಿಸತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿಲ್ಲ. ಬಹುಶ: ಹಿಂದೆ ಕೊಟ್ಟಿರತಕ್ಕಂಥ ಹಣವನ್ನು ಸಹ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕಂಥ ಕೆಲಸವಾಗಿಲ್ಲ. ದಯಮಾಡಿ ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಲಿಕ್ಕೆ ಬಯಸುತ್ತೇನೆ. ನೀವು ಕೇವಲ ಶಾಲೆಗಳನ್ನು ಕಟ್ಟುವುದರಿಂದ, ಶಾಲೆಗಳನ್ನು ಪ್ರಾರಂಭ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಪ್ರತಿ ಗ್ರಾಮದಲ್ಲಿ ಸಹ ಶಿಕ್ಷಕರಿಗೆ ವಸತಿಗೃಹವನ್ನು ಕಟ್ಟಿಕೊಟ್ಟು ಅಲ್ಲಿ ವಾಸ ಮಾಡುವ ರೀತಿ ಮಾಡಿದರೆ ಬಹುಶ: ಈ ಶಿಕ್ಷಣದ ಮಟ್ಟವನ್ನು ಸ್ವಲ್ಪ ಹೆಚ್ಚಿಸಬಹುದು. ಶಿಕ್ಷಕರು ಯಾವ ರೀತಿ ಕೆಲಸ ಮಾಡುತ್ತಾರೆಂದರೆ ಅವರೆಲ್ಲರೂ ಕೂಡ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಂದ ಬರತಕ್ಕಂಥವರಾಗಿದ್ದಾರೆ ಅವರು 10–00 ಗಂಟೆಗೆ ಶಾಲೆಗೆ ಬರಬೇಕಾಗಿದ್ದರೆ ಅವರು 11–00 ಗಂಟೆಗೆ ಬರುತ್ತಾರೆ. ಸಂಜೆ 5–00 ಗಂಟೆಗೆ ಹೋಗಬೇಕಾಗಿದ್ದರೆ ಅವರು ಸಂಜೆ 4–00 ಗಂಟೆಗೆ ರೆಡಿಯಾಗಿರುತ್ತಾರೆ. ಏಕೆಂದರೆ, ಅವರ bus ಜಿಲ್ಲಾ ಕೇಂದ್ರಕ್ಕೆ, ತಾಲ್ಲೂಕು ಕೇಂದ್ರಕ್ಕೆ ಹೋಗಿಬಿಡುತ್ತದೆ. ಅವರು ಒತ್ತಡದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ, ಇವರು ಯಾವ ಮಟ್ಟದ ಎಷ್ಟು ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಕೊಡಬಹುದೆಂಬುದನ್ನು ಸರ್ಕಾರ ಚಿಂತನೆ ಮಾಡಬೇಕು. ದಯಮಾಡಿ, ಅಲ್ಲಿಯೇ ವಸತಿ ನಿಲಯವನ್ನು ನಿರ್ಮಾಣ ಮಾಡಿ ಅವರು ಅಲ್ಲಿಯೇ ವಾಸ ಮಾಡುವುದಕ್ಕೆ ಸರ್ಕಾರ ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಉನ್ನತ ಶಿಕ್ಷಣ – ಈಗ ಉನ್ನತ ಶಿಕ್ಷಣ ಸಚಿವರು ಸದನದಲ್ಲಿ ಇಲ್ಲ. ಭಯೋತ್ಪಾದನೆ ವಿರೋಧ ಅಭಿಯಾನವನ್ನು ಮಾಡುತ್ತಿದ್ದಾರೆ. ಭಯೋತ್ಪಾದನೆ ಎಲ್ಲಿಂದ ಪ್ರಾರಂಭವಾಯಿತು ಎಂದರೆ, ಈ ದೇಶದಲಿ ಎಲ್ಲೋ border state ಗಳಾದ ಜಮ್ಮು ಕಾಶ್ಮೀರ, ಅಸ್ಸಾಂ ಇಂಥ ರಾಜ್ಯಗಳಲ್ಲಿ ಭಯೋತ್ಪಾದನೆ ಇತ್ತು. ಇದು ಇಡೀ ರಾಷ್ಟ್ರಕ್ಕೆ ವ್ಯಾಪಿಸ ಬೇಕಾದರೆ ಭಾರತೀಯ ಜನತಾ ಪಕ್ಷ ಕಾರಣ ಎಂದು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗುತ್ತದೆ. ಏಕೆಂದರೆ, ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದರು, ಅವರು ಮಂಡಲ ಪಂಚಾಯಿತಿಯನ್ನು ಜಾರಿ ತಂದರು. ಅದನ್ನು ವಿರೋದ ಮಾಡಿ ಇವರ ಪಕ್ಷ ತನ್ನ ಬೆಂಬಲವನ್ನು ವಾಪಸ್ಸು ತೆಗೆದುಕೊಂಡು ವಿ.ಪಿ.ಸಿಂಗ್‌ರವರ ಸರ್ಕಾರವನ್ನು ಬೀಳಿಸಿದರು. ಆವತ್ತು ಇಡೀ ದೇಶದಲ್ಲಿ ಜನ ದಂಗೆ ಎದ್ದರು. ಅದನ್ನು ಮರೆಮಾಚಲಿಕ್ಕೋಸ್ಕರ ಮಾನ್ಯ ಅದ್ವಾನಿಯವರ ಮುಂದಾಳತ್ವದಲ್ಲಿ ಬಿಜೆಪಿಯವರು ರಾಮಮಂದಿರವನ್ನು ಕಟ್ಟುತ್ತೇವೆಂದು ರಥಯಾತ್ರೆ ಪ್ರಾರಂಭ ಮಾಡಿದರು ಆಗ ರಾಮಮಂದಿರ ಕಟ್ಟುತ್ತೇವೆಂದು ಒಂದು ಟೆಂಪೋ ಮತ್ತು ಅದರ ಮೇಲೆ ಒಂದು ರಾಮನ ಫೋಟೋ ಇಟ್ಟುಕೊಂಡು ನಮ್ಮೂರಿಗೂ ಬಂದಿದ್ದರು. ಆಗ ನಾವೆಲ್ಲ 26–27–28

ವರ್ಷದ ಹುಡುಗರು. ನಾವು ಆಗ spirit ನಿಂದ ರಾಮಮಂದಿರ ಕಟ್ಟಿಕೊಡುತ್ತಾರಂತೆ, ಅಲ್ಲಿ ಏನೋ ಪಾಪ ಮುಸ್ಲಿಮರು, ಹಿಂದೂಗಳದ್ದು ಉರುಳಿಸಿಬಿಟ್ಟಿದ್ದಾರಂತೆ, ಇವರು ವಾಪಸ್ಸು ಕಟ್ಟುತ್ತಾರೆಂದು ನಾವು ಹತ್ತು ಹತ್ತು ಸಾವಿರ ರೂಪಾಯಿಗಳನ್ನು collect ಮಾಡಿಕೊಟ್ಟೆವು. ಜೊತೆಗೆ, 10–15 ಇಟ್ಟಿಗೆಗಳನ್ನು ಕೊಟ್ಟೆವು, ನಾವು ಅದಕ್ಕೆ ಪೂಜೆ ಮಾಡಿದೆವು, ಬಂದವರಿಗೆಲ್ಲ ಊಟ ಕೊಟ್ಟು ಕಳುಹಿಸಿದೆವು. ಅವರು ದುಡ್ಡು ತೆಗೆದುಕೊಂಡು ಹೋದರು. ಬೆಳಗ್ಗೆ ಹೋಗಿ ನೋಡುತ್ತೇವೆ, ಆ ಇಟ್ಟಿಗೆ ಊರಾಚೆ ಬಿದ್ದಿದೆ. ನಾವು ಕೊಟ್ಟ ಇಟ್ಟಿಗೆಗಳಲ್ಲೆಲ್ಲ ದೇವಸ್ಥಾನವನ್ನು ಕಟ್ಟಿಬಿಡುತ್ತಾರೆ, ರಾಮಮಂದಿರ ಬಹಳ ಸುಂದರವಾಗಿ ನಿರ್ಮಾಣವಾಗುತ್ತದೆ ಎಂದು ತಿಳಿದುಕೊಂಡಿದ್ದೆವು. ಅದಾದನಂತರ NDA ಸರ್ಕಾರ ಅಧಿಕಾರಕ್ಕೆ ಬಂತು. ಅವರು ಕುರ್ಚಿಯ ಆಸೆಗೋಸ್ಕರ ರಾಮಮಂದಿರದ ವಿಚಾರವನ್ನು ಬಿಟ್ಟೇ ಬಿಟ್ಟರು. ಈಗ ಹೊಸದಾಗಿ ಭಯೋತ್ಪಾದನಾ ವಿರೋಧಿ ಅಭಿಯಾನ ಎಂದು ಪ್ರಾರಂಭ ಮಾಡಿದ್ದಾರೆ. ಸನ್ಮಾನ್ಯ ಮಂತ್ರಿಗಳು – ನಾವು ಅದ್ವಾನಿಯವರನ್ನು ಕರೆಸಿ ಬಹಿರಂಗ ಸಭೆ ಮಾಡಿ ಮಕ್ಕಳಲ್ಲಿ ಜಾಗೃತಿಯನ್ನು ಉಂಟುಮಾಡುತ್ತೇವೆ, ಅದ್ವಾನಿಯವರನ್ನು ಕರೆಸತಕ್ಕಂಥದ್ದು ನಿಮಗೆಲ್ಲ ಹೊಟ್ಟೆಕಿಚ್ಚು ಎಂದು ಹೇಳುತ್ತಾರೆ. ನಾನು ಒಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಅದೇನೆಂದರೆ, ನೀವು ಹೋಗಿ ಮಾನ್ಯ ಮನಮೋಹನಸಿಂಗ್‌ರವರನ್ನು ಕರೆಯಬಹುದಾಗಿತ್ತಲ್ಲವೇ? ಅವರು ಬರುವುದಿಲ್ಲವೆಂದು ಹೇಳಿದ್ದಾರೆಯೇ? ಅವರನ್ನು ಕರೆದುಕೊಂಡು ಬಂದು ಕಾರ್ಯಕ್ರಮವನ್ನು ನೀವು ಮಾಡಬಹುದಾಗಿತ್ತಲ್ಲವೇ? ನೀವು ಮಾಡತಕ್ಕಂಥ ಉದ್ದೇಶವೇನು? ಅವತ್ತು ಅಧಿಕಾರಕ್ಕೆ ಬರುವುದಕ್ಕೆ ರಾಮ, ಇವತ್ತು ಅಧಿಕಾರಕ್ಕೆ ಬರುವುದಕ್ಕೆ ವಿವೇಕಾನಂದ ವಿಚಾರವನ್ನು ತೆಗೆದುಕೊಂಡಿದ್ದೀರಿ. ಈ ಭಯೋತ್ಪಾದನೆ ಎಲ್ಲಿಂದ ಪ್ರಾರಂಭವಾಯಿತು? ಅಲ್ಲಿಗೆ ಸೀದಾ ಹೋಗಿ ಮಸೀದಿಯನ್ನು ಒಡೆದುಹಾಕಿದರು. ಇಡೀ ದೇಶದಲ್ಲಿ ಓಟಿನ ಆಸೆಗೋಸ್ಕರ ಒಂದು secular, ಇನ್ನೊಂದು non secular , ಅವರ ಭಾವನೆಗಳು ಕೆರಳಿತು. ಇವತ್ತು ದೇಶಾದ್ಯಂತ ಭಯೋತ್ಪಾದನೆ ಆವರಿಸಿಕೊಂಡಿದೆ. ಅದನ್ನು ಇವರು ಎಲ್ಲಿಂದ ನಿಲ್ಲಿಸುತ್ತಾರೆ? ಇದರಿಂದ ನಿಲ್ಲುತ್ತದೆಯೇ? ಪ್ರೀತಿ–ವಿಶ್ವಾಸದಿಂದ ಜನರನ್ನು ಗೆಲ್ಲಬೇಕೇ ವಿನಃ ರಕ್ತ ಪಾತದಿಂದ ಏನೂ ಮಾಡಲಿಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಬಾಲಕೃಷ್ಣರವರೇ, ಅಯೋಧ್ಯಾ ಪ್ರಕರಣವಾಗಿದ್ದು ಯಾವ ಇಸವಿಯಲ್ಲಿ?

ಶ್ರೀ ಹೆಚ್.ಸಿ. ಬಾಲಕೃಷ್ಣ: 1992ರಲ್ಲಿ

ಶ್ರೀ ಎಸ್. ಸುರೇಶ್ ಕುಮಾರ್: ತಾವು 1994ರಲ್ಲಿ ಯಾವ ಪಕ್ಷದಿಂದ ಗೆದ್ದದ್ದು?

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಮ್ಮ ಜೊತೆ ಅಂದರೆ ನಿಮ್ಮ ಪಕ್ಕದಲ್ಲಿದ್ದೆ ಎಂದು ನಾನು ಹೇಳಿದ್ದೆ. ಅದನ್ನು ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ತೋರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್: ಅದೆಲ್ಲ ಗೊತ್ತಿದ್ದೂ ಕೂಡ ಏಕೆ ಹೇಳಿದಿರಿ? ಸುಮ್ಮನೆ ಇವೆಲ್ಲ ಏಕೆ ಹೇಳುತ್ತೀರಿ? ಬಜೆಟ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ರವಿಯವರು ಮಾತನಾಡುವಾಗ ನೀವು ಸುಮ್ಮನೆ ಕುಳಿತುಕೊಂಡಿರುವುದನ್ನು ಬಿಟ್ಟು ಏನು, ಏಕೆ ಮಾತನಾಡುತ್ತಿದ್ದೀರಿ ಎಂದು ಕೇಳಬೇಕಾಗಿತ್ತು ಅವರು ಹೇಳುತ್ತಿದ್ದರೆ ಬಹಳ ಚೆನ್ನಾಗಿ ನಗುತ್ತಿದ್ದಿರಿ. ಈಗ ಮಾತ್ರ ನಾನು ಹೇಳುವುದನ್ನು ಕೇಳುವುದಕ್ಕೆ ನಿಮಗೆ ಕಹಿ ಆಗುತ್ತಿದೆ, ಅಲ್ಲವೇ? ಬಜೆಟ್ ಮೇಲೆ ಭಾಷಣ ಮಾಡಪ್ಪ ಎಂದು ನೀವು ರವಿಯವರಿಗೆ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಟಿ. ರವಿ: ಆಗ ಇವರು ವೀರಾವೇಶದಿಂದ ಏನೇನು ಭಾಷಣ ಮಾಡಿದ್ದಾರೆ, ಅದನ್ನು ಬೇಕಾದರೆ ಹಾಕಿಸಬಹುದು. ಆಗ ರಾಮಮಂದಿರ ಪರವಾಗಿ ಏನೇನು ವೀರಾವೇಶದಿಂದ ಭಾಷಣ ಮಾಡಿದ್ದಾರೆ, ಏನೇನು ಮಾತನಾಡಿದ್ದಾರೆ, ಕತ್ತಿ ಏನು ಝುಳಪಡಿಸಿದ್ದಾರೆ ಅದನ್ನು ಬೇಕಾದರೆ ಕೊಡೋಣ.

ಉಪಾಧ್ಯಕ್ಷರು: ಬಾಲಕೃಷ್ಣರವರೆ, ತಾವು ಬಜೆಟ್ ಮೇಲೆ ಮಾತು ಮುಂದುವರೆಸಿ ವಿಷಯಾಂತರ ಆಗುವುದು ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಮಂತ್ರಿಗಳು ಕೇಳಿದ್ದಕ್ಕೆ ಹೇಳಿದೆ. ನಾನು ವಿಷಯಾಂತರ ಮಾಡುತ್ತಿಲ್ಲ. ಪರಮಪೂಜ್ಯ ಡಾ: ಶಿವಕುಮಾರ ಸ್ವಾಮೀಜಿಯವರ ಹೆಸರನ್ನು ವಿಶ್ವವಿದ್ಯಾನಿಲಯಕ್ಕೆ ಇಟ್ಟಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಅವರ ಹುಟ್ಟೂರಾದ ವೀರಾಪುರ ಇದೆ. ವೀರಾಪುರವನ್ನು ದತ್ತು ತೆಗೆದುಕೊಳ್ಳುತ್ತೇವೆಂದು ಅಲ್ಲಿ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ, ಅದಕ್ಕಾಗಿ ಸ್ವಾಗತಬಯಸುತ್ತೇವೆ. ನಮ್ಮ ತಾಲ್ಲೂಕಿನ ಜನತೆಯ ಪರವಾಗಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. University ಗೆ ಹೆಸರಿಟ್ಟೀದ್ದೀರಿ ಹೊರತು ಬಜೆಟ್‌ನಲ್ಲಿ ಅದಕ್ಕೆ ಬೇಕಾದ ಹಣ ಇಟ್ಟಿಲ್ಲ. ನಿಮ್ಮಿಂದ ಆ ಊರಿಗೆ ಕೊಟ್ಟಿರುವ ಕೊಡುಗೆ ಏನು? ಅಲ್ಲಿ ಯಾರೋ ಕೇಳಿದರು ಎಂದು ಸುಮ್ಮನೆ ಹೋಗಿ ಭಾಷಣದಲ್ಲಿ ಹೇಳಿಬಿಟ್ಟಿರಿ. ಆದರೆ, ಬಜೆಟ್‌ನಲ್ಲಿ ಏನು ಕೊಡುಗೆ ಕೊಡುತ್ತೀರಿ ಎನ್ನುವುದನ್ನು ಹೇಳಬೇಕಲ್ಲವೇ? ಈ ರೀತಿ ಗ್ರಾಮವನ್ನು ಅಭಿವೃದ್ಧಿಪಡಿಸುತ್ತೇವೆ, ಪ್ರತಿನಿತ್ಯ ಚಟುವಟಿಕೆ ಇರುವುದಕ್ಕೋಸ್ಕರ ಅಲ್ಲೊಂದು diploma college ಅನ್ನು ಪ್ರಾರಂಭ ಮಾಡುತ್ತೇವೆಂದು ಏನಾದರೂ ಹೇಳಬೇಕಲ್ಲವೇ? ನಿನ್ನೆ ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುತ್ತಾ ಗುಲಬರ್ಗಾ University ಗೆ ಅಂಬೇಡ್ಕರ್‌ರವರ ಹೆಸರನ್ನಿಡಬೇಕೆಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ ಹೊಸದಾಗಿ ಪ್ರಾರಂಭ ಮಾಡುತ್ತಿರುವ ದಾವಣಗೆರೆ

ಯೂನಿವರ್ಸಿಟಿಗೆ ಬಸವಣ್ಣನವರ ಹೆಸರನ್ನಿಡಬೇಕು. ಹಾಗೆಯೇ, ಇಷ್ಟೊಂದು ಪ್ರಸಿದ್ಧವಾದ ಬೆಂಗಳೂರಿನ ಸ್ಥಾಪನೆಗೆ ಕಾರಣ ಯಾರು? ಬೆಂಗಳೂರಿನ ಮೂಲ ಕರ್ತರು ಕೆಂಪೇಗೌಡರವರು. ಹಾಗಾಗಿ, ಬೆಂಗಳೂರು International Airportಗೆ ಕೆಂಪೇಗೌಡರ ಹೆಸರನ್ನಿಡಿ. ನೀವೇಕೆ ಆ ಹೆಸರನ್ನು ಇಡುತ್ತಿಲ್ಲ? ಆದ್ದರಿಂದ, ಬೆಂಗಳೂರು International Airport ಗೆ ಕೆಂಪೇಗೌಡರ ಹೆಸರನ್ನಿಡಬೇಕೆಂದು ಒತ್ತಯ ಮಾಡುತ್ತೇನೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅರೋಗ್ಯ ಕವಚ ಯೋಜನೆಯನ್ನು ಅನುಷ್ಠಾನಗೊಳಿಸಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ. ಇದರಿಂದ ಬಡವರಿಗೆ ಬಹಳಷ್ಟು ಅನುಕೂಲವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆರೋಗ್ಯ ಕವಚ ಯೋಜನೆ . . .

ಉಪಾಧ್ಯಕ್ಷರು: ಬಾಲಕೃಷ್ಣರವರು ಮಾತನಾಡಲಿ. ನೀವೇಕೆ ಪ್ರತಿಸಲ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ? ಹೀಗಾದರೆ ಎಲ್ಲರಿಗೂ ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ಇನ್ನೂ ಸಹ 12 ಜನ ಮಾತನಾಡುವವರಿದ್ದಾರೆ. ಬಾಲಕೃಷ್ಣರವರೆ, ನೀವೇಕೆ yield ಆಗುತ್ತೀರಿ? ನೀವು ಮಾತು ಮುಂದುವರಿಸಿ. ಶಿವಲಿಂಗೇಗೌಡರು ನಿನ್ನೆ ಬೇಕಾದಷ್ಟು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದ್ನಿಮಿಷ. ಆರೋಗ್ಯ ಕವಚ ಯೋಜನೆಯಲ್ಲಿ ರೈತರಿಗೆ ಫ್ರೀ ಕೊಟ್ಟಿದ್ದಾರೆ ನಿಜ. 1400 ರೂಪಾಯಿಗಳನ್ನು 20 ಕಿಲೋಮೀಟರ್ ದೂರ ಕರೆದುಕೊಂಡು ಹೋಗಿ ಕರೆದುಕೊಂಡು ಬರುವುದಕ್ಕೆ charge ಮಾಡುತ್ತಿದ್ದಾರೆ. Outsource ಗೆ ಕೊಟ್ಟಿದ್ದಾರೆ. ಇದರಲ್ಲಿ ಮೋಸ ನಡೆಯುತ್ತಿದೆ, ಅನ್ಯಾಯ ನಡೆಯುತ್ತಿದೆ. ಇದು ಈ ದೇಶದ, ಈ ರಾಜ್ಯದ ದುಡ್ಡು. ಅದನ್ನು ಮೊದಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಆರೋಗ್ಯ ಕವಚ ಎಂದು ಹೆಸರು ಕೊಡುತ್ತಿದ್ದ ಹಾಗೆ ಅದರಲ್ಲಿ ಏನು ಅಡಗಿದೆ ಎಂಬುದನ್ನು ಕಂಡುಹಿಡಿಯಬೇಕು. ನಮ್ಮ ಅರಸೀಕೆರೆಯಲ್ಲಿ ಅವರು 20 ಕಿಲೋಮೀಟರ್‌ಗಿಂತ ದೂರ ಹೋಗುವುದಿಲ್ಲ. 20 ಕಿಲೋ ಮೀಟರ್ ಹೋಗಿ ಕರೆದುಕೊಂಡು ಬರುತ್ತಾರೆ. ಅವರೇನೂ free service ಮಾಡುತ್ತಿಲ್ಲ, ಅದಕ್ಕೆ 1400 ರೂಪಾಯಿಗಳನ್ನು service charge ಎಂದು ಮಾಡುತ್ತಾರೆ. 5% service ಎಂದರೆ 1400 ರೂಪಾಯಿಗಳನ್ನು charge ಮಾಡುತ್ತಾರೆ. ಆಂದರೆ, ಆ ಹಣ ಎಲ್ಲಿಗೆ ಹೋಗುತ್ತದೆ? ಆ ಹಣ ಯಾರದು? 24 hours ಇರುತ್ತಾರೆಂದು ಹೇಳುತ್ತಾರೆ, ಆದರೆ ಯಾರೂ ರಾತ್ರಿ ಹೊತ್ತು ಹೋಗುವುದಿಲ್ಲ, ಇರಲಿ. ಅಲ್ಲಿ 8 ಜನ, 9 ಜನ drivers,

attenders ಇವರನ್ನು ಇಟ್ಟುಕೊಂಡಿದ್ದಾರೆ. ಅವರಿಗೆ 3000 ರೂಪಾಯಿಗಳಂತೆ ಸಂಬಳ ಕೊಡುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಕಡೂರು ಮಂದಿಗೆ ರಕ್ಷಾ ಕವಚ ಕೊಟ್ಟಿದ್ದಾರೆ. ಅದು 30 ಕಿಲೋಮೀಟರ್ ಎಂದು ಹೇಳಿದರೆ, 30 ಕಿಲೋಮೀಟರ್ ಹೋಗಿ ನಿಂತುಬಿಟ್ಟರೆ ಮುಂದಕ್ಕೆ ಇನ್ನು 10 ಕಿಲೋಮೀಟರ್ ದೂರದಲ್ಲಿ ಚಿಕ್ಕಮಗಳೂರು ಇದೆ, 30 ಕಿಲೋಮೀಟರ್ ದೂರದಲ್ಲಿ ಶಿವಮೊಗ್ಗ ಇದೆ, 40 ಕಿಲೋಮೀಟರ್ ದೂರದಲ್ಲಿ ಹಾಸನ ಇದೆ. ಹೀಗಾದರೆ, ಆ patient ಗತಿ ಏನು? ಪ್ರತಿಯೊಬ್ಬರಿಗೂ charge ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಆಮೇಲೆ charges ಎಷ್ಟು?

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ಆರೋಗ್ಯ ಕವಚ ಯೋಜನೆ ಇರುವುದು ತುರ್ತು ಚಿಕಿತ್ಸೆಗೋಸ್ಕರ. ಅದು 60 ಕಿಲೋಮೀಟರ್, 70 ಕಿಲೋಮೀಟರ್ ದೂರ ಹೋಗಲಿಕ್ಕೆ ಅಲ್ಲ.

(ಗೊಂದಲ)

ಉಪಾಧ್ಯಕ್ಷರು: ಬಾಲಕೃಷ್ಣರವರೆ, ನೀವು ಮಾತನಾಡಿ ಮುಗಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಮ್ಮ ಶಿವಲಿಂಗೇಗೌಡರು ಮತ್ತು ಕೃಷ್ಣಮೂರ್ತಿಯವರು ಹೇಳಿದ ಹಾಗೆ, ಇದನ್ನು ಸರ್ಕಾರ ಸರಿ ಮಾಡಬೇಕು. ಕಳೆದ ಬಜೆಟ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 87 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅಚಿದರೆ ಆಸ್ಪತ್ರೆಗಳನ್ನು upgrade ಮಾಡುವುದಕ್ಕೆ 87 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಎಲ್ಲಿ ಮಾಡಿದ್ದಾರೆ ಸ್ವಾಮಿ? ಈ ಹಣವನ್ನು ಯಾವ ಆಸ್ಪತ್ರೆಗೆ ಎಲ್ಲಿ ಖರ್ಚು ಮಾಡಿದ್ದಾರೆ? ಇದು ಕಳೆದ ಬಜೆಟ್‌ನಲ್ಲಿ ಇಟ್ಟಿರುವಂಥ ಹಣವಾಗಿದೆ. ನಮ್ಮ ತಾಲ್ಲೂಕಿನಲ್ಲಂತೂ ಆಗಿಲ್ಲ. ಸಿ.ಟಿ. ರವಿಯವರು ಹೇಳಬೇಕು, ಅವರ ತಾಲ್ಲೂಕಿನಲ್ಲಿ ಎಲ್ಲಿಯಾದರೂ ಆಗಿರಬಹುದು. 'ಇಂದಿರಾನಗರದಲ್ಲಿ ವಿಶೇಷ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆಗೆ 8 ಕೋಟಿ ರೂಪಾಯಿಗಳು' ಎಂದು ಹೇಳಿದ್ದೀರಿ, ಇಂದಿರಾನಗರದಲ್ಲಿ ಸರ್ಕಾರಿ ಆಸ್ಪತ್ರೆ ಎಲ್ಲಿದೆ ಸ್ವಾಮಿ? ಎಲ್ಲಿ ಪ್ರಾರಂಭವಾಗಿದೆ? ಈ ವರ್ಷ ಆ ಆಸ್ಪತ್ರೆಗೆ ಎಷ್ಟು ಹಣ ಕೊಡುತ್ತೀರಿ? ಅಲ್ಲಿ ಪ್ರಾರಂಭ ಮಾಡಿದ್ದೀರಾ? ಇದು ನೀವು ಕಳೆದ ಸಲ ಬಜೆಟ್‌ನಲ್ಲಿ ಹೇಳಿರುವಂಥದ್ದು. ಇದು ಕಳೆದ ಸಲ ಬಜೆಟ್‌ನಲ್ಲಿ ಇಟ್ಟಿರುವಂಥ ಹಣ, ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ತುರ್ತು ಚಿಕಿತ್ಸಾ ಘಟಕ ನಿರ್ಮಾಣಕ್ಕೆ 25 ಕೋಟಿ ರೂಪಾಯಿ' ಎಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಹಣ ಖರ್ಚು

ಮಾಡಿದ್ದೀರಿ? ಅದಕ್ಕೆ ಈ ವರ್ಷ ಬಜೆಟ್‌ನಲ್ಲಿ ಎಷ್ಟು ಹಣ ಕೊಡುತ್ತೀರಿ? ಸ್ವಲ್ಪ ದೂರದೃಷ್ಟಿ ಇಟ್ಟುಕೊಂಡು ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ(ಕಾರ್ಮಿಕ ಸಚಿವರು): ಆ ಭಾಗದಲ್ಲಿ ಯಾವ ಆಸ್ಪತ್ರೆಯೂ ಇಲ್ಲವೆಂದು 8 ಕೋಟಿ ರೂಪಾಯಿಗಳನ್ನು north ಭಾಗಕ್ಕೆ ಒದಗಿಸಿರುವಂಥದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಆಯಿತು ಸಚಿವರೇ. ನಾನು ಅದನ್ನೇ ಕೇಳುತ್ತಿರುವುದು. 8 ಕೋಟಿ ರೂಪಾಯಿಗಳನ್ನು ಎಲ್ಲಿ investment ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಈ ಬಜೆಟ್‌ನಲ್ಲಿ ಎಷ್ಟು ಹಣ ಇದಕ್ಕಾಗಿ ಇಟ್ಟಿದ್ದೀರಿ? ಪ್ರಾರಂಭ ಮಾಡದೇ ಇದ್ದರೆ ಬಜೆಟ್‌ನಲ್ಲಿ ಏಕೆ ಹೇಳಬೇಕಾಗಿತ್ತು? ಮತ್ತು ಏಕೆ ಹಣ ಇಡಬೇಕಾಗಿತ್ತು? ಆಸ್ಪತ್ರೆ ಕೆಲಸ ಏನೋ ಆಗಿದೆ ಎಂದು ನಾವು ತಿಳಿದುಕೊಂಡಿದ್ದೆವು. ಅವರದ್ದು ಈ ಬಾರಿ ಈ ಬಜೆಟ್‌ನಲ್ಲಿ ಏನೂ ಚರ್ಚೆ ಇಲ್ಲ. ಈ ಬಜೆಟ್‌ನಲ್ಲಿ ನಾವು ಹಿಂದೆ ಎಷ್ಟು ಹಣ ಇಟ್ಟಿದ್ದೆವು, ಇಷ್ಟು ಹಣ ಖರ್ಚು ಮಾಡಿದ್ದೇವೆ, ಮುಂದಕ್ಕೆ ಮುಂದುವರಿಸುತ್ತೇವೆ, ಇದನ್ನು ಕಟ್ಟುತ್ತೇವೆಂದು ಹೇಳಬೇಕಾಗಿತ್ತಲ್ಲವೇ? ಇನ್ನೊಂದು ಬಜೆಟ್ ಅನ್ನು ಏಪ್ರಿಲ್‌ನಲ್ಲಿ ಮಂಡಿಸುತ್ತೀರಾ? ಇನ್ನು, ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ– 'ಗುಲ್ಬರ್ಗಾ ವಿಭಾಗದ ಹಿಂದುಳಿದ ಜಿಲ್ಲೆಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಮೂಲಕ 16 ಲಕ್ಷ ಬಡ ಕುಟುಂಬಗಳಿಗೆ ತಲಾ ರೂ. 1.50 ಲಕ್ಷದವರೆಗೆ ವೈದ್ಯಕೀಯ ವೆಚ್ಚವನ್ನು ಉಚಿತವಾಗಿ ಒದಗಿಸಲಾಗುವುದು ಎಂದು ಈ ಬಜೆಟ್‌ನಲ್ಲಿ ಹೇಳಿದ್ದೀರಿ. ಇದಕ್ಕೆ ನಾನು ಸ್ವಾಗತಬಯಸುತ್ತೇನೆ. ಇಷ್ಟೇ ಅಲ್ಲ, ಎಲ್ಲಾ BPL card holders ಗೆ ಈ ಯೋಜನೆಯನ್ನು ವಿಸ್ತರಣೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು. ಏಕೆಂದರೆ, ಬಡವರು ತುಂಬಾ ಕಷ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಅವರೇನಾದರೂ ಒಂದು heart operation ಮಾಡಿಸಬೇಕೆಂದರೆ ಸರ್ಕಾರ ಕೊಡುವಂಥದ್ದು 5 ಸಾವಿರ, 10 ಸಾವಿರ ರೂಪಾಯಿಗಳು, ಆದರೆ ಅಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತದೆ. cancer ಮುಂತಾದ ಬೇರೆ ಬೇರೆ ಖಾಯಿಲೆಗಳಿಗೆ ಸಂಬಂಧಪಟ್ಟ operation ಮಾಡಿಸಬೇಕಾದರೆ ಅವರಿರತಕ್ಕಂಥ ಜಮೀನುಗಳನ್ನೋ, ಮನೆಗಳನ್ನೋ ಅಡ ಇಟ್ಟು ಹಣ ತಂದು ಆಸ್ಪತ್ರೆಗಳಿಗೆ ಖರ್ಚು ಮಾಡುತ್ತಿದ್ದಾರೆ. ದಯಮಾಡಿ, ಎಲ್ಲಾ BPL card holders ಗೆ ಕೂಡ ಈ ಯೋಜನೆಯನ್ನು ವಿಸ್ತರಣೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಇನ್ನು, ವೈದ್ಯಕೀಯ ಶಿಕ್ಷಣ– ವೈದ್ಯಕೀಯ ಶಿಕ್ಷಣದ ಬಗ್ಗೆ ಈ ಬಜೆಟ್‌ನಲ್ಲಿ ಚಕಾರವಿಲ್ಲ. ಸಮ್ಮಿಶ್ರ ಸರ್ಕಾರವಿದ್ದಾಗ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ನಾವು ಇಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ಇದನ್ನು ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು

ಹೇಳಿದ್ದರು. ಆದರೆ, ಇವತ್ತು ಅದರ ಬಗ್ಗೆ ಈ ಬಜೆಟ್‌ನಲ್ಲಿ ಪ್ರಸ್ತಾಪವೇ ಎಲ್ಲ. ನಾವು ಕಳೆದ ಅಧಿವೇಶನದಲ್ಲಿಯೂ ಕೂಡ ಕೇಳಿದ್ದೆವು. ಸದ್ಯದ್ದಲಿಯೇ ಕಾಮಗಾರಿ ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಹಾಗಾದರೆ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮೇಲೇ ಏನಾದರೂ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆಯೇ? ರಾಮನಗರ ಜಿಲ್ಲೆಗೆ ಯಾವ ಯೋಜನೆ ಸಹ ಇಲ್ಲ. ನಿನ್ನೇ ಯಾರೋ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ರಾಮನಗರ ಜಿಲ್ಲೆಗೆ ಏನೂ ಕೊಟ್ಟಿಲ್ಲವೆಂದು ಹೇಳಿದರು. ರಾಮನಗರ ಜಿಲ್ಲೆಯಲ್ಲಿ ಜನಪದ ಲೋಕಕ್ಕೆ ಮಾತ್ರ 1 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಬಿಟ್ಟು ರಾಮನಗರ ಜಿಲ್ಲೆಗೆ ಒಂದು ಕಾಸೂ ಸಹ ಇಲ್ಲ. ಹೊಸ ಜಿಲ್ಲೆಗಳ ಅಭಿವೃದ್ಧಿಗೋಸ್ಕರ ಬೇರೆ ಬೇರೆ ಜಿಲ್ಲೆಗಳಿಗೆ ಹಣ ಕೊಟ್ಟಿದ್ದಾರೆ. ರಾಮನಗರ ಜಿಲ್ಲೆಗೆ ಒಂದು ರೂಪಾಯಿ ಸಹ ಬಿಡುಗಡೆಯಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಈ ದ್ವೇಷದ ರಾಜಕಾರಣವನ್ನು ಬಿಡಬೇಕು. ರಾಮನಗರ ಜಿಲ್ಲೆ ಈ ರಾಜ್ಯದಲ್ಲಿ ಇದೆಯೋ ಅಥವಾ ಎಲ್ಲವೋ ದಯಮಾಡಿ ಈ ದ್ವೇಷದ ರಾಜಕಾರಣ ಬಿಟ್ಟು ಹಣವನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ: ಈ ವರ್ಷ ಆಯಿತು. ಮುಂದಿನ ವರ್ಷವಾದರೂ ಹಾಸನ ಮತ್ತು ರಾಮನಗರ ಈ ಎರಡು ಜಿಲ್ಲೆಗಳಿಗೆ ಸರಿಸಮಾನವಾಗಿಯಾದರೂ ಹಣ ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಡಬೇಕು. ಹಾಸನ ಜಿಲ್ಲೆಯವರಾದ ನಾವು ಮಾಡಿರುವ ತಪ್ಪಾದರೂ ಏನು? ನಾವು ಹೊಸದಾಗಿ ಆರಿಸಿ ಬಂದ ಶಾಸಕರು. ನಾವು ಮಾಡಿದ ತಪ್ಪೇನಿದೆ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ,..

ಶ್ರೀ ಎಂ. ಚಂದ್ರಪ್ಪ: ಅದನ್ನೆಲ್ಲ ಸದಸ್ಯರು ಕೇಳಿಸಿಕೊಂಡಿದ್ದಾರೆ. ಅದನ್ನೇ ನೀವು ಓದುತ್ತೀದ್ದೀರಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ; ತಮ್ಮ ನೆರವಿಗೆ ಬರುತ್ತಿದ್ದೇನೆ. ತಾವು ಎಸ್.ಸಿ.ಎಸ್‌ಟಿ ನಿಗಮದ ಚೇರ್‌ಮನ್ ಆಗಿದ್ದೀರಿ. ನಿಮಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ. ಕಳೆದ ಬಾರಿ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದರು ಮತ್ತು ಅದರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ? ಎಂಬುದನ್ನು ನಿಗಮದ ಅಧ್ಯಕ್ಷರು ಈ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ಎಂದು ಹೇಳಬೇಕು. ಹಣವನ್ನು ಏಕೆ ಖರ್ಚು ಮಾಡಿಲ್ಲವೆಂದು ನೀವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದೀರಿ. ಸಮಾಜ ಕಲ್ಯಾಣ ಇಲಾಖೆಗೆ ಕೇವಲ ಹಣ ಇಟ್ಟರೆ ಸಾಲದು. ಕೆಲಸ ಮಾಡತಕ್ಕಂಥ ದಿಟ್ಟ ಮನಸ್ಸು ಬೇಕು. ಇವತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ 50% ಹಣ ಸಹ ಖರ್ಚು ಮಾಡಿಲ್ಲ. ಬೋರವೆಲ್ ಕೊರೆಯುವ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್ ಕೊರೆಯುವುದು ಒಂದು ವರ್ಷವಾದರೆ ಅದಕ್ಕೆ ಕರೆಂಟ್ ಕೊಡಿಸಲಿಕ್ಕೆ ಮೂರು ವರ್ಷ ಬೇಕು. ಇದಕ್ಕೆ ಒಂದು ಕಾಲಮಿತಿಯೊಳಗೆ ಕರೆಂಟ್ ಕೊಡಿಸುವ

ಕೆಲಸ ಸರ್ಕಾರ ಮಾಡಬೇಕು. ಇದಕ್ಕಾಗಿ ಹಣ ಬಿಡುಗಡೆ ಮಾಡಿದ್ದೀರಿ ಅದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ವಸತಿ ಮತ್ತು ಮುಜರಾಯಿ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. 25 ಸಾವಿರ ದೇವಸ್ಥಾನದ ಅಭಿವೃದ್ಧಿಗೆ 400 ಕೋಟಿ ರೂಪಾಯಿಗಳು. ಇದನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆಯೇ? ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ದಯಮಾಡಿ ಹೇಳಬೇಕು. ಸಂಯುಕ್ತ ಕರ್ನಾಟಕದಲ್ಲಿ 25 ಸಾವಿರ ದೇವಸ್ಥಾನದ ಅಭಿವೃದ್ಧಿ ಬಗ್ಗೆ ಬಂದಿದೆ. ಅವರು ಅಕ್ಕಾ ಸಮ್ಮೇಳನಕ್ಕೆ ಹೋದರು. ಆಗ ನಮಗೆ ತಹಸೀಲ್ದಾರ್‌ರವರು, ನಿಮ್ಮಲ್ಲಿರುವ ದೇವಸ್ಥಾನಗಳ ಬಗ್ಗೆ ಪಟ್ಟಿ ಕೊಡಿ ಎಂದು ಕೇಳಿದರು. ಅಕ್ಕಾ ಸಮ್ಮೇಳನಕ್ಕೆ ಹೋಗಿ ಹೊರ ದೇಶದಲ್ಲಿರುವ ಕನ್ನಡಿಗರ ಹತ್ತಿರ ದುಡ್ಡು ತರುತ್ತೇವೆ ನೀವು ಪಟ್ಟಿ ಕೊಡಿ ಎಂದು ಕೇಳಿದರು. ನಾವು ಇರುವಂಥ ಎಲ್ಲಾ ದೇವಸ್ಥಾನಗಳ ಪಟ್ಟಿ ಕಳುಹಿಸಿ ಕೊಟ್ಟರೂ ಒಂದು ರೂಪಾಯಿ ಬರಲಿಲ್ಲ. ಅಕ್ಕಾ ಸಮ್ಮೇಳನದಿಂದ ವಾಪಸ್ಸು ಬಂದರು ಒಂದು ರೂಪಾಯಿ ಬರಲಿಲ್ಲ ಈಗ ಮೊನ್ನೆ ಕೂಡ ಒಂದು ಪಟ್ಟಿ ತೆಗೆದುಕೊಂಡಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿರುವ ಹತ್ತು ಮುಜರಾಯಿ ದೇವಸ್ಥಾನಗಳ ಪಟ್ಟಿ ಕೊಡಿ ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದರು. ನಮ್ಮ ಹತ್ತಿರ ಹತ್ತು ದೇವಸ್ಥಾನಗಳ ಪಟ್ಟಿ ತೆಗೆದುಕೊಂಡರೂ ಅದರ ಬಗ್ಗೆ ಚಕಾರವೆತ್ತಿಲ್ಲ. ಈಗೇನು ಹೊಸದಾಗಿ ಮೊನ್ನೆ ಗಂಗಾಜಲ ವಿತರಣೆ ಮಾಡುವಂಥ ಸಂದರ್ಭದಲ್ಲಿ 25 ಸಾವಿರ ದೇವಸ್ಥಾನದ ಅಭಿವೃದ್ಧಿಗೆ 400 ಕೋಟಿ ರೂಪಾಯಿಗಳು ಕೊಡುವುದಾಗಿ ತಿಳಿಸಿದ್ದಾರೆ ಇದನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆಯೇ? ಎಲ್ಲಿ ದುಡ್ಡು ಕೊಡುತ್ತಾರೆ? ದಯಮಾಡಿ ಮುಖ್ಯಮಂತ್ರಿಗಳು ತಿಳಿಸಬೇಕು.

ಇನ್ನು ವಸತಿ ವಿಚಾರ ಹೇಳುವುದಾದರೆ, ಕಳೆದ ವರ್ಷ ಒಂದೇ ಮನೆ ಕಟ್ಟಲಿಕ್ಕೆ ಆಗಲಿಲ್ಲ. ಡಿಸೆಂಬರ್‌ನಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸುಮಾರು 25 ರಿಂದ 30 ಮನೆಗಳನ್ನು ಕೊಡಬೇಕೆಂದು ಒಂದು ಸುತ್ತೋಲೆ ಕಳುಹಿಸಿದ್ದಾರೆ. ಇದುವರೆವಿಗೂ ಆ ಪಟ್ಟಿ ವಾಪಸ್ಸು ತೆಗೆದುಕೊಳ್ಳುವಂಥ ಕೆಲಸ ಸರ್ಕಾರ ಮಾಡಿಲ್ಲ. ಅಂದರೆ, ಈ ವರ್ಷ ಮೀಸಲಿಟ್ಟಿರತಕ್ಕಂಥ ಹಣವನ್ನು ಬಹುಶ: ಈಗೇನು ಪಟ್ಟಿ ತೆಗೆದುಕೊಳ್ಳುತ್ತಿದ್ದಾರೆ ಅದಕ್ಕೆ ಬಿಡುಗಡೆಯಾಗಬಹುದು ವಿನಾ: ಮುಂದಿನ ವರ್ಷದ ಬಜೆಟ್‌ನಲ್ಲಿ ಒಂದೇ ಒಂದು ಹೊಸ ಮನೆ ತೆಗೆದುಕೊಳ್ಳತಕ್ಕಂಥ ಕೆಲಸ ವಸತಿ ಸಚಿವರಿಂದ ಆಗಿಲ್ಲ. ಈ ಮನೆ ಕಟ್ಟಲಿಕ್ಕೆ ಸರ್ಕಾರ 40 ಸಾವಿರಕ್ಕೆ ಏರಿಸಿದೆ. ಬಡವರು ಮನೆ ಕಟ್ಟಿಸಬೇಕಾದರೆ ಅವರ ಪರಿಸ್ಥಿತಿ ತುಂಬಾ ಶೋಚನಿಯವಾಗಿರುತ್ತದೆ. ಅತ್ಯಂತ ಹಿಂದುಳಿದವರು, ದಲಿತರು ಮನೆ ಕಟ್ಟಬೇಕಾದರೆ ಬಹಳ ಕಷ್ಟದಲ್ಲಿ ಮನೆಗಳನ್ನು ಕಟ್ಟುತ್ತಾರೆ. ಅವರು ಇಟ್ಟಿಗೆಯಲ್ಲಿ ಮನೆ ಕಟ್ಟಿ ಶೀಟ್ ಹೊದಿಸಿ ಬಿಟ್ಟರೆ ಆ ಗೋಡೆಗಳಿಗೆ ಪ್ಲಾಸ್ಟಿಂಗ್ ಇಲ್ಲ ನೆಲಕ್ಕೆ ಪ್ಲೋರಿಂಗ್ ಇಲ್ಲ. ಇಂಥ ಪರಿಸ್ಥಿತಿ ಇದೆ. ದಯಮಾಡಿ ಆ ಮನೆ ಕಟ್ಟುವ ವೆಚ್ಚವನ್ನು ಕನಿಷ್ಟ 40 ಸಾವಿರದಿಂದ 75 ಸಾವಿರ ರೂಪಾಯಿವರೆಗೆ

ಏರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕು.

ಶ್ರೀ ಸಿ.ಟಿ.ರವಿ: 40 ಸಾವಿರಕ್ಕೆ ಏರಿಸಿದ್ದೇವೆಲ್ಲ ಅದಕ್ಕಾದರೂ ಧನ್ಯವಾದ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಒಳ್ಳೆಯ ಕೆಲಸಕ್ಕೆ ನಾವು ಧನ್ಯವಾದ ಹೇಳಿದ್ದೇವೆ. ನೀವು ಹೇಳಿದ ಮೇಲೆ ಮನೆ ಕೊಡಬೇಕಲ್ಲವೇ ಹೋದ ವರ್ಷ ಒಂದು ಮನೆ ಕಟ್ಟಲಿಕ್ಕೆ ಆಗಲಿಲ್ಲ? ಬರೀ ಬಜೆಟ್‌ನಲ್ಲಿ ಹೇಳಿಬಿಟ್ಟರೆ ಆಯಿತಾ?

ಇನ್ನು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಬಹಳಷ್ಟು ಹಣವನ್ನು ಬೆಂಗಳೂರು ಅಭಿವೃದ್ಧಿಗೆ ಕೊಟ್ಟಿದ್ದಾರೆ ಏಕೆಂದರೆ, ಅದೇನು ಕೇಂದ್ರ ಸರ್ಕಾರದ ಅನುದಾನವೋ? ಅಥವಾ ಹಿಂದೆ ಇರುವ ಅನುದಾನವೋ? ನನಗೆ ಗೊತ್ತಿಲ್ಲ. ಬೆಂಗಳೂರು ಅಭಿವೃದ್ಧಿಗೆ ಸಾಕಷ್ಟು ಹಣ ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು " ನಗರಗಳಿಗೆ ಸಮಾನವಾಗಿ ಹಳ್ಳಿಗಳ ಅಭಿವೃದ್ಧಿ" ಎಂದು ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿಗೆ 5% ಕೊಟ್ಟಿದ್ದಾರೆ. ನಗರಗಳಿಗೆ ಜಾಸ್ತಿ ಹಣ ಕೊಟ್ಟಿದ್ದಾರೆ. ಏಕೆಂದರೆ, ನಗರದಲ್ಲಿ ವಾಸಿಸುವಂಥ ಜನ ಸ್ವಲ್ಪ ಬಿಜೆಪಿ ಪರ ಒಲವು ತೋರಿಸುತ್ತಾರೆಂದು ನಗರಗಳಿಗೆ ಜಾಸ್ತಿ ಹಣ ಕೊಡುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಇನ್ನೊಂದು ಮಾತನ್ನು ಕಳೆದ ಅಧಿವೇಶನದಲ್ಲಿ ಹೇಳಿದ್ದಾರೆ. ಮೈಸೂರು, ಮಂಗಳೂರು, ಉಡುಪಿ ನಗರಗಳಲ್ಲಿ ಮಾನೋ ರೈಲು ಪ್ರಾರಂಭಿಸಲು ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಇದು ಏನಾಯಿತು? ಈ ಬಾರಿ ಅದನ್ನು ಮುಂದುವರಿಸುತ್ತೀರಾ? ಹೋಗಲಿ ಅದನ್ನು ಮಾಡಿದ್ದೀರಾ? ಇಲ್ಲವೇ? ನನಗೆ ಗೊತ್ತಿಲ್ಲ ಆ ಭಾಗದವರು ಮಾನೋ ರೈಲು ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ಎಂದು ಹೇಳಬೇಕು. ಈ ಬಾರಿ ಬಜೆಟ್‌ನಲ್ಲಿ ಇದರ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಸಣ್ಣ ನಗರಗಳಿಗೆ 5 ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. ಕೇವಲ ಬಜೆಟ್‌ನಲ್ಲಿ ಹೇಳುವುದಕ್ಕಿಂತಲೂ ಕೆಲಸ ಮಾಡಿದರೆ ಆ ಭಾಗದ ಜನಗಳಿಗೆ ಅನುಕೂಲವಾಗುತ್ತದೆ.

ಇನ್ನು ಮೂಲ ಸೌಕರ್ಯ ಅಭಿವೃದ್ದಿಯ ಬಗ್ಗೆ ಹೇಳುವುದಾದರೆ, ವಿಮಾ ನಿಲ್ದಾಣದ ಬಗ್ಗೆ ಹೇಳುವುದಾದರೆ, ಮಾನ್ಯ ಪ್ರವಾಸೋದ್ಯಮ ಸಚಿವರು "ವಿಮಾನ ನಿಲ್ದಾಣ ಉದ್ಘಾಟನೆ ನೋಡಲು ದೇವೇಗೌಡರು ಬದುಕಿರಲಿ" "ಪಾಪಿಗಳು ಯಾವಾಗಳು ಚಿರಾಯು" ಎಂದು ಹೇಳಿದ್ದಾರೆ. ನಾವೆಲ್ಲ ಇಲ್ಲಿ ಕುಳಿತಿರತಕ್ಕಂಥವರು ಪಾಪಿಗಳು, ನಾವೆಲ್ಲ ಚಿರಾಯು, ಅವರೆಲ್ಲ ಪುಣ್ಯಾತ್ಮರು, ಅವರೆಲ್ಲ ನಾಳೆ ಸತ್ತು ಹೋಗಬೇಕಲ್ಲವೇ? ನಾನು ಏಕೆ ಈ ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆಂದರೆ, ವಾಜಪೇಯಿರವರು ಅಲ್ಲಿ ಆಸ್ಪತ್ರೆಯಲ್ಲಿ ಆಡ್ಮಿಟ್ ಆಗಿದ್ದಾಗೆ, ಹಾಗಾದರೆ ಅವರು ಪಾಪಿಗಳೆ? ಅವರು ಚಿರಾಯುವೆ? ಅವರು ಇನ್ನು ಬದುಕಿದ್ದಾರೆ, ಅವರು ಪಾಪಿಗಳೆ? ಅಡ್ವಾಣಿಯವರಿಗೆ 70 ವರ್ಷವಾಗಿದೆ ಅವರು ಪಾಪಿಯೆ?

ಮಂತ್ರಿಗಳು ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. ನಾನು ಮಾಗಡಿಯಲ್ಲಿ ನಿಂತು ಕೊಂಡು ಯಡಿಯೂರಪ್ಪನವರ ಬಗ್ಗೆ ಬಾಯಿಗೆ ಬಂದ ಹಾಗೆ ಮಾತನಾಡಬಹುದು, ಆದರೆ ನನ್ನ ಘನತೆಗೆ ತಕ್ಕದ್ದು ಅಲ್ಲ. ಅನೇಕ ಮಂತ್ರಿಗಳು ಮಾತನಾಡುವುದನ್ನು ಮಾಧ್ಯಮದಲ್ಲಿ ನೋಡಿದ್ದೇವೆ. ಎಲ್ಲರ ಮೇಲೆ ಬಾಯಿಗೆ ಬಂದ ಹಾಗೆ ಬೈದು ಎಲ್ಲರೂ ತಿರುಗಿ ಬಿದ್ದಿರತಕ್ಕಂಥದ್ದುನ್ನು ನೋಡಿದ್ದೇವೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಕಡಿವಾಣ ಹಾಕಬೇಕೆಂದು ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಒಟ್ಟಾರೆಯಾಗಿ ಹೇಳುವುದಾದರೆ, ಮಠ ಮಾನ್ಯಗಳಿಗೆ ಹಣ ಕೊಟ್ಟಿರುವುದರ ಬಗ್ಗೆ ಮಾನ್ಯ ಸದಸ್ಯರೊಬ್ಬರು ನಾವು ಪೂಜೆ ಮಾಡುವುದಕ್ಕೆ ಇರುವುದು ಎಂದರು. ನಾವು ಬೀದಿಯಲ್ಲಿ ಹೇಳುತ್ತೇವೆ, ಮಠ ಮಾನ್ಯಗಳಿಗೆ ದುಡ್ಡು ಕೊಟ್ಟಿರುವುದು ತಪ್ಪು ಎಂದು ಹೇಳಲ್ಲ. ಸರ್ಕಾರದ ದುಡ್ಡ ಖರ್ಚು ಮಾಡುವಾಗ ಅದಕ್ಕೆ ಏನಾದರೊಂದು ರೂಪುರೇಷೆ ಬೇಕಲ್ಲವೇ ಸರ್ಕಾರದ ದುಡ್ಡು ಖರ್ಚು ಮಾಡಬೇಕಾದರೆ ನಾವು ಪತ್ರಕ್ಕಾಗಿ ಖರ್ಚು ಮಾಡುತ್ತೇವೆ, ಏತಕ್ಕಾಗಿ ಕೊಟ್ಟಿದೇವೆ ಎನ್ನುವ ಲೆಕ್ಕ ಬೇಕಲ್ಲವೇ? ನಮಗೆ ಶಾಸಕರ ನಿಧಿ ಎಂದು ಕೊಡುತ್ತಿರಲ್ಲ ಶಾಸಕರು ಮನಸ್ಸೋ ಇಚ್ಚೆ ಖರ್ಚು ಮಾಡುವುದಕ್ಕಾಗುತ್ತದೆಯೆ? ಇಂತಿಂಥ ಕಾರ್ಯಕ್ರಮಕ್ಕೆ ಖರ್ಚು ಮಾಡಬೇಕೆಂದು ನಮಗೊಂದು ಕಾರ್ಯಕ್ರಮ ಹಾಕಿ ಕೊಟ್ಟಿದ್ದೀರಿ. ಆ ರೀತಿಯ ಗೈಡ್‌ಲೈನ್ ಇಶ್ಯೂ ಮಾಡಿ. ಮಠ ಮಾನ್ಯಗಳಿಗೆ ಯಾವ ರೀತಿ ಖರ್ಚು ಮಾಡಬೇಕೆಂದು ಒಂದು ಗೈಡ್‌ಲೈನ್ ಕೊಡಿ. ಸುಮಾರು 100 ಕೋಟಿ ವೀರಶೈವ ಮಠಗಳಿಗೆ, 30 ಕೋಟಿ ಬೇರೆಯವರಿಗೆ. ಒಕ್ಕಲಿಗರ ಸಮುದಾಯಕ್ಕೆ ಏನು ಕೊಟ್ಟಿದ್ದಾರೆಂದು ರವಿಯವರು ಹೇಳಬೇಕಲ್ಲವೇ ನಿನ್ನೆ ಚುಂಚನಗಿರಿಗೆ ಹೋಗಿದ್ದೀರಲ್ಲ ಅವರಿಗೆ ಸ್ವಲ್ಪ ಕೊಡಬೇಕಲ್ಲವೆ ಪಟ್ಟನಾಯಕನಹಳ್ಳಿ ಸ್ವಾಮಿಗಳಿಗೆ ಕೊಡಬೇಕಲ್ಲವೇ ಕೇಳಬೇಕೆನ್ರೀ ನೀವು ಕೇಳಿದೇ ಕೊಟ್ಟಿದ್ದೀರಲ್ಲ? ಅವರು ಕಣ್ಣಿಗೆ ಕಾಣಲಿಲ್ಲವೇ?

ಶ್ರೀ ಕರಡಿ ಸಂಗಣ್ಣ: ಈಗ ಮಾನ್ಯ ಸದಸ್ಯರು ವೀರಶೈವ ಮಠಗಳಿಗೆ 100 ಕೋಟಿ ಕೊಟ್ಟಿದ್ದಾರೆಂದು ಹೇಳಿದರು. ಕೊಪ್ಪಳ್‌ದಲ್ಲಿ ಗವಿಮಠ ಎಂದು ಇದೆ. ಸಿದ್ದಗಂಗಾ ಮಠದ ರೀತಿಯಲ್ಲಿ ಮೂರು ಸಾವಿರ ಮಕ್ಕಳು ಅಲ್ಲಿ ಓದುತ್ತಾರೆ. ಮಾನ್ಯ ಜಿಲ್ಲಾ ಮಂತ್ರಿಗಳಾದ ಕಾರಜೋಳ್‌ರವರು ಇಲ್ಲಿಯೇ ಇದ್ದಾರೆ. ಅದಕ್ಕೆ ಕೊಡುವ ವ್ಯವಸ್ಥೆ ಮಾಡುತ್ತೀರಾ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಠ ಗಳಿಗೆ ಕೊಡುವುದಾದರೆ ನೀವು ಎಲ್ಲಾ ಮಠಗಳಿಗೆ ಕೊಡಿ ನಮ್ಮದೇನೂ ತಕರಾರಿಲ್ಲ. ರವಿಯವರು ಹೇಳಿದ ಹಾಗೆ ನಾವು ಸ್ವಾಗತಿಸುತ್ತೇವೆ. ಆದರೆ, ಚುಂಚನಗಿರಿಗೆ ಏಕೆ ಕೊಡಲಿಲ್ಲವೆಂದು ರವಿಯವರು ಕೇಳಲಿಲ್ಲ? ಪಟ್ಟನಾಯಕನಹಳ್ಳಿ ಮಠಕ್ಕೆ ಏಕೆ ಕೊಡಲಿಲ್ಲವೆಂದು ರವಿಯವರು ಕೇಳಲಿಲ್ಲ?

ಶ್ರೀ ಸಿ.ಟಿ. ರವಿ: ಇದು ಆರಂಭ, ಎಲ್ಲಾ ಮಠಗಳಿಗೂ ಕೊಡೋಣ, ನೀವು ಕೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಮಠಗಳಿಗೆ ಏಕೆ ದುಡ್ಡು ಕೊಡುತ್ತಿದ್ದಾರೆಂದರೆ, ಅವರು ಕೊಟ್ಟಿರುವ ಹೇಳಿಕೆಯನ್ನು ನಾನು ಓದಿದೆ. ನಾನು ಅಧಿಕಾರಕ್ಕೆ ಬಂದಿದ್ದೇ ಮಠಗಳಿಂದ, ನಿಮ್ಮ ಆರ್ಶೀವಾದದಿಂದ ಯಾರೂ ಬೇಸರ ಮಾಡಿಕೊಳ್ಳಬೇಡಿ ಹಣವನ್ನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಕೊಡುವುದು ತಪ್ಪು ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ.ಟಿ.ರವಿ: ಆದಿಚುಂಚನಗಿರಿ ಮಠಕ್ಕೂ ಕೊಡಬೇಕೆಂದು ಕೇಳಿ. ಉತ್ತರ ಕೊಡುವಾಗ ಕೊಡುವ ಹಾಗೆ ನಾವು ಒತ್ತಾಯ ಮಾಡೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಆದಿಚುಂಚನಗಿರಿ ಮಠ, ಪಟ್ಟನಾಯಕನಹಳ್ಳಿ ಮಠಗಳು ನಿಮ್ಮ ಕಣ್ಣಿಗೆ ಕಾಣುವುದಿಲ್ಲವೇ ಅದಕ್ಕೂ ಕೊಡಬೇಕಲ್ಲವೇ ಏಕೆ ಬಿಟ್ಟಿರಿ? ನೀವು ವಕಾಲತ್ತು ವಹಿಸಬೇಕಲ್ಲವೇ ನೀವು ಸ್ವಾಮಿಗಳ ಹತ್ತಿರ ಹೋಗಬೇಕಲ್ಲವೇ ನಮಗೆ ಕೊಡಿಸುವ ತಕಾತ್ತು ಎಲ್ಲ ಸ್ವಾಮಿ ಅವರಿಗೆ ಇರುವುದು. ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ನನ್ನ ಕುರ್ಚಿ ಅಲ್ಲಾಡುತ್ತಿದೆ ಎಂದು ಹೇಳಿದ್ದಾರೆ. ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ವಿರೋಧ ಪಕ್ಷದವರ್‍ಯಾರು ಅವರ ಕುರ್ಚಿಯನ್ನು ಅಲ್ಲಾಡಿಸುತ್ತಿಲ್ಲ. ಅವರ ಪಕ್ಷದವರೇ ಅಲ್ಲಾಡಿಸುತ್ತಿರಬಹುದು. ಅವರ ಕುರ್ಚಿ ಏನಾದರೂ ಅಲ್ಲಾಡಿದರೆ ಮುಂದಿನ ದಿವಸ ಮಠಾಧೀಶರು ಅವರ ರಕ್ಷಣೆಗೆ ಬರಲಿ ಎಂದು ಮಠ ಮಾನ್ಯಗಳಿಗೆ ಹಣ ಕೊಡುತ್ತಿರುವುದು. ಅವರ ವಿಶ್ವಾಸವನ್ನು ಗಳಿಸಲಿಕ್ಕೆ ಕೊಡುತ್ತಿರುವುದು, ಎಲ್ಲರಿಗೂ ಕೊಡಿ ಸ್ವಾಮಿ ನಮ್ಮದೇನೂ ತಕರಾರಿಲ್ಲ. ಅವರ ಕೈಯಲ್ಲಿ ಸರ್ಕಾರ ನಡೆಸಲಿ ಇದಕ್ಕೆ ನಮ್ಮದೇನು ತಕರಾರಿಲ್ಲ. ಎಲ್ಲರಿಗೂ ಕೊಡಿ ಎಂದು ಕೇಳಲಿಕ್ಕೆ ಇಚ್ಚೆಪಡುತ್ತೇನೆ.

ಕೊನೆಯದಾಗಿ, ಈ ಸರ್ಕಾರ ಯಾವ ರೀತಿ ಇದೆ ಎಂದರೆ, "ಕೋತಿಯ ಕೈಗೆ ಮಾಣಿಕ್ಯ ಕೊಟ್ಟ ಹಾಗೆ" ಕೋತಿಗೆ ಮಾಣಿಕ್ಯ ಎಂದರೆ ಗೊತ್ತಾ ಸ್ವಾಮಿ? ಅದು ಹೇಗೆ ಬೇಕಾದರೂ ಆಡಿಸುತ್ತದೆ. ಹಾಗೆ ಮನಸ್ಸೋ ಇಚ್ಚೆ ಹಣ ಖರ್ಚು ಮಾಡತಕ್ಕಂಥದ್ದಲ್ಲ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗಬೇಕು, ರಾಜ್ಯದ ಜನತೆಗೆ ಒಳ್ಳೆಯದಾಗಬೇಕು, ಆ ದಿಕ್ಕಿನಲ್ಲಿ ಮುಖ್ಯಮಂತ್ರಿಗಳು ಹಣವನ್ನು ಖರ್ಚು ಮಾಡಬೇಕು. ಇದು ಮನಸ್ಸೋ ಇಚ್ಚೆ ಹಣವನ್ನು ಕೊಟ್ಟಿರುವ ಬಜೆಟ್ ಎಂದು ಹೇಳಿ ಇದನ್ನು ವಿರೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಆರ್.ಧ್ರುವನಾರಾಯಣ್(ಕೊಳ್ಳೇಗಾಲ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ 2009-10ನೇ ಸಾಲಿನ ಬಜೆಟ್ ಬಹಳ ನೀರಸವಾದಂಥ ಬಜೆಟ್ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈ ಬಜೆಟ್‌ನಲ್ಲಿ ವಿಶೇಷವಾದಂಥ ಒತ್ತನ್ನು ಯಾವ ಇಲಾಖೆಗೆ ಕೊಡಬೇಕಾಗಿತ್ತೋ ಅಷ್ಟು ಒತ್ತನ್ನು ಅವರು ಕೊಟ್ಟಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಶಿಕ್ಷಣ ಮತ್ತು ಸಮಾಜಕಲ್ಯಾಣ

ಇಲಾಖೆಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿತ್ತು. ಆದರೆ, ಈ ಎಲ್ಲಾ ಇಲಾಖೆಗಳಿಗೆ ಹೆಚ್ಚಿನ ಒತ್ತನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ಸಿ.ಟಿ.ರವಿಯವರು ಇಲ್ಲಿ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳನ್ನು ಬಹಳ ಚೆನ್ನಾಗಿ ಓದಿದರು. ಮಾನ್ಯ ಬಾಲಕೃಷ್ಣರವರೂ ಸಹ ಕೆಲವು ಪತ್ರಿಕೆಗಳನ್ನು ಇಲ್ಲಿ ಓದಿದರು. ಪ್ರಜಾವಾಣಿ ಪತ್ರಿಕೆಯಲ್ಲಿ ಈ ಬಜೆಟ್‌ಗೆ ಸಂಬಂಧಪಟ್ಟಂತೆ "ಬಜೆಟ್‌ನ ಎಫೆಕ್ಟ್" ಎಂದು ಒಂದು ಪದ್ಯ ಬಂದಿದೆ ಆ ಪದ್ಯವನ್ನು ಇಲ್ಲಿ ಓದುವುದಕ್ಕೆ ಇಚ್ಚೆಪಡುತ್ತೇನೆ.

"ಮಠಗಳನ್ನು ಮನದಲ್ಲಿಟ್ಟು, ಮಠಗಳಿಗೆ ಕೋಟಿ ಕೋಟಿ ಕೊಟ್ಟು,
ಗುಡಿಸಲುಗಳಿಗೆ ಕೊಳ್ಳಿ ಇಟ್ಟು, ದುಡಿಯುವ ರೈತನಿಗೆ ಗುಂಡಿಟ್ಟು,
ನಿರುದ್ಯೋಗಿಗಳಿಗೆ ಮೈ ಮೇಲೆ ಬರೆ ಇಟ್ಟು ಗಹ ಗಹಿಸಿ ನಗುತ್ತಿದೆ ರಾಜ್ಯ ಬಜೆಟ್"

ಈ ಪದ್ಯ ಬಹಳ ಅರ್ಥಪೂರ್ಣವಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಈ ಪದ್ಯವನ್ನು ನಾನು ಮಾನ್ಯ ಕುಮಾರ ಸ್ವಾಮಿಯವರಿಗೆ ಕೊಟ್ಟಿದ್ದೆ. ಆದರೆ, ನೀವು ಇದನ್ನು ಓದಿಬಿಟ್ಟಿರಿ.

ಶ್ರೀ ಆರ್.ಧ್ರುವನಾರಾಯಣ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಮೇಲೆ ನಮಗೆ ನಿಜವಾಗಿಯೂ ಕೂಡ ಅಭಿಮಾನ ಇತ್ತು. ಅಂದರೆ, ಇವರು ರೈತರ ಪರ ಹೋರಾಟಗಾರರು, ರೈತ ನಾಯಕರು ಮತ್ತು ರೈತರ ಪರವಾಗಿ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುತ್ತಾರೆಂಬ ನಂಬಿಕೆ ನಮಗೂ ಕೂಡ ಇತ್ತು. ಏಕೆಂದರೆ, ಅವರು ವಿರೋಧಪಕ್ಷದ ನಾಯಕರಾಗಿ ಬಹಳಷ್ಟು ಚಳುವಳಿಗಳನ್ನು ಮಾಡಿ ರೈತಪರ ಸಂಘಟನೆಗಳನ್ನು ಮಾಡಿರತಕ್ಕಂಥದ್ದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಆದರೆ, ಈ ವರ್ಷ ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚಿನ ಒತ್ತನ್ನು ಅವರು ಕೊಟ್ಟಿಲ್ಲ. ಕಳೆದ ಸಾರಿ ಕೃಷಿಗೆ ಸುಮಾರು 2491.63 ಕೋಟಿ ರೂಪಾಯಿ ಕೊಟ್ಟಿದ್ದರು. ಈ ಸಾರಿ ಸುಮಾರು 2122.13 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಂದರೆ, 369 ಕೋಟಿ ರೂಪಾಯಿ ಹಣವನ್ನು ಕಡಿಮೆ ಮಾಡಿದ್ದಾರೆ. ಈ ಸಾರಿ ಯೋಜನಾ ಗಾತ್ರ 29,500 ಕೋಟಿ ಇದೆ. ಅಂದರೆ, ಯೋಜನಾ ಗಾತ್ರವನ್ನು ಹೆಚ್ಚು ಮಾಡಿದ್ದಾರೆ. ಆದ್ದರಿಂದ, ಇವರು ಕೃಷಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿತ್ತು. ಕೃಷಿಗೆ ಹೆಚ್ಚಿನ ಒತ್ತನ್ನು ಏಕೆ ಕೊಟ್ಟಿಲ್ಲವೆಂದು ಮಾನ್ಯ ಸಿ.ಟಿ.ರವಿಯವರು ಹೇಳಬೇಕು? ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡು ಮತ್ತು ಹಸಿರು ಶಾಲನ್ನು ಹೊದಿಸಿಕೊಂಡಂಥವರು ರೈತರಿಗೆ ಹೆಚ್ಚಿನ ಹಣವನ್ನು ವಿನಿಯೋಗೆ ಮಾಡಬೇಕಾಗಿತ್ತು. ಇವತ್ತಿನ ದಿವಸ ಬಹಳಷ್ಟು ಜನ ರೈತರ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಕಾರಣ ಏನೆಂದರೆ, ಅವರಿಗೆ ಕೃಷಿ ಉದ್ಯೋಗದ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ ಆದ್ದರಿಂದ, ರೈತರಿಗೆ ವಿಶೇಷವಾದಂತ ಪ್ಯಾಕೇಜ್ ಕೊಡವ ಬಗ್ಗೆ ಮತ್ತು ಕೃಷಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕಂಥದ್ದರ ಬಗ್ಗೆ ನಿಮ್ಮ ಕಾರ್ಯಕ್ರಮಗಳಲ್ಲಿ ಏನು ಮಾಡಲಾಗಿದೆ ಎಂಬುದನ್ನು ತಾವು ಹೇಳಬೇಕು. ಋಷ್ಕಿ

ಬೆಳೆ ಬೆಳೆಯತಕ್ಕಂಥ ಸಣ್ಣ ರೈತರಿಗೆ 1 ಸಾವಿರ ಕೊಡತಕ್ಕಂಥದ್ದಲ್ಲ. ಋಷ್ಕಿ ಬೆಳೆ ಬೆಳೆಯತಕ್ಕಂಥದ್ದರ ಬಗ್ಗೆ ಪ್ರೋತ್ಸಾಹ ನೀಡತಕ್ಕಂಥ ನಿಟ್ಟಿನಲ್ಲಿ ತಾವು ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು. ಆದರೆ, ಇದಕ್ಕೆ ಹೆಚ್ಚಿನ ಒತ್ತನ್ನು ತಾವು ಕೊಟ್ಟಿಲ್ಲ. ಹಾಗೆಯೇ, ಕೃಷಿ ಸಂಶೋಧನೆಗೆ ಕೂಡ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಹಣವನ್ನು ಹಂಚಿಕೆ ಮಾತಕ್ಕಂಥ ಕೆಲಸವನ್ನು ತಾವು ಮಾಡುತ್ತಿದ್ದೀರಷ್ಟೆ. ಮಠ ಮಾನ್ಯಗಳ ಬಗ್ಗೆ ಈಗಾಗಲೇ ಅನೇಕ ಜನ ಸದಸ್ಯರು ಹೇಳಿದರು. ಮಠ ಮಾನ್ಯಗಳ ಬಗ್ಗೆ ನನಗೂ ಕೂಡ ಗೌರವ ಇದೆ. ಪಾಳೇಗಾರರ ಆಡಳಿತದಲ್ಲಿ ಮತ್ತು ರಾಜ ಮಹಾರಾಜರ ಆಡಳಿತದಲ್ಲಿ ಈ ರೀತಿಯಾದ ಹಂಚಿಕೆ ಪದ್ಧತಿ ಇತ್ತು. ರಾಜರ ಹತ್ತಿರ ಹೋಗಿ ಕೇಳಿಕೊಂಡರೆ ಅವರು ಹಂಚಿಕೆ ಮಾಡುತ್ತಿದ್ದರು. ಆದರೆ, ಇವತ್ತಿನ ದಿವಸ ಪ್ರಜಾಪ್ರಭುತ್ವ ಆಡಳಿತ ನಮ್ಮ ದೇಶದಲ್ಲಿದೆ ಮತ್ತು ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಆಡಳಿತ ಇರತಕ್ಕಂಥ ಎರಡನೇ ಒಂದು ದೊಡ್ಡ ರಾಷ್ಟ್ರದಲ್ಲಿ ಪಾಳೇಗಾರರ ಮತ್ತು ರಾಜಮಹಾರಾಜರ ಆಡಳಿತವನ್ನು ಈ ಒಂದು ಬಿಜೆಪಿ ಸರ್ಕಾರದವರು ತರುತ್ತಿದ್ದಾರೆ. ನಿಜವಾಗಿಯೂ ಇದೊಂದು ಬಹಳ ದೊಡ್ಡ ದುರಂತ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವರು ಕೃಷಿಗೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಆದ್ದರಿಂದ, ಕೃಷಿಗೆ ಹೆಚ್ಚಿನ ಒತ್ತನ್ನು ಕೊಡುವ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಕಳೆದ ಸಾಲಿನಲ್ಲಿ ನಾವುಗಳು ಶಾಸಕರಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಅಬ್ದುಲ್ ಕಲಾಂರವರು ಇಲ್ಲಿಗೆ ಬಂದು ಸುಮಾರು ಒಂದು ಗಂಟೆಯವರೆಗೆ PURA program ಬಗ್ಗೆ ಹೇಳಿದರು. PURA program ನ ಹೆಸರನ್ನು ನೀವು ಹೇಳುತ್ತಿದ್ದೀರಷ್ಟೆ. ಆ PURA program ಅಡಿಯಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಮಾಡಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ನೀವು ಹಮ್ಮಿಕೊಂಡಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಇಲಾಖೆಯಲ್ಲಿ ರೈತ ಸಂಪರ್ಕ ಕೇಂದ್ರಗಳಿವೆ. ರೈತ ಸಂಪರ್ಕ ಕೇಂದ್ರಗಳು ಇರತಕ್ಕಂಥ ಉದ್ದೇಶ ಏನೆಂದರೆ, ಇಡೀ ಆ ಭಾಗದ ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ ಕೊಡತಕ್ಕಂಥ ಕೇಂದ್ರಗಳಾಗಬೇಕು. ಆದರೆ, ಇವತ್ತಿನ ದಿವಸ ರೈತ ಸಂಪರ್ಕ ಕೇಂದ್ರಗಳು ಕೇವಲ ಗೊಬ್ಬರ ಮತ್ತು ಔಷಧಿಗಳನ್ನು ಮಾರಾಟ ಮಾಡತಕ್ಕಂಥ ಕೇಂದ್ರಗಳಾಗಿರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯಲ್ಲಿ ಇವತ್ತಿನ ದಿವಸ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಒಂದೊಂದು ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿಗಳೆ ಇರುವುದಿಲ್ಲ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಕೂಡ ಕೃಷಿ ಅಧಿಕಾರಿಗಳ ಸಮಸ್ಯೆ ಇದೆ. ಆದ್ದರಿಂದ, ತತಕ್ಷಣ ಕೃಷಿ ಇಲಾಖೆಯಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸ ಕೂಡ ಆಗಬೇಕಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮ ಚಾಮರಾಜನಗರ ಜಿಲ್ಲೆ ಕರ್ನಾಟಕ ರಾಜ್ಯದ ಕೊನೆಯ ಜಿಲ್ಲೆಯಾಗಿದೆ. ನಮ್ಮ

ಜಿಲ್ಲೆಯ ಪಕ್ಕದಲ್ಲಿ ತಮಿಳುನಾಡು ರಾಜ್ಯದ ಸತ್ಯಮಂಗಲ ಮತ್ತು ಕೊಯಮತ್ತೂರು ಜಿಲ್ಲೆಗಳು ಸಿಗುತ್ತದೆ. ಸತ್ಯಮಂಗಲ ಮತ್ತು ಕೊಯಮತ್ತೂರು ಬೆಂಗಳೂರಿಗಿಂಥ ನಮ್ಮ ಜಿಲ್ಲೆಯಿಂದ ಬಹಳ ಹತ್ತಿರದಲ್ಲಿವೆ. ಆ ಭಾಗಕ್ಕೆ ತಮಿಳುನಾಡು ಸರ್ಕಾರ ಮೊದಲಿನಿಂದಲೂ ಹೆಚ್ಚಿನ ಒಂದು ಒತ್ತನ್ನು ಕೊಡುತ್ತಾ ಬಂದಿದ್ದಾರೆ. ಅಂದರೆ, ಅವರ ಬಜೆಟ್‌ನಲ್ಲಿ ಹೆಚ್ಚಿನ ಒತ್ತನ್ನು ಗ್ರಾಮೀಣಾಭಿವೃದ್ಧಿಗೆ ಕೊಡುತ್ತಾ ಇದ್ದಾರೆ. ತಮಿಳುನಾಡಿನಲ್ಲಿರುವ ಪ್ರತಿಯೊಂದು ಗ್ರಾಮದಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ನ್ಯವಸ್ಥೆ ಇದೆ. ಮತ್ತೆ ಪ್ರತಿಯೊಮದು ಗ್ರಾಮದಲ್ಲಿ ಕಣಗಳು ಇವೆ. ಮತ್ತೆ ಗ್ರಾಮೀಣ ರಸ್ತೆ, ತಾಲ್ಲೂಕು ರಸ್ತೆ, ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ ಇರಬಹುದು, ಎಲ್ಲಾ ಭಾಗದಲ್ಲಿ ಒಂದೇ ರೀತಿಯಾದ ರಸ್ತೆಗಳಿವೆ. ಗ್ರಾಮೀಣಾಭಿವೃದ್ಧಿಯಲ್ಲಿ ಅವರು ಪ್ರತಿಯೊಂದು ಗ್ರಾಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರತಕ್ಕಂಥದ್ದನ್ನು ನಾವು ಹೋಗಿ ನೋಡಿದ್ದೇವೆ. ನಮ್ಮಲ್ಲಿ ಸುವರ್ಣ ಗ್ರಾಮ ಎಂದು ಮಾಡಿಕೊಂಡು ಒಂದು ಕ್ಷೇತ್ರದಲ್ಲಿ ಕೇವಲ 5 ಅಥವಾ 10 ಗ್ರಾಮ ಅಭಿವೃದ್ಧಿ ಹೊಂದಿದರೆ ಸಾಲದು. ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ದಯವಿಟ್ಟು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ, ಈ ಸಾರಿ ಅನುದಾನವನ್ನು ಕಡಿಮೆ ಮಾಡಿದ್ದಾರೆ. ಕಳೆದ ವರ್ಷ 1593 ಕೋಟಿ ರೂಪಾಯಿ ನಿಗದಿ ಪಡಿಸಲಾಗಿತ್ತು. ಈ ಸಾರಿ 1502 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಂದರೆ, ಈ ಬಾರಿ 90 ಕೋಟಿ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕಡಿಮೆ ಮಾಡಿದ್ದಾರೆ. ಕೃಷಿ ಬಗ್ಗೆ ಹೆಚ್ಚಿನ ಒತ್ತನ್ನು ತಾವು ಏಕೆ ಕೊಟ್ಟಿಲ್ಲವೆಂಬ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ವಿಷಯವಾಗಿ ಮಾನ್ಯ ಸಿ.ಟಿ.ರವಿಯವರು ಬೆಳಕು ಚೆಲ್ಲಬಹುದಾಗಿತ್ತು ಮತ್ತು ಸಲಹೆ ಕೊಡಬಹುದಾಗಿತ್ತು. ಆದರೆ, ಅವರು ಕೇವಲ ಹೊಗಳುಭಟ್ಟರ ತರಹ ಹೊಗಳಿದ್ದಾರಷ್ಟೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೆಚ್ಚಿನ ಒತ್ತನ್ನು ಕೊಟ್ಟು, ಪಕ್ಕದ ರಾಜ್ಯದಲ್ಲಿ ಯಾವ ರೀತಿಯಾಗಿ ಅಭಿವೃದ್ಧಿ ಹೊಂದುತ್ತಿದೆಯೋ ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರುವ ಹಳ್ಳಿಗಳು ಕೂಡ ಬದಲಾವಣೆಯಾಗಬೇಕೆಂದ ಅಭಿಪ್ರಾಯ ನನ್ನದಾಗಿದೆ. ಮನ್ಯ ಶಿಕ್ಷಣ ಇಲಾಖೆಯ ಸಚಿವರು ಇಲ್ಲಿಯೇ ಇದ್ದಾರೆ. ಶಿಕ್ಷಣದ ಬಗ್ಗೆ ಹೇಳುವುದಾದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಶಿಕ್ಷಣ ಸಚಿವರಾದ ಮೇಲೆ ನಾನು ಅವರನ್ನು ಹಲವಾರು ಬಾರಿ ಭೇಟಿ ಮಾಡಿದ್ದೇನೆ. ಅನುದಾನದ ಕೊರತೆ ಇದೆ ಎಂದು ಅವರೇ ನನಗೆ ಹೇಳಿದ್ದಾರೆ. ಈ ಸಾರಿ ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಎಲ್ಲಿ ಬಿಡುಗಡೆ ಮಾಡಿದ್ದಾರೆ? ನಮ್ಮ ಕ್ಷೇತ್ರದಲ್ಲಿ ಶಾಲಾಕೊಠಡಿಗಳ ಸಮಸ್ಯೆಯಿರುವುದರಿಂ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳು ನೆಲದ ಮೇಲೆ ಕುಳಿತುಕೊಂಡು ಪಾಠ ಕೇಳತಕ್ಕಂಥ ಪರಿಸ್ಥಿತಿ ಇದೆ. ಕಳೆದ ಸಲ ಹೊಸ ಕಾಲೇಜು ಮಂಜೂರು ಮಾಡಿಕೊಟ್ಟಿದ್ದೀರಿ. ಆದರೆ, ಅದಕ್ಕೆ ಅನುದಾನು ಬಿಡುಗಡೆಯಾಗಿಲ್ಲ ಮತ್ತೆ ಈ ಕಟ್ಟಡ ಮತ್ತು ಡೆಸ್ಕ್ ಹಾಗೂ ಬೆಂಚ್‌ಗಳ ಸಮಸ್ಯೆ ಇದೆ. ನಿಮ್ಮ ಬಜೆಟ್‌ನಲ್ಲಿ ಈ ಸಾರಿ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೀರಾ?

ಹೆಚ್ಚಿನ ಒತ್ತನ್ನು ಶಿಕ್ಷಣಕ್ಕೆ ಕೊಟ್ಟಿಲ್ಲ. ಈ ಸಾರಿ ಅನುದಾನ ಕೊಟ್ಟಿದ್ದಾರೆಯೇ ಎಂದು ಮತ್ತು ಈ ಸಾರಿ ನಮಗೆ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು. ನಿಮ್ಮ ಹತ್ತಿರ ಅನುದಾನ ಇದೆಯೇ? ಇಲ್ಲವೆಂದು ಹೇಳಿ? ಈ ಸಾರಿಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಮತ್ತು ಗ್ರಾಮೀಣಾಭಿವೃದ್ಧಿಗೆ ಹಾಗೂ ಕೃಷಿಗೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಈ ಎಲ್ಲಾ ಕ್ಷೇತ್ರಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆ. ಅವರು ಬಹಳ ಒಳ್ಳೆಯ ಮಂತ್ರಿಗಳು. ಅವರ ಬಗ್ಗೆ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರ ಮೇಲೆ ನನಗೆ ಬಹಳ ಅಭಿಮಾನ ಇದೆ. ಒಂದು ಪತ್ರವನ್ನು ಅವರುಗಳಿಗೆ ಕೊಟ್ಟರೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಕ್ಷಣ ನನಗೊಂದು ಪತ್ರ ಬರೆಯುತ್ತಾರೆ. ನಿಜವಾಗಿಯೂ ಕೂಡ ನನಗೆ ಸಂತೋಷವಾಗುತ್ತದೆ. ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಒದಗಿಸುವುದಕ್ಕೆ ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಬೇಕು. ನಂಜುಂಡಪ್ಪ ವರದಿ ಪ್ರಕಾರ ನಮ್ಮ ಜಿಲ್ಲೆಗಳು ಅತ್ಯಂತ ಹಿಂದುಳಿದ ಜಿಲ್ಲೆಗಳಾಗಿವೆ. ಕಳೆದ ಸಾರಿ ಹೊಸದಾಗಿ ಕಾಲೇಜು ಮತ್ತು ಹೈಸ್ಕೂಲ್‌ಗಳು ಮಂಜೂರಾಗಿವೆ. ಆದರೆ, ಅನುದಾನದ ಕೊರತೆಯಿಂದ ಕಟ್ಟಡಕ್ಕೆ ಅನುದಾನ ಲಭ್ಯವಿಲ್ಲ. ನಮ್ಮ ಭಾಗದ ಶಾಲೆಗಳಲ್ಲಿ ಮಕ್ಕಳು ನೆಲದ ಮೇಲೆ ಕುಳಿತು ಅಭ್ಯಾಸ ಮಾಡುತ್ತಿದ್ದಾರೆ. ಅನುದಾನವನ್ನು ತಾವು ಕೊಡಬೇಕು. ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಈ ಸಾರಿ ಪರಿಶಿಷ್ಟ ಜಾತಿ ಹೆಣ್ಣು ಮಕ್ಕಳಿಗೆ ಹೊಸದಾಗಿ ಶಾಲೆಗಳನ್ನು ಕೊಡುವ ಬಗ್ಗೆ ಮಾನ್ಯ ಸಿ.ಟಿ.ರವಿಯವರು ಹೇಳಿದರು. ಈ ಯೋಜನೆಯನ್ನು ನಾವು ಕೂಡ ಸ್ವಾಗತ ಮಾಡುತ್ತೇವೆ ಇದರಲ್ಲಿ ಎರಡು ಮಾತಿಲ್ಲ. ಆದರೆ, ಈ ಇಲಾಖೆಗೆ ಎಷ್ಟು ಚೆನ್ನಾಗಿ ಮೋಸ ಮಾಡುತ್ತಾರೆಂದರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳಿಗೆ ನಿಗದಿ ಮಾಡಿರತಕ್ಕಂಥ ಅನುದಾನವನ್ನು ಕಡಿಮೆ ಮಾಡಿ ಈ ಶಾಲೆಗಳಿಗೆ ಅನುದಾನ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಾಗಿ residential schoolಗಳಿಗೆ ಕೊಡುವಂತಹ ಅನುದಾನವನ್ನು ಉಪಯೋಗಿಸಿಕೊಂಡು ಇದಕ್ಕೆ ಕೊಡುವಂತಹದ್ದು. ನೀವು ಹೊಸದಾಗಿ ಕಿತ್ತೂರುರಾಣಿ ಚೆನ್ನಮ್ಮ ಹೆಸರಿನಲ್ಲಿ ಶಾಲೆಯನ್ನು ಪ್ರಾರಂಭಿಸುವುದು, ಮೊರಾರ್ಜಿದೇಸಾಯಿ ವಸತಿ ಶಾಲೆಗಳಿಗೆ ಕೊಡುವಂತಹ ಅನುದಾನವನ್ನು ಕಟ್ ಮಾಡಿ ಇಲ್ಲಿ ಕೊಡುವುದು ಯಾವ ನ್ಯಾಯ?

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸಿ.

ಶ್ರೀ ಆರ್.ಧ್ರುವನಾರಾಯಣ: ಅದು ಹೇಗೆ ಮುಗಿಸಿ ಎಂದು ಹೇಳುತ್ತೀರಿ.

ಉಪಾಧ್ಯಕ್ಷರು: ನೀವು ಮಾತನಾಡುತ್ತಾ ಇದ್ದರೆ ವೇರೆಯವರಿಗೆ ಅವಕಾಶ ಸಿಗುವುದಿಲ್ಲ. ಶ್ರೀ ಆರ್. ಧ್ರುವನಾರಾಯಣ: ಕಳೆದ ಬೆಳಗಾಂ ಅಧಿವೇಶನದಲ್ಲಿಯೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಯವರು ಗಮನ ಸೆಳೆಯುವ ಸೂಚನೆಯ ಬಗ್ಗೆ

ಒಂದು ಪ್ರಶ್ನೆಯನ್ನು ಇಟ್ಟಿದ್ದೆ, ಕಳೆದ ಸಾರಿ ಮಾನ್ಯ ಕುಮಾರಸ್ವಾಮಿಯವರು ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಚೆನ್ನಾಗಿ ಮಾತನಾಡಿದರು. 3242 ಕೋಟಿ ರೂಪಾಯಿಗಳ ಪರಿಶಿಷ್ಟ ಜಾತಿಯವರಿಗೆ Special Component Programmeನಲ್ಲಿ ನಿಗಧಿಯಾಗಿದೆ. ಫೆಬ್ರವರಿಯವರೆಗೆ ಕೇವಲ 800 ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನು 2400 ಕೋಟಿ ರೂಪಾಯಿಗಳ ಅನುದಾನವು ಬಿಡುಗಡೆಯಾಗಿರುವುದಿಲ್ಲ. ಅದೇ ರೀತಿಯಾಗಿ Special Component programmeನಲ್ಲಿ 1800 ಕೋಟಿ ರೂಪಾಯಿಗಳು ಪರಿಶಿಷ್ಟ ಪಂಗಡದವರಿಗೆ ಮಾತ್ರ ನಿಗಧಿಯಾಗಿರುವುದು. ಅಲ್ಲಿ 600 ಕೋಟಿ ರೂಪಾಯಿಗಳು ಮಾತ್ರ ನಿಗಧಿಯಾಗಿದೆ. year endಗೆ ಮಾರ್ಚ್ ತಿಂಗಳು ಇನ್ನು ಒಂದು ತಿಂಗಳು ಮಾತ್ರ ಇದೆ. ನೀವು ಅನುದಾನವನ್ನು ಬಿಡುಗಡೆ ಮಾಡದೆ ಪರಿಶಿಷ್ಟಜಾತಿ ವರ್ಗದ ಅಭಿವೃದ್ಧಿ ಹೇಗೆ ಸಾಧ್ಯ? ನೀವು ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ಒಂದೇ ಒಂದು ಕಾಲೇಜನ್ನು ಕೊಟ್ಟಿ ಬೆನ್ನನ್ನು ತಟ್ಟಿಸಿಕೊಂಡರೆ ಸುಮಾರು 4000 ಕೋಟಿ ರೂಪಾಯಿಗಳ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಬಿಡುಗಡೆ ಮಾಡಬೇಕಾಗಿದೆ. ಅದನ್ನು ಇದುವರೆಗೆ ಕೂಡ ಬಿಡುಗಡೆ ಮಾಡಿಲ್ಲ. ಬೆಳಗಾಂ ಅಧಿವೇಶನವಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಎರಡು ಬಾರಿ ಮೀಟಿಂಗ್‌ನ್ನು ಕರೆದಿದ್ದಾರೆ. ಸದನದಲ್ಲಿ ಸಮಾಜ ಕಲ್ಯಾಣ ಸಚಿವರು ಇದ್ದಾರೆ, ಅವರ ಇಲಾಖೆಗೆ ಅನುದಾನವನ್ನು ಕಡಿಮೆ ಮಾಡಿದ್ದಾರೆ, ಅವರು ಒಪ್ಪಿಕೊಳ್ಳಲಿ ಕಳೆದ ಸಾರಿಗಿಂತ ಈ ಸಾರಿ ಹೆಚ್ಚಿಗೆ ಕೊಟ್ಟಿದ್ದಾರೆಂದು ಮಾನ್ಯ ಮಂತ್ರಿಗಳು ಇರುವುದರಿಂದ ಅವರನ್ನು ಪ್ರಶ್ನೆ ಕೇಳಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ನಾವು ಬಹಳಷ್ಟು ಸುಧಾರಣೆ ಮಾಡಿದ್ದೇವೆಂದು ಹೇಳುತ್ತೀರಲ್ಲಾ ಈ ವರ್ಷ ಅನುದಾನ ಕಡಿಮೆ ಆಗಿರುವುದರಿಂದ ಮಾನ್ಯ ಸಚಿವರು ಹೇಳಬೇಕು. ಅನುದಾನ ಕಡಿಮೆಯಾಗಿದೆ. ಮಾನ್ಯ ಸಚಿವರು ಸುಮ್ಮನೆ ಕುಳಿತಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಕೂಡ ಸುಮ್ಮನೆ ಕುಳಿತಿದ್ದಾರೆ. ನಾವು ಅವರನ್ನು ಕೇಳುತ್ತಿದ್ದೇವೆ. ಸರ್ಕಾರದ ಒಳ್ಳೆಯ ಬಜೆಟ್ ಎಂದು ಹೇಳಿ ಬೆಂಚ್ ತಟ್ಟಿಸಿಕೊಳ್ಳುವುದು ಯಾವುದಕ್ಕೆ? ಮಠ ಮಾನ್ಯಗಳಿಗೆ, ದೇವಸ್ಥಾನಗಳಿಗೆ ಹಣ ಕೊಟ್ಟರೆ ಬೆಂಚ್ ತಟ್ಟುವುದು ಎಲ್ಲಾ. ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಶೋಷಿತ ವರ್ಗದವರು ಏಳಿಗೆಯಾದರೆ ಸಮಾಜ ಬದಲಾವಣೆಯಾಗುವುದು. ನೀವು ಇದರಲ್ಲಿ ನಿಮ್ಮ ಸಾಧನೆಯನ್ನು ತೋರಿಸಬೇಕು. ಮಠ ಮಾನ್ಯಗಳಿಗೆ ಹಣ ಕೊಟ್ಟರೆ ನಿಮ್ಮ ಸಾಧನೆಯಾಗುವುದಿಲ್ಲ. ಹಾಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಕೂಡ ಬಹಳಷ್ಟು ಅನುದಾನ ಕಡಿತವಾಗಿದೆ. ವಿಶೇಷವಾಗಿ ಪ್ರವಾಸೋದ್ಯಮ ಬಗ್ಗೆ ಹೇಳುವುದಾದರೆ ತಾವು ಕೂಡ ಕೂರ್ಗ್ ಜಿಲ್ಲೆಯಿಂದ ಬಂದವರು. ಕೂರ್ಗ್ ಜಿಲ್ಲೆ ಎಂದರೆ ಇಡೀ ಕರ್ನಾಟಕ ರಾಜ್ಯಕ್ಕೆ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾದಂಥ ಜಾಗ. ಕೂರ್ಗ್‌ನ್ನು

ನಾವು ದಕ್ಷಿಣದ ಕಾಶಿ ಎಂದು ಇಟ್ಟುಕೊಂಡಿದ್ದೇವೆ. ನಿಮ್ಮ sysem, British culture ಇದೆಲ್ಲವನ್ನು ನೋಡಿದರೆ ಎಲ್ಲರಿಗೂ ಸಂತೋಷವಾಗುತ್ತದೆ. ಕೂರ್ಗ್ ಜಿಲ್ಲೆಯ ತರಹ ನಮ್ಮ ಚಾಮರಾಜನಗರ ಜಿಲ್ಲೆ. ಸುಮಾರು 100ಕ್ಕೆ 45 ರಷ್ಟು ಭಾಗ ಫಾರೆಸ್ಟ್ ಏರಿಯಾ ಇದೆ. ಬಂಡಿಪುರ ಟೈಗರ್ ಪ್ರಾಜೆಕ್ಟ್ ಇದೆ. ಅದೇ ರೀತಿ ಕೆ.ಗುಡಿ.ರೆಸಾರ್ಟ್ ಇದೆ. ಮಲೈಮಹದೇಶ್ವರ ಬೆಟ್ಟವಿದೆ ಬಿ.ಆರ್.ಹಿಲ್ಸ್ ಇದೆ. ಪ್ರವಾಸೋದ್ಯಮಕ್ಕೆ ನಮ್ಮ ರಾಜ್ಯದಲ್ಲಿ ನೀವೇನಾದರೂ ಹೆಚ್ಚಿನ ಒತ್ತನ್ನು ಕೊಟ್ಟರೆ ಬಹಳಷ್ಟು ಪ್ರಗತಿಯನ್ನು ಸಾದಿಸುವುದಕ್ಕೆ ಮತ್ತು ಹೆಚ್ಚಿನ ಹೊರದೇಶ ಮತ್ತು ಹೊರ ರಾಜ್ಯದಿಂದ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಬರುತ್ತಾರೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. 2 ರಿಂದ 5 ಕೋಟಿ ರೂ. ಗಳವರೆಗೆ ಕೆಲವೊಂದಕ್ಕೆ ಘೋಷಣೆ ಮಾಡಿದ್ದಾರೆ. ತಮಗೆ ಗಗನಚುಕ್ಕಿ ಮತ್ತು ಭರಚುಕ್ಕಿಯ ಬಗ್ಗೆ ಗೊತ್ತಿರಬೇಕು. ಅದು ಬಹಳ ಪ್ರಸಿದ್ಧಿಯಾದಂತಹ ಜಾಗವಾಗಿರುತ್ತದೆ. ಗಗನ ಚುಕ್ಕಿ ಮತ್ತು ಭರಚುಕ್ಕಿಯ ಅಭಿವೃದ್ಧಿಪಡಿಸುವಂತಹ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಯಾವುದೇ ರೀತಿಯಾದಂತಹ ಘೋಷಣೆಯನ್ನು ಮಾಡಿರುವುದಿಲ್ಲ. ಕಳೆದಸಾರಿ ಅಲ್ಲಿ ಜಲಪಾತೋತ್ಸವ ಎಂಬ ಕಾರ್ಯಕ್ರಮವನ್ನು ಮಾಡಿದರು. ಆ ಕಾರ್ಯಕ್ರಮಕ್ಕೆ ಸುಮಾರು 40,000 ಜನರು ಬಂದಿದ್ದರು, ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿನ ಜನರು ಆಕರ್ಷಿತರಾಗಿ ಅಲ್ಲಿಗೆ ಬಂದಿದ್ದರು. ಹೊರದೇಶಗಳಿಂದಲೂ ಸಹ ಬಂದಿದ್ದರು. ಬಹಳಷ್ಟು ಪ್ರವಾಸೋದ್ಯಮಕ್ಕೆ ನಮ್ಮ ರಾಜ್ಯದಲ್ಲಿ scope ಇದೆ. ಆ ಪ್ರವಾಸೋದ್ಯಮದ ಬಗ್ಗೆ ತಾವು ತಲೆಯನ್ನು ಕೆಡಿಸಿಕೊಳ್ಳುತ್ತಿಲ್ಲ. ತಾವು ಯಾರೂ ಕೂಡ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಿಲ್ಲ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ಸರ್ಕಾರವು ಕೊಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ನಮ್ಮ ಜಿಲ್ಲೆಯ ನಾಲ್ವರು ಶಾಸಕರಲ್ಲಿ ನನಗೊಬ್ಬನಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಜಿಲ್ಲೆ ಬಗ್ಗೆಯೂ ಒಂದೆರಡು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು. ನಮ್ಮ ಜಿಲ್ಲೆಯ ಬಗ್ಗೆ ನಾವು ಮನವಿಯನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮಾಡಿಕೊಂಡಿದ್ದರು. ಮಾನ್ಯ ಸಚಿವರಾದ ಹಾಲಪ್ಪನವರು ಇಲ್ಲಿ ಎಲ್ಲಾ. ನಿಮ್ಮ ಸರ್ಕಾರ ಬಂದು 9 ತಿಂಗಳು ಆಗಿದೆ. ಅಲ್ಲಿಗೆ ಇಬ್ಬರು ಮಂತ್ರಿಗಳು ಮಾತ್ರ ಬಂದಿದ್ದಾರೆ. ಅದರಲ್ಲಿ ಒಬ್ಬರು ಉಸ್ತುವಾರಿ ಸಚಿವರಾದಂಥ ಮಾನ್ಯ ಹಾಲಪ್ಪನವರು 9 ತಿಂಗಳಲ್ಲಿ ನಾಲ್ಕು ಸಾರಿ ಬಂದಿದ್ದಾರೆ. ಆಮೇಲೆ ಗೂಳಿಹಟ್ಟಿ ಶೇಖರ್‌ರವರು ಬಂದಿದ್ದಾರೆ. ನಾವು ಕರೆದಿಲ್ಲಾ ಎಂದು ಅಲ್ಲ, ಮಾನ್ಯ ಲೋಕೋಪಯೋಗಿ ಸಚಿವರು ತಾವು review ಮಾಡುವುದಕ್ಕೆ ಬರಬೇಕು. ಹಿಂದುಳಿದಿರುವಂತಹ ಗಡಿ ಜಿಲ್ಲೆ ನಮ್ಮದು, ಡಾ:ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ಜಿಲ್ಲೆ ತಾವು ಅಲ್ಲಿಗೆ ಬರುವುದಿಲ್ಲ. ನಾನು ಮಾನ್ಯ ಮಂತ್ರಿಯವರು ಹತ್ತಿರ ಬಹಳಷ್ಟು ಸಲ ಬೇಡಿಕೊಂಡಿದ್ದೇನೆ. ಲೊಕೋಪಯೋಗಿ ಇಲಾಖೆ ಸಚಿವರ ಹತ್ತಿರ ನಮ್ಮ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಕೊಡಿ ಎಂದು ಕೇಳಿದ್ದೇನೆ. ತಾವು ಮನೆಯ ಯಜಮಾನರು

ಇದ್ದಹಾಗೆ, ಒಂದು ಮನೆಯಲ್ಲಿ ನಾಲ್ಕು ಜನ ಮಕ್ಕಳು ಇದ್ದರೆ ಎಲ್ಲಾ ಮಕ್ಕಳಿಗೂ ಒಂದೇ ರೀತಿಯಾಗಿ ಊಟವನ್ನು ಹಾಕಬೇಕು. ಅಥವಾ ಯಾರಿಗೋ ಪ್ರೀತಿ ಇದ್ದರೆ ಜಾಸ್ತಿ ಹಾಕಿ, ಅದರೆ ಒಬ್ಬ ಮಗನಿಗೆ ಊಟವನ್ನು ಕೊಡದೆ ಇರುವ ಹಾಗೆ ತಾವು ಮಾಡಬೇಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಆದರೂ ಕೂಡ ನಮಗೆ 5054 ಹೆಡ್‌ನಲ್ಲಿ 3054 ಹೆಡ್‌ನಲ್ಲಿ ನಮಗೆ ವಂಚನೆಯಾಗಿದೆ, ಆ ಬಗ್ಗೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮನೆಯಲ್ಲಿ ಎಲ್ಲಾ ಮಕ್ಕಳು ನಗುನಗುತ್ತಾ ಇದ್ದರೆ ಮನೆಯ ಯಜಮಾನರಿಗೆ ಅಂದರೆ ತಂದೆಗೆ ಸಂತೋಷವಾಗುತ್ತದೆ. ಒಬ್ಬ ಮಗ ಅಳುತ್ತಿದ್ದರೆ ನಿಮ್ಮ ಮನಸ್ಸಿನಲ್ಲಿ ಏನಾಗುತ್ತದೆ ಆ ಭಾವನೆ ನಿಮ್ಮಲ್ಲಿ ಬರಬೇಕು. ಉದಾರವಾದ ಮನಸ್ಸು broad based. ಮಂತ್ರಿಯಾದವರು ಒಂದು ಮನೆಗಲ್ಲಾ, ಒಂದು ಕ್ಷೇತ್ರಕಲ್ಲಾ, ಒಂದು ಜಿಲ್ಲೆಗಲ್ಲಾ, ಇಡೀ ರಾಜ್ಯಕ್ಕೆ ತಾವು ಮಂತ್ರಿಯಾಗಿದ್ದೀರಿ. ನಿಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನವನ್ನು ಹಾಕಿಕೊಳ್ಳುವುದಲ್ಲಾ. ಮುಖ್ಯಮಂತ್ರಿಗಳ ಕ್ಷೇತ್ರಗಳಿಗೆ ಸುಮಾರು Appendix-C ನಲ್ಲಿ building ಕ್ಕೆ 257 ಕೋಟಿಯಲ್ಲಿ 200 ಕೋಟಿ ರೂಪಾಯಿಗಳು ಶಿವಮೊಗ್ಗ ಜಿಲ್ಲೆಗೆ ಆಗಿದ್ದರೆ, ಶಿವಮೊಗ್ಗ ಜಿಲ್ಲೆಗೆ ಅವರು ಮುಖ್ಯಮಂತ್ರಿಗಳಾ? ಅವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳಾ ಈ ಬಗ್ಗೆ ತಾವು ಹೇಳಬೇಕು. ಹಾಗಾಗಿ ಮಂತ್ರಿಗಳಿಗೆ broad base ಮನಸ್ಸು ಇರಬೇಕು. ತಮಗೆ ಎಷ್ಟು ವಿಶಾಲವಾದಂತಹ ಹೃದಯ ಇರುತ್ತದೆ, ಅಷ್ಟೇ ನಿಮಗೆ long life ಇರುತ್ತದೆ. ನಿಮಗೆ ಸಂಕುಚಿತ ಮನೋಭಾವನೆ ಇದ್ದು ನಮ್ಮ ಕ್ಷೇತ್ರ ಅಷ್ಟಕ್ಕೆ ಸೀಮಿತ, ನಮ್ಮಲ್ಲಿ ಉದ್ಧಾರ ಆದರೆ ಸಾಕು ಎಂದರೆ ಅಷ್ಟಕ್ಕೆ ಮಾತ್ರ ತಾವು ಸೀಮಿತವಾಗಿರುತ್ತೀರೆಂಬ ಮಾತನ್ನು ಹೇಳಬೇಕಾಗುತ್ತದೆ. ತಾವು ದೊಡ್ಡವರಾಗಿದ್ದೀರಿ, ಆದರೂ ಕೂಡ ನಾನು ಮಾನ್ಯ ಅಧ್ಯಕ್ಷರ ಮುಖೇನ ಈ ಒಂದು ತಾರತಮ್ಯ ಏನಾಗಿದೆ ಮಾನ್ಯ ಉಪಾಧ್ಯಕ್ಷರೆ ಅದು ತಮ್ಮ ಕ್ಷೇತ್ರಕ್ಕೂ ಕೂಡ ಆಗಿದೆ. ಕಳೆದ ಸಾರಿ ಹಂಚಿಕೊಂಡಿದ್ದೀರಲ್ಲ ಅದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಬಹಳ ತಾರತಮ್ಯವಾಗಿದೆ. ಇದು ಆಗಬಾರದು. ಉದಾರವದ ಮನಸ್ಸು ಆಗಬೇಕು. ಹಾಗಾಗಿ ನಮ್ಮ ಜಿಲ್ಲೆಗೆ ಅವರು ನಮ್ಮನ್ನು ಕರೆದಿಲ್ಲವೆಂದು ಹೇಳಿದರು. ದಯಮಾಡಿ ತಾವು ನಮ್ಮ ಜಿಲ್ಲೆಗೆ ಬರಬೇಕು. ನಮ್ಮ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಇದುವರೆವಿಗೂ ಬಂದಿಲ್ಲ. ನಮ್ಮ ಜಿಲ್ಲೆಯಾದ ಚಾಮರಾಜನಗರವು ಜಿಲ್ಲಾ ಕೇಂದ್ರವಾಗಿದೆ. ಚಾಮರಾಜನಗರವೆಂದರೆ ಮೂಡನಂಬಿಕೆಗಳಿಗೆ ಹೆದರಿಕೊಳ್ಳುತ್ತಾರೆ. ಅಲ್ಲಿಗೆ ಬಂದರೆ ಅಧಿಕಾರವು ಹೊರಟು ಹೋಗುತ್ತದೆ. ಕಳೆದ ಸಾರಿ ತಾವು ಸಚಿವರಾಗಿ ಅಲ್ಲಿಗೆ ಬಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ತಾವು ಅಧಿಕಾರಕ್ಕೆ ಬಂದು 9 ತಿಂಗಳುಗಳು ಆಗಿದೆ. ಇದುವರೆವಿಗು ಇಬ್ಬರು ಸಚಿವರುಗಳು ಮಾತ್ರ ಬಂದಿದ್ದಾರೆ. ಹೆಚ್ಚಿನ ಸಚಿವರು ನಮ್ಮ ಜಿಲ್ಲೆಗೆ ಬಂದಿಲ್ಲ.

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸಿದರೆ ಮತ್ತೆ ಬೇರೆಯವರಿಗೆ ಅವಕಾಶವಾಗುತ್ತದೆ.

ಶ್ರೀ ಆರ್.ಧ್ರುವನಾರಾಯಣ: ನಾವು ಮನವಿಯನ್ನು ಮಾಡಿಕೊಂಡಿದ್ದೆವು. ಒಂದು ತೋಟಗಾರಿಕಾ ಕಾಲೇಜು, ಅಥವಾ ಒಂದು ಸೆರಿಕಲ್ಚರ್ ಕಾಲೇಜನ್ನು ನಮಗೆ ಕೊಡಿ ಎಂದು ನಮ್ಮಲ್ಲಿ ಈಗಾಗಲೇ ಕುದೇರು ಗ್ರಾಮದಲ್ಲಿ Sericulture Training Insitutute ಇದೆ. ಅಲ್ಲಿ ಸಾಕಷ್ಟು ಜಾಗ ಇದೆ, buildingಗಳು ಸಹ ಇವೆ. ಕೃಷಿ ವಿಶ್ವವಿದ್ಯಾನಿಲಯದಿಂದ ನಮ್ಮ ಜಿಲ್ಲೆಗೂ ಒಂದು ಕೃಷಿ ಕಾಲೇಜನ್ನು ಕೊಡಿ. ನಮ್ಮ ಜಿಲ್ಲೆಯಲ್ಲಿ ಯಾವುದೇ ತರಹವಾದ ಚಟುವಟಿಕೆಗಳು ಇಲ್ಲ. ಕೃಷಿ ವಿಶ್ವವಿದ್ಯಾಲಯ ಇರಬಹುದು, ತೋಟಗಾರಿಕೆ ಇರಬಹುದು, ವೆಟರ್ನರಿ ಇರಬಹುದು, ಅಲ್ಲಿ ಯಾವುದೇ ಚಟುವಟಿಕೆಗಳು ಇರುವುದಿಲ್ಲ. ಹಾಗಾಗಿ ನಮಗೂ ಸಹ ಒಂದು ಕಾಲೇಜನ್ನು ಕೊಡಿ ಎಂಬ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಭಾಗಕ್ಕೆ ಕೆರೆಗಳೇ ಜೀವಾಳ. ಕಾವೇರಿ ನೀರಾವರಿ ನಿಗಮ ಇದೆ. ಈಗಾಗಲೆ ತಮಗೂ ಗೊತ್ತಿದೆ. ಕಾವೇರಿ ಟ್ರಿಬ್ಯುನಲ್ ಇರುವುದರಿಂದ ಹೆಚ್ಚಿನ ಅನುದಾನ ನಬಾರ್ಡ್‌ನಿಂದ ಬರುವುದಿಲ್ಲ. ರಾಜ್ಯ ಸರ್ಕಾರದಿಂದ, ಕಾವೇರಿ ನೀರಾವರಿ ನಿಗಮದಿಂದ ಹೆಚ್ಚಿನ ಅನುದಾನ ನಮ್ಮ ಕೆರೆಗಳಿಗೆ ಕೊಡಬೇಕು. 4 ಜನ ಕಾಂಗ್ರೆಸ್ ಶಾಸಕರು ಇದ್ದಾರೆಂದು ಆ ಜಿಲ್ಲೆಯನ್ನು ಕಡೆಗಣಿಸಬೇಡಿ. ನಮ್ಮ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ತಾವು ಬಿಡುಗಡೆ ಮಾಡಬೇಕು. ಈ ಒಂದು ಬಜೆಟ್‌ನಲ್ಲಿ 15 ಕೋಟಿ ರೂಪಾಯಿಗಳನ್ನು ಅರಶಿನ ಮಾರಾಟ ಕೇಂದ್ರಕ್ಕೆ ತಾವು ಕೊಟ್ಟಿದ್ದೀರಿ. ನಾನು welcome ಮಾಡುತ್ತೇನೆ. ಅದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಹ ತಿಳಿಸುತ್ತೇನೆ. ಅದೇ ರೀತಿಯಾಗಿ 5 ಕೋಟಿ ರೂಪಾಯಿಗಳನ್ನು ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ, ಬಿಳಿರಂಗನಬೆಟ್ಟ ಅಭಿವೃದ್ಧಿ ಎಂದು ಹಾಕಿದ್ದೀರಿ. ಆದರೆ ಅದು ಸಾಲುವುದಿಲ್ಲ. ಏಕೆಂದರೆ ಇಡೀ ರಾಜ್ಯದಲ್ಲಿ ಕುಕ್ಕೆ ಸುಬ್ರಮಣ್ಯ ಬಿಟ್ಟರೆ ಮಲೇಮಹದೇಶ್ವರ ದೇವಸ್ಥಾನದಿಂದಲೇ revenue ಜಾಸ್ತಿ ಬರುತ್ತದೆ. ಹಾಗಾಗಿ ತಾವು ಹೆಚ್ಚಿನ ಅನುದಾನವನ್ನು ನಮ್ಮ ಜಿಲ್ಲೆಗೆ ಕೊಡಬೇಕು. ತಾವು ಮನೆಯ ಯಜಮಾನರು ಇದ್ದ ಹಾಗೆ ಎಲ್ಲರನ್ನು ತಾವು ವಿಶಾಲ ಮನೋಭಾವನೆಯಿಂದ ನೋಡಬೇಕು. ನೊಂದವರನ್ನು ತಾವು ಮೇಲೆತ್ತುವಂತಹ ಕೆಲಸವನ್ನು ಮಾಡಬೇಕು. ತಾವೆಲ್ಲಾ ಬಸವಣ್ಣನವರ ಅನುಯಾಯಿ ಎಂದು ಹೇಳುತ್ತೀರಿ. ಮಾನ್ಯ ಯಡಿಯೂರಪ್ಪನವರು ಕೂಡ ಬಜೆಟ್ ಪುಸ್ತಕದಲ್ಲಿ ತಿಳಿಸಿದ್ದಾರೆ. ನಾನು ಬಸವಣ್ಣನವರ ಅನುಯಾಯಿ ಎಂದು ಹೇಳಿದ್ದಾರೆ. ಬಸವಣ್ಣನವರು ಏನು ಹೇಳಿದ್ದಾರೆ.

ಉಪಾಧ್ಯಕ್ಷರು: Please ತಾವು ಮುಗಿಸಿ.

ಶ್ರೀ ಆರ್.ಧ್ರುವನಾರಾಯಣ್: ಬಸವಣ್ಣನವರು ಏನು ಹೇಳಿದ್ದಾರೆ "ಇವನಾರವ, ಇವನಾರವ ಅನ್ನುವರಯ್ಯ, ಎಲ್ಲರೂ ಇವ ನಮ್ಮವ, ನಮ್ಮವ ಅನ್ನಿರಯ್ಯಾ" ಎಂದು ಹೇಳುತ್ತಾರೆ. ನೀವು ಅದನ್ನು ಮರೆತಿದ್ದೀರಿ. ನೀವು ನಿಜವಾದ ಬಸವಣ್ಣನವರ ಅನುಯಾಯಿಗಳಾಗಿದ್ದರೆ "ಸರ್ವರಿಗೂ ಸಮಪಾಲು" ಎಂದು ಹೇಳುತ್ತಾರೆ. ಅದನ್ನು ತಾವು ಕಾರ್ಯರೂಪದಲ್ಲಿ ತರಬೇಕೆಂಬ ಒತ್ತಾಯವನ್ನು ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು: ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಆಯಿತು, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಬಹಳ ಸುದೀರ್ಘವಾಗಿ ನಮ್ಮ ವಿರೋದಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ಸಿದ್ದರಾಮಯ್ಯಜೀಯವರು ಬಹಳ ಸುದೀರ್ಘವಾಗಿ ಈ ಬಜೆಟ್‌ನ ಮೇಲೆ ಮಾತನಾಡಿರುವುದನ್ನು ಕೇಳಿದ ಮೇಲೆ ಮತ್ತೆ ಅದನ್ನೆ ರಿಪೀಟ್ ಮಾಡುವುದರಲ್ಲಿ ಏನಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಕೆಲವು ಸಲಹೆಗಳನ್ನು ನಾನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಚೆಪಡುತ್ತೇನೆ. ನಾನು ಈಗ ತಾನೇ ಈ ಬಜೆಟ್ directionless ಇದರಲ್ಲಿ ಹೋದಸಾರಿ ಇಟ್ಟಿರುವಂತಹ ಹಣ 30% ಖರ್ಚಾಗಿಲ್ಲ. ಏಕೆಂದರೆ ನಾನು ಸಹ ಒಂದು ಪ್ರಶ್ನೆಯನ್ನು ಹಾಕಿದ್ದೇ. ನಿಮಗೆ ಅದು ಗೊತ್ತಾಗಿದೆ. ಅದು ಅಲ್ಲದೆಯೇ ಇವತ್ತು recession ಇದ್ದರೂ ಕೂಡ ನಮ್ಮ plan outsize reduce ಮಾಡದೆಯೇ ಮತ್ತೆ ಜಾಸ್ತಿ ಮಾಡಿರುವುದು these are all not good practices ಎಂದು ತಮಗೆ ಗೊತ್ತಿದೆ. ಈಗ ನಮ್ಮ fiscal Responsibility Act and Management Actನ್ನು ಯಾವ ರೀತಿಯಾಗಿ ತಿರುಚಿದ್ದಾರೆ, ಅದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯನವರು ಹೇಳಿದ್ದಾರೆ. ಅದರ ವಿವರಣೆಗೆ ಹೋಗುವುದಿಲ್ಲ. ಒಂದೇ ಒಂದು ಪ್ರಮುಖವಾದಂತಹ ವಿಷಯವನ್ನು ಹೈಲೈಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ಡಾ:ನಂಜುಂಡಪ್ಪನವರ ವರದಿ. ಇದರಲ್ಲಿ 2,570 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ, ಈ ಸಾರಿ ಅದಕ್ಕೆ ಎಷ್ಟು ಬಿಡುಗಡೆಯಾಗಿದೆ ಎಂದು ನೀವೇ ತರಿಸಿ ನೋಡಿಬಿಡಿ. ನೀವು 2,500 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಕೊಡತ್ತೇವೆಂದು ಹೇಳಿದ್ದೀರಿ this should be an additional investment. ಅಂದರೆ ಅಗತ್ಯಕ್ಕಂತಹ ಬಜೆಟ್‌ಗಿಂತ additional ಕೊಡಬೇಕೆಂದು ಇದೆ. ಆದರೆ ನೀವು ಆ ಬಗ್ಗೆ ತರಿಸಿನೋಡಬೇಕು. ಏಕೆಂದರೆ, ಯಾವ ರೀತಿಯಾಗಿ ಸರ್ಕಾರ

ನಡೆದಿದೆ ಎಂದು ನನಗೆ ಬಹಳ ವ್ಯಥೆಯಾಗುತ್ತದೆ. ಈಗ ಏನಾಗುತ್ತಿದೆ ಎಂದರೆ, ನೀವು ರೂಲಿಂಗ್ ಪಾರ್ಟಿ ಎಂದು, ನೀವು, opposition party ಎಂದು ನಾವು ಒಬ್ಬರಿಗೊಬ್ಬರು ಕಚ್ಚಾಡುವುದರಿಂದ ಇದರ ಲಾಭ ಯಾರಿಗೆ ಎಂದರೆ ಅದನ್ನು ಅಧಿಕಾರಿಗಳು ಪಡೆದುಕೊಳ್ಳುತ್ತಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ, ರೂಲಿಂಗ್ ಪಾರ್ಟಿಯವರು ತಾವು implement ಮಾಡತಕ್ಕಂತಹ ಕಾರ್ಯಕ್ರಮಗಳನ್ನು proper ಆಗಿ monitor ಮಾಡುತ್ತಿಲ್ಲ. ನಾವು oppositionನವರು point out ಮಾಡಿದರೆ ಟೀಕೆ ಮಾಡುತ್ತಿದ್ದಾರೆಂದು ತಿಳಿದುಕೊಂಡು ಬೇಕೆಂದಲೇ ignore ಮಾಡುತ್ತಿದ್ದಾರೆ. ಇದರ ಲಾಭ ಯಾರಿಗೆ ಆಗುತ್ತಿದೆ ಎಂದರೆ ಆಧಿಕಾರಿಗಳಿಗೆ ಆಗುತ್ತಿದೆ. ಇದರ ಲಾಸ್ ಯಾರಿಗೆ ಆಗುತ್ತಿದೆ ಎಂದರೆ ಈ ರಾಜ್ಯದ ಜನರಿಗೆ ಆಗುತ್ತಿದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಬೇರೆ ಬೇರೆ ಇಲಾಖೆಗಳಲ್ಲಿ Special Development Plan ಎಂದು 2500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಹಂಚಿಕೆ ಮಾಡಿದಾಗ ಆಯಾ ಇಲಾಖೆಯವರು ಸಂಬಂಧಪಟ್ಟ ಸಚಿವರುಗಳು ಸಂಬಂಧಟ್ಟಂತಹ ಕಾರ್ಯದರ್ಶಿಗಳು ಏನಾದರೂ action plan ಮಾಡಿದ್ದಾರೆಂದು ಸ್ವಲ್ಪ ತೆಗಿಸಿ ನೋಡಿದ್ದೀರಾ? ಅವರು action plan ಮಾಡಿಲ್ಲ. Action Planನ್ನು ಕೊಡಿ ಎಂದು ನಾನು ಕೇಳಿದ್ದೆನೆ. ಈ Head of Accountನಲ್ಲಿ ನಿಮಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಏನು action plan ಮಾಡಿದ್ದಾರೆಂದರೆ, ಯಾರು action plan ಮಾಡಿರುವುದಿಲ್ಲ. ಏನು ongoing works ಇದೆ ಅದಕ್ಕೆ ಹಣವನ್ನು ಕೊಡುತ್ತಿದ್ದಾರೆ. KNNLಗೆ 175 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ಅವರು ongoing worksಗೆ ಕೊಟ್ಟಿದ್ದಾರೆ. ಹೋದ ಸಾರಿ ಆಶ್ರಯ ಯೋಜನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದು routine ಆಗಿ ಎಲ್ಲಕ್ಕೂ ಹಂಚಿದ್ದಾರೆ. ಹೀಗಾಗಿ ಈ ರಾಜ್ಯದ ಜನತೆ ನಾವು ನಂಜುಂಡಪ್ಪನವರ ವರದಿಯಲ್ಲಿ 2500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವೆಂದು ನಾವು ರಾಜ್ಯದ ಜನರಿಗೆ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಈ ಬಗ್ಗೆ ಜನರಿಗೆ ಗೊತ್ತಾಗುತ್ತದೆ. ನಮ್ಮ ಭಾಗದ ಜನರಿಗಂತೂ ಗೊತ್ತಾಗಿದೆ. ಅದಕ್ಕಾಗಿ ಇದನ್ನು ತಾವು ಸರಿಪಡಿಸಬೇಕು. ಮಾನ್ಯ ಸಚಿವರು ಟೈಮ್ ಕಡೆಗೆ ತೋರಿಸುತ್ತಿದ್ದಾರೆ. ನಾನು ಅಮೇಲೆ ಏನೇನು point out ಮಾಡುತ್ತೇನೆ. ಏನೇನು ಮಾಡಬಹುದು ಇಲ್ಲಿ ತಪ್ಪಾಗಿದೆ HKDBಗೆ, ಮಲೆನಾಡು ಏರಿಯಾಗೆ, ಬಾರ್ಡರ್ ಏರಿಯಾಗೆ ನೀವು ಹಣವನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದೀರಿ. ಹಣವನ್ನು ಕಡಿಮೆ ಕೊಟ್ಟಿದ್ದೀರಿ. ಇವತ್ತು ಅದಕ್ಕೆ ಹಣವನ್ನು ಜಾಸ್ತಿ ಕೊಡಬೇಕು. ಇವತ್ತು ಆರೋಗ್ಯ ಕ್ಷೇತ್ರದಲ್ಲಿ ನಾನು 2–3 ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದೇನು ಸುವರ್ಣ ಆರೋಗ್ಯ ಸುರಕ್ಷಾ

ಯೋಜನೆ ಎಂದು ಸರ್ಕಾರ ಮಾಡಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. It is a very good scheme. ಆದರೆ ಅದನ್ನು proper ಆಗಿ implement ಮಾಡುವಂತಹ ಪ್ರಯತ್ನವನ್ನು ಸರ್ಕಾರವು ಮಾಡಬಹುದು. ಇವತ್ತು ಬಿಪಿಎಲ್ ಕೆಳಗೆ ಇರುವಂತಹ ಎಲ್ಲಾ ಜನರಿಗೆ 1,50,000 ತನಕ ಏನು insurance ಮಾಡಿದ್ದೀರಿ, ಅದನ್ನು ಸರ್ಕಾರ ಕೊಡುತ್ತದೆ ಎಂದು ಹೇಳಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ತಾವು proper ಆಗಿ implement ಮಾಡುವಂತಹ ಪ್ರಯತ್ನವನ್ನು ಮಾಡಬೇಕು. ಆದರೆ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಡಾಕ್ಟರ್ಸ್ ಮತ್ತು specialistsಗಳು ಇಲ್ಲವೆಂದು ನಾನು ಬೆಳಿಗ್ಗೆ ಸದನದ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಚಿವರಿಗೂ ಇದರ ಬಗ್ಗೆ ಯಾವ ರೀತಿಯಾಗಿ ನಾವು ಪರಿಹಾರ ಮಾಡಬೇಕೆಂದು ಸಲಹೆಯನ್ನು ಸಹ ಮಾಡಿದ್ದೇನೆ. ಇಲ್ಲಿ ಬಹಳ ಮುಖ್ಯವಾಗಿರುವಂತಹದ್ದು ಆರೋಗ್ಯ ಇಲಾಖೆಯಲ್ಲಿ ಔಷಧಿಯನ್ನು ಖರೀದಿ ಮಾಡುವಂತಹ ಪ್ರಕ್ರಿಯೇ ಏನು ಇದೆ, ಇದನ್ನು Drug Logistics Societyಮುಖಾಂತರ ಈ ರಾಜ್ಯದಲ್ಲಿ ಪ್ರತಿವರ್ಷ 70–80 ಕೋಟಿ ರೂಪಾಯಿಗಳು ಇವತ್ತು drugs purchase ಅಗುತ್ತದೆ ಅದರ ಬಹಳ ದೊಡ್ಡ ಅಪಾಯಕಾರಿಗಳು ಬಹಳ ಹಿಂದೆ ಆಗಿತ್ತು. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕೆಂದು ಹೇಳಿ ಕಾಗೋಡು ತಿಮ್ಮಪ್ಪನವರು ಆರೋಗ್ಯ ಸಚಿವರಾಗಿದ್ದಾಗ ಈ Drug Logistics Society ಮಾಡಿ ಇವತ್ತು ಎಲ್ಲಾ ಕೇಂದ್ರಗಳಿಂದಲೂ ಕೂಡ ಮಾಡಿದ್ದಾರೆ, ಇದೊಂದು ಒಳ್ಳೆಯ system ಆಗಿದೆ. ನಾನು ಈ systemಗೆ support ಮಾಡುತ್ತೇನೆ. ಆದರೆ ಇದರಲ್ಲಿ ಪಾರದರ್ಶಕತೆ ಇರಬೇಕು. ಇದರಲ್ಲಿ ಏನಾಗಿದೆ ಎಂದರೆ ಟೆಂಡರ್ ಕರೆದು 4–4 ತಿಂಗಳುಗಳವರೆವಿಗೂ ನೀವು finalize ಮಾಡುವುದಿಲ್ಲ. ಮೊನ್ನೆ ತಾನೇ ಯಾರೋ ಒಬ್ಬ ಸದಸ್ಯರು ಹೇಳುತ್ತಿದ್ದರು. ಈಗ Rabipur. ಈ Rabipur ಎನ್ನುವಂತಹದ್ದು ಏನು ಹುಚ್ಚುನಾಯಿ ಕಡೆಯುವುದಕ್ಕೆ ಚುಚ್ಚುಮದ್ದನ್ನು ಕೊಡುತ್ತೇವೆಲ್ಲಾ vaccine ಅದನ್ನು higher rateಗೆ purchase ಮಾಡುತ್ತಿದ್ದಾರೆಂದು ಇದೆ. ಅದಕ್ಕಾಗಿ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಚೆಪಡುತ್ತೇನೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇಲ್ಲಿ ಅರೋಗ್ಯ ಸಚಿವರು ಇಲ್ಲಾ. ಇದನ್ನು ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಇಲಾಖೆಯವರು ಯಾರು ಇಲ್ಲ. ಆದರೆ ನಾವು ಹೇಳಬೇಕು ಅವೆಲ್ಲವೂ recordಗೆ ಹೋಗಲಿ ಎಂದು ಹೇಳಬೇಕಾಗಿದೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ತಾವು ಮಾಡಬೇಕು. ಡಾ:ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕಿಗೆ up-gradation of PHC

to CHC ಮಾಡಬೇಕು. ಹೊಸದಾಗಿರುವಂತಹ PHCಗಳನ್ನು ಮಂಜೂರು ಮಾಡುವಂತಹದ್ದನ್ನು ತಾವು ಮಾಡಬೇಕು. ಇವತ್ತು RDPRನಲ್ಲಿ ನಾನು ಪೇಪರ್ ನೋಡಿ ಒಂದು ತರಹ ಖುಷಿಯೂ ಕೂಡ ಆಯಿತು, ಒಂದು ಸಲ ದು:ಖವು ಸಹ ಆಯಿತು. ಇವತ್ತು ಬೆಳಗಿನ ಪೇಪರ್‌ನಲ್ಲಿ ಏನಿದೆ ಎಂದರೆ ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರೋಡ್‌ಗೋಸ್ಕರ 1500 ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. 1500 crores ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೀವು ರೋಡ್ ಮಾಡುತ್ತೀರಿ. ಆದರೆ ಕರ್ನಾಟಕ ರಾಜ್ಯಕ್ಕೆ ಇವತ್ತು ರೋಡ್‌ಗೋಸ್ಕರ RDPRಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಸರ್ಕಾರವು ನೋಡಬೇಕು. ಬೆಂಗಳೂರು ಮಹಾನಗರ ಪಾಲಿಕೆಗೆ 1500 ಕೋಟಿ ರೂಪಾಯಿಗಳನ್ನು ಕೊಟ್ಟರೆ ನಮಗೆ 1000 ಕೋಟಿ ರೂಪಾಯಿಗಳು RDPRನಲ್ಲಿ ನಮ್ಮ ರಸ್ತೆಗಿಲ್ಲ. ಆಂದರೆ ಈ ರಾಜ್ಯ ಇವತ್ತು ಗ್ರಾಮೀಣ ಪ್ರದೇಶದಲ್ಲಿರುವಂತಹ ಜನರಿಗೆ ಮಾಡತಕ್ಕಂತಹ ನ್ಯಾಯವೇ? ನೀವು RDPRಗೆ rural roadsಗಳಿಗೆ ಜಾಸ್ತಿ ಹಣವನ್ನು ಕೊಡದೆ ಹೋದರೆ ಮತ್ತೆ ಯಾವ ರೀತಿಯಾಗಿ ಸುಧಾರಣೆಯನ್ನು ಮಾಡುವುದಕ್ಕಾಗುತ್ತದೆ? ಈ ಸರ್ಕಾರ ಅಂದಮೇಲೆ ಒಂದು ತರ್ಕಬದ್ಧವಾಗಿರುವಂತಹ ಅಭಿವೃದ್ಧಿಯನ್ನು ಮಾಡಬೇಕಾದರೆ ಈ ಬಗ್ಗೆ ಮಾನ್ಯ ಸಚಿವರು ಹೇಳಿದರು. 1,50,000 ಇವತ್ತು ಗ್ರಾಮೀಣ ರಸ್ತೆಗಳು ಇವೆ, ನೀವು ಅದಕ್ಕೆ improve ಮಾಡತಕ್ಕಂತಹ ಕ್ರಮಬದ್ಧವಾಗಿರುವಂತಹ time bound programmeನ್ನು ಹಾಕಿಕೊಂಡಿದ್ದೀರಾ? ಈ ವರ್ಷ 500 ಕಿ.ಮಿ. ಮಾಡುತ್ತೇವೆ. ಈ ವರ್ಷ 5000 ಕಿ.ಮಿ.ಮಾಡುತ್ತೇವೆ. 10,000 ಕಿ.ಮಿ.ರಸ್ತೆಯನ್ನು ಮಾಡುತ್ತೇವೆ ಏನು ಇಲ್ಲ. ಸರ್ಕಾರವನ್ನು ಕೇಳಿದರೆ ಹಣವೇ ಇಲ್ಲವೆಂದು ಹೇಳುತ್ತೀರಿ. ಇಲ್ಲಿ ಸರ್ಕಾರದ್ದು ಏನು ಆದ್ಯತೆ ಇದೆ. ಇವತ್ತು ಸದಸ್ಯರು ಹೇಳಿದರು ಎಲ್ಲದರಲ್ಲಿಯೂ ಕಡಿಮೆ ಮಾಡಿದ್ದೇವೆಂದು ಹೇಳಿದ್ದೀರಿ. ಯಾವುದನ್ನು ಜಾಸ್ತಿ ಮಾಡಿದ್ದೀರಿ? ನೀವು ಯಾವುದಕ್ಕೆ ಜಾಸ್ತಿ ಮಾಡಿದ್ದೀರೆಂದು ನಾನು ಹೇಳುತ್ತೇನೆ. ನೀವು ಜಾಸ್ತಿ ಮಾಡಿರುವುದು urban developmentಗೆ. ಏಕೆಂದರೆ ನಿಮಗೆ vote bank urban areaದಲ್ಲಿದೆ ಎಂದು ಹೇಳಿ ನೀವು ಅಲ್ಲಿಗೆ ಹಣವನ್ನು ಜಾಸ್ತಿ ಕೊಟ್ಟಿದ್ದೀರಿ. Urban areaದಲ್ಲಿರುವ slumsಗೆ ನೀವು ಕೊಟ್ಟಿರುವುದಿಲ್ಲ. ನೀವು ದೊಡ್ಡದೊಡ್ಡ ವ್ಯಾಪಾರಿಗಳ ಮನೆಯ ಹತ್ತಿರ ರೋಡ್ ಮಾಡಿದ್ದೀರಿ. ಶ್ರೀಮಂತರ ಮನೆಗಳಿಗೆ ರಸ್ತೆಗಳನ್ನು ಮಾಡತಕ್ಕಂತಹ ಕೆಲಸವನ್ನು ಈ ಸರ್ಕಾರದ ಆದ್ಯತೆ ಎಂದು ಮಾಡಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ. ಈ ರಾಜ್ಯದಲ್ಲಿರುವಂತಹ ಶ್ರೀಮಂತ ವರ್ಗಕ್ಕೆ ಒಲೈಸುವಂತಹ ಕೆಲಸವನ್ನು ಈ ಸರ್ಕಾರವು ಮಾಡಿದೆ. Urban development ಹೆಚ್ಚಿಗೆ ಹಣವನ್ನು ಕೊಡುವಂತಹ ಕೆಲಸವನ್ನು ಸರ್ಕಾರವು ಮಾಡಿದೆ. ಆದರೆ urbanನಲ್ಲಿರುವಂತಹ poorಗಳಿಗೆ

ನೀವು ಮಾಡಿಲ್ಲ. slumನಲ್ಲಿರುವಂತಹವರಿಗೆ ನೀವು ಜಾಸ್ತಿ ಹಣವನ್ನು ಕೊಟ್ಟಿಲ್ಲ. ಯಾವುದೋ ಒಂದು ಸಮುದಾಯಕ್ಕೆ 50 ಲಕ್ಷ ಮತ್ತು 1 ಕೋಟಿ ರೂಪಾಯಿಗಳನ್ನು ಕೊಡುವುದರಿಂದ ಸಮುದಾಯವು ಉದ್ಧಾರವಾಗುವುದಿಲ್ಲ. ಆ ಒಂದು ಸಮಾಜವನ್ನು ಎತ್ತಿ ಹಿಡಿಯುವಂತಹ ಕೆಲಸ ಮತ್ತು ಅಭಿವೃದ್ಧಿ ಮಾಡುವಂತಹ ಕೆಲಸಕ್ಕೆ ಆದ್ಯತೆಯನ್ನು ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಈ ಸರ್ಕಾರಕ್ಕೆ ಹೇಗೆ ಪ್ಲಾನ್ ಮಾಡಬೇಕು. ಇವತ್ತು ನಾವು road developmentನ್ನು ತೆಗೆದುಕೊಳ್ಳಬೇಕಾದರೆ ನಾವು ಎಲ್ಲಾ schemesನಲ್ಲಿರುವಂತಹ ಹಣವನ್ನು convergence ಮಾಡಿ ನೀವು time bound programme ಹಾಕಿಕೊಂಡು ಮಾಡತಕ್ಕಂತಹದ್ದು ಸರ್ಕಾರದವರು ಮಾಡಿಲ್ಲ. ಅದಕ್ಕೂ ಬಹಳ ವ್ಯಥೆಯನ್ನು ಪಡಬೇಕಾಗುತ್ತದೆ. ಇವತ್ತು National Rural Employment Gurantee Schmeನಲ್ಲಿ ಈ ಸರ್ಕಾರ ನಮ್ಮ ರಾಜ್ಯದಲ್ಲಿ ಹಣವನ್ನು ಉಪಯೋಗ ಮಾಡಲಿಲ್ಲ. ನೀವು ಅದೇ ಗುಜರಾತ್‌ಗೆ ಹೋಗಿ ಅವರು 3000 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿದ್ದಾರೆ. ಆಂಧ್ರಕ್ಕೆ ಹೋಗಿ 2000 ಕೋಟಿ ರೂಪಾಯಿಗಳನ್ನು ಇದರಲ್ಲಿ ಉಪಯೋಗ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಏತಕ್ಕಾಗಿ ಉಪಯೋಗ ಮಾಡುವುದಕ್ಕಾಗಲಿಲ್ಲವೆಂದರೆ ಇವತ್ತು ಸರ್ಕಾರಕ್ಕೆ ಹಣವನ್ನು ಉಪಯೋಗೆ ಮಾಡಬೇಕೆನ್ನುವಂತಹ ಇಚ್ಚಾಶಕ್ತಿ ಇಲ್ಲ, ಮತ್ತು decentralisation ನಲ್ಲಿ ಈ ಸರ್ಕಾರಕ್ಕೆ ಯಾವುದೇ ಬದ್ದತೆ ಇಲ್ಲ. ನೀವು decentralize ಮಾಡದೆ ಹೋದರೆ, ನೀವು ಅಧಿಕಾರವನ್ನು ಜನರ ಕೈಗೆ ಕೊಡದೇ ಹೋದರೇ ಈ ರಾಜ್ಯ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಚೆಪಡುತ್ತೇನೆ. ಏನೆಂದರೆ administrative reforms, ಲೋಕಾಯುಕ್ತರು ಬಹಿರಂಗವಾಗಿ ಹೇಳುತ್ತಿದ್ದಾರೆ. ನಮಗೆ ಅಧಿಕಾರಿ ಕೊಡಿ ಎಂದು. ಈ ಸರ್ಕಾರ ನಮಗೆ ಅಧಿಕಾರವನ್ನು ಕೊಡುತ್ತಿಲ್ಲ. ಸರ್ಕಾರ ಪರೋಕ್ಷವಾಗಿ corruptionಗೆ support ಮಾಡುತ್ತಿದೆ ಏನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರಿಗೆ ಸಂಪೂರ್ಣವಾದಂತಹ ಅಧಿಕಾರವನ್ನು ಕೊಡಬೇಕು. ಏನು ತಪ್ಪು ಇದೆ, ನಾವೆಲ್ಲರೂ ಸಿದ್ದವಾಗಿದ್ದೇವೆ ಲೋಕಾಯುಕ್ತರಿಗೆ ಅಧಿಕಾರ ಕೊಡುವುದಕ್ಕೆ. ನೀವು ಶಾಸಕರನ್ನು ಒಳಪಡಿಸಬೇಕು, ಮಂತ್ರಿಗಳನ್ನು ಒಳಪಡಿಸಬೇಕು, ಮತ್ತು ಮುಖ್ಯಮಂತ್ರಿಯೂ ಕೂಡ ಲೋಕಾಯುಕ್ತ perviewನಲ್ಲಿ ಬರುವಂತಹ ಕಾಯಿದೆಯನ್ನು ತನ್ನಿ ನಾವು ಅದಕ್ಕೆ support ಮಾಡುತ್ತೇವೆ. ನಾವು ರಾಜ್ಯದ ಜನರಿಗೆ ತೋರಿಸಬೇಕಾಗುತ್ತದೆ, ನಾವು ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮಾಡುತ್ತೇವೆ, ಭ್ರಷ್ಟಚಾರಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶವಿಲ್ಲ. ಈ ಸದನದಲ್ಲಿ ಸತ್ಯದ ಪರ ಮತ್ತು ನ್ಯಾಯದ ಪರ ಮಾತನಾಡುವಂತಹ ಜನರು

ಇದ್ದಾರೆಂದು ನಾವು ಈ ರಾಜ್ಯದ ಜನರಿಗೆ ತೋರಿಸಬೇಕಾಗುತ್ತದೆ. ನಮ್ಮಲ್ಲಿ ವಿಶ್ವಾಸವನ್ನು ಇಟ್ಟು ಜನರು ಕಳುಹಿಸಿದ್ದಾರೆ. ನಾವು ಯಾವತ್ತು ಸತ್ಯದ ಮಾರ್ಗದಲ್ಲಿ ನಡೆಯುತ್ತೇವೆ, ನಾವು ಪ್ರಮಾಣಿಕತೆಯಿಂದ ನಡೆಯುತ್ತೇವೆಂದು ತೋರಿಸಬೇಕಲ್ಲವೇ? ಸಂಪೂರ್ಣವಾಗಿರುವಂತಹ ಅಧಿಕಾರವನ್ನು ತಾವು ಲೋಕಾಯುಕ್ತರಿಗೆ ಕೊಡಬೇಕು. ಇಲ್ಲದೆ ಇದ್ದರೆ ಈ ರಾಜ್ಯಕ್ಕೆ ಭವಿಷ್ಯವಿಲ್ಲವೆಂಬ ಮಾತನ್ನು ಹೇಳುತ್ತೇನೆ. ಏಕೆಂದರೆ, ಪ್ರಜಾಪ್ರತಿನಿಧಿಗಳ ಮೇಲೆ, ಸರ್ಕಾರಿ ಅಧಿಕಾರಿಗಳ ಮೇಲೆ ವಿಶ್ವಾಸವನ್ನು ಕಳೆದುಕೊಂಡಿರುವಂತಹ....

ಉಪಾಧ್ಯಕ್ಷರು: ಇನ್ನು ಬಹಳಷ್ಟು ಶಾಸಕರು ಮಾತನಾಡುವವರು ಇದ್ದಾರೆ ಬೇಗನೆ ತಾವು ಮುಗಿಸಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾನು ಬಹಳಷ್ಟು ಮಾತನಾಡಬೇಕಾಗಿತ್ತು. ಆದರೆ ತಾವು ಸಮಯ ಇಲ್ಲವೆಂದು ಹೇಳುತ್ತಿದ್ದೀರಿ. ಬೇರೆ ಸದಸ್ಯರಿಗೂ ಕೂಡ ನಾವು ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳಿ ನಾನು cutf short ಮಾಡಿ ಮಾತನಾಡುತ್ತಿದ್ದೇನೆ. ನಾನು ಎರಡು–ಮೂರು ನಿಮಿಷದಲಿ ಮುಗಿಸುತ್ತೇನೆ. ಈಗ Industries ಬಗ್ಗೆ ನಿಮ್ಮ ಸರ್ಕಾರದ ಆದ್ಯತೆ ಏನು ಇದೆ? ನಿಮ್ಮ ಸರ್ಕಾರದಲ್ಲಿ Rural developmentಗೆ ಆದ್ಯತೆ ಇಲ್ಲ, ನಿಮ್ಮ ಸರ್ಕಾರ Agricultureಗೆ ಆದ್ಯತೆಯನ್ನು ಕೊಡುತ್ತಿಲ್ಲ, Irrigationಗೆ ಆದ್ಯತೆಯನ್ನು ಕೊಡುತ್ತಿಲ್ಲ, powerಗೆ ಆದ್ಯತೆಯನ್ನು ಕೊಡುತ್ತಿಲ್ಲ, Educationಗೂ ಆದ್ಯತೆಯನ್ನು ಕೊಡುತ್ತಿಲ್ಲ, ಮತ್ತೆ ಯಾವುದಕ್ಕೆ ಕೊಡುತ್ತಿದ್ದೀರಿ? Industryಗೆ ಆದ್ಯತೆಯನ್ನು ಕೊಡುತ್ತಿಲ್ಲ. ಏನಿದೆ ನಿಮ್ಮ ಕೈಗಾರಿಕೆಯ ನೀತಿ? ಹೊಸ ಕೈಗಾರಿಕೆ ನೀತಿಯನ್ನು ಏನು ನೀವು ತಂದಿದ್ದೀರಿ ಅದರ draftನ್ನು ನೋಡಿದ್ದೇನೆ. ಅದರಲ್ಲಿ ನೀವು ಏನು incentives ಕೊಟ್ಟಿದ್ದೀರಿ. ಇವತ್ತು global recession ಇದೆ. ಇವತ್ತು countryಯಲ್ಲಿ recession ಇದ್ದರೂ ಕೂಡ ನೀವು ಒಳ್ಳೆಯ ರೀತಿಯಿಂದ ನಮ್ಮ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡುವಂತಹ ಕೆಲಸವನ್ನು ನೀವು ಮಾಡಬಹುದಾಗಿತ್ತು. ಡಾ.ನಂಜುಂಡಪ್ಪನವರ ವರದಿಯ ಪ್ರಕಾರ ಇವತ್ತು ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂಥ ತಾಲ್ಲೂಕು ಅಭಿವೃದ್ಧಿ ಆಗಬಾರದೇ? Industrialise ಆಗಬಾರದೇ? ಏನು Incentives ಕೊಟ್ಟಿದ್ದೀರಿ? ಮಂತ್ರಿಗಳೇ ಈ ಡ್ರಾಫ್ಟ್ ಇಲ್ಲೇ ಇದೆ, ಇದನ್ನು request ಮಾಡಿಕೊಂಡು ತೆಗೆದುಕೊಂಡು ನೋಡಿದ್ದೇನೆ. ಈ ಡ್ರಾಫ್ಟ್‌ನಲ್ಲಿ ಏನಿದೆ ಗೊತ್ತೇ? ಕೇವಲ ನೀವು tax, registration fees ಗೆ sale tax ಗೆ exemption ಕೊಡಿ. ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂಥ ತಾಲ್ಲೂಕಿನಲ್ಲಿ ಯಾರಾದರೂ ಇಂಡಸ್ಟ್ರಿ ಹಾಕಲಿಕ್ಕೆ ಮುಂದೆ ಬಂದರೆ ಅವರಿಗೆ 5 ವರ್ಷ sale tax

exemption ಕೊಡಿ. ಅಗ ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿ ಬರಲಿಕ್ಕೆ ಸಾಧ್ಯವಿದೆ ಅದೂ ಕೂಡ ನಮ್ಮ ಸರ್ಕಾರ ಮಾಡಿಲ್ಲ. ಇದನ್ನು ಮಾಡಬೇಕೆಂದು ನನ್ನ ಸಲಹೆ ಇದೆ. ಇವತ್ತು ವಿಶೇಷವಾಗಿ ನಮ್ಮ ಮತಕ್ಷೇತ್ರದಲ್ಲಿ ಒಂದೇ ಒಂದು ಸಬ್ ಜೈಲು ಇದೆ, ಆ ಸಬ್ ಜೈಲಿಗೆ ಎಲ್ಲಾ ಮೂಲಭೂತ ಸೌಕರ್ಯಗಳಿವೆ. ಎಲ್ಲಾ ರೆಡಿಯಾಗಿ ಮೂರು ವರ್ಷಗಳಿಂದ ನಿಂತಿದೆ. ಮೂರು ವರ್ಷಗಳಿಂದ ಸತತವಾಗಿ ನಾನು ಗೃಹ ಇಲಾಖೆಗೆ ಸಂಬಂಧಪಟ್ಟ ಸಚಿವರಿಗೆಲ್ಲರಿಗೂ ಪತ್ರವನ್ನು ಬರೆದಿದ್ದೇನೆ. ನಮ್ಮ ಸೇಡಂ, ಚಿಂಚೋಳಿ, ಚಿತ್ತಾಪುರ ಇಲ್ಲೇನಾದರೂ ಆದರೆ ಗುಲ್ಬರ್ಗ ಜೈಲಿಗೆ ಎಲ್ಲರನ್ನೂ ಕಳುಹಿಸಬೇಕು. ಈ ಸರ್ಕಾರಕ್ಕೆ ಮೂರು ವರ್ಷಗಳಿಂದ ನಮ್ಮ ಸಬ್ ಜೈಲಿಗೆ ಸಿಬ್ಬಂದಿಯನ್ನು ಕೊಡಲಿಕ್ಕಾಗುತ್ತಿಲ್ಲವೆಂದರೆ ನಾವೇನು ಹೇಳಬೇಕು? ಇವತ್ತು ಖೈದಿಗಳು ಸಣ್ಣಪುಟ್ಟ ಜಗಳಗಳಾದರೆ ಗುಲ್ಬರ್ಗಕ್ಕೆ ಹಾಕಬೇಕು. ಇಲ್ಲಿ ಎಲ್ಲಾ ಸೌಲಭ್ಯಗಳಿವೆ, ತೊಂದರೆಯೇನಾಗಿದೆಯೆಂದರೆ ನಮ್ಮಲ್ಲಿ ಸಿಬ್ಬಂದಿ ಇಲ್ಲ. ನೇಮಕಾತಿ ಮಾಡಲಿಕ್ಕಾಗುತ್ತಿಲ್ಲ ಎನ್ನುವಂಥ ಅಸಹಾಯಕತೆಯನ್ನು ಸರ್ಕಾರ ತೋರಿಸಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಕೊನೆಯದಾಗಿ ಬಂದಿಖಾನೆ ಸಚಿವರು ಇಲ್ಲಿದ್ದಾರೆ, ಇದನ್ನು ಗಮನಿಸಬೇಕು, ಕಂದಾಯ ಇಲಾಖೆಯ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದೆ. ಏನೆಂದರೆ Land Reform Actಗೆ ನಾವು amendment ತರುತ್ತೇವೆಂದು ಹೇಳಿ ಮನ್ಯ ಸಚಿವರು ಹಾಗೂ ಕೆಲವು ಅಧಿಕಾರಿಗಳು ಇವತ್ತು ಹೇಳುತ್ತಿದ್ದಾರೆ. 79(a)(b)ಗೆ ನಾವು amendment ತರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದರಿಂದ ಈ ರಾಜ್ಯದ ರೈತರಿಗೆ ದೊಡ್ಡ ಮೋಸವಾಗುತ್ತದೆ. 79(a)(b) ಎಂದರೆ ಯಾರು Industrialists ಮತ್ತೆ ಬೇರೆ ದೊಡ್ಡ ದೊಡ್ಡ ಶ್ರೀಮಂತರು Agriculture land ಅನ್ನು ಖರೀದಿಸಬಾರದೆಂದು Land Reform Act ನಲ್ಲಿ ನೀವು 79(a)(b) amendment ತಂದುಬಿಟ್ಟರೆ ಇಡೀ ರಾಜ್ಯದ ಯಾವುದೇ ಬಡ ರೈತರಿಗೆ ಜಮೀನಿರುವುದಿಲ್ಲ. Real estaters and Industriests ಎಲ್ಲಾ ಜಮೀನುಗಳನ್ನು ಖರೀದಿಸಿಬಿಡುತ್ತಾರೆ. ಅದಕ್ಕೆ ಯಾವುದೇ ಕಾರಣಕ್ಕೂ Land Reform Act ನಲ್ಲಿ ನೀವು 79(a)(b) amendment ತರಬಾರದು, ತಂದರೆ ನಾವು ರಾಜ್ಯದಲ್ಲಿ ಉಗ್ರ ಹೋರಾಟವನ್ನು ಮಾಡುತ್ತೇವೆ. ಅದಕ್ಕಾಗಿ ಸರ್ಕಾರಕ್ಕೆ ನಾನು ತಾಕೀತು ಮಾಡುತ್ತೇನೆ, ನೀವು ಯಾವುದೇ ಕಾರಣಕ್ಕೂ 79(a)(b)ಗೆ amendment ತಂದರೆ ನಾವು ಸಹಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಕೊನೆಯದಾಗಿ ನಾನು ಹೇಳುವುದಿಷ್ಟೆ, ಲೋಕೋಪಯೋಗಿ ಸಚಿವರು ಇಲ್ಲಿದ್ದಾರೆ. ಅವರು ಕೆಲವು ಗ್ರಾಮೀಣ ರಸ್ತೆಗಳನ್ನು ಎಂ.ಡಿ.ಆರ್. ಆಗಿ ಮೇಲ್ದರ್ಜೆಗೇರಿಸಿದ್ದಾರೆ. ಅದಕ್ಕೆ ಹಣವೇ ಇಲ್ಲ, ಹೋದ ಸಾರಿ ಕೊಟ್ಟಿರುವುದಕ್ಕಿಂತ ಈ ಸಾರಿ ಕಡಿಮೆ ಹಣವನ್ನು ಕೊಟ್ಟಿದ್ದಾರೆ. RDPR

ಸಚಿವರಿಗಿಂತ ಲೋಕೋಪಯೋಗಿ ಸಚಿವರು ಬಹಳ powerful ಇದ್ದೀರಿ ನೀವು ಆದರೆ ನಿಮಗಿಂತ ಹೆಚ್ಚು ಹಣ RDPR ಗೆ ಹೋಗಿದೆ. ಆದಕಾರಣ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣ ಕೊಡಬೇಕು. ನೀವು ಮನೆಯ ಯಜಮಾನರಿದ್ದೀರಿ, ನೀವು ಯಾವ ರೀತಿ ಮಾಡುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಧ್ರುವನಾರಾಯಣರವರು ಹೇಳಿದಂತೆ ನೀವು ತಾರತಮ್ಯ ಮಾಡದೇ ಅಭಿವೃದ್ಧಿ ಮಾಡಿದರೆ ನಿಮ್ಮ ಪರವಿರುತ್ತೇವೆ. ಇನ್ನು ಕೊನೆಯದಾಗಿ ನೀವು ಇವತ್ತು ಆಡಳಿತ ಪಕ್ಷದಲ್ಲಿರಬಹುದು, ನಾವು ವಿರೋಧಪಕ್ಷದಲ್ಲಿರಬಹುದು. ನಾವು ನೀವು ಒಬ್ಬರಿಗೊಬ್ಬರು ಕಚ್ಚಾಡಿ ಅಧಿಕಾರಿಗಳಿಗೆ ಲಾಭ ಮಾಡಿಕೊಡಬಾರದು. ರಾಜ್ಯದ ಜನರ ಹಿತದೃಷ್ಟಿಯಿಂದ ಇದು ಕೆಟ್ಟ ಬಜೆಟ್ ಇರಬಹುದು, ಆದರೆ ನೀವು ತಂದಿರತಕ್ಕಂಥ ಯೋಜನೆಗಳನ್ನು ಅನುಷ್ಠಾನಗೊಳಿಸಲಿಕ್ಕೆ ನಾವು ಸಹಕರಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೆ, ಶರಣ ಪ್ರಕಾಶರವರು ಲೋಕೋಪಯೋಗಿ ಇಲಾಖಾ ಸಚಿವರು ಬಹಳ powerful ಇದ್ದಾರೆಂದು ಹೇಳಿದರು. ಅದಕ್ಕಾಗಿ ಆ powerful PWD minister ಏನಾದರೂ ಮಾಡುತ್ತಾರೆಂದು ಹೇಳಿ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಅವರಿಗೆ ಕೊಟ್ಟರೆ ಅವರೂ ಸುಧಾರಣೆ ಮಾಡುತ್ತಿಲ್ಲವೆಂದು ಹೇಳಿದರು. ಅದು ಒಂದು ಕಡೆ ಉಳಿಯಿತು, ಲೋಕೋಪಯೋಗಿ ಸಚಿವರು ರಸ್ತೆಗಳನ್ನು ಚೆನ್ನಾಗಿ ಮಾಡಬೇಕು. ಈ ರಸ್ತೆಗಳಿಗಾಗಲಿ, ಬೇರೆ ಕೆಲಸಗಳಿಗಾಗಲೀ ತೆಗೆದುಕೊಂಡು ಕೆಲಸಗಳನ್ನು suggest ಮಾಡಬೇಕೆಂದು ನಂಜುಂಡಪ್ಪ ವರದಿಯಲ್ಲಿ ನಮಗೆ ಏನು ಹಣವನ್ನು ನಿಗದಿಪಡಿಸಿದ್ದರು, ಅದರಂತೆ ನಾವೆಲ್ಲಾ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ಕೊಟ್ಟಿದ್ದೇವೆ. ಆದರೆ ನಮ್ಮ ಲೋಕೋಪಯೋಗಿ ಸಚಿವರು ಇದು ನಮಗೆ ಬೇಡವೆಂದು ಹೇಳಿ ಅದನ್ನೆಲ್ಲಾ ಒಯ್ದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕೊಟ್ಟುಬಿಟ್ಟಿದ್ದಾರೆ. ಈಗ ನಮ್ಮ ಗತಿ ಏನು? powerful minister ಈ ರೀತಿಯಾಗಿ ಗ್ರಾಮೀಣಾಭಿವೃದ್ಧಿಯ ಸಚಿವರಿಗೆ surrender ಆದರೆ ರಸ್ತೆಗಳು ಹೇಗೆ ಉಳಿಯಬೇಕೆಂದು ನೀವೇ ಹೇಳಿ.

ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಮಾತೆ ಹಿಂದಿನ ಸಲ ನಾವು ನಂಜುಂಡಪ್ಪ ವರದಿಯಲ್ಲಿ ತೋರಿಸಿದ ಯೋಜನೆಯ ಹಣ ಪಂಚಾಯತ್ ರಾಜ್ ಇಲಾಖೆಗೆ ಬದಲಾವಣೆಯಾದುದರಿಂದ ಪಂಚಾಯತ್ ರಾಜ್ ಇಲಾಖೆಗೆ ಅಭಿವೃದ್ಧಿ ಹಣವನ್ನು ಬಿಡುಗಡೆ ಮಾಡಿದ್ದೆವು. ಅಲ್ಲಿ ಇವರು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸವಾಗಿಲ್ಲ ಎಂಬ ಕಳವಲ ಇರಬಹುದು. ಆದರೆ ಈ ಸಲ ಅದಕ್ಕೆ exclusive ಆಗಿ ಹಣ ಬಿಡುಗಡೆಯಾಗಿದ್ದನ್ನು ಈಗ ಮಾತನಾಡುತ್ತಿರುವ ಶ್ರೀ ಶರಣ ಪ್ರಕಾಶ್

ರುದ್ರಪ್ಪ ಪಾಟೀಲ್‌ರವರಿಗೂ ಸಹ ನಮ್ಮ ಗಮನದಲ್ಲಿದೆ ಎಂಬುದನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಬಾರಿ ಆ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಹಿಂದೆ ಈ ರೀತಿ ಆಗುವಾಗ ಎಷ್ಟೋ ಸಮಸ್ಯೆಗಳು ಆಗಿವೆ. ಇನ್ನು ಮುಂದೆ ಆ ರೀತಿ ಆಗದ ಹಾಗೆ ನೋಡಿಕೊಳ್ಳುವಂಥ ಕೆಲಸವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ. ನಾನು ಉತ್ತರ ಭಾಗದಲ್ಲಿ ಗ್ರಾಮೀಣ ಭಾಗದ ರಸ್ತೆಗಳು ಕಡಿಮೆ ಇದ್ದುದರಿಂದ ಅದನ್ನು ಮೇಲ್ದರ್ಜೆಗೇರಿಸಬೇಕಾದುದು ಅವಶ್ಯಕತೆಯಿತ್ತು. ಅದನ್ನು ಗಮನದಲ್ಲಿಟ್ಟುಕೊಂಡು ನಾನು ಮಾಡಿದ್ದೇನೆಯೇ ಹೊರತು ಅದಿಲ್ಲದೇ ಹೋದರೆ ಅದಕ್ಕೆ ಪೂರಕವಾಗಿ ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿ ಎನ್ನುವ ತಮ್ಮ ಬೇಡಿಕೆ ಸ್ವಾಭಾವಿಕವಾದುದು ಎಂದು ನಾನಂದುಕೊಂಡಿದ್ದೇನೆ. ಆ ಪ್ರಕಾರ ಅದಕ್ಕೆ ಹೆಚ್ಚಿನ ಹಣವನ್ನು ಈ ಸಲ ತೆಗೆದುಕೊಂಡು ಈಗೇನು 30–35 ಕೋಟಿ ರೂ.ಗಳಲ್ಲಿ ರಸ್ತೆಗಳನ್ನು ರಿಪೇರಿ ಮಾಡುವಂಥದ್ದಿದೆ, ಅದನ್ನು ಬದಲಾಯಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ. ಏಕೆಂದರೆ ನಿಮಗೆಲ್ಲ 2008 ಮೇ ತಿಂಗಳ ಮೊದಲು ಇದ್ದ ಜಿಲ್ಲಾ ಮುಖ್ಯ ರಸ್ತೆಗಳ ಉದ್ದ ಎಷ್ಟು ಕಿ.ಮೀ ಇತ್ತು ಎಂದರೆ ಉತ್ತರ ಕರ್ನಾಟಕ ಹಾಗು ದಕ್ಷಿಣ ಕರ್ನಾಟಕದಲ್ಲಿರುವ ವ್ಯತ್ಯಾಸಗಳನ್ನು ನಾನು ಇಲ್ಲಿ ತಮಗೆ ಹೇಳಬಯಸುತ್ತೇನೆ. ಉತ್ತರ ಕರ್ನಾಟಕದಲ್ಲಿ 11436 ಕಿ.ಮೀ. ಇದ್ದರೆ ದಕ್ಷಿಣ ಕರ್ನಾಟಕದಲ್ಲಿ 26507 ಕಿ.ಮೀ. ಇತ್ತು. ಒಟ್ಟು 37943 ಕಿ.ಮೀ. ಅದನ್ನು 2008 ಮೇ ತಿಂಗಳ ನಂತರ 9215 ಕಿ.ಮೀ ಉತ್ತರ ಕರ್ನಾಟಕದಲ್ಲಿ ಮೇಲ್ದರ್ಜೆಗೇರಿಸುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕೆಂಬ ಬೇಡಿಕೆಯನ್ನು ನಾನು ಇಟ್ಟಿದ್ದೇನೆ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅದನ್ನು ತೆಗೆದುಕೊಂಡು ಈ ರಸ್ತೆಗಳನ್ನು ಅಭಿವೃದ್ಧಿ ಮಾಡಿಸುತ್ತೇವೆ. ಏಕೆಂದರೆ ಈಗ ಉತ್ತರ ಕರ್ನಾಟಕಕ್ಕೆ 20000 ಕಿ.ಮೀ. ಆಗುತ್ತದೆ. ದಕ್ಷಿಣ ಕರ್ನಾಟಕಕ್ಕೆ 27112 ಕಿ.ಮೀ ಈಗಲೂ ಆಗುತ್ತದೆ. ಇದನ್ನು ಸಮಾನಾಂತರವಾಗಿ ಅಭಿವೃದ್ಧಿಗೊಳಿಸಬೇಕೆಂಬ ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡಲಿಕ್ಕೆ ಪ್ರಯತ್ನ ನಡೆದಿದೆ. ಇದಕ್ಕೆ ಹಣಕಾಸು ದೊರಕಿಸಿಕೊಂಡು ಅಭಿವೃದ್ಧಿ ಮಾಡುವಂಥ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅದನ್ನು upgrade ಮಾಡಿದಿರಿ ಒಳ್ಳೆಯದು. ಅದಕ್ಕೆ ತಕ್ಕಂತೆ maintenance grant ಅನ್ನು ತೆಗೆದುಕೊಳ್ಳಬೇಕು. ಅನೇಕ ಸಾರಿ ಏನಾಗುತ್ತದೆ, ಇಲ್ಲಿ LOC release ಆಗುವಾಗ ಬೆಂಗಳೂರಿನಲ್ಲಿರುವಂಥ ಅನೇಕ ಜನ ಪ್ರಭಾವವನ್ನು ಬೀರಿ ಇರತಕ್ಕಂಥ LOC ಅನ್ನು ಮೊದಲು ತೆಗೆದುಕೊಂಡುಬಿಡುತ್ತಾರೆ. ಏಕೆಂದರೆ ಇಲ್ಲಿ building works ಜಾಸ್ತಿ. ವಿಶೇಷವಾಗಿ ಈ ಬೆಂಗಳೂರು ನಗರದಲ್ಲೇ ಹೆಚ್ಚಿನ ಹಣ ಹೋಗುತ್ತದೆ ಆಮೇಲೆ ಈ ಧಾರವಾಡ

ವಿಭಾಗದಲ್ಲಿರುವಂಥ ಉತ್ತರ ಕರ್ನಾಟಕದ ರಸ್ತೆಗೆ LOC ಬರುವುದಿಲ್ಲ. ಅಲ್ಲಿಗೂ LOC ಬಂದರೆ ಎಲ್ಲಿಗೆ ಹೋಗುತ್ತದೆಂದರೆ ಮೊದಲು ಧಾರವಾಡ, ಹಾವೇರಿಗೆ ಹೋಗಿ ಉಳಿದದ್ದು ಬೇರೆ ಕಡೆಗೆ ಹೋಗುತ್ತದೆ. ನಿಜ, ಖಂಡಿತವಾಗಿ ನಾನು ಏಕೆ ಹೇಳುತ್ತೇನೆಂದರೆ ಈ ತಾರತಮ್ಯ ಒಂದೇ ಜಾಗದಲ್ಲಿಲ್ಲ. ತಾರತಮ್ಯ ಇಲ್ಲಿ ಮೊದಲಾಗುತ್ತದೆ. ಇಲ್ಲಿ ಉಳಿದದ್ದು ಏನಾದರೂ ಅಲ್ಲಿಗೆ ಬಂದರೆ ಅಲ್ಲಿಯೂ ತಾರತಮ್ಯವಾಗುತ್ತದೆ. ಅದಕ್ಕೆ ದಯವಿಟ್ಟು ಮಾಡುವಾಗ ಎಲ್ಲಾಕಡೆ ನೋಡಿ ಅದು ಒಳ್ಳೆಯದು. ಉತ್ತರ ಕರ್ನಾಟಕದಲ್ಲಿ Geographical area ಹೆಚ್ಚಿಗಿದೆ. ನೀವು ತಾಲ್ಲೂಕು ನೋಡಿದಾಗ ಏನಾಗುತ್ತದೆ, ನಮ್ಮಲ್ಲಿ ಅನೇಕ ಹಳ್ಳಿಗಳು ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ ಆರರಿಂದ ಏಳು ಕಿ.ಮೀ. ದೂರವಿರುತ್ತದೆ. ಅದಕ್ಕೆ ಏನು ಮಾಡುತ್ತೀರಿ, ತಾಲ್ಲೂಕು ಸರಿಸಮವಾಗಿ ಹಂಚುವುದು ಎಂದು ಮಾತನಾಡುತ್ತೀರಿ. ಕೆಲವು ಕಡೆ ಸಣ್ಣ ಸಣ್ಣ ತಾಲ್ಲೂಕು ಇವೆ. ಕೆಲವು ಕಡೆ 80, 90 ಕಿ.ಮೀ. ಉದ್ದ ಇದೆ. ಈಗ ನಮ್ಮ ಸುರಪುರ ತಾಲ್ಲೂಕಿನ ಉದ್ದ ಹಾಗೂ ಅಗಲವನ್ನು ಲೆಕ್ಕ ಹಾಕಿದರೆ 80 ಕಿ.ಮೀ. ಉದ್ದವಿದೆ, ಸುಮಾರು 120 ಕಿ.ಮೀ. ಅಗಲವಿದೆ. ನಾರಾಯಣಪುರ ಡ್ಯಾಮ್‌ನಿಂದ ಶಹಾಪುರದವರೆಗೂ ಇದೆ. ಅದಕ್ಕೆ ದಯವಿಟ್ಟು ಇದನ್ನು ಸ್ವಲ್ಪ ವೈಜ್ಞಾನಿಕವಾಗಿ ಸರಿಯಾದ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ based on length of the road of the each constituency, or division wise or taluk wise ಎಂದು ಅದನ್ನು consideration ಮಾಡಿ ಆ carriage width wise ಸಹ consideration ಆಗುತ್ತದೆ. ಕೆಲವು ಕಡೆ 3.75 ಇರುತ್ತದೆ, ಕೆಲವು ಕಡೆ 7 ಮೀಟರ್ಸ್ ಸಹ ಇರುತ್ತದೆ. ಅಲ್ಲಿ ಹಣಕಾಸನ್ನು ಒದಗಿಸುವಾಗ based on scientific ಆಗಿ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ನಿಜವಾಗಿಯೂ ಇದರ ಬಗ್ಗೆ ಇಲಾಖಾಧಿಕಾರಿಗಳೊಂದಿಗೆ ಚರ್ಚೆ ಮಾಡಿ ಕಾರ್ಯಗತಗೊಳಿಸುವುದನ್ನು ಮಾಡುತ್ತೇನೆ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈ ಸರ್ಕಾರ ಏನೇ ಯೋಜನೆ ಮಾಡಲಿ, ಕೆಟ್ಟದ್ದು, ಒಳ್ಳೆಯದು ಎಂಬುದನ್ನು ಜನ ತೀರ್ಮಾನಿಸುತ್ತಾರೆ. ಆ ಯೋಜನೆಗಳನ್ನು implement ಮಾಡಬೇಕು. Implement ಮಾಡುವಾಗ ದಕ್ಷತೆಯಿಂದ ಮಂತ್ರಿಗಳು ಇಲಾಖಾವಾರು review ಮಾಡಬೇಕು. ನೀವು ಮಾಡುವ ಒಳ್ಳೆಯ ಕೆಲಸಗಳಿಗೆ ನನ್ನ ಸಪೋರ್ಟ್ ಇದೆ. public of interestನಲ್ಲಿ ನೀವು ಯಾವುದೇ ಒಳ್ಳೆಯ ಕೆಲಸವನ್ನು ಮಾಡಿದರೂ ಅದಕ್ಕೆ ನಾವು 100% support ಮಾಡುತ್ತೇವೆ. ಆದರೆ ನೀವು ನಿಮ್ಮ ಇಲಾಖೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳದೆ ಯಾವುದೇ ಭ್ರಷ್ಟಾಚಾರ ಮಾಡಲಿಕ್ಕೆ ಆಸ್ಪದ ಕೊಟ್ಟರೆ ನಾವು ಅದನ್ನು ಸಹಿಸುವುದಕ್ಕೆ

ಸಾಧ್ಯವಿಲ್ಲ. ಆದರೆ ಯಾವುದೇ ಆಸಕ್ತಿಯನ್ನು ತೋರಿಸದೇ ಇದ್ದರೂ ಅದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಈ ಸಲ ಬಜೆಟ್‌ನಲ್ಲಿ ಯಾವುದು ಖೋತಾ ಆಗಿದೆ, ಬಜೆಟ್‌ನಲ್ಲಿ 9,000–10,000 ಕೋಟಿ ರೂಪಾಯಿಗಳು ಈ ಬಾರಿ implement ಮಾಡುವುದಕ್ಕೆ ಆಗಿಲ್ಲ. ಅದನ್ನು ಯಾವ ರೀತಿ ಸರಿ ತೂಗಿಸುತ್ತೀರಿ? ಮತ್ತೆ ನಿಮ್ಮ ಪ್ಲಾನ್ ಸೈಜ್ 29,500 ಕೋಟಿ ರೂಪಾಯಿಗಳು ಅದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ನೀವು cut down ಮಾಡಿ. Realistic ಆಗಿ ಯಾವ ರೀತಿ, ಯಾವ ಇಲಾಖೆಯಲ್ಲಿ ಮಾಡುತ್ತೀರಿ ಎಂದು ಹೇಳಿ ಮಾಡಿ, ನಾವು ಬೇಡವೆನ್ನುವುದಿಲ್ಲ, ಅದಕ್ಕೆ ನಾವು support ಮಾಡುತ್ತೇವೆ. ನೀವು ಒಳ್ಳೆಯ ದಕ್ಷ ಆಡಳಿತ ನಡೆಸಿದರೆ ಜನಪರವಾಗಿ ನಡೆಸಿದರೆ ನಮ್ಮ support ಇದೆ. ಆದರೆ ಅದಕ್ಕಾಗಿ ನೀವು ಪ್ರಾಮಾಣಿಕ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಕ್ಕೆ ತನ್ನಿ. ಎಲ್ಲಾ ಭ್ರಷ್ಟ ಅಧಿಕಾರಿಗಳನ್ನು ನೀವು ಆಯಕಟ್ಟಿನ ಸ್ಥಳಕ್ಕೆ ತಂದರೆ ಒಳ್ಳೆಯ ರೀತಿಯಲ್ಲಿ ಸರ್ಕಾರ ನಡೆಸಲು ಸಾಧ್ಯವಿಲ್ಲ. ಒಳ್ಳೆಯ ಪ್ರಾಮಾಣಿಕ ಅಧಿಕಾರಿಗಳನ್ನು ನೀವು ಒಳ್ಳೆಯ ಸ್ಥಳಕ್ಕೆ ತನ್ನಿ. ಸರ್ಕಾರ ತಾನಾಗಿಯೇ ಸರಿಯಾಗಿ ನಡೆಯುತ್ತದೆ. ನೀವು ಭ್ರಷ್ಟಾಚಾರ ಮಾಡುವವರನ್ನು ಆಯಕಟ್ಟಿನ ಸ್ಥಳಗಳಿಗೆ ತಂದು ಸರ್ಕಾರ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ ಎಂದರೆ ಸಾಧ್ಯವಿಲ್ಲ. ಈ ಸರ್ಕಾರ ಭ್ರಷ್ಟಾಚಾರ ರಹಿತ ಆಡಳಿತ ಕೊಟ್ಟರೆ ನಾವು ನಿಮ್ಮ ಪರ ಇದ್ದೇವೆ. ಇಲ್ಲದಿದ್ದರೆ ನಾವು ನಿಮ್ಮನ್ನು ವಿರೋದ ಮಾಡುತ್ತೇವೆ ಮತ್ತು ಜನರ ಮುಂದೆ ನಿಮ್ಮ ಬಣ್ಣ ಬಯಲು ಮಾಡುತ್ತೇವೆ.

ಶ್ರೀ ಸೈಯದ್ ಯಾಸೀನ್(ರಾಯಚೂರು): ಮಾನ್ಯ ಸಭಾಧ್ಯಕ್ಷರೇ, ತಾವು ನನಗೆ 2009–10ರ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಬಹಳ ಸಂತೋಷ. ಈ ನಮ್ಮ ಮುಖ್ಯ ಮಂತ್ರಿಯವರು ಈ ಬಜೆಟ್ ನಲ್ಲಿ ಸುಮಾರು 287 chapters ಕೊಟ್ಟಿದ್ದಾರೆ. ಆ ಎಲ್ಲಾ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಟೈಂ ಇಲ್ಲ, ತಮ್ಮಲ್ಲಿ ವಿನಂತಿ ಮಾಡುತ್ತೇನೆ, ನನಗೆ ಸ್ವಲ್ಪ ಜಾಸ್ತಿ ಅವಕಾಶ ಕೊಡಬೇಕು, ಏಕೆಂದರೆ. . .

ಉಪಾಧ್ಯಕ್ಷರು: 5 ನಿಮಿಷದಲ್ಲಿ ಮುಗಿಸಿ.

ಶ್ರೀ ಸೈಯದ್ ಯಾಸೀನ್: 5 ನಿಮಿಷದಲ್ಲಿ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. Even in Belgaum Session also you have not given me time to speak, then what for we are here? I am the MLA representing my constituency, I am attend to talk, ಕೇವಲ ಐದೇ ನಿಮಿಷದಲ್ಲಿ ಏನು ವಿಷಯ ಮಾತನಾಡಬೇಕು?. ನಮಗೆ ಅವಕಾಶ ಕೊಡಬೇಕು ಸಾರ್. Otherwise I will go out. ಏನು ಮಾಡುವುದಕ್ಕಾಗುವುದಿಲ್ಲ. ಸಾರ್, ಈ ಬಜೆಟ್ ಬಗ್ಗೆ ನಮ್ಮ ಮುಖ್ಯಮಂತ್ರಿ ಡಾ: ಬಿ.ಎಸ್.ಯಡಿಯೂರಪ್ಪ ರವರಿಗೆ ನಮ್ಮ

ರಾಜ್ಯದಲ್ಲಿ economic growth, ಹಾಗೂ ಅವರ financial management ಸಲುವಾಗಿ ಬಹಳಷ್ಟು confidence ಇದೆ. ಒಂದು ಕಡೆ ನಮ್ಮ bureaucrats, bureaucratic ಭಾಷೆಯಲ್ಲಿ they have used 10 ರಿಂದ 12 ಕಡೆ they have blamed. Failure of monsoon, the shortage of fertilizers, the shortage of electricity, ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಕೊರತೆ ಉಂಟಾಗಿದೆ. Recessionary trend, global recession, failure of mansoon, ಅದು ಎಲ್ಲಾ ಕಡೆ ಬಜೆಟ್‌ನಲ್ಲಿ ಸುಮಾರು 20 places ನಲ್ಲಿ ಅವರು ಬ್ಲೇಮ್ ಮಾಡಿದ್ದಾರೆ. In the serial no. 11 dated 16-2-2009 ರಂದು the vote on account of Central Government has greatly disappointed us ಅಂಥ ಅವರು ಆರೋಪ ಮಾಡಿದ್ದಾರೆ. They have given all blames, they have blamed the natural calamity, failure of mansoon, shortage of fertilizers and blaming of Central Government, National Economic failure, blaming global recession. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್‌ನಿಂದ he correctly said, ಸುಖಸ್ಯ ಮೂಲಂ ಧರ್ಮ, ಧರ್ಮಸ್ಯ ಮೂಲಂ ಅರ್ಥ ಹಾಗೂ ಅರ್ಥಸ್ಯ ಮೂಲಂ ರಾಜ್ಯ, the order is the basis of prosperity, economy is the basis of order and the state is the basis of economy. So it shows that our CM is confident to manage the financial and fiscal management. the development activities are dependent upon the administrative policies ಎಂದು ಅವರು ಹೇಳಿದ್ದಾರೆ. I am happy that he is very confident. This is a type of recession; it is a part of human kindness, since inception and creation of mankind. We have our own economy, indigenous economy,so we should not get offered by the global recession, or national recession or any recession. Our State is a strong state, we have our own indigenous economy, we have got our own experts, IAS officers, Principal Secretaries, Economists to manage the financial administration and at the same time I request our Government, that in the name of recession, global and national, it should not affect the poverty alleviation, rural development, health and education in our state. There are certain indicators you have passed the fiscal Responsibility Act, which gives the

direction, this is the methodology to control, but our Bureaucrats, our government should make up their mind. Once they make up their minds, everything is possible, we will be able to manage. Certain fiscal indicators have to be taken care of, certain major fiscal indicators like State Sales Tax, Tax Revenue, share of Central Tax, Grant-in-Aid, Budget estimation, primary deficit, fiscal public accounts, ಇದೆಲ್ಲವನ್ನು ಮ್ಯಾನೇಜ್ ಮಾಡಬೇಕು. Capital Receipts, Recoveries of Loan and advances, non plan expenditures, revenue accounts, capital accounts, capital expenditure, revenue surplus, these are all important indicators which have to be taken care. We have got our Bureaucrats, and our CM is also confident to manage and I am sure our Opposition leaders like Siddaramaiah ji and Mallikarjun Khargeji have got extensive and enormous knowledge and we are ready to co-operate with the Government and we are not attacking the government simply, because we want to give a correct direction to the Government. So, I request our Hon'ble Chief Minister not to ignore the words and suggestions of our Hon'ble Leader of Opposition, Because, he is giving directions and he is attacking the Government to expose the running mistakes to correct to give a new methodology in the large interest of the development. ಸಭಾಧ್ಯಕ್ಷರೇ, ನಮ್ಮ ಮುಖ್ಯಮಂತ್ರಿ ಅವರ ಪ್ರಕಾರ main development priorities are Agricultural and allied activities, Rural development, Irrigation, power, Roads, Urban Development, Education and Health. So these are the important priorities has given. Sir, I would like to tell you, the second phase of Green Revolution has been launched in the country on a national level for that, you have to operate and at the same time, regarding NRBC you have taken up lot of works, ನಮ್ಮ ಕಡೆ ರಾಯಚೂರಿನಲ್ಲಿ ಕುಡಿಯುವ ನೀರು ಇಲ್ಲ, crores of rupees they have to spend. For Raichur, for NRBC ಲಿಂಕ್ ಮಾಡುವುದಕ್ಕೆ only 200 yards/200 meters ಇದೆ, from NRBC to Ganekal Reservoir, Governmentಗೆ ಅವಶ್ಯಕತೆ ಇಲ್ಲವೇ? not crores of rupees, it requires

only 50 lakhs to 1.00 cores but they have not given. Really I feel very sorry to be MLA and representing Raichur District. I **Cant't** understand crores of rupees they have given, for the drinking water purpose, but this is the priority, this is the essential work and they have not given money in the Budget Session, we have given so mAny letters to Government. I am very sorry to say, this and at the same time, our **Hon'ble** Minister is there, Sir, regarding Power, I would like to take up this issue very seriously. You are telling", we are in power shortage, we are buying," and of course, you are buying.

ಉಪಾಧ್ಯಕ್ಷರು: Please ಮುಗಿಸಿ.

ಶ್ರೀ ಸೈಯದ್ ಯಾಸೀನ್: Sir, please give me just another 10 minutes. There is transmission loss of 20% in the whole Karnataka which amounts to 250 M.W. and nearly about 120 Hydro Projects have been given to capitalists and business community but only two are running. This is for your information. We are losing about 300 Mega watts. 300 + the Leakages, it totally amounts to 550 Mega watts which we can recover, even now it is in our hand. Without any investment we can recover this loss with able administration and at the same time I would like to bring to your notice., you have announced 500 M.W. in Bellary, Chattisgarah and Bijapur, of course due to compulsion it is there. We have not tapped the high head natural sources Mahadayi, where we can generate about 1600 M.W. Gondia, near Hassan, Bedthi North Canara, Sirsi 500 M.W. we would be able to get, Dandeli we would be able to get 200 M.W. but why you have not taken up the works? Even Nyveli Lignite is an open mines and the cost will be less, we can enter into agreement like Chattisgarah. We can generate more than 5000 M.W. there itself. So this is my suggestion to the Government.

Hon'ble Dy. Speaker: Please conclude.

Sri Syed YAsin: Sir I take only two minutes. This is the last chance, nobody has discussed about this issue. So far as minority is concerned Hon'ble Chief Minister has given lot of opportunity to the Hon'ble Minister for Minority welfare.

Sri Mallikarjun Kharge: Minority Minister has also disappeared. All Ministers are disappearing one by one. Sir you are forcing us to sit here and we are giving you quorum and also to the Ruling Party. ಅದಕ್ಕೆ ಮಾನ್ಯ ಅಧ್ಯಕ್ಷರೆ ನನ್ನ ಮನವಿ ಏನಂದರೆ, ಇವರೊಬ್ಬರು ಮಾತನಾಡಲಿ, ಇವರಾದ ಮೇಳೆ ತಾವು Adjourn ಮಾಡಿ. ನಾಳೆ ಮೂರ್ನಾಲ್ಕು ಜನ ಇದ್ದರೆ strictly you do not give more than 10 minutes. 10 ನಿಮಿಷ ಆದರೆ ಗಂಟೆ ಬಾರಿಸಿ ಕೊಡಿಸಿ ಬಿಡಿ, ಆನಂತರ ಕುಮಾರ ಸ್ವಾಮಿ ಮಾತನಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆಮೇಲೆ ತಿರುಪತಿ ಯಿಂದ ಪ್ರಸಾದ ತಂದು ಎಲ್ಲರಿಗೂ ಹಂಚುತ್ತಾರೆ ಮಾನ್ಯ ಮುಖ್ಯಮಂತ್ರಿಗಳು. ಆ ಪ್ರಸಾದ ತೆಗೆದುಕೊಂದು ಅಮೇಲೆ conclude ಮಾಡೋಣ.

Hon'ble Dy. Speaker: Please conclude.

Sri Syed Yasin: Sir, our Chief Minister has given a very good opportunity to Minority Minister and he has to do a lot of works and he has to utilize the Sarva Sikshana Abhiyana, Idga Problem, Urdu Schools and boundaries for the Khabarasthan and Waqf Issues. There is proposed for survey of all Waqf land which is pending since long time, it has to be taken up. Karnataka Minority Development Corporationಗೆ finance enhance ಮಾಡಬೇಕು. and in National Minority Development and Finance Corporation there are so many Economic programmes. our Hon'ble Chief Minister has taken up there programmes in this budget. We can utilize maximum for the Socio economic and Educational development of the Minorities. Sir, fifteen point programme is nothing but the product of a Saachar Committee and our Hon'ble Prime Minister Dr. Manmohan Singh has given to us. our Hon'ble Minority Minister should take is up. So far as Minority is concerned there are lot of issues. To this 15. Points programme the Deputy Commissioner and Z.P. CEOs should review every three months and concerned MLA and M.P.s are the permanent members to review the 15. point programme in every district and at the same time the educational development programmes should be reviewed and Survey of walt properties should be taken up and there are so many issues, he can take up

which he has not taken up and at the same time the loans for Minorities, SC/ST Development Corporation, Backward Class Development Corporation and Minority Development Corporation should be taken up. Poor minorities, are not getting the loans. There is a RBI direction, there is a fixed target in every Bank. It has to be given to Minority, SC/ST and Backward Communities. So, the direction of RBI should be taken up seriously. There is a lot of work in this area, the State Minority Commission's recommendations are there. Sri Rahman Khan has given a very good report and also there is Sachar Committee Report and Stastics are there, as to how many schools are there, how many dropouts are there, So, our Hon'ble Minister can take up these issues very seriously. Consider the Raichur, which is between the two rivers, so lot of fishermen are there. So many good housing schemes are there, it should go on the bank of Krishna and Tungabhadra river and this is the border are and also backward area, for your information we are giving huge revenue to the Government. Hutti Gold Mines is giving profit to you and our Thermal Plant is giving about 1470 M.W to you. We are contributing a lot. Being a small place Raichur is contributing high revenue to the State and we have got all rights to ask all the facilities. The B-Scheme of NRBC has not been taken up. We have not represented, Government has not represented properly in the Bachavat Tribunal. I am very very sorry for this and the for Ganakal reservoir, as already mentioned, they have not given money in the budget, so there are so may problems.

Hon'ble Dy. Speaker: Please Conclude.

Sri Syed Yaseen: Sir I will conclude. ಎಲ್ಲಾ ಕಡೆ Districtಗಳಿಗೆ Mini Vidhana Sabha ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಈಗ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ. . . .

Sri Syed Yaseen: Sir, our Hon'ble Chief Minister must take up 7,000 acres of land of Jawalgera for Agricultural University. This 7000 Acres of land lying idle belongs to Central Government and we can represent to our Chief Minister

and Hon'ble Leader of Opposition Sri Mallikarjun Kharge ji to go to Delhi to get this land for joint venture. The 7000 Acres of land at Jawalagera is lying idle, We can use it for the Agriculture University for the research purpose.

ಉಪಾಧ್ಯಕ್ಷರು: ಮುಗಿಸಿ ದಾಖಲೆಗೆ ಹೋಗುವುದಿಲ್ಲ.

Sri Syed Yaseen: I am very sorry, I will conclude. We are representing people in the Assembly, there are so many points in our minds, we have got so many things in our mind, why are you not allowing me to express. I have elected for the second time. 8 ತಿಂಗಳುಗಳಾಗಿದೆ you have not allowed me first opportunity to speak. We have not represented our constituency. Can you simply beat our constituency?. Our Chief Minister has given a Geriatric Centre for our senior citizen.

ಶ್ರೀ ಎಂ.ಟಿ.ಕೃಷ್ಣಪ್ಪ: ಅವಕಾಶ ಕೊಡದೇ ಇದ್ದರೆ ನಾವು ಏನು ಟಿ.ಎ, ಡಿ.ಎ ಗೋಸ್ಕರ ಇಲ್ಲಿ ಬಂದು ಕುಳಿತುಕೊಳ್ಳಬೇಕೆ? ಏನಿದು? ನನಗೆ ಅರ್ಥವಾಗುತ್ತಿಲ್ಲ. ನಾವು ಚುನಾವಣೆಯಲ್ಲಿ ಇಲ್ಲಿಗೆ ಗೆದ್ದು ಬರುವ ಉದ್ದೇಶವೇನೆಂದರೆ, (ಗೊಂದಲ) ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ನೀವು ಕೊಡುವ 500 ರೂಪಾಯಿ ಟಿ.ಎ. ಡಿ.ಎ ಗೋಸ್ಕರ ನಾವು ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಈಗಾಗಲೇ 8 ಗಂಟೆಯಾಗಿದೆ. ನಾವು ಮಾತನಾಡುವುದನ್ನು ಕೇಳುವವರು ಯಾರಿದ್ದಾರೆ? ನೀವು ಅವಕಾಶ ಕೊಟ್ಟರೂ ಮಾತನಾಡುವಂತಿಲ್ಲ.

Sri Syed Yasin: Sir, A medical college has been given to Raichur. ಆದರೆ ಹಾಸ್ಪಿಟಲ್ ಕಟ್ಟಿಲ್ಲ. Thanks to Medical Council of India. If they come tomorrow, I think they are going to cancel our Medical college which is worth about three hundred crores. So you have to give funds, you have to send the taskforce to go for fast work, because we have to match with the MCI. regarding health,

ಉಪಾಧ್ಯಕ್ಷರು: ತಾವು ಬೇಗ ಮುಗಿಸದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

Sri Syed Yasin: (ಗೊಂದಲ) Geriatric Centre Neo Natal Should be accommodated in every district and taluka in the larger interest of the poor people. ಬಹಳ ಸಂತೋಷ. Anyway I am not happy Sir. Next time you have to give more time to speak , otherwise you can extend the time, because there are so many

issues. In one shot of small time I cannot speak which is in my hand.

ಉಪಾಧ್ಯಕ್ಷರು: ಕರಡಿ ಸಂಗಣ್ಣ ಅವರು. ....

Sri Syed Yaseen: No Sir, there are so many issues. Tommorrow you give me chance to speak. Thank you very much.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಉಪಾಧ್ಯಕ್ಷರೆ, 2009–10ನೇ ಸಾಲಿನ ಬಜೆಟ್ ಮೇಲೇ ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ವಂದನೆಗಳನ್ನು ಹೇಳಬಯಸುತ್ತೇನೆ. ಹಾಗೆಯೇ, 2009–10ನೇ ಸಾಲಿಗೆ ಸಂಬಂಧಿಸಿದಂತೆ ಬಹಳಷ್ಟು ಯೋಜನಾ ವೆಚ್ಚದ ಗಾತ್ರ ಮಾಡಿಲ್ಲವೆಂದು ಹೇಳಬಯಸುತ್ತೇನೆ. 29,500 ಕೋಟಿ ರೂ.ಗಳ ಯೋಜನಾ ಗಾತ್ರ ಇಟ್ಟುಕೊಂಡಿದ್ದಾರೆ. ಆದರೆ ಕಳೆದ ಬಾರಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಈಗ ನನಗೆ ಏನೆಂದು ಅರ್ಥವಾಗಲಿಲ್ಲ. ನೀವು ಈಗ ವೋಟಿಂಗ್‌ಗೆ ಹಾಕಿದರೆ ಅದು ಬಿದ್ದು ಹೋಗುತ್ತದೆ. ರೂಲಿಂಗ್ ಪಾರ್ಟಿಯಲ್ಲಿ ಎಷ್ಟು ಮಂದಿ ಇದ್ದಾರೆಂಬುದನ್ನು ಏಣಿಸಿ ನೋಡಿ. ನಾವು ಈಗಲೇ insist ಮಾಡುತ್ತೇವೆ. ನೀವು ಹಾಕಿಬಿಡಿ ನಾವು ಪಾಸ್ ಮಾಡಿಕೊಂಡು ಹೋಗುತ್ತೇವೆಂದರೆ....ನಾಳೆ ಬಂದು ಮಾತನಾಡುತ್ತಾರೆ. ನಾಳೆ ಒಂದು ಗಂಟೆ ಮುಂಚಿತವಾಗಿ ಸೇರೋಣ. ಇಲ್ಲವೇ, reply ಅನ್ನು ಒಂದು ಗಂಟೆ ತಡವಾಗಿ ಕೊಡಲಿ. ಅಂತಹ ತೊಂದರೆ ಏನೂ ಆಗುವುದಿಲ್ಲವಲ್ಲ.

ಉಪಾಧ್ಯಕ್ಷರು: ಆಗಬಹುದು.

4. ಗಮನ ಸೆಳೆಯುವ ಸೂಚನೆ

ಅ)ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ 5 ಲಕ್ಷ ಕುಟುಂಬಗಳ ಪುನರ್ವಸತಿ ಕುರಿತು.

. . . .

ಶ್ರೀ ಎ.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ 5 ಲಕ್ಷ ಕುಟುಂಬಗಳ ಪುನರ್ವಸತಿಗೆ ಸಂಬಂಧಿಸಿದಂತೆ ನಾನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಈ ವಿಷಯ ಬಹಳ ಮುಖ್ಯವಾಗಿದೆ. 5 ಲಕ್ಷ ಜನರ ಸಮಸ್ಯೆ ಇದಾಗಿದೆ. ಇದು ಉತ್ತರ ಕರ್ನಾಟಕ ಬಹು ಮುಖ್ಯವಾಗಿರುವ ಸಮಸ್ಯೆಯಾಗಿದೆ. ಸುಮಾರು 5 ಲಕ್ಷದಷ್ಟು ಜನರು ಬೀದಿ ಪಾಲಾಗಿದ್ದಾರೆ. ಅವರುಗಳ ಸಮಸ್ಯೆಗಳನ್ನು ಆಲಿಸುವುದಕ್ಕೆ ಸರ್ಕಾರದ ಕಡೆಯಿಂದ